ಶನಿವಾರ, ಅಕ್ಟೋಬರ್ 1, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಾರಾ ದಂಪತಿ

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ 68ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ತಮಿಳು ನಟ ಸೂರ್ಯ ಮತ್ತು ಪತ್ನಿ ಜ್ಯೋತಿಕಾ ಪಾಲ್ಗೊಂಡಿದ್ದರು

ರಾತ್ರಿ 9.10ರವರೆಗೂ ಕಲಾಪ ನಡೆಸಿದ ನ್ಯಾಯಪೀಠ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಶುಕ್ರವಾರ, ನಿಗದಿಗೊಳಿಸಿದ್ದ ಎಲ್ಲ 75 ಪ್ರಕರಣಗಳ ವಿಚಾರಣೆ ನಡೆಸಲು ರಾತ್ರಿ 9.10 ಗಂಟೆಯವರೆಗೂ ಕಲಾಪ ನಡೆಸಿತು.

ಅಂದರೆ ನಿಗದಿಗಿಂತ ಹೆಚ್ಚುವರಿಯಾಗಿ ಸುಮಾರು 5 ಗಂಟೆ ಕಲಾಪ ನಡೆಸಿದೆ. ದಸರಾ ರಜೆ ಅವಧಿ ಆರಂಭಕ್ಕೂ ಮೊದಲು ನಿಗದಿತ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸುವುದು ಇದರ ಉದ್ದೇಶವಾಗಿತ್ತು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ಪ್ರಕರಣಗಳ ವಿಚಾರಣೆಗೆ ಕಲಾಪವನ್ನು ವಾರದ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 4ರವರೆಗೂ ನಡೆಸುತ್ತಾರೆ.

ಬಿಬಿಎಂಪಿಯ ವಾರ್ಡ್ ಮೀಸಲಾತಿ ರದ್ದು: ಪರಿಷ್ಕೃತ ಮೀಸಲಾತಿ ಪಟ್ಟಿ ಪ್ರಕಟಣೆಗೆ ನಿರ್ದೇಶನ

ಡಿ.31ರೊಳಗೆ ಚುನಾವಣೆ ನಡೆಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಚುನಾವಣೆಯನ್ನು ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದೊಳಗೆ ನಡೆಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

'ಬಿಬಿಎಂಪಿ ವಾರ್ಡ್‌ವಾರು ಮೀಸಲು ನಿಗದಿಯಲ್ಲಿ ತಾರತಮ್ಯ ಎಸಗಲಾಗಿದೆ' ಎಂದು ಆಕ್ಷೇಪಿಸಿ ಈಜಿಪುರದ ಕೆ.ಮಹದೇವ, ಕಮ್ಮನಹಳ್ಳಿಯ ಪಳನಿ ದಯಾಳನ್, ದೊಡ್ಡಬಾಣಸವಾಡಿಯ ವಿ.ಶ್ರೀನಿವಾಸ್ ಮತ್ತು ನಾಗನಾಥಪುರದ ಕೆ.ಚಂದ್ರಶೇಖರ್ ಸೇರಿ ಎಂಟು ಜನ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ, ವಿಲೇವಾರಿ ಮಾಡಿದೆ.

'ಮೀಸಲು ಮರುನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಒಬಿಸಿ (ನ್ಯಾಯಮೂರ್ತಿ ಭಕ್ತವತ್ಸಲ ಸಮಿತಿ) ಆಯೋಗಕ್ಕೆ ನೈಜ ಅಂಕಿ ಅಂಶ ಒದಗಿಸಬೇಕು. 2022ರ ನವೆಂಬರ್ 30ರೊಳಗೆ ಮೀಸಲಾತಿ ಪ್ರಕಟಿಸಬೇಕು ಮತ್ತು ಡಿಸೆಂಬರ್ 31ರೊಳಗೆ ಬಿಬಿಎಂಪಿಗೆ ಚುನಾವಣೆ ನಡೆಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಅಂತೆಯೇ, ಸರ್ಕಾರ ಈ ಮೊದಲು ಹೊರಡಿಸಿದ್ದ 243 ವಾರ್ಡ್‌ಗಳ ಮೀಸಲು ಪಟ್ಟಿಯ ಅಧಿಸೂಚನೆ ರದ್ದುಪಡಿಸಿದೆ.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, ಮೀಸಲಾತಿ ಮರು ನಿಗದಿಗೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿ ಸಿದ್ಧಪಡಿಸಿದ್ದ ಪ್ರಮಾಣಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿ, 'ಮೀಸಲಾತಿ ಮರು ನಿಗದಿಗೆ 16 ವಾರಗಳ ಕಾಲಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಒಪ್ಪದ ನ್ಯಾಯಪೀಠ ಎಂಟು ವಾರಗಳ ಕಾಲಾವಕಾಶ ನೀಡಿ ಆದೇಶಿಸಿತು. ನ್ಯಾಯಪೀಠದ ಈ ಆದೇಶ ಅನುಪಾಲನೆಯ ವಿವರ ಪಡೆಯುವುದಕ್ಕಾಗಿ ನವೆಂಬರ್ 30ಕ್ಕೆ ವಿಚಾರಣೆ ನಿಗದಿ ಮಾಡಿದೆ.

ಬಿಬಿಎಂಪಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ 2020ರ ಸೆಪ್ಟೆಂಬರ್‌ನಲ್ಲಿ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಪುನಃ ಹೈಕೋರ್ಟ್‌ನಲ್ಲೇ ವಿಚಾರಣೆ ನಡೆಸುವಂತೆ ಸುಪ್രೀಂ ಕೋರ್ಟ್ ಆದೇಶಿಸಿತ್ತು.

ಚುನಾವಣೆ ನಡೆಸಲು ಸಿದ್ಧ: ತುಷಾರ್ ಗಿರಿನಾಥ್

'ಚುನಾವಣೆ ನಡೆಸಲು ಬಿಬಿಎಂಪಿ ಸಿದ್ಧವಿದ್ದು, ಮತದಾರರ ಅಂತಿಮ ಪಟ್ಟಿಯನ್ನೂ ಪ್ರಕಟಿಸಲಾಗಿದೆ. ರಾಜ್ಯ ಚುನಾವಣೆ ಆಯೋಗ ಯಾವಾಗ ಸೂಚನೆ ನೀಡುತ್ತದೆಯೋ ಆ ರೀತಿ ಚುನಾವಣೆ ನಡೆಸುತ್ತೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ಮತದಾರರ ಪಟ್ಟಿಗೆ ಹೆಸರು ಸೇರಿಸುವ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಮತದಾರರ ಹೆಸರನ್ನು ಕೈಬಿಡುವ ಪ್ರಶ್ನೆಯೇ ಇಲ್ಲ. ಜನರು ಬೇರೆ ಕಡೆ ಹೋಗಿದ್ದರೆ, ಬೇರೆ ಕಡೆ ಹೆಸರು ಸೇರಿಸಿದ್ದರೆ ಅದನ್ನು ತೆಗೆಯಲಾಗುತ್ತದೆ. ನಾವು ವಿಧಾನಸಭೆ ಕ್ಷೇತ್ರದಲ್ಲಿರುವ ಪಟ್ಟಿಯಂತೆ ವಾರ್ಡ್‌ವಾರು ಪಟ್ಟಿ ತಯಾರಿಸಲಾಗಿದೆ' ಎಂದು ಅವರು ಹೇಳಿದರು.

'ಕಾಯ್ದೆ ಪ್ರಕಾರ, ವಾರ್ಡ್ ವಿಂಗಡಣೆ ಮಾಡುವಾಗ ಇದ್ದಂತಹ ಜನಸಂಖ್ಯೆ ಆಧಾರದಂತೆ ವಿಂಗಡಣೆ ಮಾಡಲಾಗಿದೆ. ಮೀಸಲಾತಿಗೆ ಸಂಬಂಧಿಸಿದಂತೆ ಅದು ಸರ್ಕಾರದ ಮಟ್ಟದಲ್ಲಿ ಆಗಬೇಕು' ಎಂದರು.

ಒಬಿಸಿ ಮೀಸಲಾತಿ ಶೀಘ್ರ ನಿರ್ಧಾರ: ಅಶೋಕ

ಬಿಬಿಎಂಪಿ ಚುನಾವಣೆ ನಡೆಸಲು ಸರ್ಕಾರ ಹಿಂದೇಟು ಹಾಕುವುದಿಲ್ಲ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲು ಅಧಿಕಾರಿಗಳಿಗೆ ಹೊಣೆ ನೀಡುವ ಅಥವಾ ಸಮಿತಿ ರಚಿಸುವ ಕುರಿತು ಶೀಘ್ರವೇ ನಿರ್ಧರಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಡಿ.31ರ ಒಳಗೆ ಚುನಾವಣೆ ನಡೆಸಲು ಹೈಕೋರ್ಟ್ ಸೂಚಿಸಿದೆ. ಚುನಾವಣೆಗೆ ಈಗಾಗಲೇ ಸಿದ್ಧತೆ ಮಾಡಿಕೊಂಡಿದ್ದೇವೆ. ತೀರ್ಪಿನ ಪ್ರತಿ ಸಿಕ್ಕ ನಂತರ ಮುಂದಿನ ನಿರ್ಧಾರ ಪ್ರಕಟಿಸಲಾಗುವುದು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿ 2 ನಿಮಿಷ

ಬಳ್ಳಾರಿ ಭೇಟಿಗೆ ರೆಡ್ಡಿ ಮನವಿ ಅ.10ರಂದು 'ಸುಪ್ರೀಂ' ಆದೇಶ

ನವದೆಹಲಿ (ಪಿಟಿಐ): ಬಳ್ಳಾರಿಯಲ್ಲಿ ಒಂದು ತಿಂಗಳು ನೆಲೆಸಲು, ಬಾಣಂತಿಯಾಗಿರುವ ಮಗಳನ್ನು ಭೇಟಿ ಮಾಡಲು ಅನುಮತಿ ಕೋರಿ ಗಣಿ ಉದ್ಯಮಿ, ಮಾಜಿ ಸಚಿವ ಜನಾರ್ದನ ರೆಡ್ಡಿ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಅ.10ರಂದು ಆದೇಶ ನೀಡಲಿದೆ.

ಬಹುಕೋಟಿ ಗಣಿ ಹಗರಣದಲ್ಲಿ ಬಂಧಿತರಾಗಿದ್ದ ರೆಡ್ಡಿ ಅವರಿಗೆ ಷರತ್ತಿಗೊಳಪಟ್ಟು 2015ರಲ್ಲಿ ಜಾಮೀನು ನೀಡಲಾಗಿತ್ತು. ಆಗ, ಸುಪ್ರೀಂ ಕೋರ್ಟ್ ವಿಧಿಸಿದ್ದ ಷರತ್ತುಗಳಲ್ಲಿ ಕರ್ನಾಟಕದ ಬಳ್ಳಾರಿ, ಆಂಧ್ರಪ್ರದೇಶದ ಕಡಪ, ಅನಂತಪುರಕ್ಕೆ ಭೇಟಿ ನೀಡಬಾರದು ಎಂಬುದು ಸೇರಿತ್ತು.



ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಕೃಷ್ಣಮುರಾರಿ ಅವರಿದ್ದ ನ್ಯಾಯಪೀಠವು, ನಿತ್ಯ ಪ್ರಕರಣದ ವಿಚಾರಣೆ ನಡೆಸುವಂತೆ ಕೆಳಹಂತದ ಕೋರ್ಟ್‌ಗೆ ಆದೇಶಿಸಿದ್ದು, ಸಾಕ್ಷಿಗಳು ಹಾಜರಿರುವಂತೆ ನೋಡಿಕೊಳ್ಳುವುದು ತನಿಖಾಧಿಕಾರಿಗಳ ಹೊಣೆಗಾರಿಕೆ ಎಂದೂ ಸೂಚಿಸಿತ್ತು.

ಒಎನ್‌ಡಿಸಿ: ಬೆಂಗಳೂರಿನಲ್ಲಿ ಪರೀಕ್ಷಾರ್ಥ ಆರಂಭ

ನವದೆಹಲಿ (ಪಿಟಿಐ): ಡಿಜಿಟಲ್ ವಾಣಿಜ್ಯಕ್ಕಾಗಿನ ಮುಕ್ತ ವ್ಯವಸ್ಥೆ (ಒಎನ್‌ಡಿಸಿ) ಮುಂದಿನ ದಿನಗಳಲ್ಲಿ ಇನ್ನಷ್ಟು ವಿಸ್ತರಣೆ ಕಾಣಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ.

ಸಣ್ಣ ವ್ಯಾಪಾರಿಗಳು ಇ–ವಾಣಿಜ್ಯ ವಲಯದ ದೈತ್ಯ ಕಂಪನಿಗಳ ಮೇಲೆ ಅವಲಂಬಿತ ಆಗುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಸಚಿವಾಲಯವು ಒಎನ್‌ಡಿಸಿ ವೇದಿಕೆಯನ್ನು ಆರಂಭಿಸಿದೆ. ಇದು ಶುಕ್ರವಾರದಿಂದ ಬೆಂಗಳೂರಿನ ಕೆಲವು ಪ್ರದೇಶಗಳಲ್ಲಿ ಪರೀಕ್ಷಾರ್ಥವಾಗಿ ಆರಂಭವಾಗಿದೆ ಎಂದು ಸಚಿವಾಲಯ ಹೇಳಿದೆ.

ಆರಂಭಿಕ ಹೆಜ್ಜೆಯಾಗಿ ಬೆಂಗಳೂರಿನ ಗ್ರಾಹಕರು ದಿನಸಿ ವಸ್ತುಗಳು ಹಾಗೂ ರೆಸ್ಟೋರೆಂಟ್‌ಗಳ ಉತ್ಪನ್ನಗಳನ್ನು ಒಎನ್‌ಡಿಸಿ ಜಾಲದ ಭಾಗವಾಗಿರುವ ಆ್ಯಪ್‌ಗಳ ಮೂಲಕ ತರಿಸಿಕೊಳ್ಳಬಹುದು. ಮೈಸ್ಟೋರ್, ಪೇಟಿಎಂ, ಸ್ಪೈಸ್‌ಮನಿ ಆ್ಯಪ್‌ಗಳು ಈ ಸೇವೆಗೆ ಈಗ ಲಭ್ಯವಿವೆ. ಡಂಜೊ, ಲೋಡ್‌ಶೇರ್, ಶಿಪ್‌ರಾಕೆಟ್ ಕಂಪನಿಗಳು ಸಾಗಾಟದ ಸೇವೆಗಳನ್ನು ಒದಗಿಸುತ್ತಿವೆ.

ದಸರಾ ಗೊಂಬೆ... ದಸರಾ ಅಂಗವಾಗಿ ಡಾ.ಹರಿಣಿ ಕುಮಾರಿ ಅವರ ಮನೆಯಲ್ಲಿ ಪ್ರತಿಷ್ಠಾಪಿಸಿರುವ ದಸರಾ ಬೊಂಬೆಗಳು

ಒತ್ತುವರಿ ತೆರವು: ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿಗಳನ್ನು ತೆರವುಗೊಳಿಸದೇ ಹೋದಲ್ಲಿ, ಮುಖ್ಯ ಆಯುಕ್ತರ ವಿರುದ್ಧ ಸೂಕ್ತ ಆದೇಶ ಹೊರಡಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಮೌಖಿಕ ಎಚ್ಚರಿಕೆ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ ರಸ್ತೆಗಳ ಗುಂಡಿ ಮುಚ್ಚುವುದಕ್ಕೆ ಸಂಬಂಧಿಸಿದಂತೆ ಕೋರಮಂಗಲದ ವಿಜಯನ್ ಮೆನನ್ ಸೇರಿ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ ವಸ್ತುಸ್ಥಿತಿ ವರದಿ ಸಲ್ಲಿಸಿ, '2022ರ ಸೆಪ್ಟೆಂಬರ್ 19ರಿಂದ ಈವರೆಗೆ 10 ಒತ್ತುವರಿ ತೆರವುಗೊಳಿಸಲಾಗಿದೆ. ಇನ್ನೂ 592 ಅತಿಕ್ರಮಣ ತೆರವುಗೊಳಿಸಬೇಕಾಗಿದೆ' ಎಂದರು. ಇದೇ ವರದಿಯಲ್ಲಿ, 'ನಗರದ ಪ್ರಮುಖ ರಸ್ತೆಗಳಲ್ಲಿನ 221 ಗುಂಡಿಗಳನ್ನು ಹಾಟ್ ಮಿಕ್ಸ್ ಬಳಸಿ ತುಂಬಲಾಗಿದೆ. ಮಹದೇವಪುರ ವಲಯದ (324 ಕಿ.ಮೀ.) ರಸ್ತೆಗಳನ್ನು ಮರು ಡಾಂಬರೀಕರಣ ಮಾಡಲಾಗುತ್ತಿದ್ದು, 427 ಕಿ.ಮೀ. ಉದ್ದದ ರಸ್ತೆಗಳ ಮರು ಡಾಂಬರೀಕರಣ ಪ್ರಾರಂಭಿಸಲಾಗಿದೆ' ಎಂದು ವಿವರಿಸಿದರು.

ದಾಖಲೆ ಪರಿಶೀಲಿಸಿದ ನ್ಯಾಯಪೀಠ, 'ವರದಿ ತೃಪ್ತಿಕರವಾಗಿ ಕಾಣುತ್ತಿಲ್ಲ. ಈ ವಿಷಯದಲ್ಲಿ ಬಿಬಿಎಂಪಿ ತನ್ನ ಪ್ರಗತಿಯನ್ನು ತೋರಿಸದೇ ಹೋದಲ್ಲಿ ಎಂಜಿನಿಯರ್‌ಗಳ ವೇತನ ತಡೆ ಹಿಡಿಯಲು ಆದೇಶಿಸಬೇಕಾಗುತ್ತದೆ' ಎಂದು ಮೌಖಿಕ ಎಚ್ಚರಿಕೆ ನೀಡಿತು. ಅಂತೆಯೇ, 'ರಸ್ತೆ ಗುಂಡಿಗಳನ್ನು ತುಂಬುವ ಕಾಮಗಾರಿಯೂ ಸಮರ್ಪಕವಾಗಿಲ್ಲ. ಈ ರಸ್ತೆಗಳು ವಾಹನ ಸವಾರರಿಗೆ ಬಲು ಕಷ್ಟಕರವಾಗಿ ಪರಿಣಮಿಸಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿತು. ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಲಾಗಿದೆ.

ಚಿತ್ರಾವಳಿ

ಯಲಹಂಕದ ಜಯ ಕರ್ನಾಟಕ ಜನಪರ ವೇದಿಕೆ ಹಾಗೂ ಐಕೇರ್ ಫೌಂಡೇಶನ್ ಆಶ್ರಯದಲ್ಲಿ ಹುಣಸಮಾರನಹಳ್ಳಿಯ ಸರ್ಕಾರಿ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಬ್ಯಾಟರಾಯನಪುರ ಕ್ಷೇತ್ರಮಟ್ಟದ ಶಿಕ್ಷಕರಾದ ಜೆ.ಲತಾ, ಮಿರ್ ಗಲಿಬ್ ರಾಜಾ, ಸುಜಯ್ ಸಂದೀಪ್ ಮತ್ತು ಚೇತನಾ ಅವರಿಗೆ 'ವಿದ್ಯಾಭೂಷಣ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಬಿ.ಚಂದ್ರಪ್ಪ, ರಾಜ್ಯ ಮುಖ್ಯನಿರ್ವಾಹಕ ಜೆ.ಶ್ರೀನಿವಾಸ, ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್ ಕುಮಾರ್ ಎಸ್.ಹೊಸಮನಿ, ನಿರೂಪಕಿ ಭಾವನಾ ನಾಗಯ್ಯ, ತಾ.ಪಂ. ಮಾಜಿ ಉಪಾಧ್ಯಕ್ಷೆ ಸುಜಾತ ಶ್ರೀನಿವಾಸ್, ಗ್ರಾ.ಪಂ. ಮಾಜಿ ಅಧ್ಯಕ್ಷ ಹರೀಶ್ ಕುಮಾರ್, ನಿವೃತ್ತ ಮುಖ್ಯಶಿಕ್ಷಕ ಭದ್ರಯ್ಯ ಹಾಗೂ ಇತರರು ಇದ್ದರು.

ನಗರದ ಫೋರ್ ಸೀಸನ್ಸ್ ಹೋಟೆಲ್‌ನಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ 'ಏಷ್ಯಾ ಜ್ಯುವೆಲ್ಸ್ ಶೋ' ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಲನಚಿತ್ರ ನಟಿ ಪ್ರಿಯಾಂಕಾ ಉಪೇಂದ್ರ ಅವರು ಶುಕ್ರವಾರ ಚಾಲನೆ ನೀಡಿದರು.

'ಗೌನ್'ಗೆ ಬಲಿಯಾಯ್ತು ಸಾಮಾನ್ಯ ಸಭೆ

ಹುಬ್ಬಳ್ಳಿ: ಅನಿರ್ದಿಷ್ಟ ಅವಧಿಗೆ ಸಭೆ ಮುಂದೂಡಿಕೆ ● ಸಂಪ್ರದಾಯ ಮುರಿದ ಮೇಯರ್: ಆರೋಪ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಸಾಮಾನ್ಯ ಸಭೆ ನಡೆಸಲು ಮೇಯರ್ ಅವರು ಗೌನ್ ಧರಿಸಿಕೊಂಡು ಬರಲೇಬೇಕೆಂದು ಹುಬ್ಬಳ್ಳಿ– ಧಾರವಾಡ ಪಾಲಿಕೆಯ ವಿರೋಧ ಪಕ್ಷದ ಸದಸ್ಯರು ಶುಕ್ರವಾರ ಪಟ್ಟು ಹಿಡಿದಿದ್ದರಿಂದ ಮೇಯರ್ ಈರೇಶ ಅಂಚಟಗೇರಿ ಅವರು ಸಾಮಾನ್ಯಸಭೆಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದರು.

ಇದಕ್ಕೂ ಮುಂಚೆ, ಸಭೆ ನಡೆಸಲು ಬೆಳಿಗ್ಗೆ 11.30ಕ್ಕೆ ಈರೇಶ ಅವರು ವೇಸ್ಟ್ ಕೋಟ್ ಧರಿಸಿ ಬಂದರು. ಗೌನ್ ಧರಿಸಿರಲಿಲ್ಲ. ಇದರಿಂದ ಕೆರಳಿದ ಕಾಂಗ್ರೆಸ್ ಹಾಗೂ ಎಐಎಂಐಎಂ ಸದಸ್ಯರು ಬಾವಿಗೆ ಇಳಿದು ಪ್ರತಿಭಟಿಸಿದರು. ಗದ್ದಲ ಹೆಚ್ಚಾದಾಗ ಈರೇಶ ಅವರು ಸಭೆಯನ್ನು ಅರ್ಧ ಗಂಟೆ ಮುಂದೂಡಿದರು. ನಂತರ 12.30ಕ್ಕೆ ಮತ್ತೆ ಸಭೆ ಆರಂಭಿಸಿದಾಗ ಪುನಃ ಗದ್ದಲ ಮುಂದುವರೆಯಿತು. ಮೇಯರ್ ಟೇಬಲ್ ಮೇಲಿದ್ದ ಗಂಟೆಯನ್ನು ಸದಸ್ಯ ನಿರಂಜನ ಹಿರೇಮಠ ಕೈಗೆತ್ತಿಕೊಂಡರು. ಇದಕ್ಕೆ ಆಡಳಿತರೂಢ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಗದ್ದಲ ಹೆಚ್ಚಾದಾಗ ಈರೇಶ ಅವರು ಸಭೆಯನ್ನು ಅನಿರ್ದಿಷ್ಟಾವಧಿಯವರೆಗೆ ಮುಂದೂಡಿದರು.

ಹುಬ್ಬಳ್ಳಿ ಮಹಾನಗರ ಪಾಲಿಕೆ ಸಭಾಭವನದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಗೌನ್ ಧರಿಸದೇ ಬಂದ ಮೇಯರ್ ಈರೇಶ ಅಂಚಟಗೇರಿ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ವಾಗ್ವಾದ ನಡೆಯಿತು

ಹಲವಾರು ವರ್ಷಗಳಿಂದ ಗೌನ್ ಧರಿಸುವುದು ಸಂಪ್ರದಾಯವಾಗಿ ನಡೆದುಕೊಂಡು ಬಂದಿದೆ. ಅದನ್ನು ಈರೇಶ ಅವರು ಮುರಿದಿದ್ದಾರೆ. ಮೊನ್ನೆ ರಾಷ್ಟ್ರಪತಿ ಅವರು ಬಂದಾಗಲೂ ಅವರು ಗೌನ್ ಧರಿಸಿರಲಿಲ್ಲ. ಮೇಯರ್ ಸ್ಥಾನಕ್ಕೆ ಅಗೌರವ ತೋರಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ರಾಜಾರಾವ್ ಮನ್ನಿಕುಂಟಲ್ (ದೊರಾಜ) ಆಕ್ರೋಶ ವ್ಯಕ್ತಪಡಿಸಿದರು.

ತಮ್ಮ ಜೊತೆ ಯಾವುದೇ ಚರ್ಚೆ ಮಾಡದೆ, ಸಾಮಾನ್ಯ ಸಭೆಯಲ್ಲಿ ಚರ್ಚಿಸದೇ ಏಕಾಏಕಿ ಈ ರೀತಿಯ ನಿರ್ಧಾರ ಕೈಗೊಂಡಿರುವುದು ಸರ್ವಾಧಿಕಾರದ ಧೋರಣೆಯಾಗಿದೆ. ಮೇಯರ್ ಅಧಿಕಾರ ಸ್ವೀಕರಿಸುವಾಗ ಗೌನ್ ಹಾಕಿಕೊಂಡು ಬಂದಿದ್ದರು. ಈಗ ಧರಿಸದೇ ಇರುವುದಕ್ಕೆ ಏನು ಕಾರಣ ಎನ್ನುವುದನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಬೇಕಾಗಿತ್ತು ಎಂದು ಇಮಾಮಹುಸೇನ ಎಲಿಗಾರ ಹೇಳಿದರು.

ಅವಳಿ ನಗರದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ರಾಷ್ಟ್ರಪತಿ ಅವರು ನಗರಕ್ಕೆ ಆಗಮಿಸಿದಾಗ ದುಂದುವೆಚ್ಚ ಮಾಡಲಾಗಿದೆ. ಲೆಕ್ಕಪತ್ರದಲ್ಲಿ ಅವ್ಯವಹಾರ ಮಾಡಲಾಗಿದೆ. ಇದೆಲ್ಲವನ್ನು ಚರ್ಚಿಸಲು ನಾವು ಸಿದ್ಧರಾಗಿ ಬಂದಿದ್ದೆವು. ಆದರೆ, ಮೇಯರ್ ಅವರು ಚರ್ಚೆಯಿಂದ ತಪ್ಪಿಸಿಕೊಳ್ಳಲು ಸಭೆ ಮುಂದೂಡಿದ್ದಾರೆ ಎಂದು ವಿರೋಧ ಪಕ್ಷದ ಹಲವು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಸಿ.ಎಂ ಜತೆ ಚರ್ಚಿಸಿ, ಗೌನ್ ತ್ಯಜಿಸಿದ್ದೇನೆ: ಮೇಯರ್

ಹುಬ್ಬಳ್ಳಿ: ಗೌನ್ ಧರಿಸುವ ಸಂಪ್ರದಾಯ ಬ್ರಿಟಿಷ್ ಕಾಲದ ಪಳೆಯುಳಿಕೆಯಾಗಿದೆ. ಇದಲ್ಲದೇ, ಗೌನ್ ಧರಿಸಲೇಬೇಕೆಂದು ಕೆಎಂಸಿ ಕಾಯ್ದೆಯಲ್ಲಿ ಇಲ್ಲ. ಅದಕ್ಕಾಗಿ ಗೌನ್ ಧರಿಸುವುದನ್ನು ತ್ಯಜಿಸಿದ್ದೇನೆ ಎಂದು ಮೇಯರ್ ಈರೇಶ ಅಂಚಟಗೇರಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೇಯರ್ ಹುದ್ದೆ ಅಲಂಕರಿಸುವಾಗ ಗೌನ್ ಧರಿಸಿದ್ದೆ. ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋದಾಗ ಗೌನ್ ಧರಿಸಿ ಬರುವ ಅಗತ್ಯವಿಲ್ಲವೆಂದು ಅವರೇ ಹೇಳಿದ್ದರು. ಅವರ ಜೊತೆ ಚರ್ಚಿಸಿದ ನಂತರ ಗೌನ್ ತ್ಯಜಿಸಲು ನಿರ್ಧರಿಸಿದೆ. ಮೊನ್ನೆ ರಾಷ್ಟ್ರಪತಿ ಅವರು ಬಂದಾಗಲೂ ನಾನು ಗೌನ್ ಧರಿಸಿರಲಿಲ್ಲ' ಎಂದು ತಿಳಿಸಿದರು.

'ಗೌನ್ ಧರಿಸಲೇಬೇಕು ಎನ್ನುವ ಯಾವ ನಿಯಮ ಕೆಎಂಸಿ ಕಾಯ್ದೆಯಲ್ಲಿ ಇಲ್ಲ. ಇದಲ್ಲದೇ, ರಾಜ್ಯದ ಹಲವೆಡೆ ಮೇಯರ್‌ಗಳು ಗೌನ್ ಧರಿಸುವುದನ್ನು ಬಿಟ್ಟಿದ್ದಾರೆ. ವಿಶ್ವವಿದ್ಯಾಲಯಗಳ ಕುಲಪತಿಗಳು ಕೂಡ ಧರಿಸುತ್ತಿಲ್ಲ. ಬ್ರಿಟಿಷ್ ಸಂಪ್ರದಾಯಕ್ಕೆ ಇನ್ನಾದರೂ ಇತಿಶ್ರೀ ಹಾಡೋಣ. ಗೌನ್ ಧರಿಸುವ ಬಗ್ಗೆ ವಿವರಣೆ ಕೋರಿ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೇನೆ. ಲಿಖಿತ ಆದೇಶ ಹೊರಡಿಸಲೂ ಕೋರಿದ್ದೇನೆ. ಈ ವಾರದಲ್ಲಿ ಆದೇಶ ಬರುವ ಸಾಧ್ಯತೆ ಇದೆ ಎಂದು ಹೇಳಿದರು.

ಏಕಕಾಲದಲ್ಲಿ ಎರಡು ಪದವಿ: ಯುಜಿಸಿ ಅಧಿಸೂಚನೆ

ನವದೆಹಲಿ (ಪಿಟಿಐ): ಏಕಕಾಲದಲ್ಲಿ ಎರಡು ಪದವಿ ಪಡೆಯಲು ಅನುವಾಗುವಂತೆ ನಿಯಮಗಳಿಗೆ ಶಾಸನಬದ್ಧ ಬದಲಾವಣೆ ಮಾಡಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಶುಕ್ರವಾರ ಎಲ್ಲ ವಿಶ್ವವಿದ್ಯಾಲಯಗಳಿಗೆ ಸೂಚಿಸಿದೆ.

ಯುಜಿಸಿ ಕಳೆದ ಏಪ್ರಿಲ್ ತಿಂಗಳಲ್ಲಿ ವಿದ್ಯಾರ್ಥಿಗಳು ಏಕಕಾಲದಲ್ಲಿ ಪೂರ್ಣಪ್ರಮಾಣದಲ್ಲಿ ಎರಡು ಪದವಿ ಕೋರ್ಸ್ ಅಧ್ಯಯನ ನಡೆಸಲು ಅವಕಾಶ ಕಲ್ಪಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಿತ್ತು. ಈ ಸಂಬಂಧಿತ ಮಾರ್ಗದರ್ಶಿ ಸೂತ್ರಗಳ ಕುರಿತು ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಎಲ್ಲ ಉನ್ನತ ಶಿಕ್ಷಣದ ಸಂಸ್ಥೆಗಳು ತಮ್ಮ ಶಾಸನಬದ್ಧ ಸಮಿತಿಗಳ ಮೂಲಕ ಪೂರಕವಾಗಿ ಅಗತ್ಯ ಬದಲಾವಣೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳ ಹಿತಾಸಕ್ತಿ ದೃಷ್ಟಿಯಿಂದ ಇದು ಅಗತ್ಯ. ಆದಷ್ಟು ಬೇಗ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು ಎಂದು ಯುಜಿಸಿ ಪತ್ರದಲ್ಲಿ ಸೂಚಿಸಿದೆ.

ಎಂಟು ಪಾಲಿಕೆಗಳ ಮೇಯರ್, ಉಪ ಮೇಯರ್ ಮೀಸಲಾತಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಂಟು ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳ ಮೀಸಲಾತಿಯನ್ನು ಬದಲಾವಣೆ ಮಾಡಿ ನಗರಾಭಿವೃದ್ಧಿ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ರಾಜ್ಯದ ಹತ್ತು ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ನಿಗದಿಗೊಳಿಸಿ ಆಗಸ್ಟ್ 24 ರಂದು ಆದೇಶ ಹೊರಡಿಸಲಾಗಿತ್ತು. ಅದೇ ಮೀಸಲಾತಿ ಪ್ರಕಾರ ಮೈಸೂರು ಮತ್ತು ತುಮಕೂರು ಪಾಲಿಕೆಗಳ ಮೇಯರ್, ಉಪ ಮೇಯರ್ ಆಯ್ಕೆಗೆ ಚುನಾವಣೆ ನಡೆಸಲಾಗಿತ್ತು. ಮೀಸಲಾತಿ ನಿಗದಿಯಲ್ಲಿ ಮಾರ್ಗಸೂಚಿ ಉಲ್ಲಂಘನೆಯಾಗಿದೆ ಎಂದು ಕೆಲವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 'ಮೀಸಲಾತಿ ನಿಗದಿ ಪ್ರಕ್ರಿಯೆಯಲ್ಲಿನ ಲೋಪವಾಗಿರುವ ಕಾರಣದಿಂದ ಈ ಪ್ರಕ್ರಿಯೆಯನ್ನು ಪುನಃ ನಡೆಸಬೇಕು' ಎಂದು ಹೈಕೋರ್ಟ್ ನಿರ್ದೇಶನ ನೀಡಿತ್ತು.

ಹೈಕೋರ್ಟ್ ಆದೇಶದ ಅನುಸಾರ ಎಂಟು ಪಾಲಿಕೆಗಳ ಮೇಯರ್, ಉಪ ಮೇಯರ್ ಸ್ಥಾನಗಳ ಮೀಸಲಾತಿಯಲ್ಲಿ ಬದಲಾವಣೆ ಮಾಡಲಾಗಿದೆ. ಈಗಾಗಲೇ ಚುನಾವಣೆ ನಡೆದಿರುವುದರಿಂದ ಮೈಸೂರು ಮತ್ತು ತುಮಕೂರು ಪಾಲಿಕೆಗಳಲ್ಲಿ ಯಥಾಸ್ಥಿತಿ ಮುಂದುವರಿಸಲಾಗಿದೆ.

ಪರಿಷ್ಕೃತ ಮೀಸಲಾತಿ ವಿವರ: ಬಳ್ಳಾರಿ: ಮೇಯರ್– ಸಾಮಾನ್ಯ; ಉಪ ಮೇಯರ್– ಸಾಮಾನ್ಯ ಮಹಿಳೆ. **ಬೆಳಗಾವಿ:** ಮೇಯರ್– ಸಾಮಾನ್ಯ ಮಹಿಳೆ; ಉಪ ಮೇಯರ್– ಸಾಮಾನ್ಯ. **ದಾವಣಗೆರೆ:** ಮೇಯರ್– ಪರಿಶಿಷ್ಟ ಪಂಗಡ; ಉಪ ಮೇಯರ್– ಸಾಮಾನ್ಯ ಮಹಿಳೆ. **ಹುಬ್ಬಳ್ಳಿ– ಧಾರವಾಡ:** ಮೇಯರ್ ಸಾಮಾನ್ಯ ಮಹಿಳೆ; ಉಪ ಮೇಯರ್– ಹಿಂದುಳಿದ ವರ್ಗ–ಬಿ. **ಕಲಬುರಗಿ:** ಮೇಯರ್– ಹಿಂದುಳಿದ ವರ್ಗ–ಎ; ಉಪ ಮೇಯರ್– ಸಾಮಾನ್ಯ ಮಹಿಳೆ. **ಮಂಗಳೂರು:** ಮೇಯರ್– ಸಾಮಾನ್ಯ; ಉಪ ಮೇಯರ್– ಪರಿಶಿಷ್ಟ ಜಾತಿ ಮಹಿಳೆ. **ಶಿವಮೊಗ್ಗ:** ಮೇಯರ್– ಪರಿಶಿಷ್ಟ ಜಾತಿ; ಉಪ ಮೇಯರ್– ಹಿಂದುಳಿದ ವರ್ಗ– ಎ ಮಹಿಳೆ. **ವಿಜಯಪುರ:** ಹಿಂದುಳಿದ ವರ್ಗ–ಎ ಮಹಿಳೆ; ಉಪ ಮೇಯರ್– ಸಾಮಾನ್ಯ.

ಕೃಷ್ಣಾ: ಪ್ರತ್ಯೇಕ ನ್ಯಾಯಪೀಠ ರಚನೆ–ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣ–2' ನೀಡಿರುವ ತೀರ್ಪನ್ನು ಗೆಜೆಟ್‌ನಲ್ಲಿ ಪ್ರಕಟಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಗೆ ಪ್ರತ್ಯೇಕ ನ್ಯಾಯಪೀಠ ಶೀಘ್ರ ರಚನೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಆಲಮಟ್ಟಿ (ಲಾಲ್ ಬಹದ್ದೂರ್ ಶಾಸ್ತ್ರಿ) ಜಲಾಶಯಕ್ಕೆ ಬಾಗಿನ ಅರ್ಪಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೀಠದಲ್ಲಿದ್ದ ಕರ್ನಾಟಕ ಹಾಗೂ ಮಹಾರಾಷ್ಟ್ರದ ನ್ಯಾಯಾಧೀಶರು ಹಿಂದೆ ಸರಿದಿದ್ದು, ಹೊಸ ನ್ಯಾಯಾಧೀಶರ ನೇಮಕಕ್ಕೆ ಮನವಿ ಮಾಡಲಾಗಿದೆ. ಮುಂದಿನ ತಿಂಗಳು ವಿಚಾರಣೆ ಆರಂಭವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಿಜಯಪುರ ಜಿಲ್ಲೆಯ ಆಲಮಟ್ಟಿ (ಲಾಲ್ ಬಹದ್ದೂರ್ ಶಾಸ್ತ್ರಿ) ಜಲಾಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಾಗಿನ ಅರ್ಪಿಸಿದರು. ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಸಚಿವ ಗೋವಿಂದ ಕಾರಜೋಳ, ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಇದ್ದಾರೆ

ಯುಕೆಪಿ ಮೂರನೇ ಹಂತದ ಕಾಮಗಾರಿಗೆ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗಿದೆ. ಹಳ್ಳಿಗಳ ಸ್ಥಳಾಂತರಕ್ಕೆ ₹3,900 ಕೋಟಿ ಬಿಡುಗಡೆ ಮಾಡಲಾಗಿದೆ. ನೀರಾವರಿಗೆ ಈ ವರ್ಷ ₹10 ಸಾವಿರ ಕೋಟಿ ಖರ್ಚು ಮಾಡಲಾಗುವುದು. ಕೃಷ್ಣಾ ಭಾಗ್ಯ ಜಲ ನಿಗಮ ಕಚೇರಿ ಜನವರಿಯೊಳಗೆ ಆಲಮಟ್ಟಿಗೆ ಸ್ಥಳಾಂತರ ಆಗಲಿದೆ ಎಂದರು.

'ಪಿಎಫ್‌ಐ ಏಕೆ ನಿಷೇಧಿಸುತ್ತಿಲ್ಲ ಎಂದು ವಿಧಾನಸಭೆಯಲ್ಲಿ ಕಾಂಗ್ರೆಸ್‌ನವರು ಪ್ರಶ್ನಿಸಿದ್ದರು. ನಿಷೇಧಿಸಿದ ನಂತರವೂ ಪ್ರಶ್ನೆ ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಲಾಭ ಆಗಲ್ಲ. ಅವರ ಬೇಳೆ ಬೇಯಲ್ಲ. ಆರ್‌ಎಸ್‌ಎಸ್ ಹಾಗೂ ಬಜರಂಗ ದಳವನ್ನು ಪಿಎಫ್‌ಐಗೆ ಹೋಲಿಸುವುದು ಮೂರ್ಖತನ' ಎಂದರು.

ಸಚಿವ ಸಂಪುಟ ವಿಸ್ತರಣೆ ಬಗ್ಗೆ ಚರ್ಚಿಸಲು ದೆಹಲಿಗೆ ಹೋಗುವುದಾಗಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಇದ್ದರು.

ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾದಲ್ಲಿ ಕನ್ನಡ ಭವನ ನಿರ್ಮಿಸಲು ಒಂದರಿಂದ ಎರಡು ಎಕರೆ ಜಾಗ ಮಂಜೂರು ಮಾಡುವಂತೆ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್‌ಗೆ ಕೆಲವು ದಿನಗಳ ಹಿಂದೆ ಪತ್ರ ಬರೆದಿರುವ ಬಗ್ಗೆ ಪರ–ವಿರೋಧದ ಚರ್ಚೆ ಪ್ರಾರಂಭವಾಗಿದೆ.

ಗೋವಾದಲ್ಲಿನ ವಿರೋಧ ಪಕ್ಷಗಳು, ಕೆಲವು ನಾಗರಿಕ ಸಂಘಟನೆಗಳು ಕನ್ನಡ ಭವನ ನಿರ್ಮಾಣಕ್ಕೆ ಜಾಗ ನೀಡಬಾರದು ಎಂದು ಒತ್ತಾಯ ಮಾಡಿವೆ. ಕನ್ನಡಿಗರು ಹೆಚ್ಚಿರುವ ವಾಸ್ಕೊ ಕ್ಷೇತ್ರದ ಶಾಸಕ ಸೇರಿದಂತೆ ಕೆಲವು ಬಿಜೆಪಿ ಶಾಸಕರು ಭವನ ನಿರ್ಮಾಣಕ್ಕೆ ಒಪ್ಪಿಗೆ ನೀಡಬೇಕು ಎನ್ನುತ್ತಿದ್ದಾರೆ.

> **ಮಹದಾಯಿ ನದಿ ನೀರಿನ ಮೇಲೆ ತಮ್ಮ ಹಕ್ಕನ್ನು ಕರ್ನಾಟಕ ಕೈಬಿಡುವವರೆಗೆ ಕನ್ನಡ ಭವನ ನಿರ್ಮಾಣವನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ**
> **ಪ್ರೋಗ್ರೆಸಿವ್ ಫ್ರಂಟ್ ಆಫ್ ಗೋವಾ**
> ಸರ್ಕಾರೇತರ ಸಂಸ್ಥೆ

'ಕನ್ನಡ ಹಾಗೂ ಕನ್ನಡ ಸಂಸ್ಕೃತಿಯನ್ನು ಪ್ರಚಾರ ಮಾಡುತ್ತಾ ಗೋವಾದ ಅಸ್ಮಿತೆಯ ಮೇಲೆ ಅವರು (ಕರ್ನಾಟಕ) ದಾಳಿ ನಡೆಸುತ್ತಿದ್ದಾರೆ' ಎಂದು ಗೋವಾದ ಪ್ರಾದೇಶಿಕ ಪಕ್ಷ ರೆವೆಲ್ಯೂಷನರಿ ಗೋವನ್ಸ್ ಪಕ್ಷದ (ಆರ್‌ಜಿಪಿ) ಸಂಚಾಲಕ ಮನೋಜ್ ಪರಬ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಾಸ್ಕೊ ವಿಧಾನಸಭಾ ಕ್ಷೇತ್ರದ ಶಾಸಕ ಕೃಷ್ಣಾ ಸಾಲ್ಕರ್, ಅವರು ಭವನ ನಿರ್ಮಾಣಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಬೊಮ್ಮಾಯಿ ಅವರು ತಮ್ಮ ಹಿಂದಿನ ಬಜೆಟ್‌ನಲ್ಲಿ ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕಾಗಿ ₹10 ಕೋಟಿ ಮೀಸಲಿಟ್ಟಿದ್ದರು. ಮಂಗಳೂರಿನಲ್ಲಿ ಕೊಂಕಣಿ ಭವನ ನಿರ್ಮಾಣಕ್ಕಾಗಿ ₹ 3 ಕೋಟಿ ಮೀಸಲಿಡಲಾಗಿದೆ ಎಂದು ಬೊಮ್ಮಾಯಿ ಅವರು ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ.

ಉಸ್ತಾದ್ ಹಮೀದ್ ಖಾನ್ ಸ್ಮರಣಾರ್ಥ ಪ್ರಶಸ್ತಿ ಪ್ರದಾನ

ಫಯಾಜ್ ಖಾನ್ 'ಸಂಗೀತ ಸಾಧಕ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಹಿರಿಯ ಗಾಯಕ ಉಸ್ತಾದ್ ಫಯಾಜ್ ಖಾನ್ ಅವರಿಗೆ ಸಿತಾರ್ ವಾದಕ ಉಸ್ತಾದ್ ಹಮೀದ್ ಖಾನ್ ಸ್ಮರಣಾರ್ಥ ನೀಡುತ್ತಿರುವ ಸಂಗೀತ ಸಾಧಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.ಪ್ರಶಸ್ತಿಯು ₹25ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ' ಎಂದು ಕಲಾ ಸಂವಹನ ಟ್ರಸ್ಟ್‌ನ ಟ್ರಸ್ಟಿ ಪ್ರೊ. ನಾಗಪ್ಪ ಶಾಪೂರ ತಿಳಿಸಿದರು.

ಫಯಾಜ್ ಖಾನ್

'ಧಾರವಾಡ ಘರಾಣೆಯ 6ನೇ ತಲೆಮಾರಿನ ಸಿತಾರ ವಾದಕ ಉಸ್ತಾದ ಹಮೀದ ಖಾನ್ ಅವರ ದ್ವಿತೀಯ ಪುಣ್ಯಸ್ಮರಣೆ ಅಂಗವಾಗಿ ಪ್ರಶಸ್ತಿ ಪ್ರದಾನ ಹಾಗೂ ಸಂಗೀತೋತ್ಸವ ಕಾರ್ಯಕ್ರಮವನ್ನು ಅ.2ರ ಸಂಜೆ 5ಕ್ಕೆ ಸೃಜನಾ ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಇದೇ ಕಾರ್ಯಕ್ರಮದಲ್ಲಿ ಸಿತಾರ್ ತಯಾರಕ ಮೀರಜ್‌ನ ಅಹ್ಮದಸಾಬ್ ಸಿತಾರಮೇಕರ್ ಹಾಗೂ ಸಂಗೀತ ಪೋಷಕ ನಾರಾಯಣ ರಾವ್ ಹಾನಗಲ್ ಅವರನ್ನು ಸನ್ಮಾನಿಸಲಾಗುವುದು' ಎಂದರು.

'ಕಲಕೇರಿ ಸಂಗೀತ ಶಾಲೆಯ ಸ್ಥಾಪಕ ಸದಸ್ಯರಾದ ಹಮೀದ ಖಾನ್ ಅವರು ಒಳ್ಳೆಯ ಗುರುವೂ ಹೌದು. ಈ ಗುರುವಿನ ಸಂಸ್ಮರಣೆಯಲ್ಲಿ ಅವರ ಶಿಷ್ಯವೃಂದ ಕಲಾ ಸಂವಹನ ಟ್ರಸ್ಟ್ ಎಂಬ ಸಂಸ್ಥೆ ಹುಟ್ಟು ಹಾಕಿದರು. ಅವರ ಹೆಸರಿನಲ್ಲಿ ಪ್ರತಿ ವರ್ಷ ಸಂಗೀತ ಸಾಧಕ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ' ಎಂದರು.

'ಕಾರ್ಯಕ್ರಮದಲ್ಲಿ ಪಂಡಿತ್ ಡಾ. ಎಂ.ವೆಂಕಟೇಶಕುಮಾರ್, ಉಸ್ತಾದ್ ಫಯಾಜ್ ಖಾನ್ ಅವರ ಗಾಯನ ಕಛೇರಿ ನಡೆಯಲಿದೆ. ಉಸ್ತಾದ್ ಹಮೀದ್ ಖಾನ್ ಹಾಗೂ ಡಾ. ಮೊಹಸೀನ್ ಖಾನ್ ಅವರ 28 ಶಿಷ್ಯರಿಂದ 'ಅರ್ಪಣಾ' ಎಂಬ ಸಿತಾರ್ ಮತ್ತು ತಬಲಾ ಕಾರ್ಯಕ್ರಮ ಜರುಗಲಿದೆ' ಎಂದು ವಿವರಿಸಿದರು. ಮೊಹಸಿನ್ ಖಾನ್, ಹುಸೇನಸಾಬ ನದಾಫ, ಸಿ.ಎಸ್. ಹಿರೇಮಠ ಇದ್ದರು.

ಕಿತ್ತೂರು ಉತ್ಸವಕ್ಕೆ ₹ 2 ಕೋಟಿ ನೆರವು

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಈ ಭಾಗವನ್ನು 'ಕಿತ್ತೂರು ಕರ್ನಾಟಕ' ಎಂದು ಘೋಷಣೆ ಮಾಡಿದ ಬಳಿಕ ನಡೆಯುತ್ತಿರುವ ಕಿತ್ತೂರು ಉತ್ಸವಕ್ಕೆ ರಾಜ್ಯ ಸರ್ಕಾರ ₹ 2 ಕೋಟಿ ಅನುದಾನ ನೀಡಿದೆ. ಈ ಬಾರಿಯಿಂದ ರಾಜ್ಯಮಟ್ಟದ ಉತ್ಸವವಾಗಿಯೂ ಆಚರಿಸಲಾಗುತ್ತಿದೆ.

ಪಟ್ಟಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಶಾಸಕ ಮಹಾಂತೇಶ ದೊಡ್ಡಗೌಡ್ರ, ಅ.23, 24, 25ರಂದು ವೈಭವ ಮರುಕಳಿಸಲಿದೆ. ಅ.2ರಂದು ಬೆಂಗಳೂರಿನಿಂದ ಹೊರಡುವ ವೀರಜ್ಯೋತಿ ಯಾತ್ರೆಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ' ಎಂದರು.

ಶನಿವಾರ, ಅಕ್ಟೋಬರ್ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 272 | ಪುಟ 34

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಣಿಪಾಲ್ ಹಾಸ್ಪಿಟಲ್ಸ್
ಹೃದಯ ಸಂಬಂಧಿತ ಎಮರ್ಜನ್ಸಿ ಸೇವೆಗಾಗಿ ಸ್ಕ್ಯಾನ್ ಮಾಡಿ

ಚರ್ಚೆ
ಮಾಡಿದ್ದುಣ್ಣೋ ಮಹರಾಯ, ಕ್ರಿಯೆಗೆ ಪ್ರತಿಕ್ರಿಯೆ

ಇಂದು ಭೂಮಿಕಾ 4

ಉಕ್ರೇನ್‌ನ 4 ಪ್ರದೇಶ ರಷ್ಯಾಕ್ಕೆ ಸೇರ್ಪಡೆ 11

ನೈಸರ್ಗಿಕ ಅನಿಲ ಬೆಲೆ ಏರಿಕೆ: ಸಿಎನ್‌ಜಿ ದುಬಾರಿ? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,426 ▲	17,094 ▲	₹51,770 (ಬೆಂಗಳೂರು) ▲	₹57,300 (ಬೆಂಗಳೂರು)	81.40 ▲

ಸುದರ್ಶನ್ ಜ್ಯುವೆಲರ್ಸ್
ಚಿನ್ನ • ಬೆಳ್ಳಿ • ಚಿನ್ನದ ಆಭರಣಗಳು
ವಿಶೇಷ ಕೂಡುಗೆ ವೆಸ್ಟೇಜ್ 4% ಮಾತ್ರ
₹4730/-gm
ಬೆಳ್ಳಿ ₹ 52,000/- *CA
ಚಿಕ್ಕಪೇಟೆ: 41300355
Gangothri

ಜನರ ಧ್ವನಿ ಅಡಗಿಸುವ ಸಾಮರ್ಥ್ಯ ಯಾರಿಗೂ ಇಲ್ಲ – ರಾಹುಲ್

ರಾಜ್ಯದಲ್ಲಿ ‘ಯಾತ್ರೆ’ ಆರಂಭ

• ರಾಜೇಶ್ ರೈ ಚಟ್ಲ

ಗುಂಡ್ಲುಪೇಟೆ (ಚಾಮರಾಜನಗರ): ಇನ್ನು ಏಳು ತಿಂಗಳಲ್ಲಿ ರಾಜ್ಯ ವಿಧಾನ ಸಭೆ, 2024ರಲ್ಲಿ ಲೋಕಸಭೆ ಚುನಾವಣೆ ನಡೆಯಲಿದ್ದು, ಅದಕ್ಕೂ ಮೊದಲು ಕೋಮುವಾದ, ದ್ವೇಷ ರಾಜಕಾರಣ, ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿ, ಜನ ಸಮುದಾಯಗಳನ್ನು ‘ಒಗ್ಗೂಡಿಸಲು’ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಮ್ಮಿಕೊಂಡ ‘ಭಾರತ್ ಜೋಡೊ’ ಶುಕ್ರವಾರ ಇಲ್ಲಿಂದ ರಾಜ್ಯದಲ್ಲಿ ಆರಂಭಗೊಂಡಿತು.

ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಭವನದ ಮುಂಭಾಗದ ಮೈದಾನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ‘ಕೈ’ಗಳನ್ನು ಹಿಡಿದು ರಾಹುಲ್ ಯಾತ್ರೆಯ ನಗಾರಿ ಬಾರಿಸಿದರು. ಅಷ್ಟೇ ಅಲ್ಲ, ಕಾರ್ಯಕರ್ತರನ್ನು ಬಡಿದೆಬ್ಬಿಸಿ, ಮತದಾರ ಪ್ರಭುಗಳನ್ನು ಪುನರ್ ಸಂಪರ್ಕಿಸುವ ಚುನಾವಣಾ ರಾಜಕಾರಣದ ‘ಅಸ್ತ್ರ’ವಾದ ಈ ಯಾತ್ರೆಯಲ್ಲಿ 'ಕೈ' ಹಿಡಿದುಕೊಂಡೇ ಒಂದಷ್ಟು ದೂರ ಹೆಜ್ಜೆ ಹಾಕಿ, ಒಗ್ಗಟ್ಟಿನಿಂದ ಮುನ್ನಡೆಯುವಂತೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರಿಗೆ ಪರೋಕ್ಷವಾಗಿ ಸೂಚಿಸಿದರು.

ಕನ್ಯಾಕುಮಾರಿಯಿಂದ ಕಾಶ್ಮೀರವರೆಗೂ 3,570 ಕಿ.ಮೀ ದೂರದವರೆಗೆ ನಡೆಯುವ ಈ ಯಾತ್ರೆಯಲ್ಲಿ, ತಮಿಳುನಾಡು ಮತ್ತು ಕೇರಳದಲ್ಲಿ ಸುಮಾರು 500 ಕಿ.ಮೀ ಹೆಜ್ಜೆ ಹಾಕಿರುವ ರಾಹುಲ್, ತಮಿಳುನಾಡಿನ ಗುಡಲೂರು ಮೂಲಕ ರಾಜ್ಯದ ಗಡಿ ಪ್ರವೇಶಿಸಿದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಲುಪಿದ ಭಾರತ್ ಜೋಡೊ ಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಕ್ಷದ ನಾಯಕ ರಾಹುಲ್ ಗಾಂಧಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಶಾಸಕ ಜಿ. ಪರಮೇಶ್ವರ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಕಾರ್ಯಕರ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ರಾಜ್ಯ ಹೈಕೋರ್ಟ್ ಸಿಜೆಯಾಗಿ ನ್ಯಾ. ವರಾಳೆಗೆ ಬಡ್ತಿ

ನವದೆಹಲಿ: ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರಿಗೆ ಕರ್ನಾಟಕ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿ ಪದೋನ್ನತಿ ನೀಡಲು ಸುಪ್ರೀಂಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ. ವರಾಳೆ ಅವರು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮೂಲದವರು. 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ ನಾಮಪತ್ರ ಸಲ್ಲಿಸಿದ ಖರ್ಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ಹಲವು ತಿರುವುಗಳಿಗೆ ಸಾಕ್ಷಿಯಾಗಿದೆ. ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆಯ ಕಣಕ್ಕೆ ಇಳಿದಿದ್ದಾರೆ.

ಈ ಚುನಾವಣೆಯಲ್ಲಿ ಕಣಕ್ಕೆ ಇಳಿಯುವ ಸಂಭಾವ್ಯರ ಪಟ್ಟಿಯಲ್ಲಿ ಈವರೆಗೆ ಖರ್ಗೆ ಅವರ ಹೆಸರು ಇರಲಿಲ್ಲ. ಆದರೆ, ಖರ್ಗೆ ಅವರು ಶುಕ್ರವಾರ ದಿಢೀರ್ ನಾಮಪತ್ರ ಸಲ್ಲಿಸಿದ್ದಾರೆ. ಶಶಿ ತರೂರ್ ಸಹ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ಜಾರ್ಖಂಡ್ ಕಾಂಗ್ರೆಸ್‌ನ ನಾಯಕ ಕೆ.ಎನ್.ತ್ರಿಪಾಠಿ ಸಹ ನಾಮಪತ್ರ ಸಲ್ಲಿಸಿದ್ದಾರೆ.

ಖರ್ಗೆ ಅವರು ಕಣಕ್ಕೆ ಇಳಿಯುವ ನಿರ್ಧಾರ ಪ್ರಕಟವಾದ ಬೆನ್ನಲ್ಲೇ, ದಿಗ್ವಿಜಯ ಸಿಂಗ್ ಹಿಂದೆ ಸರಿದಿದ್ದಾರೆ. ಈಗ ಮೂವರು ಅಭ್ಯರ್ಥಿಗಳು ಕಣದಲ್ಲಿದ್ದರೂ, ನಿಜವಾದ ಸ್ಪರ್ಧೆಯು ಖರ್ಗೆ ಮತ್ತು ತರೂರ್ ಮಧ್ಯೆ ಮಾತ್ರ ನಡೆಯಲಿದೆ ಎನ್ನಲಾಗಿದೆ.

ಇನ್ನಷ್ಟು ಸುದ್ದಿಗಳು 7

ಸಿಇಟಿ ಪರಿಷ್ಕೃತ ರ‍್ಯಾಂಕಿಂಗ್ ಇಂದು ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಆದೇಶದಂತೆ ಸಿದ್ಧಪಡಿಸಿದ ಸಿಇಟಿ ಪರಿಷ್ಕೃತ ರ‍್ಯಾಂಕಿಂಗ್ ಪಟ್ಟಿಯನ್ನು ಅ. 1ರ ಮಧ್ಯಾಹ್ನ 2ಕ್ಕೆ ಪ್ರಕಟಿಸಲಾಗುತ್ತಿದೆ.

ಹಿಂದಿನ ವರ್ಷ ಪಿಯು ತೇರ್ಗಡೆಯಾಗಿದ್ದು, ಈ ಬಾರಿಯೂ ಸಿಇಟಿ ಬರೆದ 24 ಸಾವಿರ ಪುನರಾವರ್ತಿತ ವಿದ್ಯಾರ್ಥಿಗಳ ದ್ವಿತೀಯ ಪಿಯು ಅಂಕಗಳಲ್ಲಿ 6 ಅಂಕಗಳನ್ನು ಕಡಿತಗೊಳಿಸಿ, ಉಳಿದ ಶೇ 50ರಷ್ಟು, ಈ ಬಾರಿಯ ಸಿಇಟಿಯ ಶೇ 50ರಷ್ಟು ಅಂಕಗಳನ್ನು ಸೇರಿಸಿ ಹೊಸ ಪರಿಷ್ಕೃತ ರ‍್ಯಾಂಕಿಂಗ್ ಪಟ್ಟಿ ಸಿದ್ಧಪಡಿಸಲಾಗಿದೆ. ಇದರಿಂದ ಈ ಹಿಂದೆ ಪ್ರಕಟಿಸಿದ ಪಟ್ಟಿಯಲ್ಲಿ ಒಂದಷ್ಟು ವ್ಯತ್ಯಾಸಗಳಾಗಲಿವೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಫಲಿತಾಂಶವನ್ನು ಪ್ರಾಧಿಕಾರದ ವೆಬ್ ಸೈಟ್ karresults.nic.inನಲ್ಲಿ ನೋಡಬಹುದು.

SHREE SAI GOLD PALACE
Redefining Jewellery
Gold | Diamond | Silver | Platinum
YELAHANKA • HSR LAYOUT • KR PURAM • BASAVANAGUDI • BENGALURU
ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್
ದಸರಾ ಮತ್ತು ದೀಪಾವಳಿ
ಮೆಗಾ ಗೋಲ್ಡ್ ಫೆಸ್ಟ್
ಈ ದಸರಾ ಮತ್ತು ದೀಪಾವಳಿಗೆ ಭರ್ಜರಿ ರಿಯಾಯಿತಿ ಮತ್ತು ಬಹುಮಾನಗಳನ್ನು ಗೆಲ್ಲಿರಿ
ಚಿನ್ನ ಖರೀದಿಸಿ ಮತ್ತು ಬಹುಮಾನ ಗೆಲ್ಲಿ
ತಯಾರಿಕಾ ಬೆಲೆಯಲ್ಲಿ ಚಿನ್ನಾಭರಣವನ್ನು ಖರೀದಿಸಲು ಸುವರ್ಣಾವಕಾಶ
ಇಲ್ಲ ವೇಸ್ಟೇಜ್ ಚಾರ್ಜ್ ಮತ್ತು ಸ್ಟೋನ್ ಚಾರ್ಜ್
ಅತಿ ಕಡಿಮೆ ಮೇಕಿಂಗ್ ಚಾರ್ಜಸ್
ಡಾ. ಟಿ.ಎ. ಶರವಣ
ಮಾಲೀಕರು
ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್
ನಮ್ಮ ವಿಭಿನ್ನ ಬಗೆಯ ಆಭರಣಗಳಿಂದ ನಿಮ್ಮ ಹಬ್ಬದ ಸಂಭ್ರಮವನ್ನು ಹೆಚ್ಚಿಸಿ
ನಿಮ್ಮ ಹತ್ತಿರದ ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್‌ಗೆ ಇಂದೇ ಭೇಟಿ ನೀಡಿ
Basavanagudi 6366929823 | HSR Layout 7406227661 | Yelahanka 9513034919 | K.R. Puram 6366947191



60 Years of Excellence 1962-2022
Margadarsi
RAMOJI GROUP
ಆಚರಿಸಲಾಗುತ್ತಿದೆ
60 ವರ್ಷಗಳ ಸಬಲೀಕರಣದ ಕನಸುಗಳು ಮತ್ತು ಗುರಿಗಳು
...ಚಂದಾದಾರರ ಕನಸುಗಳನ್ನು ಮತ್ತು ಗುರಿಗಳನ್ನು ಸಾಧಿಸಲು ಸಹಾಯ ಮಾಡುವ ಬದ್ಧತೆಯು ನಮ್ಮನ್ನು ಬಲಗೊಳಿಸುತ್ತದೆ
ವ್ಯಕ್ತಿಗಳು ತಮ್ಮ ಕನಸುಗಳನ್ನು ಮತ್ತು ಗುರಿಗಳನ್ನು ಸಾಧಿಸಲು ಸಹಾಯ ಮಾಡುವ ಪ್ರಮುಖ ಸಾಧನವಾಗಿ ಆರ್ಥಿಕ ಸಬಲೀಕರಣದ ಶಕ್ತಿಯನ್ನು ಅರಿತುಕೊಂಡ ಶ್ರೀ ರಾಮೋಜಿ ರಾವ್ ಅವರ ದೂರದೃಷ್ಟಿಯ ಉತ್ಸಾಹವನ್ನು ನಾವು ಆಚರಿಸುತ್ತೇವೆ.
ಇದು ಸ್ವಂತ ಮನೆ ಅಥವಾ ವ್ಯಾಪಾರಕ್ಕಾಗಿ ದುಡಿಯುವ ಬಂಡವಾಳವನ್ನು ಖರೀದಿಸುವಂತಹ ಮೈಲಿಗಲ್ಲುಗಳಾಗಿರಬಹುದು, ಮಗುವಿನ ಉನ್ನತ ಶಿಕ್ಷಣವನ್ನು ಖಾತ್ರಿಪಡಿಸುವುದು ಅಥವಾ ಮಗಳ ಮದುವೆ, ನಿವೃತ್ತಿಯ ನಿಧಿ, ತುರ್ತು ಆರೋಗ್ಯ ವೆಚ್ಚಗಳಿಗೆ, ಚಿಟ್ ಒಂದು ಉತ್ತಮ ಹಣಕಾಸು ಸಾಧನವಾಗಿದ್ದು ಅಗತ್ಯವಿರುವ ಸಮಯದಲ್ಲಿ ಒಂದು ದೊಡ್ಡ ಮೊತ್ತವನ್ನು ಹಿಂಪಡೆಯಲು ಅನುಮತಿಸುತ್ತದೆ
ಇಲ್ಲಿಯವರೆಗೆ 60 ಲಕ್ಷ ಸಂತೋಷದ ಚಂದಾದಾರರು ಮಾರ್ಗದರ್ಶಿಯ ಮೌಲ್ಯಗಳು ಮತ್ತು ಆರ್ಥಿಕ ಶಿಸ್ತಿನ ಕ್ಲಿಷ್ಟಾಂಶವನ್ನು ರೂಪಿಸುವ ನೀತಿಗಳಿಗೆ ಸಾಕ್ಷಿಯಾಗಿದ್ದಾರೆ. ನಮ್ಮಲ್ಲಿ ನಂಬಿಕೆ ಇಟ್ಟಿದ್ದಕ್ಕಾಗಿ ನಮ್ಮ ಪ್ರತಿಯೊಬ್ಬ ಚಂದಾದಾರರಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ ಮತ್ತು ನಮ್ಮ ಬದ್ಧತೆಯನ್ನು ಮುಂದುವರಿಸುತ್ತೇವೆ ಮತ್ತು ನೀವು ಮಾರ್ಗದರ್ಶಿಯೊಂದಿಗೆ ಯೋಜಿಸಿದಾಗ ಜೀವನವು ಸುಲಭವಾಗುತ್ತದೆ ಎಂದು ನಾವು ಭರವಸೆ ನೀಡುತ್ತೇವೆ.
www.margadarsi.com
ರಿಜಿಸ್ಟರ್ಡ್ ಆಫೀಸ್: ನಂ.ಎಸ್-801-802, ಮಣಿಪಾಲ್ ಸೆಂಟರ್, ನಂ.47, ಡಿಕೆನ್ಸನ್ ರೋಡ್, ಬೆಂಗಳೂರು - 560 042 | ಫೋನ್: 080-25322939
ಕರೆಮಾಡಿ 1800 425 7373 (ದರ ರಹಿತ) | ಅಥವಾ 56263ಗೆ <MARG> ಎಸ್‌ಎಂಎಸ್ ಮಾಡಿ
1962 ರಲ್ಲಿ ಸ್ಥಾಪಿತವಾಗಿದೆ
60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ ಮಾಡಲಾಗಿದೆ
ವಾರ್ಷಿಕ ಟರ್ನೋವರ್ ₹9712 ಕೋಟಿ
108 ಶಾಖೆಗಳು
ಮಾರ್ಗದರ್ಶಿ ಚಿಟ್ಸ್ (ಕರ್ನಾಟಕ) ಪ್ರೈವೇಟ್ ಲಿಮಿಟೆಡ್
ಮಾರ್ಗದರ್ಶಿಯೊಂದಿಗೆ ನೀವು ಯೋಜಿಸಿದಾಗ ಜೀವನ ಸುಲಭವಾಗಿರುತ್ತದೆ
1962ರಲ್ಲಿ ಸ್ಥಾಪನೆ • 60 ಲಕ್ಷಕ್ಕಿಂತ ಹೆಚ್ಚಿನ ಚಂದಾದಾರರಿಗೆ ಸೇವೆ • ವಾರ್ಷಿಕ ವ್ಯಾಪಾರ ಟರ್ನೋವರ್ ₹9712 ಕೋಟಿ • ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ್ ಮತ್ತು ತಮಿಳುನಾಡುಗಳಲ್ಲಿ 108 ಶಾಖೆಗಳು

ಎಂ–ಸ್ಯಾಂಡ್ ಉತ್ಪಾದನೆ ಹೆಚ್ಚಿಸಲು ಗಣಿಗಾರಿಕೆ ನೀತಿಯಲ್ಲಿ ಮಾರ್ಪಾಡು: ಸಚಿವರ ಭರವಸೆ

ಗಣಿಗಾರಿಕೆ: ಶೀಘ್ರ ನಿಯಮ ಸರಳೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರಳಿನ ಕೊರತೆ ಶಾಶ್ವತವಾಗಿ ನೀಗಿಸಲು ಮುಂದಾಗಿರುವ ಸರ್ಕಾರ, ಗಣಿಗಾರಿಕೆಯ ನಿಯಮಗಳನ್ನು ಸರಳೀಕರಣಗೊಳಿಸುತ್ತಿದೆ.

ರಾಜ್ಯದಲ್ಲಿ ವಾರ್ಷಿಕ 4.50 ಕೋಟಿ ಟನ್ ಮರಳಿಗೆ ಬೇಡಿಕೆ ಇದೆ. ಆದರೆ, 50 ಲಕ್ಷ ಟನ್ ನೈಸರ್ಗಿಕ ಮರಳು ದೊರೆಯುತ್ತಿದೆ. 3.50 ಕೋಟಿ ಟನ್ ಎಂ–ಸ್ಯಾಂಡ್ ಮೂಲಕ ಕೊರತೆ ನೀಗಿಸಲಾಗುತ್ತಿದೆ.

ಹೆಚ್ಚುವರಿ ಕೊರತೆ ನೀಗಿಸಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದು, ಎಂ–ಸ್ಯಾಂಡ್ ಉತ್ಪಾದನೆ ಹೆಚ್ಚಿಸಲು ಗಣಿಗಾರಿಕೆ ನೀತಿ ಮಾರ್ಪಾಡು ಮಾಡಲಾಗುತ್ತಿದೆ. ಶೀಘ್ರ ಸಂಪುಟದ ಅನುಮೋದನೆ ಪಡೆದು, ಜಾರಿಗೊಳಿಸಲಾಗುವುದು ಎಂದು ಗಣಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿದೇಶಗಳಿಂದ ಮರಳು ಆಮದು ಮಾಡಿಕೊಳ್ಳುವುದು ವೆಚ್ಚದಾಯಕ. ಹಿಂದಿನ ಸರ್ಕಾರ ಅದಕ್ಕಾಗಿ ಸಾಕಷ್ಟು ಹಣ ವೆಚ್ಚ ಮಾಡಿದೆ. ಈ ರೀತಿಯ ಆರ್ಥಿಕ ನಷ್ಟಕ್ಕೆ ಅವಕಾಶ ನೀಡಬಾರದು ಎಂದೇ ಹೊಸ ನೀತಿ ರೂಪಿಸಲಾಗುತ್ತಿದೆ ಎಂದು ವಿವರಿಸಿದರು.

ಖನಿಜ ನಿಗಮಕ್ಕೆ ಹೊಣೆ: ಹಟ್ಟಿ ಚಿನ್ನದ ಗಣಿ, ಕರ್ನಾಟಕ ರಾಜ್ಯ ಖನಿಜ ನಿಗಮಗಳಿಗೆ ಮರಳು ನಿರ್ವಹಣೆಯ ಹೊಣೆ ನೀಡಲಾಗಿದೆ. ₹ 800 ಕ್ಕೆ ಒಂದು ಟನ್ ಮರಳು ವಿತರಿಸಲು ಸೂಚಿಸಲಾಗಿದೆ. ಅರ್ಜಿ ಸಲ್ಲಿಸಿದವರು ಸಂಗ್ರಹಾಗಾರಗಳಿಂದ ಮರಳು ತರಬಹುದು. ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ನದಿಗಳ ಹರಿವಿನ ಜಾಗದಲ್ಲಿ ಮರಳು ತೆಗೆಯುವಂತಿಲ್ಲ. ಪರಿಸರ ಸೂಕ್ಷ್ಮ ಪ್ರದೇಶ, ಕರಾವಳಿ ನಿಯಂತ್ರಣ ವಲಯ ಮತ್ತಿತರ ನಿರ್ಬಂಧಗಳನ್ನು ಹೊರತುಪಡಿಸಿ, ಉಳಿದ ಭಾಗಗಳಲ್ಲಿ ಮರಳು ತೆಗೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ರಸ್ತೆ ಬದಿಯಿಂದ 250 ಮೀಟರ್ ನಿರ್ಬಂಧ ಕಡಿಮೆ ಮಾಡಲಾಗಿದೆ. ತ್ವರಿತ ನಿರ್ಧಾರ ಕೈಗೊಳ್ಳುವ ಹೊಣೆ ಆಯಾ ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಹೊಸ ನೀತಿಯ ನಂತರ ಮರಳಿನ ಕೊರತೆ ಶಾಶ್ವತವಾಗಿ ನಿವಾರಣೆಯಾಗಲಿದೆ ಎಂದು ವಿವರ ನೀಡಿದರು.

ಗಣಿಗಾರಿಕಾ ಚಟುವಟಿಕೆಗಳಿಂದ ಒಂದು ವರ್ಷದಲ್ಲಿ ₹ 4,357 ಕೋಟಿ ರಾಜಧನ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಗುರಿ ಮೀರಿ ₹6,308 ಕೋಟಿ ಸಂಗ್ರಹಿಸಲಾಗಿದೆ. ಶೇ 140 ರಷ್ಟು ಸಾಧನೆಯಾಗಿದೆ ಎಂದರು.

‘ಒಂದೇ ಕಡೆ ರಾಜಧನ ಸಂಗ್ರಹಿಸಲು ಆಗ್ರಹ’

ಬೆಂಗಳೂರು: ‘ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಕಾನೂನನ್ನು ಸರಳೀಕರಿಸಿ, ಸಮಸ್ಯೆಗಳ ನಿವಾರಣೆಗೆ ಕ್ರಮವಹಿಸಬೇಕು’ ಎಂದು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಆ್ಯಂಡ್ ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಸರ್ಕಾರಕ್ಕೆ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ರವೀಂದ್ರ ಶೆಟ್ಟಿ, ‘ಬೃಹತ್ ಗಣಿಗಾರಿಕೆ ಪ್ರದೇಶ ಮತ್ತು ಸಣ್ಣ ಗಣಿಗಾರಿಕೆ ಪ್ರದೇಶಗಳ ನಿಯಮಗಳು ಒಂದೇ ಪರಿಮಿತಿಯಲ್ಲಿ ಬಂದಿರುವುದರಿಂದ ಈ ನಿಯಮಗಳ ಅನುಷ್ಠಾನದಲ್ಲಿ ತೊಂದರೆಯಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರಿಗೂ ಅನಾನುಕೂಲ ವಾಗುತ್ತಿದೆ. ಈ ಹಿಂದೆ ನಮಗೆ ವಿಧಿಸಿರುವ ಐದು ಪಟ್ಟು ದಂಡವನ್ನು ರದ್ದುಪಡಿಸಬೇಕು’ ಎಂದು ಒತ್ತಾಯಿಸಿದರು.

‘ರಾಜಧನ ಸಂಗ್ರಹಕ್ಕೆ ಸಮರ್ಪಕ ನಿಯಮ ರೂಪಿಸಬೇಕು. ರಾಜಧನ ಸಂಗ್ರಹಕ್ಕೆ ಸಂಬಂಧಿಸಿದಂತೆ ಜಿಲ್ಲಾವಾರು ದರದಲ್ಲಿ ವ್ಯತ್ಯಾಸವಿದೆ. ಏಕರೂಪ ಕಾಯ್ದೆ ಮೂಲಕ ಒಂದೇ ಕಡೆ ರಾಜಧನ ಸಂಗ್ರಹವಾಗಬೇಕು. ಕಟ್ಟಡ ಕಲ್ಲಿನ ಪರವಾನಗಿಯನ್ನು 20 ವರ್ಷಗಳ ಬದಲು, 50 ವರ್ಷಗಳಿಗೆ ನೀಡಬೇಕು’ ಎಂದು ಹೇಳಿದರು.



ಸವಿನೆನಪು

ಶ್ರೀ ಕೆ. ಎನ್. ಗುರುಸ್ವಾಮಿ

ಸಂಸ್ಥಾಪಕರು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

1901- 1990

ಜನನ: 01-10-1901

ಕೆ ಎನ್ ತಿಲಕ್ ಕುಮಾರ್



ನವರಾತ್ರಿ ಪೂಜಾ ಸಂಭ್ರಮ

ನಗರದ ಮಹಾಲಕ್ಷ್ಮಿ ಲೇಔಟ್‌ನ 'ಕ್ಷೇತ್ರ ಸಲ್ಲಾಪುರದಮ್ಮ ಅಮ್ಮನವರ ದೇವಸ್ಥಾನ ಟ್ರಸ್ಟ್' ಆಯೋಜಿಸಿದ್ದ ಶರನ್ನವರಾತ್ರಿಯ ಧಾರ್ಮಿಕ ಮಹೋತ್ಸವ ಕಾರ್ಯಕ್ರಮದಲ್ಲಿ ನವರಾತ್ರಿಯ 5ನೇ ದಿನ ಕಂಡುಬಂದ ಜನ -ಪ್ರಜಾವಾಣಿ ಚಿತ್ರ

ಬಿಬಿಎಂಪಿ ಕಚೇರಿ ಸ್ಥಳಾಂತರ

ಬೆಂಗಳೂರು: ಬಿಬಿಎಂಪಿಯ ಮಹದೇವಪುರ ವಲಯದ ಮಾರತಹಳ್ಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಚೇರಿಯನ್ನು ಸ್ಥಳಾಂತರಿಸಲಾಗಿದೆ.

ಮಾರತಹಳ್ಳಿ ಉಪವಿಭಾಗ ಕೃಷ್ಣಶೈನ್ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಇದೀಗ ಬೆಳ್ಳಂದೂರು ವಾರ್ಡಿನ ಬೆಳ್ಳಂದೂರು ಮುಖ್ಯರಸ್ತೆಯಲ್ಲಿರುವ ಬಿಬಿಎಂಪಿ ಕಟ್ಟಡ 1ನೇ ಮಹಡಿಗೆ ಸ್ಥಳಾಂತರಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕೆ.ಎಲ್. ಮಾರ್ಕಂಡಯ್ಯ ಅವರು ತಿಳಿಸಿದ್ದಾರೆ.

‘ಉತ್ಕೃಷ್ಟ ಕೇಂದ್ರ’: ಜ್ಞಾನ ಹೆಚ್ಚಳಕ್ಕೆ ಸಹಕಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನಲ್ಲಿ ದತ್ತಾಂಶವಿಲ್ಲದೆ ವ್ಯವಸ್ಥೆಯ ಚಾಲನೆ ಮತ್ತು ಆಡಳಿತ ಕಲ್ಪಿಸಿಕೊಳ್ಳುವುದು ಕಷ್ಟ’ ಎಂದು ಭಾರತೀಯ ವಾಯುಪಡೆ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಇನ್‌ಸ್ಟಿಟ್ಯೂಟ್‌ನ ಕಮಾಂಡೆಂಟ್ ಡಾ.ದೇವೇಶ್ ವತ್ಸ ಅವರು ಹೇಳಿದರು.

ಬಿಎಂಎಸ್ ಎಜುಕೇಷನ್ ಟ್ರಸ್ಟ್‌ನ ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶುಕ್ರವಾರ ಬಿ.ಎಸ್.ನಾರಾಯಣ ಉತ್ಕೃಷ್ಟ ಕೇಂದ್ರ (ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆ) ಉದ್ಘಾಟಿಸಿ ಅವರು ಮಾತನಾಡಿದರು.

‘ಹೊಸ ವಿಭಾಗವು ಮಹತ್ವದ ಪಾತ್ರ ನಿರ್ವಹಿಸಲಿದೆ. ಸುಧಾರಿತ ತಾಂತ್ರಿಕ ಸೌಕರ್ಯದ ಜತೆಗೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಭಾಗ ಸ್ಥಾಪಿಸಲಾಗಿದೆ. ಯಶಸ್ವಿ ವೃತ್ತಿಜೀವನ ಕಂಡುಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಈ ವಿಭಾಗವು ಅಗತ್ಯತೆ ಪೂರೈಸಲಿದೆ’ ಎಂದು ಹೇಳಿದರು.

ಬಿಎಂಎಸ್‌ನ ಟ್ರಸ್ಟಿ ಅವಿರಾಮ್ ಶರ್ಮಾ ಮಾತನಾಡಿ, ‘ಸಂಸ್ಥೆಯಲ್ಲಿ ರಾಜ್ಯದ ಮೊದಲ ಉತ್ಕೃಷ್ಟ ಕೇಂದ್ರ ಸ್ಥಾಪನೆ ಮಾಡಿರುವುದು ಹೆಮ್ಮೆ ತಂದಿದೆ’ ಎಂದು ಹೇಳಿದರು.

‘ಈ ಎರಡು ವಿಭಾಗಗಳು ಭವಿಷ್ಯದ ಅಗತ್ಯಗಳಿಗೆ ಡಿಜಿಟಲ್ ದತ್ತಾಂಶ ಬಳಸುವ ಸಮುದಾಯವನ್ನು ನಿರ್ಮಿಸುವ ವ್ಯವಸ್ಥೆ ರೂಪಿಸಲು ಬೇಕಾದ ವಾತಾವರಣ ಕಲ್ಪಿಸುತ್ತವೆ. ವಿದ್ಯಾರ್ಥಿಗಳ ಜ್ಞಾನ ಹೆಚ್ಚಳಕ್ಕೂ ಸಹಾಯವಾಗಲಿದೆ’ ಎಂದು ಪ್ರತಿಪಾದಿಸಿದರು.

ಕಾಂಚೀಪುರಂ ಐಐಐಟಿಡಿಎಂ ಆಡಳಿತ ಮಂಡಳಿ ಮುಖ್ಯಸ್ಥ ಪ್ರೊ.ಎಸ್. ಸಡಗೋಪನ್ ಮಾತನಾಡಿ, ‘ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯಲ್ಲಿ ಯಶಸ್ವಿ ಮತ್ತು ಪ್ರಭಾವಶಾಲಿ ವೃತ್ತಿಜೀವನವನ್ನು ನಿರ್ಮಿಸುವ ಉದ್ದೇಶದಿಂದ ವಿಭಾಗ ಸ್ಥಾಪಿಸಲಾಗಿದೆ’ ಎಂದರು.

ಗುವಾಹಟಿ ಐಐಟಿ ಸಿಎಸ್‌ಇ ವಿಭಾಗದ ಪ್ರೊ.ಪ್ರದೀಪ್ ಕೆ. ದಾಸ್ ಮಾತನಾಡಿ, ‘ನಮ್ಮ ಸುತ್ತಲೂ ಲಭ್ಯವಿರುವ ಅಸಂಖ್ಯಾತ ದತ್ತಾಂಶಗಳ ಸೂಕ್ತ ಬಳಕೆ ಅಗತ್ಯ. ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯಲ್ಲಿ ಸಮರ್ಪಕ ತರಬೇತಿ ಅಗತ್ಯ’ ಎಂದು ಹೇಳಿದರು.

ಬಿಎಂಎಸ್ ಎಜುಕೇಶನ್ ಟ್ರಸ್ಟ್‌ನ ಸದಸ್ಯ ಕಾರ್ಯದರ್ಶಿ ಡಾ.ಬಿ.ಎಸ್.ರಾಗಿಣಿ ನಾರಾಯಣ್, ಬಿಎಂಸಿಎಸ್‌ಇ ಮುಖ್ಯಸ್ಥ ಡಾ.ಪಿ. ದಯಾನಂದ ಪೈ, ಗೌತಮ್ ವಿ. ಕಳತ್ತೂರ್ ಉಪಸ್ಥಿತರಿದ್ದರು.

ಬಿಎಂಎಸ್ ಎಜುಕೇಷನ್ ಟ್ರಸ್ಟ್‌ನ ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಬಿ.ಎಸ್‌.ನಾರಾಯಣ ಉತ್ಕೃಷ್ಟ ಕೇಂದ್ರದ (ಕೃತಕ ಬುದ್ಧಿಮತ್ತೆ ಹಾಗೂ ಯಂತ್ರ ಕಲಿಕೆ) ಉದ್ಘಾಟನಾ ಸಮಾರಂಭದಲ್ಲಿ ಸಂಸ್ಥೆಯ ಟ್ರಸ್ಟಿ ಅವಿರಾಮ್ ಶರ್ಮಾ (ಎಡದಿಂದ ಐದನೆಯವರು) ಅವರು ವಿಭಾಗದ ಟಿ. ಶರ್ಟ್ ಬಿಡುಗಡೆಗೊಳಿಸಿದರು. (ಎಡದಿಂದ) ಡಾ.ಮೋಹನ್ ಬಾಬು, ಪ್ರೊ.ಎಸ್‌.ಸಡಗೋಪನ್, ಡಾ.ದೇವೇಶ್ ವತ್ಸ, ಡಾ.ಎಸ್‌.ಮುರಳೀಧರ, ಪ್ರದೀಪ್ ಕೆ. ದಾಸ್, ಗೌತಮ್ ವಿ. ಕಳತ್ತೂರ್ ಇದ್ದರು. –ಪ್ರಜಾವಾಣಿ ಚಿತ್ರ

ದಸರಾ: ಗ್ಲೋಬಲ್ ಮಾಲ್‌ನಲ್ಲಿ ವಿವಿಧ ಕಾರ್ಯಕ್ರಮ

ಬೆಂಗಳೂರು: ಗ್ಲೋಬಲ್ ಮಾಲ್‌ನಲ್ಲಿ ದಸರಾ ಅಂಗವಾಗಿ ಅ.6ರವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅ.1ರಂದು ಹುಲಿವೇಷ, ಅ.2ರಂದು ತಮಟೆ, 3ರಂದು ಯಕ್ಷಗಾನ, 4ರಂದು ವೀರಗಾಸೆ, 5ರಂದು ತಮಟೆ ಮತ್ತು ಗೊಂಬೆ ಕುಣಿತ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಮೆಟ್ರೊ ವಯಾಡಕ್ಟ್ ಪ್ರವೇಶಿಸಬೇಡಿ’

ಬೆಂಗಳೂರು: ಮೆಟ್ರೊ ರೈಲು ಮಾರ್ಗದ ವಯಾಡಕ್ಟ್ ಮೇಲೆ ಹಾದು ಹೋಗಿರುವ 33 ಕೆ.ವಿ ವಿದ್ಯುತ್ ಕೇಬಲ್‌ಗಳು ಮತ್ತು ವಯಾಡಕ್ಟ್ ಮೇಲೆ ಹಾಕಿರುವ 750 ವೋಲ್ಟ್ ರೈಲುಗಳ ಭಾಗಗಳಿಗೆ ಅ.15ರಿಂದ ಪರೀಕ್ಷಾರ್ಥ ವಿದ್ಯುತ್ ಹರಿಸಲಾಗುವುದು ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ವೈಟ್‌ಫೀಲ್ಡ್, ಚನ್ನಸಂದ್ರ, ಕಾಡುಗೋಡಿ, ಪಟ್ಟಂದೂರು ಅಗ್ರಹಾರ, ಸದಮಂಗಲ, ನಲ್ಲೂರುಹಳ್ಳಿ, ಕುಂದಲಹಳ್ಳಿ, ಸೀತಾರಾಮಪಾಳ್ಯ, ಹೂಡಿ ಜಂಕ್ಷನ್, ಗರುಡಾಚಾರಪಾಳ್ಯ, ಮಹದೇವಪುರ ಮಾರ್ಗದಲ್ಲಿ ಕೇಬಲ್‌ಗಳನ್ನು ನೇರವಾಗಿ ಸಂಪರ್ಕಿಸಿದರೆ ಮಾರಣಾಂತಿಕ ಅಪಾಯ ಆಗಬಹುದು. ಆದ್ದರಿಂದ ಅನುಮತಿ ಇಲ್ಲದೆ ಯಾರೂ ವಯಾಡಕ್ಟ್‌ಗೆ ಪ್ರವೇಶ ಮಾಡಬಾರದು ಎಂದು ಬಿಎಂಆರ್‌ಸಿಎಲ್ ಎಚ್ಚರಿಸಿದೆ. ಅನಧಿಕೃತ ಪ್ರವೇಶದಿಂದ ತೊಂದರೆಯಾದರೆ ಬಿಎಂಆರ್‌ಸಿಎಲ್ ಜವಾಬ್ದಾರಿ ಆಗುವುದಿಲ್ಲ ಎಂದು ತಿಳಿಸಿದೆ.

ತನಿಷ್ಕ್ 24k ಗೋಲ್ಡ್ ಪ್ಲೇಟೆಡ್ ಲ್ಯಾಂಪ್ ಉಚಿತವಾಗಿ ಪಡೆಯಿರಿ *

ಸೀರೆಗಳು | ಬ್ಲೌಸ್‌ಗಳು | ಕುರ್ತಾ ಸೆಟ್‌ಗಳು

Shop online at TANEIRA.com   taneirasarees   taneira_sarees   +91 8147349464   Shop on call 1800 266 0123

Malleshwaram: 116/5, 11th Cross, Margosa Road, Ph: 080-49703080 | **Indiranagar:** 283, 100 Feet Road, HAL 2nd Stage, Ph: 080-48540026 | **Jayanagar:** 3rd Block, 11th Main Road, Ph: 080-48528312 | **Orion Mall**: 116, 2nd Floor, Dr. Rajkumar Road, Ph: 080-22682310 | **Phoenix Market City Mall**: LG-28 Lower Ground Floor, Mahadevpura, Ph: 080-49626263 | **HSR Layout**: No.818, 27th Main Road, 1st Sector, Ph: 080-41711715 | **Kammanahalli:** 401/B, 2nd Block, Near Tanishq Showroom, Ph: 080-46014779 | **Coming soon in Banashankari**

10% Instant Discount HSBC | Bank of Baroda Credit Card | HDFC BANK FESTIVE TREATS

Scan QR code to shop this collection online. Visit taneira.com

ಪ್ರಾಣಿವಧೆ, ಮಾಂಸ ಮಾರಾಟ ನಿಷೇಧ

ಬೆಂಗಳೂರು: ಗಾಂಧಿ ಜಯಂತಿ ಪ್ರಯುಕ್ತ ಅ.2ರಂದು ಭಾನುವಾರ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ವೈಟ್‌ಫೀಲ್ಡ್: ₹11 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಹೊರರಾಜ್ಯದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸುತ್ತಾಡುತ್ತಿದ್ದ ಆರೋಪಿ, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಯನ್ನು ಬಂಧಿಸಲಾಗಿದೆ. ₹ 11 ಲಕ್ಷ ಮೌಲ್ಯದ ಗಾಂಜಾ ಹಾಗೂ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿ ಸ್ಥಳೀಯ ನಿವಾಸಿ. ಬಿಹಾರದಲ್ಲಿರುವ ಪ್ರಮುಖ ಆರೋಪಿ ನಿರ್ದೇಶನದಂತೆ ಡ್ರಗ್ಸ್ ಮಾರುತ್ತಿದ್ದ. ಸದ್ಯ ಒಬ್ಬ ಮಾತ್ರ ಸಿಕ್ಕಿಬಿದ್ದಿದ್ದು, ಬಿಹಾರದ ವ್ಯಕ್ತಿ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದರು.

'ಕೆಲವು ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಹಾಗೂ ಇತರರಿಗೆ ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಕೆಲ ಗ್ರಾಹಕರ ಮನೆ ಬಾಗಿಲಿಗೂ ಪಾರ್ಸಲ್ ಮೂಲಕ ಆರೋಪಿಗಳು ಡ್ರಗ್ಸ್ ತಲುಪಿಸುತ್ತಿದ್ದರು' ಎಂದರು.

ಸಿಗದ ಆರೋಪಿಗಳ ಸುಳಿವು • ಬ್ಯಾಂಕ್ ಅಧಿಕಾರಿಗಳಿಗೆ ತಲೆಬಿಸಿ

ಖೋಟಾ ನೋಟು ಹಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಬ್ಯಾಂಕ್‌ಗಳಲ್ಲಿ ಜಮೆ ಆಗುತ್ತಿರುವ ನೋಟುಗಳಲ್ಲಿ, ಖೋಟಾ ನೋಟುಗಳು ಹೆಚ್ಚಾಗಿ ಕಂಡುಬರುತ್ತಿವೆ. ಇದು ಬ್ಯಾಂಕ್ ಅಧಿಕಾರಿಗಳನ್ನು ಚಿಂತೆಗೀಡು ಮಾಡಿದ್ದು, ಖೋಟಾ ನೋಟು ಸಮೇತ ಪೊಲೀಸರಿಗೆ ದೂರು ನೀಡಿದರೂ ಆರೋಪಿಗಳ ಪತ್ತೆ ಮಾತ್ರ ಸಾಧ್ಯವಾಗುತ್ತಿಲ್ಲ.

ನಗರದ ನೃಪತುಂಗ ರಸ್ತೆಯಲ್ಲಿರುವ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಾದೇಶಿಕ ಕಚೇರಿಯ ಚೆಸ್ಟ್

ಅಪರಾಧ ಸುದ್ದಿ

ವಿಭಾಗಕ್ಕೆ ರಾಜ್ಯದ ಹಲವು ಬ್ಯಾಂಕ್‌ಗಳ ಚೆಸ್ಟ್‌ಗಳಿಂದ (ಹಣ ನಿರ್ವಹಣೆ ವಿಭಾಗ) ಹಣ ಜಮೆ ಆಗುತ್ತಿದೆ. ಹೀಗೆ, ಜಮೆ ಆಗುವ ನೋಟುಗಳಲ್ಲಿ ಖೋಟಾ ನೋಟುಗಳು ಸಿಗುತ್ತಿವೆ. ಈ ಬಗ್ಗೆ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣಗಳೂ ದಾಖಲಾಗುತ್ತಿವೆ.

'ಇತ್ತೀಚೆಗೆ ನಮ್ಮ ಬ್ಯಾಂಕ್‌ನಲ್ಲಿ ಸಂಗ್ರಹವಾಗಿದ್ದ ನೋಟುಗಳ ಪೈಕಿ ₹ 500 ಮುಖಬೆಲೆಯ 8 ಖೋಟಾ ನೋಟುಗಳು ಪತ್ತೆಯಾಗಿವೆ. ಇಂಥ ನೋಟುಗಳನ್ನು ನೀಡಿರುವವರನ್ನು ಪತ್ತೆ ಮಾಡಿ' ಎಂದು ಕರ್ನಾಟಕ ಬ್ಯಾಂಕ್ ಅಧಿಕಾರಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

ಪೊಲೀಸ್ ಅಧಿಕಾರಿಯೊಬ್ಬರು, 'ರಾಜ್ಯದ ಬಹುತೇಕ ಬ್ಯಾಂಕ್‌ಗಳಲ್ಲಿ ಸಂಗ್ರಹವಾಗುವ ಹಣವನ್ನು ಚೆಸ್ಟ್‌ಗಳ ಮೂಲಕ ಆರ್‌ಬಿಐ ಶಾಖೆಗೆ ತರಲಾಗುತ್ತಿದೆ. ಜಮೆಗೂ ಮುನ್ನ ಪರಿಶೀಲನೆ ನಡೆಸುವಾಗ ಖೋಟಾ ನೋಟುಗಳು ಸಿಗುತ್ತಿವೆ. ಅಂಥ ಖೋಟಾ ನೋಟುಗಳ ಸಮೇತ ಅಧಿಕಾರಿಗಳು ದೂರು ನೀಡುತ್ತಿದ್ದಾರೆ' ಎಂದರು.

'ಖೋಟಾ ನೋಟುಗಳ ತನಿಖೆಗೆಂದು ಹಲಸೂರು ಗೇಟ್ ಠಾಣೆಯನ್ನು ನೋಡಲ್ ಠಾಣೆಯನ್ನಾಗಿ ಮಾಡಲಾಗಿದೆ. ಹೀಗಾಗಿ, ತಿಂಗಳಿಗೆ 5 ಕ್ಕೂ ಹೆಚ್ಚು ದೂರುಗಳು ದಾಖಲಾಗುತ್ತಿವೆ. ಖೋಟಾ ನೋಟುಗಳು ಹೇಗೆ ಬಂದವು? ಯಾರು ಕೊಟ್ಟರು? ಎಂಬ ಬಗ್ಗೆ ಬ್ಯಾಂಕ್ ಅಧಿಕಾರಿಗಳಿಗೆ ಸ್ಪಷ್ಟ ಮಾಹಿತಿ ಇಲ್ಲ. ಕೇವಲ ಖೋಟಾ ನೋಟು ಇಟ್ಟುಕೊಂಡು, ಆರೋಪಿಗಳನ್ನು ಪತ್ತೆ ಮಾಡುವುದು ಕಷ್ಟವಾಗುತ್ತಿದೆ' ಎಂದು ತಿಳಿಸಿದರು.

ಅಪಘಾತ: ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಸುಷ್ಮಾ (33) ಎಂಬುವವರು ಮೃತಪಟ್ಟಿದ್ದಾರೆ.

'ಲೊಟ್ಟೆಗೊಲ್ಲಹಳ್ಳಿ ನಿವಾಸಿ ಸುಷ್ಮಾ, ಕಂಪನಿಯೊಂದರ ಲೆಕ್ಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು. 'ಸುಷ್ಮಾ ಅವರು ದ್ವಿಚಕ್ರ ವಾಹನ ಚಲಾಯಿಸಿಕೊಂಡು ಭದ್ರಪ್ಪ ಲೇಔಟ್‌ನ ಮೇಲ್ಸೇತುವೆ ಮೂಲಕ ತೆರಳುತ್ತಿದ್ದರು. ಆಗ ಅತಿ ವೇಗವಾಗಿ ಬಂದ ಅಪರಿಚಿತ ವಾಹನವೊಂದು ಸುಷ್ಮಾ ಅವರ ದ್ವಿಚಕ್ರ ವಾಹನಕ್ಕೆ ಗುದ್ದಿತ್ತು.'

'ರಸ್ತೆಯಲ್ಲಿ ಬಿದ್ದು ತೀವ್ರ ಗಾಯಗೊಂಡು ಸುಷ್ಮಾ ಮೃತಪಟ್ಟಿದ್ದಾರೆ. ಅಪಘಾತವನ್ನುಂಟು ಮಾಡಿದ್ದ ವಾಹನ ಯಾವುದು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಕ್ರಿಪ್ಟೊ ಹೂಡಿಕೆ, ಲಿಂಕ್ ಕಳುಹಿಸಿ ವಂಚನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಪ್ಟೊ ಹೂಡಿಕೆ ನೆಪ ಹಾಗೂ ಲಿಂಕ್ ಕಳುಹಿಸಿ ಸಾರ್ವಜನಿಕರನ್ನು ವಂಚಿಸುತ್ತಿದ್ದ ಆರೋಪದಡಿ ಶಾನೀದ್ ಅಬ್ದುಲ್ ಅಮೀದ್ (29) ಎಂಬುವವರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಕಣ್ಣೂರಿನ ಶಾನೀದ್, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಇತ್ತೀಚೆಗಷ್ಟೇ ಸುಳಿವು ಪತ್ತೆ ಮಾಡಿ ಈತನನ್ನು ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿ ಮೊಹಮ್ಮದ್ ನಿಹಾಲ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಅಪರಿಚಿತರ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಸಿಮ್‌ಕಾರ್ಡ್ ಖರೀದಿಸುತ್ತಿದ್ದ ಆರೋಪಿಗಳು, ಅವುಗಳನ್ನೇ ಕೃತ್ಯಕ್ಕೆ ಬಳಸುತ್ತಿದ್ದರು. ಬಂಧಿತರಿಂದ 222 ಸಿಮ್‌ಕಾರ್ಡ್, 10 ಮೊಬೈಲ್, 10



ಶಾನೀದ್ ಅಬ್ದುಲ್

ಡೆಬಿಟ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಹಾಗೂ ಚೆಕ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಟೆಲಿಗ್ರಾಮ್ ಆ್ಯಪ್‌ನಲ್ಲಿ ಗ್ರೂಪ್: 'ಆರೋಪಿ ಶಾನೀದ್ ಹಾಗೂ ನಿಹಾಲ್, 'ಲಿಂಕ್ ಕ್ಲಿಕ್ ಮಾಡಿ ಉಚಿತ ಶಾಪಿಂಗ್ ಮಾಡಿ ಹಾಗೂ ಕ್ರಿಪ್ಟೊ ಕರೆನ್ಸಿ ಮೇಲೆ ಹೂಡಿಕೆ ಮಾಡಿ ಹಣ ಗಳಿಸಿ' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ಪ್ರಕಟಿಸುತ್ತಿದ್ದರು. ಇದನ್ನು ನಂಬಿ ಸಂಪರ್ಕಿಸುತ್ತಿದ್ದ ಸಾರ್ವಜನಿಕರ ಮೊಬೈಲ್ ನಂಬರ್ ಪಡೆದು, ಟೆಲಿಗ್ರಾಮ್ ಆ್ಯಪ್‌ನಲ್ಲಿ ಗ್ರೂಪ್ ರಚಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗ್ರೂಪ್‌ನಲ್ಲಿ ವಿವಿಧ ಲಿಂಕ್ ಕಳುಹಿಸುತ್ತಿದ್ದ ಆರೋಪಿಗಳು, ಸಾರ್ವಜನಿಕರ ವೈಯಕ್ತಿಕ ಮಾಹಿತಿ ಪಡೆಯುತ್ತಿದ್ದರು. ನಂತರ, ಬ್ಯಾಂಕ್ ಖಾತೆಯಲ್ಲಿದ್ದ ಹಣವನ್ನು ಡ್ರಾ ಮಾಡಿಕೊಂಡು ವಂಚಿಸುತ್ತಿದ್ದರು' ಎಂದು ತಿಳಿಸಿವೆ.

ಬಂಧಿತ ಆರೋಪಿಯಿಂದ ಜಪ್ತಿ ಮಾಡಲಾದ ಸಿಮ್‌ಕಾರ್ಡ್‌ಗಳು

'ಆರೋಪಿಗಳು ಇದುವರೆಗೂ ನೂರಾರು ಜನರಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಮಾಹಿತಿ ಇದೆ. ಆರೋಪಿಯಿಂದ ವಂಚನೆಗೀಡಾದವರು ಯಾರಾದರೂ ಇದ್ದರೆ ಠಾಣೆಗೆ ದೂರು ನೀಡಬಹುದು' ಎಂದು ಮೂಲಗಳು ಹೇಳಿವೆ.

'ಜಾಗೃತಿ ಕೊರತೆ– ಅಂಗಾಂಗ ದಾನ ಮಾಡುವವರು ಕಡಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾಗೃತಿ ಕೊರತೆಯಿಂದಾಗಿ ಅಂಗಾಂಗ ದಾನ ಮಾಡುವವರ ಸಂಖ್ಯೆ ಕಡಿಮೆಯಿದೆ. ಇದರಿಂದಾಗಿ ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿರುವವರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಸ್ಪರ್ಶ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ.ಶರಣ ಶಿವರಾಜ್ ಪಾಟೀಲ ಅವರು ತಿಳಿಸಿದರು.

ಹೃದಯ ಮತ್ತು ಶ್ವಾಸಕೋಶದ ವೈಫಲ್ಯ ನಿರ್ವಹಣೆ ಹಾಗೂ ಅಂಗಾಂಗ ಕಸಿಗೆ ಸಂಬಂಧಿಸಿದಂತೆ ಸ್ಪರ್ಶ್ ಆಸ್ಪತ್ರೆಯು ಚೆನ್ನೈನ ಎಂಜಿಎಂ ಹೆಲ್ತ್‌ಕೇರ್ ಜತೆಗೆ ಒಪ್ಪಂದ ಮಾಡಿಕೊಂಡಿತು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. 'ದೇಶದಲ್ಲಿ ಪ್ರತಿವರ್ಷ ಸುಮಾರು ಐದು ಲಕ್ಷ ಮಂದಿ ಅಂಗಾಂಗ ಕಸಿಗಾಗಿ ಕಾಯುತ್ತಾರೆ. ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯ ವರದಿ ಪ್ರಕಾರ ದೇಶದಲ್ಲಿ ಪ್ರತಿ ವರ್ಷ ಸುಮಾರು 50 ಸಾವಿರ ಜನರು ಹೃದಯ ವೈಫಲ್ಯದಿಂದ ಬಳಲುತ್ತಾರೆ. ವಾರ್ಷಿಕ 10ರಿಂದ 15 ಹೃದಯ ಕಸಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಪ್ರತಿ 10 ಲಕ್ಷ ಜನರಿಗೆ ಶೇ 1ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಅಂಗಾಂಗ ದಾನ ನಡೆಯುತ್ತಿರುವುದು ಈ ಅಸಮತೋಲನಕ್ಕೆ ಕಾರಣ' ಎಂದು ಹೇಳಿದರು.

'ಅಂಗಾಂಗ ಕಸಿ ಮತ್ತು ಅಂಗಾಂಗ ವೈಫಲ್ಯದ ನಿರ್ವಹಣೆಯಲ್ಲಿ ಇರುವ ಅಂತರವನ್ನು ನೀಗಿಸಲು ಸ್ಪರ್ಶ್ ಆಸ್ಪತ್ರೆ ಬಹು ಅಂಗಾಂಗ ಕಸಿ ಕೇಂದ್ರ ಸ್ಥಾಪಿಸಿದೆ. ಅಂತಿಮ ಹಂತದ ಹೃದಯ ಮತ್ತು ಶ್ವಾಸಕೋಶ ವೈಫಲ್ಯ ಸಮಸ್ಯೆ ಎದುರಿಸುವ ರೋಗಿಗಳಿಗೆ ಕಸಿ ಮಾಡಲಾಗುವುದು' ಎಂದು ಶಿವರಾಜ್ ಪಾಟೀಲ ಅವರು ತಿಳಿಸಿದರು.

ಎಂಜಿಎಂ ಹೆಲ್ತ್‌ಕೇರ್‌ನ ಡಾ.ಆರ್.ರವಿ ಕುಮಾರ್ ಅವರು ಮಾತನಾಡಿ, 'ಹೃದಯ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿದರೆ ಹೆಚ್ಚಿನ ಚಿಕಿತ್ಸೆ ಇಲ್ಲದೆಯೇ ಕಾಯಿಲೆ ವಾಸಿ ಮಾಡಬಹುದು. ಅಂತಿಮ ಹಂತದ ಹೃದಯ ಸಮಸ್ಯೆಗೆ ಕಸಿ ಉತ್ತಮ ಪರಿಹಾರ' ಎಂದು ಹೇಳಿದರು.

ಅನುಮಾನಾಸ್ಪದ ಸಾವು: ಶೌಚಾಲಯದಲ್ಲಿ ಮೃತದೇಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಅನಿಲ್‌ಕುಮಾರ್ (24) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಶೌಚಾಲಯದಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ.

'ಅನಿಲ್‌ಕುಮಾರ್ ಸಾವಿನಲ್ಲಿ ಅನುಮಾನವಿರುವುದಾಗಿ ಆರೋಪಿಸಿ ತಂದೆ ಸೋಮಶೇಖರಪ್ಪ ದೂರು ನೀಡಿದ್ದಾರೆ. ಗೋವಿಂದರಾಜನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಿವಮೊಗ್ಗ ಜಿಲ್ಲೆಯ ಅನಿಲ್, ಸಿನಿಮಾ ಕಥೆಗಾರರೊಬ್ಬರ ಬಳಿ ಸಹಾಯಕರಾಗಿ ಕೆಲಸ ಮಾಡಲು 20 ದಿನಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡಿದ್ದರು. ಬೆಳಿಗ್ಗೆ ಕೆಲಸಕ್ಕೆ ಹೋಗಿ ಸಂಜೆ ಕಟ್ಟಡಕ್ಕೆ ವಾಪಸು ಬರುತ್ತಿದ್ದರು. ಅದೇ ಕಟ್ಟಡದಲ್ಲಿ 8 ಯುವಕರು ಇದ್ದರು.'

'ಸೆ. 16ರಂದು ಸಂಜೆ ಶೌಚಾಲಯಕ್ಕೆ ಹೋಗಿದ್ದ ಅನಿಲ್‌ಕುಮಾರ್, ಹೊರಗೆ ಬಂದಿರಲಿಲ್ಲ. ಒಳಗಿನಿಂದ ಬಾಗಿಲು ಲಾಕ್ ಮಾಡಿದ್ದರಿಂದ, ಇತರೆ ಯುವಕರು ಸಹ ಶೌಚಾಲಯ ತೆರೆದಿರಲಿಲ್ಲ. ಯಾರೋ ಒಳಗಡೆ ಇರಬಹುದೆಂದು ಸುಮ್ಮನಾಗಿದ್ದರು' ಎಂದು ತಿಳಿಸಿದರು. 'ಪೋಷಕರು ಕರೆ ಮಾಡಿದರೂ ಅನಿಲ್‌ಕುಮಾರ್ ಕರೆ ಸ್ವೀಕರಿಸಿರಲಿಲ್ಲ. ಸೆ. 19ರಂದು ಶೌಚಾಲಯದಿಂದ ದುರ್ವಾಸನೆ ಬರಲಾರಂಭಿಸಿತ್ತು. ಸ್ಥಳಕ್ಕೆ ಹೋಗಿ ಪೋಷಕರ ಸಮ್ಮುಖದಲ್ಲಿ ಶೌಚಾಲಯದ ಬಾಗಿಲು ತೆರೆದಾಗ, ಮೃತದೇಹ ಕಂಡಿತು' ಎಂದರು.

'ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ಅನಿಲ್ ಕುಮಾರ್ ಸಾವಿಗೆ ಕಾರಣವೇನು ಎಂಬುದು ಪರೀಕ್ಷೆ ವರದಿಯಿಂದ ತಿಳಿಯಬೇಕಿದೆ' ಎಂದು ತಿಳಿಸಿದರು.

ಗೂಂಡಾ ಕಾಯ್ದೆ: ರೌಡಿ ವೀರು ಬಂಧನ

ಬೆಂಗಳೂರು: ಅಪರಾಧ ಚಟುವಟಿಕೆ ತಡೆಗೆ ಕಠಿಣ ಕ್ರಮ ಕೈಗೊಂಡಿರುವ ಪೊಲೀಸರು, ಸಾರ್ವಜನಿಕರನ್ನು ಬೆದರಿಸುವ ರೌಡಿಗಳನ್ನು ಗೂಂಡಾ ಕಾಯ್ದೆಯಡಿ ಒಬ್ಬೊಬ್ಬರನ್ನಾಗಿ ಬಂಧಿಸಿ ಜೈಲಿಗಟ್ಟುತ್ತಿದ್ದಾರೆ. ಈ ಬಾರಿ ರೌಡಿ ಎಲ್. ಸಾಗರ್ ಅಲಿಯಾಸ್ ವೀರುನನ್ನು ಬಂಧಿಸಿದ್ದಾರೆ.

'ಕಾಮಾಕ್ಷಿಪಾಳ್ಯ 4ನೇ ಮುಖ್ಯರಸ್ತೆ ನಿವಾಸಿ ಸಾಗರ್, ರೌಡಿ ಕುಳ್ಳ ರಿಜ್ವಾನ್ ಸಹಚರ. ಕೊಲೆ ಯತ್ನ, ಸುಲಿಗೆ, ಅಪಹರಣ, ಹಲ್ಲೆ ಸೇರಿದಂತೆ 8 ಪ್ರಕರಣಗಳಲ್ಲಿ ಆರೋಪಿಯಾಗಿದ್ದ ಸಾಗರ್ ಹೆಸರು ತಲಘಟ್ಟಪುರ ಠಾಣೆಯ ರೌಡಿ ಪಟ್ಟಿಯಲ್ಲಿತ್ತು' ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದರು.

'ರಾಜರಾಜೇಶ್ವರಿನಗರ, ಹನುಮಂತನಗರ, ಗಿರಿನಗರ, ರಾಜಗೋಪಾಲನಗರ, ಆರ್.ಎಂ.ಸಿ ಯಾರ್ಡ್, ಸಂಜಯನಗರ ಹಾಗೂ ಹುಳಿಮಾವು ಠಾಣೆ ವ್ಯಾಪ್ತಿಯಲ್ಲೂ ಸಾಗರ್ ಅಪರಾಧ ಕೃತ್ಯ ಎಸಗಿದ್ದ. ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನಿನ ಮೇಲೆ ಹೊರಬಂದಿದ್ದ.'

'ರೌಡಿ ಎಂಬುದಾಗಿ ಹೇಳಿಕೊಂಡು ಸುತ್ತಾಡುತ್ತಿದ್ದ ಆರೋಪಿಗಳು, ಸಾರ್ವಜನಿಕರನ್ನು ಬೆದರಿಸುತ್ತಿದ್ದ. ಈ ಬಗ್ಗೆ ಪುರಾವೆ ಸಂಗ್ರಹಿಸಿ ಗೂಂಡಾ ಕಾಯ್ದೆಯಡಿ ಬಂಧಿಸಲು ಕಮಿಷನರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು. ಅದಕ್ಕೆ ಒಪ್ಪಿಗೆ ಸಿಗುತ್ತಿದ್ದಂತೆ ರೌಡಿಯನ್ನು ಬಂಧಿಸಿ ಒಂದು ವರ್ಷ ಜೈಲು ವಾಸಕ್ಕೆ ಕಳುಹಿಸಲಾಗಿದೆ' ಎಂದು ತಿಳಿಸಿದರು.

ಶಾಸಕ ಗೌರಿಶಂಕರ್ ಆಯ್ಕೆ ಅಸಿಂಧು ಕೋರಿದ ಅರ್ಜಿ: ವಿಚಾರಣೆ ಪೂರ್ಣ

ಬೆಂಗಳೂರು: 'ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆ ಅಸಿಂಧುಗೊಳಿಸಬೇಕು' ಎಂದು ಕೋರಿ ಪರಾಜಿತ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಕ್ತಾಯಗೊಳಿಸಿದ್ದು ಆದೇಶ ಕಾಯ್ದಿರಿಸಿದೆ.

ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಾದ–ಪ್ರತಿವಾದ ಆಲಿಕೆ ಪೂರೈಸಿದ ನಂತರ ಲಿಖಿತ ಆಕ್ಷೇಪಣೆ ಸಲ್ಲಿಸುವಂತೆ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತು.

ಏನಿದು ಅರ್ಜಿ?: 'ಕಳೆದ 2018ರ ಸಾರ್ವತ್ರಿಕ ಚುನಾವಣೆಯಲ್ಲಿ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಗೌರಿಶಂಕರ್ ವ್ಯಾಪಕ ಚುನಾವಣಾ ಅಕ್ರಮ ಎಸಗಿ ಆಯ್ಕೆಯಾಗಿದ್ದಾರೆ. ನಾಮಪತ್ರ ಸಲ್ಲಿಕೆ ನಂತರ ಮತದಾರರಿಗೆ ಮತಯಾಚನೆ ಪತ್ರದ ಜೊತೆ ಗುಂಪು ಆರೋಗ್ಯ ವಿಮಾ ಪಾಲಿಸಿಯ ಆಮಿಷವೊಡ್ಡಿ ಅವರಿಂದ ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಹಾಗಾಗಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಅರ್ಜಿದಾರ ಸುರೇಶ್‌ಗೌಡ ಕೋರಿದ್ದಾರೆ.

ನೂತನ ಸಿಡಿಎಸ್ ಜ. ಅನಿಲ್ ಚೌಹಾನ್ ಅಧಿಕಾರ ಸ್ವೀಕಾರ

ನವದೆಹಲಿ (ಪಿಟಿಐ): ಸೇನಾ ಪಡೆಗಳ ನೂತನ ಮುಖ್ಯಸ್ಥರಾಗಿ (ಸಿಡಿಎಸ್) ಜನರಲ್ (ನಿವೃತ್ತ) ಅನಿಲ್ ಚೌಹಾನ್ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ನಂತರ ಮಾತನಾಡಿದ ಅವರು, 'ಭಾರತೀಯ ಸೇನಾ ಪಡೆಗಳ ಅತ್ಯುನ್ನತ ಹುದ್ದೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಹೆಮ್ಮೆ ಎನಿಸುತ್ತದೆ. ಮೂರೂ ಪಡೆಗಳ ನಿರೀಕ್ಷೆಗಳನ್ನು ಪೂರೈಸಲು ಪ್ರಯತ್ನಿಸುವೆ. ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದುರಿಸುವೆ' ಎಂದರು.

ಅಧಿಕಾರ ಸ್ವೀಕಾರಕ್ಕೂ ಮುನ್ನ ಅವರು, ಇಂಡಿಯಾ ಗೇಟ್ ಬಳಿಯಿರುವ ರಾಷ್ಟ್ರೀಯ ಯುದ್ಧಸ್ಮಾರಕಕ್ಕೆ ತೆರಳಿ, ಹುತಾತ್ಮ ಯೋಧರಿಗೆ ಗೌರವ ಸಲ್ಲಿಸಿದರು.

ಅವರ ತಂದೆ ಸುರೇಂದ್ರಸಿಂಗ್ ಚೌಹಾನ್, ಪತ್ನಿ ಅನುಪಮಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮೆರವಣಿಗೆಯಲ್ಲಿ ಗ್ರಾಮೀಣ ಕೃಷಿ ಸಂಸ್ಕೃತಿ ಅನಾವರಣ

ರೈತ ದಸರಾ ಸಂಭ್ರಮ

ಪ್ರಜಾವಾಣಿ ವಾರ್ತೆ

ರೈತ ದಸರಾ ಮೆರವಣಿಗೆಯಲ್ಲಿ ಹಾವೇರಿಯ ಟಗರು ಬಂಡಿ ಗಮನ ಸೆಳೆಯಿತು

ಮೈಸೂರು: ದಸರಾ ಉತ್ಸವದ ಪ್ರಯುಕ್ತ ನಗರದಲ್ಲಿ ಶುಕ್ರವಾರದಿಂದ ಆರಂಭಗೊಂಡ ರೈತ ದಸರಾಕ್ಕೂ ಮುನ್ನ ನಡೆದ ಮೆರವಣಿಗೆ ಮನಸೂರೆಗೊಂಡಿತು. ಇಡೀ ಮೆರವಣಿಗೆಯು ಗ್ರಾಮೀಣ ಕೃಷಿ ಸಂಸ್ಕೃತಿಯ 'ಮಿನಿ ಜಂಬೂಸವಾರಿ'ಯಂತೆ ಕಂಗೊಳಿಸಿತು.

ನಗರದ ಕೋಟೆ ಆಂಜನೇಯ ಸ್ವಾಮಿ ಮುಂಭಾಗ ನಂದಿಗೆ ಪೂಜೆ ಸಲ್ಲಿಸಿ ಹಾಗೂ ನಗಾರಿ ಬಾರಿಸಿ ಕೃಷಿ ಸಚಿವ ಬಿ.ಸಿ.ಪಾಟೀಲ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೊಂದಿಗೆ ಎತ್ತಿನಗಾಡಿ ಏರಿ ಜಾನಪದ ಕಲಾತಂಡಗಳ ಮೂಲಕ ಸಾಗಿದರು.

ಹಾವೇರಿ ಜಿಲ್ಲೆ ರಾಣೆಬೆನ್ನೂರಿನ ಅಲಂಕೃತ 'ಟಗರು ಬಂಡಿ ಗಾಡಿ', ಅದರ ಜೊತೆಗೇ ತಿ.ನರಸೀಪುರ ತಾಲ್ಲೂಕಿನ ಬನ್ನೂರಿನ 5 ಜೊತೆ ಹಳ್ಳಿಕಾರ್ ತಳಿಯ ಹೋರಿಗಳು ಸಾಗಿ ಬಂದವು.

ಮಂಡ್ಯ ಜಿಲ್ಲೆ ಮಳವಳ್ಳಿಯ 4.5 ವರ್ಷದ 6.5 ಅಡಿ ಎತ್ತರ, 900 ಕೆ.ಜಿ. ತೂಕದ 'ಕೃಷ್ಣ' ಹೋರಿಯೂ ಆಕರ್ಷಿಸಿತು. ಅದರೊಂದಿಗೆ ನಂದಿಧ್ವಜ, ಡೊಳ್ಳು ಕುಣಿತ, ಟಿಬೆಟನ್ ನೃತ್ಯ, ಗಿರಿಜನರ ನೃತ್ಯ, ನಾದಸ್ವರ, ಕಂಸಾಳೆ, ಕೀಲುಗೊಂಬೆ ತಂಡಗಳು ಮೆರವಣಿಗೆಗೆ ಮೆರುಗು ತಂದವು.

ವಿವಿಧ ಯೋಜನೆಗಳ ಕುರಿತ ಮಾಹಿತಿ ಫಲಕಗಳನ್ನು ಅಳವಡಿಸಿದ್ದ ತೋಟಗಾರಿಕೆ, ಕೃಷಿ, ಅರಣ್ಯ, ಪಶುಸಂಗೋಪನೆ ಇಲಾಖೆಯ ಹತ್ತಾರು ಸ್ತಬ್ಧಚಿತ್ರಗಳು ಕಲಾತಂಡಗಳೊಂದಿಗೇ ಸಾಗಿದವು.

> **ರೈತನಿದ್ದರೆ ಜಗತ್ತು, ರೈತನಿದ್ದರೆ ಊಟ, ರೈತನಿದ್ದರೆ ಬದುಕು. ಅಂತಹ ರೈತ ದಸರಾವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿರುವುದು ಶ್ಲಾಘನೀಯ**
> **ಬಿ.ಸಿ.ಪಾಟೀಲ್,** ಕೃಷಿ ಸಚಿವ

ಜಯಚಾಮರಾಜ ಒಡೆಯರ್ ವೃತ್ತದಿಂದ ಶುರುವಾದ ಮೆರವಣಿಗೆಯು ಜೀವರಾಯನಕಟ್ಟೆ ಮೈದಾನದಲ್ಲಿ ಅಂತ್ಯಗೊಂಡಿತು. ರೈತ ದಸರಾ ಅ.2ರವರೆಗೂ ನಡೆಯಲಿದೆ.

ಪಾರಂಪರಿಕ ಟಾಂಗಾ ಸವಾರಿ: ಪರಂಪರೆಯ ಮಹತ್ವವನ್ನು ಸಾರಲೆಂದೇ ಈ ಬಾರಿ ಪಾರಂಪರಿಕ ಕಟ್ಟಡಗಳ ಕಡೆಗೆ ಸೈಕಲ್ ಸವಾರಿ, ಪಾರಂಪರಿಕ ಉಡುಗೆಯಲ್ಲಿ ಟಾಂಗಾ ಸವಾರಿ ಮತ್ತು ನಡಿಗೆಯನ್ನು ಏರ್ಪಡಿಸಲಾಗಿದೆ.

ಬೆಳಿಗ್ಗೆ ನಡೆದ ಟಾಂಗಾ ಸವಾರಿಗೂ ಮುನ್ನ, ಕೊಡವ ದಿರಿಸು, ಮಹಾರಾಜರ ಉಡುಗೆ, ಮೈಸೂರು ಪೇಟಾ, ಪಂಚೆ ಹಾಗೂ ಮೈಸೂರು ರೇಷ್ಮೆ ಸೀರೆಯಲ್ಲಿ ಭಾಗವಹಿಸಿದ್ದ ಜೋಡಿಗಳಿಗೆ ಬಾಗಿನ ನೀಡಿ ಸ್ವಾಗತಿಸಲಾಯಿತು. 42 ಜೋಡಿಗಳು ದಿನವನ್ನು ಅವಿಸ್ಮರಣೀಯವಾಗಿಸಿಕೊಂಡರು. ಶೆಲ್ವಪಿಳ್ಳೆ ಅಯ್ಯಂಗಾರ್ ಅವರು ಪಾರಂಪರಿಕ ಕಟ್ಟಡಗಳ ಮಾಹಿತಿ ನೀಡಿದರು. ಟಾಂಗಾ ಸವಾರಿಯಲ್ಲಿ ತೆರಳುತ್ತಿದ್ದ ದಂಪತಿಯನ್ನು ಸಾರ್ವಜನಿಕರು ಕುತೂಹಲದಿಂದ ನೋಡಿದರು.

ಸಂಪನ್ಮೂಲ ವ್ಯಕ್ತಿ ಎನ್.ಎಸ್. ರಂಗರಾಜು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳ ಇದ್ದರು. ಅ.1ರಂದು ಪುರಭವನದ ಆವರಣದಿಂದ ಪಾರಂಪರಿಕ ನಡಿಗೆ ಏರ್ಪಾಡಾಗಿದೆ.

ನದಿಗೆ ಬಿದ್ದು ದಂಪತಿ ಸಾವು

ಚನ್ನಪಟ್ಟಣ: ತಾಲ್ಲೂಕಿನ ಕೂಡ್ಲೂರು ಗ್ರಾಮದ ಬಳಿ ಕಣ್ವ ನದಿಗೆ ಆಕಸ್ಮಿಕವಾಗಿ ಜಾರಿ ಬಿದ್ದು ದಂಪತಿ ಸಾವನ್ನಪ್ಪಿದ್ದಾರೆ.

ಗ್ರಾಮದ ವೆಂಕಟೇಶ್ (55) ಹಾಗೂ ಕಾಳಮ್ಮ (50) ಮೃತರು. ಗುರುವಾರ ಸಂಜೆ ಹಸು ಮೇಯಿಸಿಕೊಂಡು ಮನೆಗೆ ವಾಪಸ್ಸು ಆಗುವ ವೇಳೆ ಕೂಡ್ಲೂರು ಮಿಣಕೆರೆದೊಡ್ಡಿ ಗ್ರಾಮದ ಕಣ್ವ ನದಿಯ ಕಿರುಸೇತುವೆ ದಾಟುವಾಗ ಕಾಳಮ್ಮ ಕಾಲುಜಾರಿ ನದಿಗೆ ಬಿದ್ದಿದ್ದಾರೆ. ಅವರನ್ನು ರಕ್ಷಿಸಲು ಹೋದ ಅವರ ಪತಿ ವೆಂಕಟೇಶ್ ಕೂಡ ಮೃತಪಟ್ಟಿದ್ದಾರೆ.

ಹಸುಗಳು ಮಾತ್ರ ಮನೆಗೆ ಬಂದರೂ, ಎಷ್ಟು ಸಮಯವಾದರೂ ದಂಪತಿ ಬಾರದನ್ನು ಕಂಡು ಮನೆಯವರು ಹುಡುಕಿಕೊಂಡು ಹೋದಾಗ ನದಿಯಲ್ಲಿ ಮೃತದೇಹಗಳು ಪತ್ತೆಯಾಗಿವೆ. ವಿಷಯ ತಿಳಿದು ಗ್ರಾಮಾಂತರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತದೇಹವನ್ನು ನದಿಯಿಂದ ಹೊರತೆಗೆದು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದ್ದಾರೆ.

'ಶಿಕ್ಷಕರ ಹಿತ ಕಾಪಾಡಲು ಬದ್ಧ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಶಿಕ್ಷಕರು ಕೆಲಸದ ಒತ್ತಡ ಲೆಕ್ಕಿಸದೇ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ' ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದರು.

ಗಡ್ಡೆಹಳ್ಳಿಯ ಪ್ರೆಸ್ಟೀಜ್ ಶಾಲೆಯಲ್ಲಿ ಬೆಂಗಳೂರು ಅನುದಾನರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟವು ಹಮ್ಮಿಕೊಂಡಿದ್ದ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಿಂತ ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಒತ್ತಡದಲ್ಲಿ ಕೆಲಸ ಮಾಡುವ ಪರಿಸ್ಥಿತಿ ಇದೆ. ಶಿಕ್ಷಕರು ಒತ್ತಡ ನಿಭಾಯಿಸಿಕೊಂಡು ಭವಿಷ್ಯದಲ್ಲಿ ತಮ್ಮ ವಿದ್ಯಾರ್ಥಿ ಉತ್ತಮ ಪ್ರಜೆಯಾಗಲು ಶಿಕ್ಷಣವೊಂದೇ ಪರಿಹಾರ ಎಂದು ಮಕ್ಕಳನ್ನು ರೂಪಿಸುವ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಪೋಷಕರು ಕೂಡ ಮಕ್ಕಳ ಮೇಲೆ ಒತ್ತಡ ಹಾಕದೇ ಮಕ್ಕಳಿಗೆ ಶಿಕ್ಷಣ ಒದಗಿಸಲು ಅಣಿಯಾಗಬೇಕು ಎಂದು ಹೇಳಿದರು.

'ಅನ್ನ, ಅಂತಸ್ತು, ಸಂಪತ್ತು ಯಾವುದೂ ಕೊನೆಯವರೆಗೂ ಉಳಿಯುವುದಿಲ್ಲ, ಆದರೆ, ಕಲಿತ ವಿದ್ಯೆ ಮಾತ್ರ ಕೊನೆಯವರೆಗೂ ಜತೆಗಿರುತ್ತದೆ. ನಮ್ಮನ್ನು ಶಿಕ್ಷಣವಂತರನ್ನಾಗಿ ಮಾಡಲು ಶ್ರಮವಹಿಸುತ್ತಿರುವ ಶಿಕ್ಷಕರನ್ನು ಪ್ರತಿಯೊಬ್ಬರೂ ಗೌರವಿಸಬೇಕು. ಶಿಕ್ಷಕರ ಹಿತ ಕಾಯಲು ಬದ್ಧನಾಗಿದ್ದೇನೆ' ಎಂದರು.

ಖಾಸಗಿ ಶಾಲೆಗಳ 40 ಸಂಸ್ಥಾಪಕರು ಹಾಗೂ 50ಕ್ಕೂ ಹೆಚ್ಚು ಶಿಕ್ಷಕರನ್ನು ಸನ್ಮಾನಿಸಲಾಯಿತು.

ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಬೆಂಗಳೂರು ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್, ಪ್ರೆಸ್ಟೀಜ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಅಂಜನಪ್ಪ, ಸುರೇಶ್, ಶಿವಕುಮಾರ್ ಕೆ. ಸ್ವಾಮಿ ಇದ್ದರು.

ಗುರುವಂದನಾ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಉದ್ಘಾಟಿಸಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಬೆಂಗಳೂರು ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ ಪ್ರಧಾನ ಕಾರ್ಯದರ್ಶಿ ಶಶಿ ಕುಮಾರ್, ಪ್ರೆಸ್ಟೀಜ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಅಂಜನಪ್ಪ, ಸುರೇಶ್, ಶಿವಕುಮಾರ್ ಕೆ. ಸ್ವಾಮಿ ಇದ್ದರು

'ಜಿ.ನಾ.ಕು' ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿ.ನಾ.ಕು. ಪ್ರಶಸ್ತಿ ಪ್ರದಾನ ಮಾಡಲಾಯಿತು.

ಖ್ಯಾತ ವಕೀಲ ಸಿ.ಎಚ್. ಹನುಮಂತರಾಯ, ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಕುಮಾರ್ ಶೆಟ್ಟಿ, ವೈದ್ಯರಾದ ಡಾ.ವಿ.ಆರ್. ಕಿಶೋರ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಬಿ. ಅಶೋಕ್ ಕುಮಾರ್ ಅವರು ಈ ಬಾರಿಯ ಪ್ರಶಸ್ತಿ ಪುರಸ್ಕೃತರು. ಸಿ.ಎಚ್. ಹನುಮಂತರಾಯ ಮತ್ತು ಬಿ.ಬಿ. ಅಶೋಕ್ ಕುಮಾರ್ ಅವರು ಕಾರ್ಯಕ್ರಮಕ್ಕೆ ಗೈರುಹಾಜರಾಗಿದ್ದರು.

ಕಾರ್ಯಕ್ರಮದಲ್ಲಿ ಮಾತನಾಡಿದ ವಸತಿ ಸಚಿವ ವಿ. ಸೋಮಣ್ಣ, 'ಜಿ. ನಾರಾಯಣಕುಮಾರ್ ಅವರು ನಾಡು ಕಂಡ ಅಪರೂಪದ ರಾಜಕಾರಣಿ ಮತ್ತು ಕನ್ನಡ ಪರ ಹೋರಾಟಗಾರರು' ಎಂದು ಸ್ಮರಿಸಿದರು.

'ಕನ್ನಡ ಭಾಷೆ ಮತ್ತು ನಾಡಿಗೆ ಸಂಕಷ್ಟ ಬಂದಾಗ ಜಿ.ನಾರಾಯಣಕುಮಾರ್ ಅವರು ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ಕನ್ನಡಕ್ಕ ವ್ಯಕ್ತಿಯಾಗಿ ಮತ್ತು ಶಕ್ತಿಯಾಗಿ ಅವರು ದುಡಿದಿದ್ದಾರೆ' ಎಂದು ನೆನಪಿಸಿಕೊಂಡರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ,'ನಾಡು-ನುಡಿ ವಿಷಯದಲ್ಲಿ ಜಿ. ನಾರಾಯಣಕುಮಾರ್ ಅವರು ಸದಾ ದಿಟ್ಟತನ ಪ್ರದರ್ಶಿಸುತ್ತಿದ್ದರು' ಎಂದರು.

ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ್ ನಾರಾಯಣಕುಮಾರ್ ಇದ್ದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಜಿ. ನಾರಾಯಣ ಕುಮಾರ್ ಸಂಸ್ಮರಣೆ ಕಾರ್ಯಕ್ರಮದಲ್ಲಿ ಜಿ.ನಾರಾಯಣ ಕುಮಾರ್ ಅವರ ಭಾವಚಿತ್ರಕ್ಕೆ ಸಾ.ರಾ. ಗೋವಿಂದು, ಪ್ರವೀಣ್ ಶೆಟ್ಟಿ, ಸಚಿವ ವಿ. ಸೋಮಣ್ಣ, ಎಂ. ಮಹೇಶ ಜೋಶಿ ಮತ್ತು ಗುರುದೇವ್ ನಾರಾಯಣ್ ಕುಮಾರ್ ನಮನ ಸಲ್ಲಿಸಿದರು — ಪ್ರಜಾವಾಣಿ ಚಿತ್ರ

ನೇಮಕ

ಬೆಂಗಳೂರು: ಜಾತ್ಯತೀತ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಬೆಂಗಳೂರಿನ ನಾಗಸಂದ್ರದ ಕೆ.ವಿ. ಆದಿಶೇಷಯ್ಯ ಅವರನ್ನು ನೇಮಕ ಮಾಡಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಆದೇಶಿಸಿದ್ದಾರೆ.

ಶಾಲೆ ಶಿಥಿಲ: ಕ್ರಮಕ್ಕೆ ಆಯುಕ್ತರ ಸೂಚನೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕೆಂಗೇರಿ ಉಪನಗರದ ಗಾಂಧಿನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ ಕಟ್ಟಡ ಬಗ್ಗೆ ಪರಿಶೀಲನೆ ನಡೆಸಿ ಎರಡು ವಾರದಲ್ಲಿ ವರದಿ ಸಲ್ಲಿಸಬೇಕು ಎಂದು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರಿಗೆ ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

ಗಾಂಧಿನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 1ರಿಂದ 5ನೇ ತರಗತಿವರೆಗೆ ಸುಮಾರು 60ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಕಟ್ಟಡ ಕಿರಿದಾಗಿದ್ದು, ಶಿಥಿಲವಾಗಿದೆ. ಗಾಳಿ-ಬೆಳಕು ಬರುವುದಿಲ್ಲ. ಮಳೆ ಬಂದಾಗ ಚಾವಣಿಯಿಂದ ನೀರು ಸೋರಿ, ಕಾಂಕ್ರೀಟ್ ಉದುರುತ್ತಿದೆ. ಗೋಡೆಗಳಲ್ಲಿ ಫಂಗಸ್ ಇದ್ದು, ಮಕ್ಕಳು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಇದಕ್ಕೆ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ನೇರ ಹೊಣೆ ಎಂದು ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆಯ ಶಿವಕುಮಾರ್ ಅವರು ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದಾರೆ ಎಂದು ಆದೇಶ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಆದ್ದರಿಂದ, ಆ ಶಾಲೆಗೆ ಭೇಟಿ ನೀಡಿ ದೂರಿನ ಕುರಿತು ಕ್ರಮ ಕೈಗೊಂಡು, ಎರಡು ವಾರದಲ್ಲಿ ಅದರ ಮಾಹಿತಿಯನ್ನು ಕಚೇರಿಗೆ ಸಲ್ಲಿಸಬೇಕು ಎಂದು ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

'ದೇವಸ್ಥಾನಕ್ಕೆ ಸರ್ಕಾರಿ ಶಾಲೆ ಸ್ಥಳಾಂತರ' ಶೀರ್ಷಿಕೆಯಡಿ ಶಾಲೆಯ ದುಃಸ್ಥಿತಿಯನ್ನು 'ಪ್ರಜಾವಾಣಿ' ಆ.26 ರಂದು ಪ್ರಕಟಿಸಿತ್ತು.

ಪ್ಲಾಟ್‌ಫಾರ್ಮ್ ಟಿಕೆಟ್ ದರ ಹೆಚ್ಚಳ

ಬೆಂಗಳೂರು: ನಗರದ ಐದು ರೈಲು ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್ ಟಿಕೆಟ್ ದರವನ್ನು ತಾತ್ಕಾಲಿಕವಾಗಿ ಹೆಚ್ಚಿಸಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಕಂಟೋನ್ಮೆಂಟ್, ಯಶವಂತಪುರ, ಕೃಷ್ಣರಾಜಪುರ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ರೈಲು ನಿಲ್ದಾಣಗಳಲ್ಲಿ ₹10 ಇದ್ದ ಪ್ಲಾಟ್‌ಫಾರ್ಮ್ ಟಿಕೆಟ್ ದರವನ್ನು ₹20ಕ್ಕೆ ಹೆಚ್ಚಿಸಲಾಗಿದೆ. ದಸರಾ ಹಬ್ಬದ ರಜೆ ಸಂದರ್ಭದಲ್ಲಿ ಜನದಟ್ಟಣೆ ಹೆಚ್ಚಾದರೆ ಪ್ರಯಾಣಿಕರ ಓಡಾಟಕ್ಕೆ ಕಷ್ಟವಾಗಲಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ತಾತ್ಕಾಲಿಕವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ರೂಪದರ್ಶಿ ಆತ್ಮಹತ್ಯೆ

ಮುಂಬೈ (ಪಿಟಿಐ): 30 ವರ್ಷ ವಯಸ್ಸಿನ ರೂಪದರ್ಶಿಯೊಬ್ಬರು ಇಲ್ಲಿಯ ವರ್ಸೋವದ ಹೋಟೆಲೊಂದರ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳದಿಂದ ಪತ್ರವನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಮೃತ ರೂಪದರ್ಶಿಯನ್ನು ಆಕಾಂಕ್ಷಾ ಮೋಹನ್ ಎಂದು ಗುರುತಿಸಲಾಗಿದೆ. ಮೃತದೇಹವನ್ನು ಬುಧವಾರ ಸಂಜೆ ವಶಕ್ಕೆ ತೆಗೆದುಕೊಳ್ಳಲಾಗಿದೆ. ಖಿನ್ನತೆಯಿಂದಾಗಿ ಅವರು ಈ ರೀತಿಯ ನಿರ್ಧಾರ ತೆಗೆದುಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಆಕಾಂಕ್ಷಾ ಮುಂಬೈನ ಲೋಖಂಡ್‌ವಾಲ ಪ್ರದೇಶದಲ್ಲಿ ನೆಲೆಸಿದ್ದರು. ಬುಧವಾರ ಮಧ್ಯಾಹ್ನ 1 ಗಂಟೆಗೆ ಹೋಟೆಲ್‌ಗೆ ಬಂದು ಕೋಣೆಯನ್ನು ಪಡೆದಿದ್ದರು.

ಚಿತ್ರಾವಳಿ

ಹೈಕೋರ್ಟ್ ವಕೀಲ ಎಂ.ಎಸ್.ಉಮಾಶಂಕರ್ (ಎಡದಿಂದ ಮೂರನೆಯವರು) ರಚಿಸಿರುವ 'ಸಿವಿಲ್ ರೆಡಿ ರೆಫರೆನ್ಸ್' ಪುಸ್ತಕವನ್ನು ಹೈಕೋರ್ಟ್ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ (ಎಡದಿಂದ ನಾಲ್ಕನೆಯವರು) ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ 'ಬೆಂಗಳೂರು ವಕೀಲರ ಸಂಘ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು. ಸಂಘದ ಪದಾಧಿಕಾರಿ ಎನ್.ಪಿ.ಅಮೃತೇಶ್, ಖಜಾಂಚಿ ಎಂ.ಟಿ.ಹರೀಶ್, ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಜಂಟಿ ಕಾರ್ಯದರ್ಶಿ ಎ.ಎಸ್.ಹರೀಶ್ ಮತ್ತು ಉಪಾಧ್ಯಕ್ಷ ಎಸ್.ರಾಜು ಇದ್ದರು

ದಸರಾ ಅಂಗವಾಗಿ ಯಶವಂತಪುರದ ರಾಘವೇಂದ್ರ ಬಡಾವಣೆಯ ಡೆಕ್ಕನ್ ಹ್ಯಾಬಿಟ್ಯಾಟ್ ಅಪಾರ್ಟ್‌ಮೆಂಟ್‌ನಲ್ಲಿ ಮಹಿಳೆಯರು ದಸರಾ ಬೊಂಬೆ ಕೂರಿಸಿ ಸಂಭ್ರಮಿಸಿದರು

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಸಂಸ್ಥೆಯಿಂದ ಬೆಸ್ಕಾಂ ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ನಿರ್ದೇಶಕ (ತಾಂತ್ರಿಕ) ಡಿ.ನಾಗಾರ್ಜುನ್, ಪ್ರಧಾನ ವ್ಯವಸ್ಥಾಪಕ ಎನ್.ಅಮರನಾಥ್, ಕೆ.ಆರ್.ನರಹರಿ, ಸಿ.ಟಿ. ಮಂಜುನಾಥ, ದಿನೇಶ್‌ಕುಮಾರ್, ನಿಶಾ ಜಯರಾಮ್ ಹಾಜರಿದ್ದರು

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿ-ಇಎಲ್-ಜಿಆರ್300-ಎಲ್‌ಟಿ-ಓಟಿ-01 ದಿನಾಂಕ : 24-09-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದ ಹೊಸಪೇಟೆ (ಹೊರತುಪಡಿಸಿ) – ಸ್ವಾಮಿಹಳ್ಳಿ (ಒಳಗೊಂಡು) ಸೆಕ್ಷನ್‌ನಲ್ಲಿ ಜಿಆರ್.300ನ ಆರ್‌ಇ ಕಾಮಗಾರಿಗೆ ಸಂಬಂಧಿಸಿದಂತೆ ಎಎಸ್‌ಎಂ ಕೋಣೆಯಲ್ಲಿ ಮತ್ತು ಇಂಟರ್‌ಲಾಕ್ಡ್ ಎಲ್‌ಸಿ ಗೇಟ್‌ಗಳಲ್ಲಿ ಕಲರ್ ಲೈಟ್ ಸಿಗ್ನಲಿಂಗ್‌ಗಾಗಿ ಎಟಿ ಪವರ್ ಸರಬರಾಜು ವ್ಯವಸ್ಥೆ ಮತ್ತು ಎಲ್‌ಟಿ ಮಾರ್ಪಾಡು ಕಾಮಗಾರಿ.	ರೂ. 46,48,113.89

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17-10-2022 ರಂದು 15:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಯಾವುದೇ ತಿದ್ದುಪಡಿಗಳಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್
ರೈಲ್ವೆ ವಿದ್ಯುದೀಕರಣ, ಬೆಂಗಳೂರು

ಪಿಯುಬಿ/394/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರವರ ಕಛೇರಿ ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001.
ದೂರವಾಣಿ: +91-80-22864626, ಈಮೇಲ್: spwireless@ksp.gov.in

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ಕೊಡಗು, ವಿಜಯಪುರ, ವಿಜಯನಗರ ಮತ್ತು ರಾಯಚೂರು ಜಿಲ್ಲೆಗಳಿಗೆ ಡಿಜಿಟಲ್ ವಿ.ಎಚ್.ಎಫ್ ರೇಡಿಯೋ ಕಮ್ಯೂನಿಕೇಷನ್ ನೆಟ್‌ವರ್ಕ್‌ನ ವಿನ್ಯಾಸ, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 10/10/2022, ಸಮಯ ಬೆಳಿಗ್ಗೆ 11:30 ಗಂಟೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ತಾಂತ್ರಿಕ ಬಿಡ್‌ಗಳು ತೆರೆಯುವ ದಿನಾಂಕ	ಟೆಂಡರ್ ಅಂದಾಜು ಮೌಲ್ಯ ರೂ. ಲಕ್ಷಗಳಲ್ಲಿ
1.	02/MDN/STS/W/VHFDigitalWireless EQPT-2/2022-23, Dtd:23/09/2022 - Kodagu	25/10/2022	26/10/2022	314.93
2.	04/MDN/STS/W/VHFDigitalWireless EQPT-4/2022-23, Dtd:26/09/2022 - Vijayapura	27/10/2022	28/10/2022	328.96
3.	03/MDN/STS/W/VHFDigitalWireless EQPT-3/2022-23, Dtd:27/09/2022 - Vijayanagara	28/10/2022	29/10/2022	330.34
4.	01/MDN/STS/W/VHFDigital Wireless EQPT-1/2022-23, Dtd:28/09/2022 - Raichur	29/10/2022	30/10/2022	339.31

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದು ಹಾಗು ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು
ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು.

ವಾಸಸಂಇ/ವಾ.ಪ್ರ/2452/2022-23

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/80/2022 ದಿನಾಂಕ : 26-09-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ನೈಋತ್ಯ ರೈಲ್ವೆ ನಿರ್ಮಾಣ ಕಛೇರಿ, ಬೆಂಗಳೂರುನಲ್ಲಿ ಐಪಿಎಂಎಸ್ ಸಾಫ್ಟ್‌ವೇರ್‌ನ ವಾರ್ಷಿಕ ನಿರ್ವಹಣೆ. (ಟೆಂಡರ್ ಉಲ್ಲೇಖ ಸಂ. ಬಿಎನ್‌ಸಿ-ಐಪಿಎಂಎಸ್-ಎಎಂಸಿ-2022)	ರೂ. 22,80,000/-
2	ಚಿಕ್ಕಬಳ್ಳಾಪುರದಿಂದ ಗೌರಿಬಿದನೂರುವರೆಗೆ (44 ಕಿ.ಮೀ) ನಡುವೆ ಅಂತಿಮ ಲೊಕೇಶನ್ ಸರ್ವೆ ಮತ್ತು ಮಲೌಗುರ್ – ಪಾಲಸಮುದ್ರಂ ನಡುವೆ ಉದ್ದೇಶಿತ ಹೊಸ ಬಿಜಿ ಮಾರ್ಗಕ್ಕಾಗಿ ಭೂ-ತಾಂತ್ರಿಕ ಪರಿಶೋಧನೆ ನಡೆಸುವುದು ಮತ್ತು ಇತರ ವಿವಿಧ ಕಾಮಗಾರಿಗಳು (17.975) (ಟೆಂಡರ್ ಉಲ್ಲೇಖ ಸಂ. ಸಿಬಿಪಿ-ಜಿಬಿಡಿ-ಎಂಎಲ್‌ಯು-ಪಾಲಸಮುದ್-ಎಫ್‌ಎಲ್‌ಎಸ್)	ರೂ. 1,73,84,639/-
3	ಇವುಗಳಿಗೆ ಸೈಡ್ ಪಾಥ್‌ವೇ ಒದಗಿಸುವುದು (1) ಗೋಕಾಕ್ ರಸ್ತೆ ಮತ್ತು ಘಟಪ್ರಭಾ ನಿಲ್ದಾಣದ ನಡುವೆ ಅಪ್ ಲೈನ್‌ನಲ್ಲಿ (ಘಟಪ್ರಭಾ ನದಿಯ ಮೇಲೆ) 13X45.70ಮೀ ಸ್ಪಾನ್ ಇರುವ ಓಪನ್ ವೆಬ್ ಗರ್ಡರ್ ಸೇತುವೆ ಸಂ.125. (2) ಕುಡಚಿ – ಉಗರ್‌ಖುರ್ದ್ ನಿಲ್ದಾಣದ ನಡುವೆ ಅಪ್ ಲೈನ್‌ನಲ್ಲಿ (ಕೃಷ್ಣಾ ನದಿಯ ಮೇಲೆ) 14X45.70ಮೀ ಸ್ಪಾನ್ ಇರುವ ಓಪನ್ ವೆಬ್ ಗರ್ಡರ್ ಸೇತುವೆ ಸಂ.184. (3) ಗೋಕಾಕ್ ರಸ್ತೆ – ಘಟಪ್ರಭಾ ನಿಲ್ದಾಣದ ನಡುವೆ ಡೌನ್ ಲೈನ್‌ನಲ್ಲಿ (ಘಟಪ್ರಭಾ ನದಿಯ ಮೇಲೆ) 45X12.2ಮೀ ಸ್ಪಾನ್ ಇರುವ ಓಪನ್ ವೆಬ್ ಗರ್ಡರ್ ಸೇತುವೆ ಸಂ.125. (ಟೆಂಡರ್ ಉಲ್ಲೇಖ ಸಂ.ಎಲ್‌ಡಿ-ಎಂಆರ್‌ಜೆ-ಬ್ರಿಡ್ಜ್-125-184)	ರೂ. 5,32,80,471/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : ಕ್ರಸಂ.1ಕ್ಕೆ 12-10-2022 ರಂದು ಮತ್ತು ಕ್ರಸಂ.2 ಮತ್ತು 3ಕ್ಕೆ ದಿನಾಂಕ : 17-10-2022, 15:00 ಗಂಟೆಗಳವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು / ನಿರ್ಮಾಣ
ಬೆಂಗಳೂರು ದಂಡು

ಪಿಯುಬಿ/395/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. 28 ಯುಬಿಎಲ್ 2022-23 ದಿನಾಂಕ : 26-09-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಸಬ್‌ವರ್ಕ್ 1 : ಬಳ್ಳಾರಿ : ಬಳ್ಳಾರಿ ಗೂಡ್ ಶೆಡ್‌ನಲ್ಲಿ ಕುಡಿಯುವ ನೀರು ಮತ್ತು ಯಾರ್ಡ್ ಲೈಟಿಂಗ್‌ನ್ನು ಒದಗಿಸುವುದು. ಸಬ್‌ವರ್ಕ್ 2 : ಬಳ್ಳಾರಿ : ಬಳ್ಳಾರಿ ನಿಲ್ದಾಣದಲ್ಲಿನ ಸಮುದಾಯ ಭವನದ ಛಾವಣಿಗೆ ದುರಸ್ತಿ.	ರೂ. 14,99,050/-
2	ಹುಬ್ಬಳ್ಳಿ ವಿಭಾಗ : ಸಹಾಯಕ ವಿಭಾಗೀಯ ಇಂಜಿನಿಯರ್ / ಬಳ್ಳಾರಿ ಸೆಕ್ಷನ್ (ಹಿರಿಯ ವಿಭಾಗೀಯ ಇಂಜಿನಿಯರ್ / ಪೂರ್ವ ವ್ಯಾಪ್ತಿ) ಇಲ್ಲಿ ಹೊಸಪೇಟೆ – ಬಳ್ಳಾರಿ ಸೆಕ್ಷನ್ – 19.637 ಕಿ.ಮೀ, ಬಳ್ಳಾರಿ – ರಾಯದುರ್ಗ ಸೆಕ್ಷನ್ – 7.55 ಕಿ.ಮೀ ಮತ್ತು ತೋರಣಗಲ್ಲು – ರಣಜಿತ್‌ಪುರ – 11.15 ಕಿ.ಮೀ. ನಡುವೆ ಒಟ್ಟು ಟಿಬಿಆರ್ ಉದ್ದ – 38.337 ಕಿ.ಮೀ.ಗೆ ಥ್ರೂ ಬಲ್ಲಾಸ್ಟ್ ರಿನ್ಯೂವಲ್.	ರೂ. 8,65,63,178/-
3	ಹುಬ್ಬಳ್ಳಿ ವಿಭಾಗ : ಹಿರಿಯ ವಿಭಾಗೀಯ ಇಂಜಿನಿಯರ್ / ಸೆಂಟ್ರಲ್ / ಹುಬ್ಬಳ್ಳಿ ವ್ಯಾಪ್ತಿಯಲ್ಲಿನ ಕರ್ಜಗಿ ಮತ್ತು ಕುಸುಗಲ್ ಯಾರ್ಡ್‌ನಲ್ಲಿ ಟ್ರ್ಯಾಕ್ ಮೆಷೀನ್ ರೆಸ್ಟ್ ಹೌಸ್, ಸಂಪರ್ಕ ರಸ್ತೆ ಪಾಥ್‌ವೇ, ಹೈ ಲೆವೆಲ್ ಪಿಎಫ್, ಲೋ ಲೆವೆಲ್ ಪಿಎಫ್ ಶೆಲ್ಟರ್‌ನ ನಿರ್ಮಾಣ, ಕುಡಿಯುವ ನೀರಿನ ಸೌಲಭ್ಯ ಇತ್ಯಾದಿಗಳು.	ರೂ. 2,05,22,577.35

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-10-2022 ರಂದು 11:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ
ಹುಬ್ಬಳ್ಳಿ

ಪಿಯುಬಿ/396/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ-562123. ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/20/2021-22 ದಿನಾಂಕ: 28-09-2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವಸತಿ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀಮತಿ ಸುಮ. ಬಿ.ಎ. ಬಿನ್ ಅರಸು. ಎಲ್.ಕೆ.	ನೆಲಮಂಗಲ	ಕಸಬಾ	ಕೂಲೀಪುರ	83	01-00	ವಸತಿ	ವಾಣಿಜ್ಯ
					ಒಟ್ಟು	01-00		

ಷರಾ:- ಪ್ರಸ್ತಾಪಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಉದ್ದೇಶದ ವಿನ್ಯಾಸಗಳು ಅನುಮೋದನೆಯಾಗಿದ್ದು, ವಾಣಿಜ್ಯ ಚಟುವಟಿಕೆ ಕೇಂದ್ರ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನು ಒಳಗೊಂಡ ವಾಣಿಜ್ಯ ಚಟುವಟಿಕೆ ಕೇಂದ್ರ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 25 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವಸತಿ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು (ಪ್ರ)
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/2464/ಅಡ್ವರ್ಟೋರ್/2022-23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು-159/1547/2022-23 ದಿ: 30.09.2022

ಪ್ರಕಟಣೆ

ಶ್ರೀ ವೈ.ಆರ್.ಜನಾರ್ಧನ್ ರಾವ್ ಮತ್ತು ಆನಂದ್ ನಂ.167, 36ನೇ ಕ್ರಾಸ್, 18ನೇ ಮೈನ್, 4ನೇ "ಟಿ" ಬ್ಲಾಕ್, ಜಯನಗರ, ಬೆಂಗಳೂರು-560041ರವರು ಬೆಂಗಳೂರು ಜಿಲ್ಲೆ, ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಬಿಳೇಕಹಳ್ಳಿ ಗ್ರಾಮದ ಸರ್ವೆ ನಂ.44/1ರಲ್ಲಿ 00 ಎಕರೆ 14 ಗುಂಟೆ ಪ್ರದೇಶವನ್ನು ಉದ್ಯಾನವನ ಮತ್ತು ಬಯಲುಜಾಗ ಉಪಯೋಗದಿಂದ ವಸತಿ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(4) ರಡಿಯಲ್ಲಿ ಭೂಉಪಯೋಗ ಮರುನಿಗದಿಪಡಿಸಲು ಕೋರಿರುತ್ತಾರೆ. ಭೂಉಪಯೋಗ ಮರುನಿಗದಿಪಡಿಸುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಮರುನಿಗದಿ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ವೈ.ಆರ್.ಜನಾರ್ದನ್ ರಾವ್ ಮತ್ತು ಆನಂದ್	ಬೆಂಗಳೂರು (ದಕ್ಷಿಣ)	ಬೇಗೂರು	ಬಿಳೇಕಹಳ್ಳಿ	44/1	0-14	ಉದ್ಯಾನವನ ಮತ್ತು ಬಯಲುಜಾಗ	ವಸತಿ
				ಒಟ್ಟು		0-14		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನ ಸುತ್ತಮುತ್ತ ವಸತಿ ಸಮುಚ್ಛಯಗಳು ಬಂದಿದ್ದು ವಸತಿ ಘಟಕಗಳಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಉದ್ಯಾನವನ ಮತ್ತು ಬಯಲುಜಾಗ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಮರು ನಿಗದಿಪಡಿಸಿದ ನಂತರ, ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ ಹಾಗೂ ಯೋಜನಾಬದ್ಧ ಅಭಿವೃದ್ಧಿಯಿಂದ ಸರ್ಕಾರಕ್ಕೆ ತೆರಿಗೆಗಳು ಉತ್ಪತ್ತಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು ಉದ್ಯಾನವನ ಮತ್ತು ಬಯಲುಜಾಗ ಉಪಯೋಗದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಮರು ನಿಗದಿಪಡಿಸಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/121/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮುಖ್ಯ ಆಯುಕ್ತರವರ ಕಚೇರಿ,
ಎನ್.ಆರ್.ಚೌಕ, ಬೆಂಗಳೂರು - 560 002.

ಸಂಖ್ಯೆ:ಬಿ12(ಸಿ1)ಪಿಆರ್/10/2022-23 ದಿನಾಂಕ: 30.09.2022

ಬಿಬಿಎಂಪಿಯ ವಿಪತ್ತು (DISASTER) ನಿರ್ವಹಣೆ/ಘಟನಾ "ಪ್ರತಿಕ್ರಿಯ ವ್ಯವಸ್ಥೆಯ (Incident Response System) ಪರಿಣಿತರ" ಹುದ್ದೆಗೆ ಗೌರವಧನದ ಆಧಾರದ ಮೇಲೆ ನೇಮಕ

ಬಿಬಿಎಂಪಿ ವ್ಯಾಪ್ತಿಯಲ್ಲಿ 24 ಗಂಟೆಗಳ ಅವಧಿಗೆ ನಿರಂತರವಾಗಿ ಆಗುವ ವಿಪತ್ತು ಕಾರ್ಯಗಳನ್ನು ನಿಯಂತ್ರಿಸುವುದು ಮತ್ತು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವುದು ಮತ್ತು ಇನ್ನಿತರೆ ತುರ್ತು ಕಾರ್ಯಗಳನ್ನು ನಿರ್ವಹಿಸಲು ವಿಪತ್ತು ನಿರ್ವಹಣೆ/(Disaster Management) ಘಟನಾ ಪ್ರಕ್ರಿಯೆ ವ್ಯವಸ್ಥೆ (Incident Response System) ಯ ಪರಿಣಿತರ ಹುದ್ದೆಗೆ ಗೌರವಧನದ ಆಧಾರದ ಮೇಲೆ ನೇಮಕ ಕುರಿತು.

ಹುದ್ದೆಗಳ ಸಂಖ್ಯೆ	ಗುತ್ತಿಗೆಯ ಅವಧಿ	ಗೌರವಧನ (ಪ್ರತಿ ತಿಂಗಳು)	ನಿಗದಿಪಡಿಸಿದ ವಯಸ್ಸು
01	12 ತಿಂಗಳು	ರೂ.40,000/-	ಗರಿಷ್ಠ 50 ವರ್ಷ

ವಿದ್ಯಾರ್ಹತೆ: ಯುಜಿಸಿ ಗುರುತಿಸಲ್ಪಟ್ಟ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ / ಸಮಾಜ ವಿಜ್ಞಾನ /ಗ್ರಾಮೀಣ ಅಭಿವೃದ್ಧಿ/ಪರಿಸರ ವಿಜ್ಞಾನ/ನಿರ್ವಹಣೆಯ ಸ್ನಾತಕೋತ್ತರ ಪದವೀಧರರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್ ಸೈಟ್ www.bbmp.gov.in ನಲ್ಲಿ ಪಡೆಯಬಹುದು.

ಯಾವುದೇ ಸ್ಪಷ್ಟೀಕರಣಕ್ಕಾಗಿ ಮುಖ್ಯ ಆಯುಕ್ತರವರ ಕಚೇರಿ, ಬಿಬಿಎಂಪಿ ಎನ್.ಆರ್.ಚೌಕ, ಬೆಂಗಳೂರು ಅಥವಾ ಕಚೇರಿ ದೂರವಾಣಿ ಸಂಖ್ಯೆ: 080-22975549ಯನ್ನು ಸಂಪರ್ಕಿಸಿ.

ಅರ್ಜಿಗಳನ್ನು **15 ಕೆಲಸದ ದಿನಗಳೊಳಗಾಗಿ** ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್ ಸೈಟ್ www.bbmp.gov.in (ದಯವಿಟ್ಟು ನಮ್ಮ **Home page, latest news)** ನ್ನು ಪರಿವೀಕ್ಷಿಸಿ.

ಸಹಿ/-
ಮುಖ್ಯ ಆಯುಕ್ತರು, ಬಿಬಿಎಂಪಿ

ಕರ್ನಾಟಕ ಸರ್ಕಾರ
ಸರ್ಕಾರಿ ವೈಮಾನಿಕ ತರಬೇತಿ ಶಾಲೆ
ನಿರ್ದೇಶಕರ ಕಛೇರಿ, ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು ವಿಮಾನ ನಿಲ್ದಾಣ, ಬೆಂಗಳೂರು-560064.

ಸಂಖ್ಯೆ: ಎಫ್‌ಟಿಎಸ್: 20 :ಎಡಿಎಂ: 2022-23 ದಿನಾಂಕ: 21.09.2022

ಮುಖ್ಯ ವಿಮಾನ ಭೋದಕರು, ಉಪ ಮುಖ್ಯ ವಿಮಾನ ಭೋದಕರು ಮತ್ತು ಸಹಾಯಕ ವಿಮಾನ ಭೋದಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಜಿಗಳ ಆಹ್ವಾನ

1. **ಮುಖ್ಯ ವಿಮಾನ ಬೋಧಕರ ಹುದ್ದೆಗೆ ಅರ್ಹತೆ: ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಷೇಯನ್ (DGCA) CAR SECTION-7 SERIES I PART V ISSUE II, 20th FEBRUARY 2015,** ರಲ್ಲಿನ ಅರ್ಹತೆಗಳನ್ನು ಪೂರ್ಣಗೊಳಿಸಿರಬೇಕು.
a) Should carry out patter training for the issue of AFIR (A) & FIR (A).
b) All functions of Deputy CFI.
ಸೂಚನೆ : ನಿವೃತ್ತಿ ಹೊಂದಿದ ಏರ್‌ಪೋರ್ಸ್ ಪೈಲಟ್‌ಗಳು ಸಹ ಅರ್ಜಿಗಳನ್ನು ಸಲ್ಲಿಸಬಹುದು. ಒಟ್ಟು ಹುದ್ದೆ: 1. ಗುತ್ತಿಗೆ ಅವಧಿ: 3 ವರ್ಷಗಳು.
2. **ಉಪ ಮುಖ್ಯ ವಿಮಾನ ಬೋಧಕರ ಹುದ್ದೆಗೆ ಅರ್ಹತೆ : ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಷೇಯನ್ (DGCA) CAR SECTION-7 SERIES I PART V ISSUE II, 20th FEBRUARY 2015,** ರಲ್ಲಿನ ಅರ್ಹತೆಗಳನ್ನು **ಪೂರ್ಣಗೊಳಿಸಿರಬೇಕು. ಒಟ್ಟು ಹುದ್ದೆ: 1, ಗುತ್ತಿಗೆ ಅವಧಿ : 2 ವರ್ಷಗಳು.**
3. **ಸಹಾಯಕ ವಿಮಾನ ಬೋಧಕರ ಹುದ್ದೆಗೆ ಅರ್ಹತೆ : ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಷೇಯನ್ DGCA CAR SECTION-7 SERIES I PART V ISSUE II, 30th JANUARY 2015,** ರಲ್ಲಿನ ಅರ್ಹತೆಗಳನ್ನು **ಪೂರ್ಣಗೊಳಿಸಿರಬೇಕು. ಒಟ್ಟು ಹುದ್ದೆ: 1, ಗುತ್ತಿಗೆ ಅವಧಿ : 2 ವರ್ಷಗಳು.**

ವೇತನ : ಮೇಲಿನ 3 ಹುದ್ದೆಗಳಿಗೆ ಆಯ್ಕೆಯಾಗುವ ಅರ್ಹ ಅಭ್ಯರ್ಥಿಗಳಿಗೆ ಸೂಕ್ತ ವೇತನ ನಿಗದಿಪಡಿಸಲಾಗುವುದು. ಅರ್ಜಿದಾರರು ಇ-ಮೇಲ್ ಅಥವಾ ಅಂಚೆ ಮೂಲಕ ಅರ್ಜಿಗಳನ್ನು **ದಿನಾಂಕ: 15.10.2022** ರೊಳಗೆ ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಜಕ್ಕೂರು ವಿಮಾನ ನಿಲ್ದಾಣ, ಯಲಹಂಕ ಅಂಚೆ, ಬೆಂಗಳೂರು-560064 ಇವರಿಗೆ ಕಳುಹಿಸಬೇಕು. ಇ-ಮೇಲ್ ವಿಳಾಸ : **gfts.kar@gmail.com**

ಸಹಿ/- ನಿರ್ದೇಶಕರು,
ಸರ್ಕಾರಿ ವೈಮಾನಿಕ ತರಬೇತಿ ಶಾಲೆ,
ಜಕ್ಕೂರು, ಬೆಂಗಳೂರು.

ವಾಸಾಸಂಇ/ವಾ.ಪ್ರ/2453/ಶಿರಡಿ ಸಾಯಿ/2022-23

ಚೆಕ್‌ಗೆ ಸಹಿ ಕೋರಿದ ಮುರುಘಾ ಶ್ರೀ ಅರ್ಜಿ ● ಷರತ್ತುಬದ್ಧ ತಾತ್ಕಾಲಿಕ ಅನುಮತಿ

3 ದಿನ ಅವಕಾಶ ನೀಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠದಿಂದ ವಿಚಾರಣೆ
- ಅಕ್ಟೋಬರ್ 3, 6 ಮತ್ತು 10ರಂದು ಸಹಿ ಮಾಡಲು ಅನುಮತಿ
- ಚೆಕ್‌ಗಳ ವಿವರ ಪರಿಶೀಲನೆಗೂ ಆದೇಶ

ಬೆಂಗಳೂರು: ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಕಾರಣಕ್ಕೆ ಪೋಕ್ಸೊ ಮತ್ತು ಎಸ್ಸಿ-ಎಸ್ಟಿ ಜಾತಿನಿಂದನೆ ಆರೋಪದಡಿ ನ್ಯಾಯಾಂಗ ಬಂಧನಕ್ಕೆ ಒಳಗಾಗಿ ಜೈಲಿನಲ್ಲಿರುವ ಚಿತ್ರದುರ್ಗದ ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ಬೃಹನ್ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾಶರಣರು ಜೈಲಿನಿಂದಲೇ ಬ್ಯಾಂಕ್ ಖಾತೆಯ ಚೆಕ್‌ಗಳಿಗೆ ಸಹಿ ಮಾಡಲು ಅವಕಾಶ ನೀಡಬೇಕು ಎಂಬ ಕೋರಿಕೆಗೆ ಹೈಕೋರ್ಟ್ ಷರತ್ತುಬದ್ಧ ತಾತ್ಕಾಲಿಕ ಅನುಮತಿ ನೀಡಿದೆ.

ಈ ಸಂಬಂಧ ಆರೋಪಿ ಶಿವಮೂರ್ತಿ ಶರಣರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಲೇವಾರಿ ಮಾಡಿತು. ವಿಚಾರಣೆ ವೇಳೆ ಶರಣರ ಪರ ಹಾಜರಾಗಿದ್ದ ವಕೀಲ ಸ್ವಾಮಿನಿ ಗಣೇಶ್ ಮೋಹನಂಬಾಳ್, ಶರಣರು ಯಾವುದಾದರೂ ಚೆಕ್‌ಗಳಿಗೆ ಸಹಿ ಮಾಡುತ್ತಾರೆ ಎಂಬ ಪರಿಸ್ಥಿತಿ ದಾಖಲೆಗಳನ್ನು ನ್ಯಾಯಪೀಠಕ್ಕೆ ಮಂಡಿಸಿದರು. ಅಂತೆಯೇ, ಶರಣರ ಪರ ಮತ್ತೊಬ್ಬ ವಕೀಲ ಸಂದೀಪ್ ಪಾಟೀಲ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿ, ಒಂದು ಬಾರಿಗೆ ಮಾತ್ರವೇ ಚೆಕ್‌ಗಳಿಗೆ ಸಹಿ ಮಾಡಲು ಅವಕಾಶ ನೀಡುವಂತೆ ಮನವಿ ಮಾಡಿದರು.

ದಾಖಲೆಗಳ ಮೇಲೆ ಕಣ್ಣಾಡಿಸಿದ ನ್ಯಾಯಪೀಠ, 'ಎಲ್ಲಾ ಚೆಕ್‌ಗಳು ಬರೀ ಸೆಲ್ಫ್ ಖಾತ್ಯಾ ಇವೆಯಲ್ಲ' ಎಂದು ಮತ್ತೊಮ್ಮೆ ಅನುಮಾನ ವ್ಯಕ್ತಪಡಿಸಿ, ಜ್ಞಾಪನಾ ಪತ್ರವನ್ನು (ಮೆಮೊ) ಕೂಲಂಕಷವಾಗಿ ಪರಿಶೀಲಿಸಿತು. ನಂತರ, 'ಎಸ್‌ಜೆಎಂ ವಿದ್ಯಾಸಂಸ್ಥೆಯ ನೌಕರರು ಯಾವುದೇ ಕಾರಣಕ್ಕೂ ಸಂಬಳವಿಲ್ಲದೆ ಬಳಲಬಾರದು. ಇದು ಕೋರ್ಟ್‌ನ ಕಾಳಜಿ. ಆದ್ದರಿಂದ, ತಾತ್ಕಾಲಿಕವಾಗಿ ಈ ಅನುಮತಿ ನೀಡಲಾಗುತ್ತಿದೆ' ಎಂದು ಅಕ್ಟೋಬರ್ 3, 6 ಮತ್ತು 10ರಂದು ಮೂರು ದಿನಗಳ ಕಾಲ ಚೆಕ್‌ಗಳಿಗೆ ಸಹಿ ಮಾಡಲು ಅವಕಾಶ ನೀಡಿ ಆದೇಶಿಸಿತು.

'ಅರ್ಜಿದಾರರು ಸಹಿ ಮಾಡಿದ ಚೆಕ್‌ಗಳ ವಿವರವನ್ನು ಸ್ಥಳೀಯ ತನಿಖಾಧಿಕಾರಿಗಳಿಗೆ ನೀಡಬೇಕು. ತನಿಖಾಧಿಕಾರಿ ಈ ದಾಖಲೆಗಳನ್ನು ಪೋಕ್ಸೊ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಚಾರಣಾ ನ್ಯಾಯಾಲಯಕ್ಕೆ ಒಪ್ಪಿಸಬೇಕು' ಎಂದು ನಿರ್ದೇಶಿಸಿತು. ಪ್ರಾಸಿಕ್ಯೂಷನ್ ಪರ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಕಿರಣ್ ಜವಳಿ ಹಾಜರಾಗಿದ್ದರು.

ಪ್ರಕರಣವೇನು?: 'ಮಠದ ದೈನಂದಿನ ವ್ಯವಹಾರಗಳಿಗೆ ಅನುಕೂಲವಾಗಿ ಮತ್ತು ಮಠದ ಸಿಬ್ಬಂದಿಯ ಸಂಬಳ ವಿಧಾನಗಳ ಸಂಬಂಧಿಸಿದ ಚೆಕ್ ಮತ್ತು ಇತರೆ ದಾಖಲೆಗಳಿಗೆ ಜೈಲಿನಿಂದಲೇ ಸಹಿ ಮಾಡಲು ಅವಕಾಶ ಕಲ್ಪಿಸಬೇಕು' ಎಂದು ಶರಣರು ಹೈಕೋರ್ಟ್‌ನಲ್ಲಿ ಈ ಮೇಲ್ಮನವಿ ಸಲ್ಲಿಸಿದ್ದರು.

6 ತಿಂಗಳಲ್ಲಿ 2 ಕೋಟಿ ಡೋಸ್

ಸೋಂಕಿತರ ಸಂಖ್ಯೆ ಇಳಿಕೆಯಿಂದ ಲಸಿಕೆಗೆ ನೀರಸ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಕೋವಿಶೀಲ್ಡ್ ಅಧಿಕ

ರಾಜ್ಯದಲ್ಲಿ ಈವರೆಗೆ ವಿತರಿಸಲಾದ ಲಸಿಕೆಯಲ್ಲಿ ಬಹುತೇಕರಿಗೆ ಕೋವಿಶೀಲ್ಡ್ ಲಸಿಕೆ ನೀಡಲಾಗಿದೆ. 9.56 ಕೋಟಿ ಡೋಸ್‌ಗಳು ಕೋವಿಶೀಲ್ಡ್, 1.98 ಕೋಟಿ ಡೋಸ್‌ಗಳು ಕೋವ್ಯಾಕ್ಸಿನ್ ಹಾಗೂ 43.64 ಲಕ್ಷ ಡೋಸ್‌ಗಳು ಕೋರ್ಬಿವ್ಯಾಕ್ಸ್ ಲಸಿಕೆ ವಿತರಿಸಲಾಗಿದೆ.

ಆರೋಗ್ಯ ಕಾರ್ಯಕರ್ತರಲ್ಲಿ 7.63 ಲಕ್ಷ ಮಂದಿ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.48 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ ಕ್ರಮವಾಗಿ 5.28 ಹಾಗೂ 5.89 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಹಾಕಿಸಿಕೊಂಡಿದ್ದಾರೆ. 18 ರಿಂದ 60 ವರ್ಷದೊಳಗಿನವರಲ್ಲಿ 51.10 ಲಕ್ಷ ಮಂದಿ ಹಾಗೂ 60 ವರ್ಷಗಳ ಮೇಲ್ಪಟ್ಟವರಲ್ಲಿ 35.27 ಲಕ್ಷ ಮಂದಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದಿದ್ದಾರೆ.

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಯ ಒಟ್ಟು ಡೋಸ್‌ಗಳ ವಿತರಣೆ 12 ಕೋಟಿ ದಾಟಿದೆ. ಒಂದು ವರ್ಷದ ಒಂದು ತಿಂಗಳಲ್ಲಿ 10 ಕೋಟಿ ಡೋಸ್‌ಗಳಷ್ಟು ಲಸಿಕೆ ವಿತರಿಸಿದರೆ, ಮುಂದಿನ ಆರು ತಿಂಗಳು ಕೇವಲ ಎರಡು ಕೋಟಿ ಡೋಸ್‌ಗಳಷ್ಟು ಲಸಿಕೆ ನೀಡಲಾಗಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಕಳೆದ ಏಪ್ರಿಲ್‌ನಿಂದ ಇಳಿಕೆ ಕಂಡಿದ್ದರಿಂದ ಲಸಿಕೆಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಜ್ಯದಲ್ಲಿ 2021ರ ಜ. 16ರಂದು ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. ಈವರೆಗೆ 5.51 ಕೋಟಿಗೂ ಹೆಚ್ಚು ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಅನ್ಯ ರಾಜ್ಯಗಳಿಂದ ಉದ್ಯೋಗ ಸೇರಿ ವಿವಿಧ ಕಾರಣಗಳಿಗೆ ವಲಸೆ ಬಂದವರಿಗೂ ಇಲ್ಲಿ ಲಸಿಕೆ ಒದಗಿಸಲಾಗಿದೆ. ಇದರಿಂದಾಗಿ ಮೊದಲ ಡೋಸ್ ಪಡೆದವರಿಗಿಂತ ಎರಡನೇ ಡೋಸ್ ಪಡೆದವರ ಸಂಖ್ಯೆ (5.51 ಕೋಟಿ) ಅಧಿಕವಿದೆ. ಮೊದಲೆರಡು ಡೋಸ್ ವಿತರಣೆಯಲ್ಲಿ ಶೇ 100ರಷ್ಟು ಗುರಿ ಸಾಧನೆ ಸಾಕಾರವಾಗಿದೆ.

ರಾಜ್ಯದಲ್ಲಿ ಸದ್ಯ 66 ಖಾಸಗಿ ಸೇರಿ 2,504 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಿಸಲಾಗುತ್ತಿದೆ. 2022ರ ಜ.10ರಿಂದ ಮೂರನೇ ಡೋಸ್ ಲಸಿಕೆ ವಿತರಿಸಲಾಗುತ್ತಿದೆ. ಎರಡು ಡೋಸ್ ಪಡೆದು ಆರು ತಿಂಗಳಾದವರಿಗೆ ಮತ್ತೊಂದು ಡೋಸ್ ಲಸಿಕೆ ನೀಡಲಾಗುತ್ತಿದೆ. ಈವರೆಗೆ 97.90 ಲಕ್ಷ ಮಂದಿ ಮೂರನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

6 ಹಿರಿಯ ನಾಗರಿಕರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ರಾಜ್ಯದ 6 ಹಿರಿಯ ನಾಗರಿಕರು, ಒಂದು ಸಂಸ್ಥೆಗೆ ಪ್ರಶಸ್ತಿ ಒಲಿದು ಬಂದಿದೆ.

ಶಿಕ್ಷಣ, ಸಾಹಿತ್ಯ, ಕಲೆ, ಸಮಾಜಸೇವೆ, ಕ್ರೀಡೆ ಮತ್ತು ಕಾನೂನು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದಿರುವ ಈ ಸಾಧಕರಿಗೆ ಮತ್ತು ಒಂದು ಸಂಸ್ಥೆಗೆ ಪ್ರಶಸ್ತಿ ನೀಡಲಾಗಿದೆ. ರವೀಂದ್ರ ಕಲಾಕ್ಷೇತ್ರದಲ್ಲಿ ಅ.1 ರಂದು ಬೆಳಿಗ್ಗೆ 10.30ಕ್ಕೆ ನಡೆಯುವ ವಿಶ್ವ ಹಿರಿಯರ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಿರಿಯ ನಾಗರಿಕ ಸಬಲೀಕರಣ ಸಚಿವ ಹಾಲಪ್ಪ ಆಚಾರ್ ಮಾಹಿತಿ ನೀಡಿದರು.

ಪ್ರಶಸ್ತಿ ₹ 1 ಲಕ್ಷ ನಗದು ಪುರಸ್ಕಾರ ಒಳಗೊಂಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡುವರು. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎ.ನಾರಾಯಣಸ್ವಾಮಿ, ರಾಜೀವ್ ಚಂದ್ರಶೇಖರ್ ಉಪಸ್ಥಿತರಿರುವರು.

ಪ್ರಶಸ್ತಿ ಪುರಸ್ಕೃತರು
● ಎಂ.ಎಂ.ಬೋಪಯ್ಯ, ವಿರಾಜಪೇಟೆ (ಶಿಕ್ಷಣ)
● ಡಾ.ಬಿ.ಕೆ.ಬಸವರಾಜ ರಾಜಋಷಿ, ಹುಬ್ಬಳ್ಳಿ (ಸಾಹಿತ್ಯ)
● ವೆಂಕಪ್ಪ ಅಂಬಾಜಿ ಸುಗತೇಕರ, ಬಾಗಲಕೋಟೆ (ಕಲಾ)
● ಡಾ.ಕೆ.ಜಿ.ಕುಲಕರ್ಣಿ, ಕೊಪ್ಪಳ (ಸಮಾಜಸೇವೆ)
● ವಿಜಯಾ ರಮೇಶ್, ಮೈಸೂರು (ಕ್ರೀಡೆ)
● ಡಾ. ಕೋಡೂರು ವೆಂಕಟೇಶ್, ಬೆಂಗಳೂರು (ಕಾನೂನು)
● ಸಾವಿತ್ರಮ್ಮ ರಾಮಶರ್ಮ ಸೇವಾ ಟ್ರಸ್ಟ್, ಬಸವಾನಿ, ತೀರ್ಥಹಳ್ಳಿ (ಸಂಸ್ಥೆ)

ಅತ್ತಿಬೆಲೆ ಸಾರಿಗೆ ಇಲಾಖೆ ಚೆಕ್‌ಪೋಸ್ಟ್ ಮೇಲೆ ಲೋಕಾಯುಕ್ತ ದಾಳಿ

ಆನೇಕಲ್: ತಾಲ್ಲೂಕಿನ ಅತ್ತಿಬೆಲೆಯ ಸಾರಿಗೆ ಇಲಾಖೆಯ ಚೆಕ್‌ಪೋಸ್ಟ್ ಮೇಲೆ ಲೋಕಾಯುಕ್ತ ಎಸ್ಪಿ ಜೋಶಿ ಶ್ರೀನಾಥ್ ಮಹಾದೇವ್ ಅವರ ನೇತೃತ್ವದಲ್ಲಿ ಲೋಕಾಯುಕ್ತ ಅಧಿಕಾರಿಗಳ ತಂಡ ಬೆಳ್ಳಂಬೆಳಿಗ್ಗೆ ದಾಳಿ ನಡೆಸಿ ದಾಖಲೆಗಳನ್ನು ಪರಿಶೀಲಿಸಿತು.

ಲೋಕಾಯುಕ್ತ ಅಧಿಕಾರಿಗಳನ್ನು ಗಮನಿಸಿದ ಹಿರಿಯ ಮೋಟಾರ್ ವಾಹನ ನಿರೀಕ್ಷಕಿ ಲಕ್ಷ್ಮಿ ಎಂಬುವರು ಚೆಕ್ ಪೋಸ್ಟ್‌ನ ಕಿಟಕಿಯಿಂದ ₹14 ಸಾವಿರ ಅಕ್ರಮ ಹಣವನ್ನು ಹೊರಗೆ ಎಸೆದಿದ್ದರು. ಇದನ್ನು ಗಮನಿಸಿದ ಅಧಿಕಾರಿಗಳು ಕಚೇರಿಯಿಂದ ಹೊರ ಹೋಗಿ ಪರಿಶೀಲಿಸಿ ಹಣವನ್ನು ವಶಕ್ಕೆ ಪಡೆದರು. ಈ ವೇಳೆ ₹62,227 ಅಕ್ರಮ ಹಣ ಪತ್ತೆಯಾಗಿದೆ ಎಂದು ಗೊತ್ತಾಗಿದೆ.

ಇತ್ತೀಚೆಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರು ವಿಜಯಪುರಕ್ಕೆ ಭೇಟಿ ನೀಡಿದ್ದಾಗ ಪ್ರಾದೇಶಿಕ ಸಾರಿಗೆ ಇಲಾಖೆಯ ಚೆಕ್‌ಪೋಸ್ಟ್‌ಗಳಲ್ಲಿ ನಡೆಯುತ್ತಿರುವ ಅವ್ಯವಹಾರ ಅಕ್ರಮಗಳ ಬಗ್ಗೆ ಮೌಖಿಕವಾಗಿ ದೂರು ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗಿನ ಜಾವ 4.30ರಿಂದ ರಾಜ್ಯದ ವಿವಿಧ ಚೆಕ್‌ಪೋಸ್ಟ್‌ಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದರು.

ಬ್ರಾಹ್ಮಣ ಮಹಾಸಭಾ: ಸದ್ಭಾವನಾ ಪಾದಯಾತ್ರೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅ.2ರಂದು ಚಿಕ್ಕಬಳ್ಳಾಪುರದ ಗೌರಿಬಿದನೂರಿನಿಂದ ವಿದುರಾಶ್ವತ್ಥಕ್ಕೆ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, 'ದೇಶಕ್ಕಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟು, ಹುತಾತ್ಮರಾದ ಸ್ವಾತಂತ್ರ್ಯ ಯೋಧರಿಗೆ ಗೌರವ ಸಲ್ಲಿಸಲು ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಇದು ಪಕ್ಷಾತೀತ ಮತ್ತು ಜಾತ್ಯಾತೀತ ಕಾರ್ಯಕ್ರಮವಾಗಿದೆ. ಗೌರಿಬಿದನೂರಿನ ನ್ಯಾಷನಲ್ ಕಾಲೇಜು ಆವರಣದಲ್ಲಿ ಬೆಳಿಗ್ಗೆ 8.30ಕ್ಕೆ ಪಾದಯಾತ್ರೆ ಆರಂಭವಾಗಲಿದೆ. ಯದುಗಿರಿ ಯತಿರಾಜ ಮಠದ ಯದುಗಿರಿ ಯತಿರಾಜ ನಾರಾಯಣ ಜೀಯರ್ ಸ್ವಾಮೀಜಿ ಚಾಲನೆ ನೀಡಲಿದ್ದಾರೆ. ಏಳು ಕಿ.ಮೀ. ದೂರ ಕ್ರಮಿಸಿ, ವಿದುರಾಶ್ವತ್ಥದ ಸ್ವಾತಂತ್ರ್ಯ ಯೋಧರ ಸ್ಮಾರಕ ತಲುಪಿ, ಸ್ವಾತಂತ್ರ್ಯ ಚಳವಳಿಯಲ್ಲಿ ಬಲಿದಾನ ಮಾಡಿದ ವೀರ ಯೋಧರಿಗೆ ಗೌರವ ಸಲ್ಲಿಸಲಾಗುವುದು' ಎಂದು ಹೇಳಿದರು.

'ಈ ಪಾದಯಾತ್ರೆಯಲ್ಲಿ ಮಠಾಧೀಶರು, ರಾಜಕೀಯ ಮುಖಂಡರು ಸೇರಿ ವಿವಿಧ ಕ್ಷೇತ್ರಗಳ ಪ್ರಮುಖರು ಪಾಲ್ಗೊಳ್ಳಲಿದ್ದಾರೆ. 3 ಸಾವಿರಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸುವ ನಿರೀಕ್ಷೆಯಿದೆ. ಪಾದಯಾತ್ರೆ ಸಾಗುವ ದಾರಿಯುದ್ದಕ್ಕೂ ವಿವಿಧ ಕಲಾತಂಡದವರು ಭಾಗವಹಿಸಿ, ದೇಶಭಕ್ತಿ ಗೀತೆಗಳನ್ನು ಹಾಡಲಿದ್ದಾರೆ' ಎಂದು ತಿಳಿಸಿದರು.

ಕಬಡ್ಡಿ: ಸೇಂಟ್ ಅಂಥೋನಿ ಕಾಲೇಜಿಗೆ ಪ್ರಶಸ್ತಿ

ಬೆಂಗಳೂರು: ಸೇಂಟ್ ಅಂಥೋನಿ ಕಾಲೇಜಿನ ಬಾಲಕ ಮತ್ತು ಬಾಲಕಿಯರ ತಂಡಗಳು ಇಲ್ಲಿ ನಡೆದ ಜಿಲ್ಲಾಮಟ್ಟದ ಕಬಡ್ಡಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಪಿಇಎಸ್ ಕಾಲೇಜು ಮತ್ತು ಬೆಂಗಳೂರು ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆ ಸಹಯೋಗದಲ್ಲಿ ವಿದ್ಯಾಪೀಠ ವೃತ್ತದ ಬಳಿಯ ಶಂಕರ್‌ನಾಗ್ ಕ್ರೀಡಾಂಗಣದಲ್ಲಿ ಇತ್ತೀಚೆಗೆ ಟೂರ್ನಿ ನಡೆದಿತ್ತು.

ಫೈನಲ್‌ನಲ್ಲಿ ಸೇಂಟ್ ಅಂಥೋನಿ ಬಾಲಕರ ತಂಡವು ಬಿಇಎಸ್ ಕಾಲೇಜು ತಂಡವನ್ನು ಮಣಿಸಿತು. ಬಾಲಕಿಯರ ವಿಭಾಗದಲ್ಲಿ ಎಚ್‌ಎಸ್‌ಆರ್ ಬಡಾವಣೆಯ ಬಿಬಿಎಂಪಿ ಕಾಲೇಜಿನ ಬಾಲಕಿಯರ ತಂಡವು 2ನೇ ಸ್ಥಾನ ಗಳಿಸಿತು.

ವಿಜೇತರಿಗೆ ಅಂತರರಾಷ್ಟ್ರೀಯ ಮಾಜಿ ಕಬಡ್ಡಿ ಪಟು ಬಿ.ಸಿ. ರಮೇಶ್ ಟ್ರೋಫಿ ವಿತರಿಸಿದರು. ಪಿಇಎಸ್ ವಿಶ್ವವಿದ್ಯಾಲಯದ ಕ್ರೀಡಾ ನಿರ್ದೇಶಕ ಎಂ.ಎಸ್. ವಿನಯ್ ಮತ್ತಿತರರು ಈ ಸಂದರ್ಭದಲ್ಲಿ ಇದ್ದರು.

ದಸರಾ, ದೀಪಾವಳಿಗೆ ನಾಲ್ಕು ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಮತ್ತು ದೀಪಾವಳಿ ಪ್ರಯುಕ್ತ ಇನ್ನೂ ನಾಲ್ಕು ವಿಶೇಷ ರೈಲುಗಳ ಕಾರ್ಯಾಚರಣೆಗೆ ನೈರುತ್ಯ ರೈಲ್ವೆ ವ್ಯವಸ್ಥೆ ಮಾಡಿದೆ.

ಯಶವಂತಪುರ-ಕಣ್ಣೂರು, ಬೆಂಗಳೂರು ಕಂಟೋನ್ಮೆಂಟ್-ವಿಶಾಖಪಟ್ಟಣ, ಯಶವಂತಪುರ-ನರಸಾಪುರ, ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್-ಜಸಿಡೀಹ್‌ಗೆ(ಜಾರ್ಖಂಡ್) ವಿಶೇಷ ರೈಲುಗಳು ಸಂಚರಿಸಲಿವೆ.

ಯಶವಂತಪುರ-ಕಣ್ಣೂರು ವಿಶೇಷ ರೈಲು(06283/06284) ಯಶವಂತಪುರದಿಂದ ಅ.5ರಂದು ಬೆಳಿಗ್ಗೆ 7.10ಕ್ಕೆ ಹೊರಟು ಅದೇ ದಿನ ರಾತ್ರಿ 8.30ಕ್ಕೆ ಕಣ್ಣೂರು ತಲುಪಲಿದೆ. ಕಣ್ಣೂರಿನಿಂದ ರಾತ್ರಿ 11ಕ್ಕೆ ಹೊರಟು ಮರುದಿನ ಮಧ್ಯಾಹ್ನ 1 ಗಂಟೆಗೆ ಯಶವಂತಪುರಕ್ಕೆ ಬರಲಿದೆ.

ಕಂಟೋನ್ಮೆಂಟ್-ವಿಶಾಖಪಟ್ಟಣ ರೈಲು(08543/08544) ಅ.2ರಿಂದ ಅ.30ರವರೆಗೆ ವಾರಕ್ಕೊಮ್ಮೆ(ಭಾನುವಾರ) ಕಾರ್ಯಾಚರಣೆ ಮಾಡಲಿದೆ. ಮಧ್ಯಾಹ್ನ 3.50ಕ್ಕೆ ವಿಶಾಖಪಟ್ಟಣದಿಂದ ಹೊರಟು ಮರುದಿನ ಬೆಳಿಗ್ಗೆ 9.15ಕ್ಕೆ ಕಂಟೋನ್ಮೆಂಟ್ ನಿಲ್ದಾಣ ತಲುಪಲಿದೆ. ಅದೇ ರೀತಿ ಸೋಮವಾರ 3.50ಕ್ಕೆ ಕಂಟೋನ್ಮೆಂಟ್ ನಿಲ್ದಾಣದಿಂದ ಹೊರಟು ಮರುದಿನ ಬೆಳಿಗ್ಗೆ 11ಕ್ಕೆ ವಿಶಾಖಪಟ್ಟಣ ತಲುಪಲಿದೆ.

ನರಸಾಪುರ (ತೆಲಂಗಾಣ) - ಯಶವಂತಪುರ ವಿಶೇಷ ರೈಲು (07153/07154) ಅ.2ರಂದು ಮಧ್ಯಾಹ್ನ 3.10ಕ್ಕೆ ನರಸಾಪುರದಿಂದ ಹೊರಟು ಮರುದಿನ ಬೆಳಿಗ್ಗೆ 10.50ಕ್ಕೆ ಯಶವಂತಪುರಕ್ಕೆ ಬರಲಿದೆ. ಅದೇ ರೀತಿ ಸೋಮವಾರ ಮಧ್ಯಾಹ್ನ 3.50ಕ್ಕೆ ಯಶವಂಪುರದಿಂದ ಹೊರಟು ನರಸಾಪುರಕ್ಕೆ ಬೆಳಿಗ್ಗೆ 8.30ಕ್ಕೆ ತಲುಪಲಿದೆ.

ವಾರಕ್ಕೊಮ್ಮೆ ಕಾರ್ಯಾಚರಣೆ ಮಾಡುವ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್-ಜಸಿಡೀಹ್ ರೈಲು (22306/22305), ಜಸಿಡೀಹ್‌ನಿಂದ ಪ್ರತಿ ಶುಕ್ರವಾರ ಬೆಳಿಗ್ಗೆ 6.30ಕ್ಕೆ ಹೊರಟು ಶನಿವಾರ ರಾತ್ರಿ 8.15ಕ್ಕೆ ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಬರಲಿದೆ. ವಿಶ್ವೇಶ್ವರಯ್ಯ ನಿಲ್ದಾಣದಿಂದ ಭಾನುವಾರ ಬೆಳಿಗ್ಗೆ 10ಕ್ಕೆ ಹೊರಟು ಮಂಗಳವಾರ ರಾತ್ರಿ 12.55ಕ್ಕೆ ಜಸಿಡೀಹ್ ತಲುಪಲಿದೆ ಎಂದು ನೈರುತ್ಯ ರೈಲ್ವೆ ವೇಳಾಪಟ್ಟಿ ವಿವರಿಸಿದೆ.

ವಚನಜ್ಯೋತಿ ಬಳಗ ಆಯೋಜಿಸಿರುವ ವಚನ ನವರಾತ್ರಿಯ ಉದ್ಘಾಟನೆಯಲ್ಲಿ ವಚನ ಕಲಿಕಾ ಗುರುಗಳಾದ ಮೀನಾಕ್ಷಿ ಮೇಟಿ ಮತ್ತು ಟಿ.ಎಂ. ಜಾನಕಿ ಅವರನ್ನು ಗೌರವಿಸಲಾಯಿತು. ಬಳಗದ ಅಧ್ಯಕ್ಷ ಪಿನಾಕಪಾಣಿ, ವೀರಶೈವ ಮಹಾಸಭಾ ಮಹಿಳಾ ಅಧ್ಯಕ್ಷೆ ಡಾ. ಅನುಪಮ, ಬಳಗದ ಪ್ರಭು ಇಸುವನಹಳ್ಳಿ, ಚಿ. ಪ್ರದ್ಯೋತ್, ಸಂಚಾಲಕಿ ಮಧು ಶಿವಕುಮಾರ್ ಇದ್ದಾರೆ

ವಚನ ನವರಾತ್ರಿಯೇ ಸೊಗಸು

ಬೆಂಗಳೂರು: ಕನ್ನಡದ ಸ್ವಯಾರ್ಜಿತ, ಸಾಂಸ್ಕೃತಿಕ ಸಂಪತ್ತಾದ ವಚನಗಳ ಮೂಲಕ ನವರಾತ್ರಿಯನ್ನು ಆಚರಿಸುತ್ತಿರುವುದು ಬಹು ಸೊಗಸು ಎಂದು ವೀರಶೈವ ಮಹಾಸಭಾ ಮಹಿಳಾ ಘಟಕದ ಅಧ್ಯಕ್ಷೆ ಡಾ. ಅನುಪಮ ಪಂಚಾಕ್ಷರಿ ಹೇಳಿದರು.

ವಚನಜ್ಯೋತಿ ಬಳಗ ರಾಜಧಾನಿಯ ಕಲ್ಯಾಣ ಪಟ್ಟಣದಲ್ಲಿ ವಚನ ನವರಾತ್ರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕ್ಷುಲ್ಲಕ ಕಾರಣಗಳಿಗಾಗಿ ಯುವಜನರು, ಮಕ್ಕಳು ಆತ್ಮಹತ್ಯೆಯತ್ತ ಸಾಗುತ್ತಿರುವಾಗ, ವಚನಗಳ ಮೂಲಕ ಆತ್ಮಸ್ಥೈರ್ಯ, ಸಾಂತ್ವನವನ್ನು ಹೇಳಲು ವಚನ ಕಲಿಕಾ ತರಗತಿಗಳು, ವಚನ ನವರಾತ್ರಿಗಳು ಬಹು ಸಹಾಯಕ ಹಾಗೂ ಅರ್ಥಪೂರ್ಣವಾಗಿವೆ' ಎಂದು ವಿಶ್ಲೇಷಿಸಿದರು.

ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ ಮಾತನಾಡಿ, 'ಭಕ್ತಿ ಲೋಲುಪತೆಯಲ್ಲಿ ನವರಾತ್ರಿ ಮುಳುಗುತ್ತಿದೆ. ಹಾಗಾಗಿ ನವರಾತ್ರಿಯನ್ನು ವಿಚಾರವಂತಿಕೆಯ, ಕಾಯಕಶೀಲತೆಯ ವಚನ ನವರಾತ್ರಿಯನ್ನಾಗಿ ಆಚರಿಸುತ್ತಿದೆ. ವಚನಕಾರ್ತಿಯರ ಪರಿಚಯವನ್ನು ಮನೆಯೊಳಗೆ ಮರೆಯಾಗಿರುವ ಗೃಹಿಣಿಯರೇ ಮಾಡಿಕೊಡುತ್ತಿದ್ದಾರೆ. ರಾಜಧಾನಿಯ ವಿವಿಧ ಮಹಿಳಾ ಬಳಗಗಳು ವಚನ ಗಾಯನ ನಡೆಸಿಕೊಡುತ್ತಿವೆ' ಎಂದು ತಿಳಿಸಿದರು.

27 ವಾರಗಳು ವಚನ ಕಲಿಸಿದ ಮೀನಾಕ್ಷಿ ಮೇಟಿ ಮತ್ತು ಟಿ.ಎಂ. ಜಾನಕಿ ಅವರನ್ನು ಗೌರವಿಸಲಾಯಿತು. ವಚನ ಕಲಿಕಾ ತರಗತಿಯ ಹಿರಿಯ ವಿದ್ಯಾರ್ಥಿನಿ ಕಾತ್ಯಾಯಿನಿ ಅಕ್ಕಮ್ಮನ ಪರಿಚಯ ಮಾಡಿಕೊಟ್ಟರು. ಬಳಗದ ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ಸಹ ಕಾರ್ಯದರ್ಶಿ ಪ್ರಸನ್ನ, ವಚನ ನವರಾತ್ರಿಯ ಪ್ರಧಾನ ಸಂಚಾಲಕ ದಿವಾಕರ್, ನಿವೃತ್ತ ಯೋಧ ಗಂಗಾಧರ್, ಜನಪದ ಗಾಯಕಿ ಶಕುಂತಲ ಬಾಗಲಕೋಟ್ ಮತ್ತಿತರರು ಉಪಸ್ಥಿತರಿದ್ದರು.

ಫ್ರೀಡಂ ಕಮ್ಯುನಿಟಿ ಹಾಲ್‌ಗೆ ಬೀಗಮುದ್ರೆ

ಪ್ರಜಾವಾಣಿ ವಾರ್ತೆ

ಸಭಾಂಗಣದ ಟ್ರಸ್ಟಿ ಬಂಧನ

ಬೆಂಗಳೂರಿನ ಕೆ.ಜೆ.ಹಳ್ಳಿ ಮತ್ತು ಡಿ.ಜೆ.ಹಳ್ಳಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿಯೂ ಮಿತ್ತೂರು ಕಮ್ಯೂನಿಟಿ ಹಾಲ್‌ನಲ್ಲಿ ಬೆಂಗಳೂರು ಪೊಲೀಸರು ಶೋಧಕಾರ್ಯ ನಡೆಸಿದರು.

'ಈ ಸಭಾಂಗಣದ ಆಡಳಿತ ಮಂಡಳಿಯ ಟ್ರಸ್ಟಿಯೊಬ್ಬನನ್ನು ಬೆಂಗಳೂರಿನ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಅಯಾಜ್ ಎಂದು ಗುರುತಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎನ್ನಲಾದ ಇನ್ನೊಬ್ಬ ಟ್ರಸ್ಟಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಟ್ಲ (ದಕ್ಷಿಣ ಕನ್ನಡ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಂದಿದ್ದ ಒಂದೊಂದೇ ಕಚೇರಿಗಳಿಗೆ ಪೊಲೀಸ್ ಅಧಿಕಾರಿಗಳು ಬೀಗಮುದ್ರೆ ಹಾಕುತ್ತಿದ್ದಾರೆ. ಜಿಲ್ಲೆಯ ಮಿತ್ತೂರಿನಲ್ಲಿರುವ 'ಫ್ರೀಡಂ ಕಮ್ಯುನಿಟಿ ಹಾಲ್'ಗೆ ಪೊಲೀಸರು ಶುಕ್ರವಾರ ಬೀಗ ಹಾಕಿದ್ದಾರೆ.

'ಪಿಎಫ್‌ಐ ಸಂಘಟನೆಯವರು ಬಳಸುತ್ತಿದ್ದ ಕಚೇರಿಗಳಲ್ಲಿ ಶೋಧ ನಡೆಸಿ, ಕಚೇರಿಗಳಿಗೆ ಬೀಗ ಹಾಕುತ್ತಿದ್ದೇವೆ. ಮಿತ್ತೂರಿನ ಫ್ರೀಡಂ ಕಮ್ಯುನಿಟಿ ಹಾಲ್ ಅನ್ನೂ ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಮುಚ್ಚಿಸಿದ್ದೇವೆ. ಇದುವರೆಗೆ ಪಿಎಫ್‌ಐಗೆ ಸಂಬಂಧಿಸಿದ ಒಂಬತ್ತು ಕಟ್ಟಡಗಳಲ್ಲಿ ಶೋಧ ಕಾರ್ಯ ನಡೆಸಿ, ಸಂಘಟನೆಯ ಕಚೇರಿಗಳಿಗೆ ಬೀಗಮುದ್ರೆ ಹಾಕಿದ್ದೇವೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಪಿಎಫ್‌ಐ ಹಾಗೂ ಅದರ ಜೊತೆ ನಂಟು ಹೊಂದಿರುವ ಸಂಘಟನೆಗಳಿಗೆ ಕೇಂದ್ರ ಸರ್ಕಾರ 1967ರ ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ ಸೆಕ್ಷನ್ 3(1)ರ ಅಡಿ ನಿಷೇಧ ಹೇರಿದ ಬಳಿಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಂಘಟನೆಗಳಿಗೆ ಸೇರಿದ ಒಟ್ಟು 21 ಕಚೇರಿಗಳಿಗೆ ಇದುವರೆಗೆ ಬೀಗಮುದ್ರೆ ಹಾಕಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ಒಂಬತ್ತು ಹಾಗೂ ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ 12 ಕಚೇರಿಗಳಿಗೆ ಪೊಲೀಸರು ಬೀಗಮುದ್ರೆ ಹಾಕಿದ್ದಾರೆ.

ಎಸ್‌ಜೆಪಿ ಪಾಲಿಟೆಕ್ನಿಕ್: 48 ಸೀಟಿಗೆ 11,500 ಅರ್ಜಿ

ಬೆಂಗಳೂರು: ಜಯಚಾಮರಾಜೇಂದ್ರ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ (ಎಸ್‌ಜೆಪಿ) ವಿದೇಶಿ ಸಹಯೋಗದ ಡಿಪ್ಲೊಮಾ ಕೋರ್ಸ್‌ನ ಪ್ರವೇಶ ಬಯಸಿ 11,500ಕ್ಕೂ ಹೆಚ್ಚು (48 ಸೀಟು) ಅರ್ಜಿಗಳು ಸಲ್ಲಿಕೆಯಾಗಿವೆ.

2021-22ರ ಶೈಕ್ಷಣಿಕ ವರ್ಷದಲ್ಲಿ ಪೆನ್ಸಿಲ್ವೇನಿಯಾದ ಮಾಂಟೆ ಕಾರ್ಲೊ ವಿಶ್ವವಿದ್ಯಾಲಯ ಮತ್ತು ಹ್ಯಾರಿಸ್‌ಬರ್ಗ್ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಪ್ರವಾಸೋದ್ಯಮ ಮತ್ತು ಸೈಬರ್ ಭದ್ರತೆಯ ವಿಷಯದಲ್ಲಿ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಲಾಗಿತ್ತು. ಮೊದಲ ವರ್ಷವೇ 4 ಸಾವಿರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದರು.

ಈ 8,178 ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಅವರಲ್ಲಿ 48 ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದು ಸವಾಲಿನ ಕೆಲಸ ಎನ್ನುತ್ತಾರೆ ಕಾಲೇಜು ಆಡಳಿತ ಮಂಡಳಿ ಮುಖ್ಯಸ್ಥರು.

ಮೂರು ವರ್ಷಗಳ ಈ ಕೋರ್ಸ್‌ನ ಮೊದಲ ವರ್ಷ ಎಸ್‌ಜೆಪಿಯಲ್ಲೇ ಕಲಿಯುವ ವಿದ್ಯಾರ್ಥಿಗಳು, ಎರಡನೇ ವರ್ಷ ವಿದೇಶಿ ವಿಶ್ವವಿದ್ಯಾಲಯಗಳ ಅಧ್ಯಾಪಕರು ನಡೆಸುವ ವರ್ಚುವಲ್ ಪಾಠಗಳನ್ನು ಆಲಿಸುತ್ತಾರೆ. ಮೂರನೇ ವರ್ಷ ವಿದೇಶಿ ಕ್ಯಾಂಪಸ್‌ಗೆ ತೆರಳುತ್ತಾರೆ. ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಇಂತಹ ಅವಳಿ ಕಲಿಕೆಗೆ ಅನುಮತಿ ನೀಡಿದ್ದು, ಎಐಸಿಟಿಇ ಅನುಮೋದನೆ ಪಡೆದ ರಾಜ್ಯದ ಮೊದಲ ಕಾಲೇಜು ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ಬೆ.ವಿ.ವಿ: ವಿದ್ಯಾರ್ಥಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿ ವೇತನ ಮೊತ್ತವನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

'ಸಮಾಜ ಕಲ್ಯಾಣ ಇಲಾಖೆ ಇದುವರೆಗೂ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಿಲ್ಲ. ಇನ್ನು ಕೆಲವೇ ತಿಂಗಳಲ್ಲಿ ನಮ್ಮ ಕೋರ್ಸ್ ಸಹ ಮುಗಿಯಲಿದೆ. ಆದರೆ, ವಿದ್ಯಾರ್ಥಿ ವೇತನ ನೀಡಿಲ್ಲ' ಎಂದು ದೂರಿದರು.

ಈ ಬಗ್ಗೆ ತ್ವರಿತಗತಿಯಲ್ಲಿ ಕ್ರಮಕೈಗೊಳ್ಳುವಂತೆ ಕುಲಪತಿ ಅವರಿಗೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿದರು.

'ಸುಪ್ರೀಂ'ಗೆ ಅರ್ಜಿ ಸಲ್ಲಿಕೆಯಿಂದ ಪರಿಹಾರ ಸಿಗದು'

ನವದೆಹಲಿ (ಪಿಟಿಐ): 'ಸಮಾಜದಲ್ಲಿ ಎಲ್ಲ ಸಂದರ್ಭಗಳಲ್ಲಿಯೂ ಕೆಲವೊಂದು ಸಮಸ್ಯೆಗಳು ಇರುತ್ತವೆ. ನೇರವಾಗಿ ಸುಪ್ರೀಂ ಕೋರ್ಟ್‌ಕದ ತಟ್ಟುವುದರಿಂದ ಪ್ರತಿಯೊಂದು ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಗದು' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಇದೇ ಸಂದರ್ಭದಲ್ಲಿ ಜನಸಂಖ್ಯೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಮುಂದುವರಿಸಲು ನಿರಾಸಕ್ತಿಯನ್ನು ವ್ಯಕ್ತಪಡಿಸಿತು ಹಾಗೂ ಈ ಸಂಬಂಧ ಎಲ್ಲ ರಾಜ್ಯ ಸರ್ಕಾರಗಳಿಗೆ ನೋಟಿಸ್ ಜಾರಿಗೊಳಿಸಲು ನಿರಾಕರಿಸಿತು.

ಮದ್ರಾಸ್ ಸ್ಯಾಪರ್ಸ್ ದಿನಾಚರಣೆ

ಪ್ರಜಾವಾಣಿ ವಾರ್ತೆ

ನಗರದ ಎಂಇಜಿ ಕೇಂದ್ರದಲ್ಲಿ ಶುಕ್ರವಾರ ನಡೆದ 242ನೇ ಮದ್ರಾಸ್ ಸ್ಯಾಪರ್ಸ್ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ಕ್ಯಾಪ್ಟನ್ ಗೋವಿಂದಸ್ವಾಮಿ ಅವರ ಪುತ್ಥಳಿಯನ್ನು 'ಎಂಇಜಿ ಡ್ರಿಲ್ ಸ್ಕ್ವೇರ್' ಮೈದಾನದಲ್ಲಿ ಸ್ವತಃ ಅವರೇ ಅನಾವರಣಗೊಳಿಸಿದರು. ಕಮಾಂಡಂಟ್ ಬ್ರಿಗೇಡಿಯರ್ ಶಲಭ್ ಗುಪ್ತಾ ಇದ್ದರು.

ಬೆಂಗಳೂರು: ನಗರದ ಮದ್ರಾಸ್ ಎಂಜಿನಿಯರಿಂಗ್ (ಎಂಇಜಿ) ಕೇಂದ್ರದಲ್ಲಿ ಶುಕ್ರವಾರ 242ನೇ 'ಮದ್ರಾಸ್ ಸ್ಯಾಪರ್ಸ್ ದಿನ'ವನ್ನು ಸಂಭ್ರಮದಿಂದ ಆಚರಿಸಲಾಯಿತು.

ಎಂಇಜಿ ಯುದ್ಧ ಸ್ಮಾರಕದಲ್ಲಿ ಕಮಾಂಡಂಟ್ ಬ್ರಿಗೇಡಿಯರ್ ಶಲಭ್ ಗುಪ್ತಾ ಅವರು ಹುತಾತ್ಮ ವೀರ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ನಿವೃತ್ತ ಕ್ಯಾಪ್ಟನ್ ಗೋವಿಂದಸ್ವಾಮಿ ಅವರ ಪುತ್ಥಳಿಯನ್ನು 'ಎಂಇಜಿ ಡ್ರಿಲ್ ಸ್ಕ್ವೇರ್' ಮೈದಾನದಲ್ಲಿ ಸ್ವತಃ ಅವರೇ ಅನಾವರಣಗೊಳಿಸಿದ್ದು ಈ ಬಾರಿಯ ವಿಶೇಷವಾಗಿತ್ತು. ಯೋಧರನ್ನು ಪಥಸಂಚಲನಕ್ಕೆ ಸಜ್ಜುಗೊಳಿಸುವಲ್ಲಿ ಗೋವಿಂದಸ್ವಾಮಿ ಖ್ಯಾತಿ ಪಡೆದಿದ್ದಾರೆ. ಗೋವಿಂದಸ್ವಾಮಿ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದ ಎಂಇಜಿ ಯೋಧರು, ಗಣರಾಜ್ಯೋತ್ಸವ ಪರೇಡ್‌ನಲ್ಲಿ ಇದುವರೆಗೆ ಒಂಬತ್ತು ಬಾರಿ ಪದಕ ಪಡೆದಿದ್ದಾರೆ.

ಎಂಇಜಿ, ಭಾರತೀಯ ಸೇನೆಯ 'ಕಾರ್ಪ್ಸ್ ಆಫ್ ಎಂಜಿನಿಯರ್'ನ ಘಟಕವಾಗಿದೆ. ಮೂರು 'ಕಾರ್ಪ್ಸ್ ಆಫ್ ಎಂಜಿನಿಯರ್'ಗಳಲ್ಲೇ ಇದು ಅತ್ಯಂತ ಹಳೆಯದಾಗಿದೆ. ಎಂಇಜಿಯನ್ನು ಅನೌಪಚಾರಿಕವಾಗಿ 'ಮದ್ರಾಸ್ ಸ್ಯಾಪರ್ಸ್' ಎಂದು ಸಹ ಕರೆಯಲಾಗುತ್ತದೆ. 1780ರ ಸೆಪ್ಟೆಂಬರ್ 30ರಂದು ಎಂಇಜಿ ಸ್ಥಾಪಿಸಲಾಗಿತ್ತು. ಈ 242 ವರ್ಷಗಳಲ್ಲಿ ಜಗತ್ತಿನಾದ್ಯಂತ ನಡೆದ ಹಲವು ಯುದ್ಧಗಳಲ್ಲಿ ಎಂಇಜಿ ಯೋಧರು ಭಾಗವಹಿಸಿದ್ದಾರೆ.

ಕ್ರೀಡೆಯಲ್ಲೂ ಎಂಇಜಿ ಯೋಧರು ಅತ್ಯುತ್ತಮ ಸಾಧನೆ ತೋರಿದ್ದು, ಹಲವರು ಪದ್ಮಶ್ರೀ, ಅರ್ಜುನ, ದ್ರೋಣಾಚಾರ್ಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಯಲಹಂಕ: ದಸರಾ ಬೊಂಬೆ ಪ್ರದರ್ಶನ

ಯಲಹಂಕ: ನವರಾತ್ರಿ ಅಂಗವಾಗಿ ರಾಜಾನುಕುಂಟೆ ಸಮೀಪದ ವಿಶ್ವವಿದ್ಯಾಪೀಠ ಶಾಲೆಯಲ್ಲಿ ದಸರಾ ಬೊಂಬೆ ಪ್ರದರ್ಶನ ಮತ್ತು ದುರ್ಗಾದೇವಿ ಪೂಜೆ ನಡೆಯಿತು.

ರಾಮಾಯಣ, ಮಹಾಭಾರತ, ನೀತಿಕಥೆ ಮತ್ತು ಜನರ ಬದುಕು ಬಿಂಬಿಸುವ ಮೂರು ತಲೆಮಾರುಗಳ ಬೊಂಬೆ ಪ್ರದರ್ಶನವು ಜನರ ಗಮನ ಸೆಳೆಯಿತು.

ದುರ್ಗಾದೇವಿ ಹಾಗೂ ಚಾಮುಂಡೇಶ್ವರಿ ದೇವಿಗೆ ಹೋಮ-ಹವನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ದಸರಾ ಬಣ್ಣದ ಬೊಂಬೆಗಳು ಮಕ್ಕಳ ಕಲಿತಾ ಸಾಮರ್ಥ್ಯ ಹೆಚ್ಚಿಸುವ ನಿಟ್ಟಿನಲ್ಲಿ ಸಾಂಸ್ಕೃತಿಕ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಇಂತಹ ದಸರಾ ಬೊಂಬೆ ಪ್ರದರ್ಶನದಿಂದ ಮಕ್ಕಳಿಗೆ ನಮ್ಮ ಹಬ್ಬಗಳ ಆಚರಣೆ ಮತ್ತು ಪಾರಂಪರಿಕ ಇತಿಹಾಸದ ಬಗ್ಗೆ ತಿಳಿಸಲು ಸಹಕಾರಿಯಾಗುತ್ತದೆ ಎಂದು ಶಾಲೆಯ ನಿರ್ದೇಶಕಿ ಸುಶೀಲಾ ಸಂತೋಷ್ ತಿಳಿಸಿದರು.

ನಗರದಲ್ಲಿ ಇಂದು

'ಸ್ಮೈಲ್ ವಾಕ್' ಹಾಗೂ ವಿಶ್ವ ಹಿರಿಯರ ದಿನಾಚರಣೆ: ಆರೋಗ್ಯ ಮತ್ತು ಸಾರ್ವಜನಿಕ ಜಾಗೃತಿ ಅಭಿಯಾನ, ಆಯೋಜನೆ: ಇಂಡಿಯನ್ ಪ್ರೋಸ್ಥೋಡೋಂಟಿಕ್ ಸೊಸೈಟಿ, ಸ್ಥಳ: ಕಬ್ಬನ್ ಉದ್ಯಾನ, ಬೆಳಿಗ್ಗೆ 7

ಹೃದಯ ಸಮಸ್ಯೆಗೆ ಡಿಜಿಟಲ್ ಆವಿಷ್ಕಾರ: ಉಪಸ್ಥಿತಿ: ಬಿ.ಆರ್. ರವಿಕಾಂತೇಗೌಡ, ಡಾ. ಮನೀಷ್ ರೈ, ಆಯೋಜನೆ ಹಾಗೂ ಸ್ಥಳ: ಮಣಿಪಾಲ್ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ, ಬೆಳಿಗ್ಗೆ 10.30

ವಿಶ್ವ ಹಿರಿಯ ನಾಗರಿಕರ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಫಿಲಿಪ್ ಸಿಜೋನ್ ಅವರ 169ನೇ ಜನ್ಮದಿನಾಚರಣೆ ಅಂಗವಾಗಿ 25 ಅಡಿ ಎತ್ತರದ ಪ್ರತಿಮೆ ಅನಾವರಣ ಹಾಗೂ ಉದ್ಯಾನ ಉದ್ಘಾಟನೆ: ಅತಿಥಿಗಳು: ಸಿ. ಫ್ರಾನ್ಸಿಸ್, ಟಿ.ಎ.ನಾರಾಯಣಗೌಡ, ವ.ಚ.ಚನ್ನೇಗೌಡ, ರಫಾಯಲ್ ರಾಜ್, ಸ್ಥಳ: ಮರಿಯಾಪುರ, ತಟ್ಟುಗುಪ್ಪೆ, ಬೆಳಿಗ್ಗೆ 11.30

ನರೇಂದ್ರ ಮೋದಿ ಅವರ 72ನೇ ಜನ್ಮದಿನಾಚರಣೆ ಪ್ರಯುಕ್ತ 'ನಮೋ ಕಿಸಾನ್ ಕಪ್-2022' ಹಾಗೂ ಸೇನಾಪತಿ ಚಂದ್ರಶೇಖರ ಆಜಾದ್ ಕ್ರೀಡಾಂಗಣ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಭಾರತೀಯ ಜನತಾ ಪಕ್ಷ, ಸ್ಥಳ: ಸೇನಾಪತಿ ಚಂದ್ರಶೇಖರ್ ಆಟದ ಮೈದಾನ, ಮಲ್ಲೇಶ್ವರ, ಮಧ್ಯಾಹ್ನ 12.30

ಕೆಪಿಎಸ್‌ಸಿ 2017-18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳಿಗೆ ಅಭಿನಂದನಾ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಡಾ.ಶ್ರೀನಿವಾಸನ್, ಎಸ್. ವಿ.ರಂಗನಾಥ್, ವಿಠ್ಠಲಮೂರ್ತಿ, ಆಯೋಜನೆ: ಡಾ.ರಾಜ್‌ಕುಮಾರ್ ಸಿವಿಲ್ ಸರ್ವೀಸ್ ಅಕಾಡೆಮಿ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸಂಜೆ 4.

ಜೆ.ಎಚ್.ಪಟೇಲ್ ಜನ್ಮದಿನಾಚರಣೆ ಹಾಗೂ ಜೆ.ಎಚ್.ಪಟೇಲ್ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಗೋವಿಂದ ಕಾರಜೋಳ, ಅತಿಥಿಗಳು: ವಿ.ಸೋಮಣ್ಣ, ಜಯಪ್ರಕಾಶ ಹೆಗ್ಡೆ, ಎಸ್.ಕೆ.ಕಾಂತಾ, ಶೈಲಜಾ ಸೋಮಣ್ಣ, ಆಯೋಜನೆ: ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಸಂಜೆ 4.30

'ಏಂಗೆಲ್ಸ್ ಚಿಂತನೆಯ ಬೆಳಕಿನಲ್ಲಿ ಮಹಿಳಾ ವಿಮೋಚನೆ' ಸಂವಾದ: ಭಾಗವಹಿಸುವವರು: ಜ್ಯೋತಿ ಅನಂತಸುಬ್ಬರಾವ್, ಮೈತ್ರೇಯಿ ಕೃಷ್ಣನ್, ಕೆ.ಎಸ್. ಲಕ್ಷ್ಮಿ, 'ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವ-ಇವುಗಳ ಉಗಮ' ಪುಸ್ತಕ ಬಿಡುಗಡೆ: ಉಪಸ್ಥಿತಿ: ಎಚ್.ಜಿ.ಜಯಲಕ್ಷ್ಮಿ, ಕೆ.ಎಸ್.ವಿಮಲಾ, ವಸಂತರಾಜ ಎನ್.ಕೆ., ಸಿದ್ಧನಗೌಡ ಪಾಟೀಲ, ರಮೇಶ ಉಡುಪ, ಆಯೋಜನೆ: ನವಕರ್ನಾಟಕ, ಕ್ರಿಯಾ ಮಾಧ್ಯಮ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ನವರಾತ್ರಿ ವಿಶೇಷ ಕಾರ್ಯಕ್ರಮ

ನವರಾತ್ರಿ ಉತ್ಸವ: ಪಂಚವರ್ಣ ಅಲಂಕಾರ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ, ಆಯೋಜನೆ ಹಾಗೂ ಸ್ಥಳ: ವರಸಿದ್ಧಿ ವಿನಾಯಕ ದೇವಸ್ಥಾನ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಬೆಳಿಗ್ಗೆ 6.30ರಿಂದ

ಶರನ್ನವರಾತ್ರಿ ಹಾಗೂ ವಿಜಯದಶಮಿ: ವಿಳೆದಳೆ ಅಲಂಕಾರ, ಮಂಗಳ ದ್ರವ್ಯ ಅಭಿಷೇಕ ಹಾಗೂ ಮಹಾಮಂಗಳಾರತಿ, ಆಯೋಜನೆ ಹಾಗೂ ಸ್ಥಳ: ಯಲ್ಲಮ್ಮ ದೇವಿ ದೇವಾಲಯ, ದೇಶದಪೇಟೆ ರಸ್ತೆ, ಯಲಹಂಕ, ಬೆಳಿಗ್ಗೆ 7ರಿಂದ

ಶರನ್ನವರಾತ್ರಿ ಹಾಗೂ ವಿಜಯದಶಮಿ ಮಹೋತ್ಸವ: ವಿಶೇಷ ಅಭಿಷೇಕ, ಬಳೆ ಪದ್ಮಾವತಿ ಅಲಂಕಾರ ಹಾಗೂ ನೃತ್ಯ ಸಂಭ್ರಮ, ಆಯೋಜನೆ ಹಾಗೂ ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಬೆಳಿಗ್ಗೆ 7ರಿಂದ

ನವರಾತ್ರಿ ಉತ್ಸವ: ಮಹಾಗಣಪತಿ ಹೋಮ, ಮಹಾನವಗ್ರಹ ಹೋಮ, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆಯಿಂದ

ನವರಾತ್ರಿ ವಿಶೇಷ ಹೋಮ: ಪವಮಾನ ಹೋಮ, ಪ್ರಾಣದೇವರ ಅನುಗ್ರಹ ಹಾಗೂ ಪಾಪ ಪರಿಹಾರ, ಆಯೋಜನೆ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 9.30

ವಚನ ನವರಾತ್ರಿ ವಿಜಯದಶಮಿ: ಅತಿಥಿಗಳು: ಎಸ್. ಪಿನಾಕಪಾಣಿ, ದರ್ಶಿನಿ ಮಂಜುನಾಥ್, ಶ್ವೇತಜ ಶಿವಕುಮಾರಸ್ವಾಮಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಪದ್ಮಜಾ ಪ್ರಸನ್ನ ಮನೆಯಂಗಳ, ದೊಡ್ಡಬಸ್ತಿ ಮುಖ್ಯರಸ್ತೆ, ಸಂಜೆ 5.30

ನವರಾತ್ರಿ ಸಂಗೀತ ನೃತ್ಯೋತ್ಸವ: ಕಥಕ್ ಹಾಗೂ ಭರತನಾಟ್ಯ: ಸಾಯಿ ಆರ್ಟ್ ಇಂಟರ್‌ನ್ಯಾಷನಲ್ ಕಲಾವಿದರಿಂದ, ನಿರ್ದೇಶನ: ಸುಪರ್ಣಾ ಸಾಯಿ ವೆಂಕಟೇಶ್, ಸ್ಥಳ ಹಾಗೂ ಆಯೋಜನೆ: ಮಹಾಯಾಗ ಕ್ಷೇತ್ರ ಗಾಯತ್ರಿ ದೇವಸ್ಥಾನ, ಗಾಯತ್ರಿ ರಂಗಮಂದಿರ, ಯಶವಂತಪುರ ಸರ್ಕಲ್ ಬಳಿ, ಸಂಜೆ 6.30

ಶರನ್ನವರಾತ್ರಿ, ಶ್ರೀರಾಮ ಮಂದಿರದ ಶತಮಾನೋತ್ಸವ ಸಮಾರಂಭ: ಭರತನಾಟ್ಯ: ರೂಪಾ ಗಿರೀಶ್, ಆಯೋಜನೆ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ಸಾಂಸ್ಕೃತಿಕ ಉತ್ಸವ: ಶಿರಡಿ ಸಾಯಿಬಾಬಾ ಭಜನೆ: ಚಿಂತಲಪಲ್ಲಿ ಕೆ. ರಮೇಶ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀ ಪದ್ಮಾವತಿ ಕಲಾನಿಕೇತನ, ಮತ್ತಿಕೆರೆ ಬಡಾವಣೆ, ಸಂಜೆ 6.30

ಶರನ್ನವರಾತ್ರಿ: ದೊಡ್ಡಮ್ಮ ದೇವಿಗೆ ದ್ರಾಕ್ಷಿ ಅಲಂಕಾರ, ಆಯೋಜನೆ ಹಾಗೂ ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ರಾತ್ರಿ 7.30

ಬಿಹಾರದ ಮಹಿಳಾ ಅಭಿವೃದ್ಧಿ ನಿಗಮದ ನಿರ್ದೇಶಕಿ ಹೇಳಿಕೆಗೆ ಖಂಡನೆ

'ಉಚಿತವಾಗಿ ಸ್ಯಾನಿಟರಿ ಪ್ಯಾಡ್ ವಿತರಿಸಿ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ವತಿಯಿಂದ ಆಗ್ರಹ
- 'ಶೇ 36.6ರಷ್ಟು ಮಂದಿ ಮಾತ್ರ ಸ್ಯಾನಿಟರಿ ಪ್ಯಾಡ್ ಬಳಸುತ್ತಾರೆ'

ಬೆಂಗಳೂರು: 'ಜನಪರ ಕಾಳಜಿಯಿರುವ ಸರ್ಕಾರ ಹೆಣ್ಣುಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ಪ್ಯಾಡ್ ವಿತರಿಸಬೇಕು' ಎಂದು ಆಗ್ರಹಿಸಿರುವ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ಬೆಂಗಳೂರು ಘಟಕ, ಬಿಹಾರದ ಮಹಿಳಾ ಅಭಿವೃದ್ಧಿ ನಿಗಮದ ನಿರ್ದೇಶಕರ ಹೇಳಿಕೆಯನ್ನು ಖಂಡಿಸಿದೆ.

ನಿಗಮದ ನಿರ್ದೇಶಕಿ ಹರ್ಜೋತ್ ಕೌರ್ ಅವರು ಸಂವಾದವೊಂದರಲ್ಲಿ ಸ್ಯಾನಿಟರಿ ಪ್ಯಾಡ್ ಕೇಳಿದ ವಿದ್ಯಾರ್ಥಿನಿಗೆ, 'ಸರ್ಕಾರವು ಜೀನ್ಸ್ ಸಹ ನೀಡಲಿ ಎಂದು ಬಯಸುತ್ತೀರಿ. ಕೊನೆಗೆ, ಕಾಂಡೋಮ್ ಅನ್ನೂ ಸರ್ಕಾರ ನೀಡಲಿ ಎಂದು ಬಯಸುತ್ತೀರಿ. ಸರ್ಕಾರ ಕಾಂಡೋಮ್ ನೀಡಬೇಕೇ' ಎಂದು ಕೇಳಿದ್ದರು.

'ದೇಶದ ಮಹಿಳೆಯರಲ್ಲಿ ಶೇ 36.6ರಷ್ಟು ಮಂದಿ ಮಾತ್ರ ಮುಟ್ಟಿನ ವೇಳೆ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸುತ್ತಾರೆ. ಉಳಿದ ಹೆಣ್ಣುಮಕ್ಕಳು ಹಳೆಯ ಹಾಗೂ ಚಿಂದಿ ಬಟ್ಟೆಗಳನ್ನು ಬಳಸಿ, ತಮ್ಮ ಕಷ್ಟದ ದಿನಗಳನ್ನು ಕಳೆಯುತ್ತಾರೆ. ಇದರಿಂದ ಹಲವಾರು ಸಾಂಕ್ರಾಮಿಕ ರೋಗಗಳು, ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಬಡತನದಿಂದಾಗಿ ಇಂದಿಗೂ ಎಷ್ಟೋ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಲು ಸಾಧ್ಯವಾಗುತ್ತಿಲ್ಲ' ಎಂದು ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಶಾಂತ ಎ. ಬೇಸರ ವ್ಯಕ್ತಪಡಿಸಿದ್ದಾರೆ.

'ದೇಶದ ಶೇ 50ರಷ್ಟು ಹೆಣ್ಣುಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ಮುಟ್ಟಿನ ಕುರಿತಾಗಿ ಹಲವಾರು ಮೌಢ್ಯಗಳು ನಮ್ಮ ಸಮಾಜದಲ್ಲಿವೆ. ಮುಟ್ಟಿನ ಅವಧಿಯಲ್ಲಿ ಹೆಣ್ಣುಮಕ್ಕಳನ್ನು ವಾಸಸ್ಥಳಗಳಿಂದ ದೂರ ಇಡುವ ಪದ್ಧತಿ ನಮ್ಮಲ್ಲಿ ಈಗಲೂ ಇದೆ. ಇದು ಸಹಜ ಜೈವಿಕ ಪ್ರಕ್ರಿಯೆ ಎಂದು ನೋಡದೆ, ಅದನ್ನು ಅಸಹ್ಯವೆಂಬಂತೆ ಭಾವಿಸಲಾಗುತ್ತದೆ. ಇಂತಹ ಸಮಯದಲ್ಲಿ ನಿಜವಾದ ಜನಪರ ಕಾಳಜಿಯಿರುವ ಸರ್ಕಾರ, ಹೆಣ್ಣುಮಕ್ಕಳಿಗೆ ಉಚಿತವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಬೇಕು. ಶಾಲೆಗಳಲ್ಲಿ ಇದು ಅತ್ಯಂತ ಅವಶ್ಯಕ. ಹರ್ಜೋತ್ ಕೌರ್ ಅವರು ದೇಶದ ಮಹಿಳೆಯಲ್ಲಿ ಕ್ಷಮೆಯಾಚಿಸುವಂತೆ ಆಗ್ರಹಿಸಿದ್ದಾರೆ.

ಚಿತ್ರ: ತಾಜುದ್ದಿನ್ ಅಜಾದ್

ಚೆಲುವಿನಧಾರೆ ಗೊಂಬೆಯ ದಸರೆ...

ನಾಡಹಬ್ಬ ದಸರಾದಲ್ಲಿ ದುರ್ಗಾಆರಾಧನೆ ಪ್ರಮುಖ ಎನಿಸಿದರೂ, ಹಲವಾರು ಸಂಪ್ರದಾಯಗಳು ಚಾಲ್ತಿಯಲ್ಲಿವೆ. ಗೊಂಬೆ ಕೂರಿಸುವುದೂ ಅದರಲ್ಲಿ ಒಂದು. ಬದುಕಿಗೆ ಬೆಸೆದುಕೊಂಡಿರುವ ಅಗಣಿತ ಪ್ರೀತಿಯ ದ್ಯೋತಕವೇ ಈ ಗೊಂಬೆಗಳು. ಅವುಗಳೊಂದಿಗಿನ ನೆನಪಿನ ಮೆರವಣಿಗೆ ಇಲ್ಲಿದೆ...

ನಿರೂಪಣೆ: ರೂಪಾ ಕೆ.ಎಂ.

ಬದುಕು ಕಟ್ಟಿಕೊಡುವ ಚಂದದ ಕ್ಷಣ

ಅಪರ್ಣಾ ವಸ್ತಾರೆ

ದಸರಾ ಅಂದರೆ ನನಗೆ ನಾಡಹಬ್ಬ ಮೈಸೂರು ದಸರಾ, ಶೃಂಗೇರಿಯ ಶರನ್ನವರಾತ್ರಿ ಉತ್ಸವ.. ಇನ್ನೂ ಹಲವು. ಆದರೆ, ಅದಕ್ಕಿಂತ ಹೆಚ್ಚಾಗಿ ಆಪ್ತ ಎನಿಸೋದು ನಮ್ಮ ಮನೆಯಲ್ಲಿ ಗೊಂಬೆ ಕೂರಿಸುತ್ತಿದ್ದದು. ಪ್ರತಿ ವರ್ಷ ಆ ಮುದ್ದುಗೊಂಬೆಗಳಿಗೆ ಮಾಡುತ್ತಿದ್ದ ಅಲಂಕಾರವನ್ನು ನೋಡುವುದೇ ಚಂದ. ಈಗಲೂ ಗೊಂಬೆ ಹಬ್ಬ ಎಂದಾಕ್ಷಣ ಬಾಲ್ಯದ ಇಂತಹ ಚಂದದ ನೆನಪುಗಳು ಸುರುಳಿಯಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ನಮ್ಮ ಮನೆಯ ಅಡುಗೆ ಮನೆಯ ಮೂಲೆಯಲ್ಲಿ ಇಪ್ಪತ್ತೈದು ಕೆ.ಜಿ ಅಕ್ಕಿ ಹಿಡಿಯುವಂತಹ ತಗಡಿನ ಡಬ್ಬ ಇತ್ತು. ಅದಕ್ಕೆ ಅಮ್ಮ ಪೇಂಟ್ ಮಾಡಿಸಿ, ಫಳ ಫಳ ಹೊಳೆಯೋ ಹಾಗೆ ಇಟ್ಟುಕೊಂಡಿದ್ದರು. ವರ್ಷ ಪೂರ್ತಿ ಆ ಡಬ್ಬದ ಮೇಲೆ ಈರುಳ್ಳಿ ಬುಟ್ಟಿ, ಮಣೆ.. ಇನ್ನು ಎಂಥದ್ದೋ ವಸ್ತುಗಳನ್ನು ಪೇರಿಸಿಡುತ್ತಿದ್ದರು. ದಸರಾ ಹಬ್ಬ ಹತ್ತಿರ ಬರುತ್ತಿದ್ದಂತೆ ಡಬ್ಬದ ಮೇಲಿದ್ದ ಲಗೇಜ್‌ನೆಲ್ಲ ಪಕ್ಕಕ್ಕಿಟ್ಟು, ಅದರ ಮುಚ್ಚಳ ತೆಗೆಯುತ್ತಿದ್ದರು. ಮುಚ್ಚಳ ತೆಗೆಯುತ್ತಿದ್ದಂತೆ ಮೊದಲು ಜಿರಳೆಗಳು ಹೊರಗಡೆ ಜಿಗಿಯುತ್ತಿದ್ದವು. ಆಮೇಲೆ ನ್ಯೂಸ್‌ಪೇಪರ್‌ನಲ್ಲಿ ಸುತ್ತಿಟ್ಟಿದ್ದ ಬೊಂಬೆಗಳನ್ನು ಒಂದೊಂದಾಗಿ ತೆಗೆದು ಜೋಡಿಸುತ್ತಿದ್ದರು. ಈ ಪ್ರಕ್ರಿಯೆ ನನಗೆ ಅಲ್ಲಾವುದ್ದೀನ್ ಅದ್ಭುತ ದೀಪದ ಕಥೆಯನ್ನು ನೆನಪಿಸುತ್ತಿತ್ತು. ಡಬ್ಬದಿಂದ ಬೊಂಬೆಗಳನ್ನು ತೆಗೆದು ಜೋಡಿಸುವಾಗ, ಅದೆಂಥದ್ದೋ ಸಂಭ್ರಮ. ಇಷ್ಟಕ್ಕೂ ಆ ಡಬ್ಬದಲ್ಲಿ ಏನಿದೆ ಅಂತ ಮೊದಲೇ ಗೊತ್ತಿದ್ದರೂ, ವರ್ಷವಾದ ಮೇಲೆ ಗೊಂಬೆ ನೋಡುತ್ತಿದ್ದದ್ದಕ್ಕೆ ಆಗುತ್ತಿದ್ದ ಪುಳಕವೇ ಬೇರೆ.

ಸಾಂದರ್ಭಿಕ ಚಿತ್ರ

ಇನ್ನು, ಗೊಂಬೆಗಳಿಗೆ ಅಲಂಕಾರ ಮಾಡಿ, ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಿ, ಹಬ್ಬದ ದಿನ ಅವುಗಳ ಮುಂದೆ ದೀಪ ಹಚ್ಚಿಟ್ಟು, ಆರತಿ ಮಾಡುತ್ತಿದ್ದರು. ಆಗೆಲ್ಲ ಅಡುಗೆ ಮನೆ, ದೇವರ ಮನೆ ಅಂತ ಬೇರೆ ಇರಲಿಲ್ಲ. ಪುಟ್ಟ ಮನೆಯಲ್ಲೇ ಎಲ್ಲವನ್ನು ಒಪ್ಪವಾಗಿ, ಅಂದವಾಗಿ ಜೋಡಿಸಿಡುತ್ತಿದ್ದ ಆ ಕಲಾವಂತಿಕೆ ಮಾತ್ರ ಅದ್ಭುತ.

ಅಷ್ಟೆಲ್ಲ ಗೊಂಬೆಗಳನ್ನು ನೋಡಿದ್ದರೂ, ಅಲಂಕೃತಗೊಂಡ ಗೊಂಬೆಗಳನ್ನು ಮುಟ್ಟಬೇಕೆಂಬ ಕುತೂಹಲ. ಹೀಗಾಗಿ, 'ಆನೆ ಗೊಂಬೆ ಇಟ್ಟಿರೋದು ಒಂಚೂರು ಓರೆಯಾಗಿದೆ ಅಲ್ವಾ' ಅಂತ ಸುಳ್ಳೇ ಸುಳ್ಳೇ ಹೇಳುತ್ತಾ ಅದನ್ನು ಸರಿ ಮಾಡುವ ನೆಪದಲ್ಲಿ ಗೊಂಬೆ ಮುಟ್ಟಿ ಸಂಭ್ರಮಿಸುತ್ತಿದ್ದೆವು. ಗೊಂಬೆಗಳಿಗೆ ನಿತ್ಯ ಸಂಜೆ ಆರತಿ ಮಾಡುತ್ತಿದ್ದೆವು. ಗೊಂಬೆ ನೋಡೋದಕ್ಕೆ ಅಂತ ಬರುವ ಮಕ್ಕಳಿಗೆ ನಮ್ಮ ಕೈಯಿಂದಲೇ ಕೋಡುಬಳೆ, ಸಿಹಿ ತಿನಿಸುಗಳನ್ನು ಕೊಡಿಸುತ್ತಿದ್ದರು.

ನಮ್ಮ ಪಕ್ಕದ ಮನೆಯವರು ಗೋಧಿಹುಲ್ಲಿನಲ್ಲಿ ಗೊಂಬೆ ಪಾರ್ಕ್ ಮಾಡುತ್ತಿದ್ದರು. ಅಷ್ಟೇ ಅಲ್ಲ, ಗೊಂಬೆಗಳಿಗೆ ಚಂದದ ಅಲಂಕಾರ ಮಾಡಿ, ಬಣ್ಣ ಬಣ್ಣದ ಲೈಟ್ ಹಾಕುತ್ತಿದ್ದರು. ಆಗ ಗೊಂಬೆಗಳು ಫಳ ಫಳ ಹೊಳೆಯುತ್ತಿದ್ದವು. ಅದನ್ನು ನಾವು ಪ್ರಪಂಚದ ಮತ್ತೊಂದು ಅದ್ಭುತ ಎನ್ನುವ ರೀತಿ ನೋಡುತ್ತಿದ್ದೆವು. ಹೀಗೆ ಬೇರೆಯವರ ಮನೆಯ ಗೊಂಬೆಗಳನ್ನು ನೋಡಿಕೊಂಡು ವಾಪಸ್ ಬರುವ ಹೊತ್ತಿಗೆ ಅಮ್ಮನ ಮೇಲೆ ಕೋಪ, ಅದ್ದೂರಿಯಾಗಿ ಗೊಂಬೆ ಜೋಡಿಸಿರುವ ಮನೆಯವರ ಮೇಲೆ ಹೊಟ್ಟೆಕಿಚ್ಚು ಎಲ್ಲ ಶುರುವಾಗಿರೋದು. ನಂತರ, 'ನಮ್ಮ ಮನೆಯಲ್ಲೂ ಪಾರ್ಕ್ ಮಾಡೋಣ ಅಂದರೆ ಜಾಗ ಇಲ್ಲ ಅಂತೀಯಾ, ಆ ಪಾತ್ರೆಗಳನ್ನೆಲ್ಲ ಮೇಲಿಟ್ಟರೆ ನಾವು ಪಾರ್ಕ್ ಮಾಡಬಹುದು' ಅಂತ ಅಮ್ಮನಿಗೆ ಸಲಹೆ ಕೊಡುತ್ತಿದ್ದೆವು. 'ಆಯ್ತು ಮಾಡೋಣ' ಅಂತ ಭರವಸೆ ಕೊಟ್ಟ ಮೇಲೆ ನಮಗೆ ಸಮಾಧಾನ ಆಗ್ತಿತ್ತು.

ಬಾಲ್ಯ ಕಳೆದು ಹೈಸ್ಕೂಲು, ಕಾಲೇಜಿಗೆ ಹೋಗುವ ವೇಳೆಗೆ 'ಅಯ್ಯೊ ನಮ್ಮನೆಯಲ್ಲಿ ಈಗೆಲ್ಲ ಗೊಂಬೆ ಕೂರಿಸಲ್ಲ. ಅದನ್ನೆಲ್ಲ ಯಾರು ಮಾಡ್ತಾರೆ' ಅನ್ನೋ ಮಾತುಗಳು ಕೇಳುತ್ತಿದ್ದೆವು. ಇದರ ನಡುವೆಯೂ ನಮ್ಮನೆಯಲ್ಲಿ ಮಾತ್ರ ಗೊಂಬೆ ಕೂರಿಸುವ ಸಂಪ್ರದಾಯ ಮುಂದುವರಿದಿತ್ತು.

ಈಗಲೂ ನಮ್ಮಲ್ಲಿ ಗೊಂಬೆ ಕೂರಿಸುತ್ತೇವೆ. ತುಂಬಾ ಅಲಂಕಾರ ಮಾಡುತ್ತೀವಿ. ನಾವು ತಾಯಿಯನ್ನು ಚಾಮುಂಡೇಶ್ವರಿಯೋ, ಶಕ್ತಿಯೋ, ಶಾರದೆಯೋ, ಲಲಿತೆಯೋ, ದುರ್ಗೆಯೋ ಎಷ್ಟೆಲ್ಲಾ ಹೆಸರಿನಿಂದ ಕರೆದು, ವಿಭಿನ್ನವಾಗಿ ಬಗೆ ಬಗೆಯ ಅಲಂಕಾರ ಮಾಡುತ್ತೇವೆ.

ನಿಜ, ಬದುಕನ್ನು ಕಟ್ಟಿಕೊಡುವುದು ಇಂಥ ಚಂದದ ಕ್ಷಣಗಳೇ. ಬದುಕಿನ ಜಂಜಾಟವನ್ನು ಮರೆತು ಇಂಥ ಹಬ್ಬಗಳ ತಯಾರಿಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದಿದೆಯಲ್ಲಾ, ಇವೇ ಖುಷಿಯ ಕ್ಷಣಗಳು, ಕಲಾವಂತಿಕೆಯ ಕ್ಷಣಗಳು.

ಪ್ರತಿ ಮನುಷ್ಯನ ಮನಸ್ಸಿನ ಮೂಲೆಯಲ್ಲಿ ಚಂದದ್ದು, ಚೆಲುವಾದದ್ದು ಯಾವತ್ತಿಗೂ ಇರುತ್ತದೆ ಎನ್ನುವುದಕ್ಕೆ ಆ ಗೊಂಬೆಗಳಲ್ಲಿ ಮೂಡಿರುವ ಕಲಾವಂತಿಕೆಯೇ ಸಾಕ್ಷಿ ಅಂತ ನನಗೆ ತೀವ್ರವಾಗಿ ಅನ್ನಿಸುತ್ತದೆ. ದಸರಾ– ಗೊಂಬೆ ಹಬ್ಬ ತುಂಬಾ ಚಂದವಾಗಿದೆ. ನಮ್ಮೆಲ್ಲರ ಬದುಕು ಹೀಗೆ ಚಂದವಾಗಿರಲಿ.

ಅಪರ್ಣಾ ವಸ್ತಾರೆ, ನಿರೂಪಕಿ

ಉತ್ಸಾಹ ತುಂಬುವ ಗೊಂಬೆ



ಅನುರಾಧ ಬಿ.ರಾವ್

ನಾನು ಮೂಲತಃ ಶಿವಮೊಗ್ಗ ಜಿಲ್ಲೆ ಸಾಗರದವಳು. ಅಲ್ಲಿ ಗಣಪತಿ ಕೂರಿಸೋದು, ಗೊಂಬೆ ಇಡುವಂತಹ ಪದ್ಧತಿಗಳೆಲ್ಲ ಇರಲಿಲ್ಲ. ನನ್ನ ತಂದೆ ದೊಡ್ಡೇರಿ ವೆಂಕಟಗಿರಿರಾವ್, ವೈದ್ಯರಾಗಿದ್ದರಿಂದ ಊರಿಂದ ಊರಿಗೆ ವರ್ಗವಾಗುತ್ತಿತ್ತು. ಆ ಪ್ರಕ್ರಿಯೆಯಲ್ಲಿ ಕೆಲ ವರ್ಷಗಳು ದೊಡ್ಡಬಳ್ಳಾಪುರದಲ್ಲಿ ನೆಲೆಸಿದ್ದೆವು. ಅಲ್ಲಿದ್ದಾಗ ಪ್ರತಿ ವರ್ಷ ನಾವು ಗೊಂಬೆ ಖರೀದಿ ಮಾಡುತ್ತಿದ್ದೆವು. ಅದರಲ್ಲೂ ನಾನು ಅಪ್ಪ ಇಬ್ಬರೂ ಹೋಗಿ ಗೊಂಬೆ ಖರೀದಿಸುತ್ತಿದ್ದೆವು. ಈ ಗೊಂಬೆಗಳನ್ನು ಕೂರಿಸುವುದಕ್ಕಾಗಿಯೇ ಎರಡು–ಮೂರು ಸ್ಟ್ಯಾಂಡ್‌ಗಳನ್ನು ಖರೀದಿಸಿದ್ದೆವು. ಆ ಸ್ಟ್ಯಾಂಡ್‌ಗಳಿಗೆ ಬಣ್ಣ ಬಣ್ಣದ ಪೇಪರ್‌ನಿಂದ ಅಲಂಕಾರ ಮಾಡುತ್ತಿದ್ದೆವು. ನಂತರ ಒಂದರ ಮೇಲೊಂದು ಜೋಡಿಸಿ, ಅವುಗಳ ಮೇಲೆ ಪಟ್ಟದ ಗೊಂಬೆಗಳನ್ನು ಸಾಲಾಗಿ ಜೋಡಿಸುತ್ತಿದ್ದೆವು.

ಗೊಂಬೆ ಕೂರಿಸುವುದಷ್ಟೇ ಅಲ್ಲ, ಸಂಜೆ ಮಕ್ಕಳನ್ನು ಆಹ್ವಾನಿಸಿ ಗೊಂಬೆ ಆರತಿ ಮಾಡುತ್ತಿದ್ದೆವು. ಗೊಂಬೆ ನೋಡಲು ಬರುವ ಪುಟ್ಟ ಮಕ್ಕಳಿಗೆ ಬಾಗಿನ ಕೊಡುತ್ತ ಇದ್ದೇವು. ಅದಕ್ಕೆ 'ಗೊಂಬೆ ಬಾಗಿನ' ಎಂದೇ ಹೆಸರಿತ್ತು. ಅದರಲ್ಲಿ ಮಕ್ಕಳಿಗೆ ಇಷ್ಟವೆನಿಸುವ ಸಿಹಿ ತಿನಿಸುಗಳ ಪೊಟ್ಟಣ ಇರುತ್ತಿತ್ತು.

ನಾನು ಪಿಯುಸಿ ಮುಗಿಸುವವರೆಗೂ ದೊಡ್ಡಬಳ್ಳಾಪುರದಲ್ಲಿಯೇ ಇದ್ದಿದ್ದು. ಅಲ್ಲಿವರೆಗೂ ನಮ್ಮನೆಯಲ್ಲಿ ಒಂದು ವರ್ಷವೂ ತಪ್ಪಿಸದೇ ಗೊಂಬೆ ಕೂರಿಸುತ್ತಿದ್ದೆವು. ನಮ್ಮನೆಯಲ್ಲಿ ಮನೆವಾರ್ತೆ ಬಿಂಬಿಸುವಂತಹ ಗೊಂಬೆಗಳಿದ್ದವು. ಈ ಗೊಂಬೆಗಳು ಸೂಕ್ಷ್ಮವಾಗಿ ಮನೆವಾರ್ತೆಯನ್ನು ಹೇಳುತ್ತಾ, ಹೇಗೆ ಉತ್ಸಾಹದಿಂದ ಬದುಕು ನಡೆಸಬೇಕು ಎಂಬುದನ್ನೂ ವಿವರಿಸುತ್ತಿದ್ದವು.

ಗೊಂಬೆ ಕೂರಿಸುವ ಸಂಪ್ರದಾಯವಿಲ್ಲದ ಊರಿನವಳಾಗಿದ್ದರೂ, ಈ ಗೊಂಬೆ ಹಬ್ಬದ ನೆನಪು ಸದಾ ನನ್ನ ಮನದಲ್ಲಿ ಹಸಿರಾಗಿದೆ.

ಅನುರಾಧ ಬಿ.ರಾವ್, ಗೃಹಿಣಿ

ಕಲಾತ್ಮಕತೆ ಕಲಿಸಿದ ಹಬ್ಬ

ಕಾವ್ಯಾ ಶಾ

ನವರಾತ್ರಿ ಹಬ್ಬವೆಂದರೆ ನನಗೆ ನೆನಪಾಗೋದು ಬಾಲ್ಯದಲ್ಲಿ ನೋಡಿದ್ದ ಗೊಂಬೆ ಹಬ್ಬ. ನನ್ನಜ್ಜಿ ಎರಡು ತಲೆಮಾರಿನಿಂದ ಬಳುವಳಿಯಾಗಿ ಬಂದ ಗೊಂಬೆಗಳನ್ನು ಇಟ್ಟು ಪೂಜೆ ಮಾಡುತ್ತಿದ್ದರು. ನನಗೆ ತುಂಬಾ ಚೆನ್ನಾಗಿ ನೆನಪಿದೆ. ನಮ್ಮ ಅಜ್ಜಿ ಮನೆಯಲ್ಲಿ ಇದ್ದಿದ್ದು ಮದುವೆ ಶಾಸ್ತ್ರವನ್ನು ವಿವರಿಸುವ ಗೊಂಬೆಗಳು. ಅರಿಶಿನ ಕುಟ್ಟುತ್ತಿರುವ, ಮದುಮಗ ಹಾಗೂ ಮದುಮಗಳಿಗೆ ಅರಿಶಿನ ಹಚ್ಚುತ್ತಿರುವ, ತಾಳಿ ಕಟ್ಟುತ್ತಿರುವ, ಸಪ್ತಪದಿ ತುಳಿಯುತ್ತಿರುವ.. ಹೀಗೆ ಮದುವೆಯ ವಿವಿಧ ಶಾಸ್ತ್ರ, ಸಂಪ್ರದಾಯಗಳನ್ನು ವರ್ಣಿಸುವ ಗೊಂಬೆಗಳಿದ್ದವು. ನನಗೆ ತುಂಬಾ ಇಷ್ಟವಾದ ಗೊಂಬೆ ಎಂದರೆ ಗುಂಡು ಮಣಿ ಸರ ಹಾಕಿಕೊಳ್ಳುತ್ತಿದ್ದ ದೊಡ್ಡ ಕಣ್ಣಿನ ಗೊಂಬೆ. ಅದರ ವಸ್ತ್ರವಿನ್ಯಾಸ, ಅದರ ಮೇಲಿನ ಕುಸುರಿ ಕಲೆ ಎಲ್ಲವೂ ಬಹಳ ವಿಭಿನ್ನವಾಗಿತ್ತು. ಇವತ್ತಿಗೂ ನಾನು ನೀಡುತ್ತಿರುವ ನೃತ್ಯ ಕಾರ್ಯಕ್ರಮಗಳಲ್ಲಿ 'ಸೆಮಿ ಕ್ಲಾಸಿಕಲ್' ಪರಿಕಲ್ಪನೆಗೆ ಈ ಗೊಂಬೆಗಳ ವಸ್ತ್ರವಿನ್ಯಾಸವೇ ದೊಡ್ಡ ಪ್ರೇರಣೆ ನೀಡುತ್ತಿದೆ.

ಈ ಬಾರಿ 'ಅಮ್ಮ'ನಿಲ್ಲದೇ ಹಬ್ಬ ಮಾಡ್ತಿದ್ದೀನಿ. ಸದ್ಯಕ್ಕೆ ಗಂಡನ ಮನೆಯಲ್ಲಿ ಅತ್ತೆ ಜತೆ ನವರಾತ್ರಿಯನ್ನು ಆಚರಿಸ್ತೀದ್ದೀನಿ. ನೃತ್ಯಗಾರ್ತಿಯಾಗಿ ಯುವ ದಸರಾದಲ್ಲಿ ಪಾಲ್ಗೊಂಡಿದ್ದೀನಿ. ವೃತ್ತಿ ಮತ್ತು ಮನೆ ಎರಡೂ ಕಡೆಗಳಲ್ಲಿ ನವರಾತ್ರಿಯ ಸಂಭ್ರಮ ತುಂಬಿದೆ.

–**ಕಾವ್ಯಾ ಶಾ**, ನಟಿ

ನಮ್ಮೂರ ಮಾನವಮಿ

ನವದುರ್ಗೆಯರೊಂದಿಗೆ ಸಿರಿದೇವಿ, ಭೂದೇವಿಯರನ್ನೂ ಪೂಜಿಸುವ ಪದ್ಧತಿ ಉತ್ತರ ಕರ್ನಾಟಕದಲ್ಲಿದೆ. ಕಲ್ಯಾಣ ಕರ್ನಾಟಕದಲ್ಲಿಯೂ ಇದಕ್ಕೆ ಘಟಸ್ಥಾಪನೆ, ದೀಪ ಹಾಕುವುದು ಎಂದು ಕರೆಯುತ್ತಾರೆ. ಮನೆಯ ದೇವರ ಜಗುಲಿಯ ಮೇಲೆ ಭೂತಾಯಿಯನ್ನು ಮಣ್ಣಿನ ರೂಪದಲ್ಲಿಯೂ, ಸಿರಿದೇವಿಯನ್ನು ಧಾನ್ಯದ ರೂಪದಲ್ಲಿಯೂ ಪ್ರತಿಷ್ಠಾಪಿಸಿ ಆರಾಧಿಸಲಾಗುತ್ತದೆ. ಈ ಆಚರಣೆಯ ಕುರಿತು ವಿಜಯಪುರದ ಲೇಖಕಿ **ಹೇಮಲತಾ ವಸ್ತ್ರದ** ಇಲ್ಲಿ ವಿವರಿಸಿದ್ದಾರೆ.

ಮಹಾಲಯ ಅಮಾವಾಸ್ಯೆಯ ಮೊದಲಿಗೆ ಮನೆ ಶುಚಿಗೊಳಿಸಿ, ಮಡಿ ಮಾಡುವುದರೊಂದಿಗೆ ನಮ್ಮಲ್ಲಿ ನವರಾತ್ರಿ ಸಂಭ್ರಮ ಶುರುವಾಗುತ್ತದೆ. ಹೀಗೆ ನಮ್ಮೂರ ಮಾನವಮಿ(ಮಹಾನವಮಿ) ಶುರುವಾಗ್ತದೆ.

ಸುಣ್ಣದಿಂದ ದೇವರ ಜಗಲಿ ಸಾರಿಸಿ, ಅದಕ್ಕೆ ಹುರಮುಂಜಿ ಪಟ್ಟಿ ಬಳಿದು ಗಟ್ಟ (ಘಟ ಸ್ಥಾಪನೆಯನ್ನು ಆಡುಭಾಷೆಯಲ್ಲಿ ಗಟ್ಟ ಅಂತ ಕರೀತಾರೆ) ಸಿದ್ಧ ಮಾಡಿ, ನವರಾತ್ರಿಯ ಮೊದಲ ದಿನ ದೇವರ ಜಗುಲಿಯ ಮೇಲೆ ಬಾಳೆ ಎಲೆ ಇಲ್ಲವೇ ಔಡಲದ ಎಲೆ ಅಥವಾ ಮುತ್ತುಗದ ಎಲೆಗಳಿಂದ (ಈ ಎಲೆಗಳು ಔಷಧೀಯ ಮತ್ತು ತಂಪು ಗುಣ ಹೊಂದಿರುವುದರಿಂದ ಮನೆಯನ್ನು ತಂಪಾಗಿರಿಸುತ್ತವೆ) ಪತ್ರೋಳಿ ಹೆಣೆಯುತ್ತೇವೆ. ಸೋಸಿದ ಮಣ್ಣನ್ನು ಚಚ್ಚೌಕವಾಗಿ ಹರಡಿ, ನಡುವೆ ನೀರು ತುಂಬಿದ ಮಣ್ಣಿನ ಕುಳ್ಳಿ ಇಡಲಾಗುತ್ತದೆ. ಮಡಕೆ ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ ಕುಳ್ಳಿ ಎನ್ನುತ್ತಾರೆ. ಇದಕ್ಕೂ ವಿಭೂತಿ, ಕುಂಕುಮದ ಉದ್ದುದ್ದ ಪಟ್ಟಿ ಬರೆಯಲಾಗುತ್ತದೆ.

ಜೋಳ, ಗೋಧಿ, ಕಡಲೆ, ಅಗಸಿ, ಹೆಸರುಗಳಂತಹ ಏಳು ಅಥವಾ ಒಂಬತ್ತು ಬಗೆಯ ದ್ವಿದಳ ಧಾನ್ಯಗಳನ್ನು ಹರಡುತ್ತೇವೆ. ಮೇಲೆ ಮತ್ತೆ ಮಣ್ಣಿನ ಹೊದಿಕೆ ಹೊದಿಸುತ್ತೇವೆ. ಮಣ್ಣನ್ನು ಕಳಸದ ಸುತ್ತ ಗೋಪುರದಂತೆ ಎತ್ತರಿಸಿ, ಮಣ್ಣು ಒದ್ದೆಯಾಗುವಷ್ಟು ನೀರು ಚಿಮುಕಿಸುತ್ತೇವೆ. ನೀರು ತುಂಬಿದ ಕುಳ್ಳಿಯ ಕಂಠದೊಳಗೆ ವೀಳ್ಯದೆಲೆ ಅಥವಾ ಮಾವಿನೆಲೆ ಇರಿಸಿ, ನಡುವೆ ತೆಂಗಿನ ಕಾಯಿಯನ್ನು ಇಡಲಾಗುತ್ತದೆ. ಇದನ್ನು ಗಣಪನೆಂದೇ ಪರಿಗಣಿಸಲಾಗುತ್ತದೆ. ಕುಡಿಕೆಗೆ ಅರಿಶಿಣ, ಕುಂಕುಮ ಹೂ ಇರಿಸಿ, ಎರಡೂ ಬದಿಯಲ್ಲಿ ನಂದಾದೀಪ ಹಚ್ಚಿಡುತ್ತೇವೆ. ಇವು ಶಾಂತವಾದಂತೆ ನಿರಂತರವಾಗಿ ಬೆಳಗುವಂತೆ ನೋಡಿಕೊಳ್ಳುವುದೇ 'ದೀಪ ಹಾಕುವ' ವ್ರತ ಎಂದು ಕರೆಯಲಾಗುತ್ತದೆ.

ಆಯುಧ ಪೂಜೆಯ ದಿನ ಮನೆಯಲ್ಲಿನ ಈಳಿಗೆಮಣೆ ಆದಿಯಾಗಿ (ಒಕ್ಕಲುತನದ ಮನೆಯಾಗಿದ್ದರೆ) ಗುದ್ದಲಿ, ಸಲಿಕೆ ಸೇರಿದಂತೆ ಎಲ್ಲ ಕೃಷಿ ಪರಿಕರಗಳಿಗೂ ಪೂಜೆ. ನಾವು ಪುಸ್ತಕ, ಪೆನ್ನನ್ನೂ ಪೂಜೆಗೆ ಇಡುತ್ತೇವೆ.

ನಂತರ ಗೋದಿಹಿಟ್ಟು, ಅರಿಶಿಣ ಮತ್ತು ಚೂರು ಬೆಲ್ಲ ಹಾಕಿ ಲಟ್ಟಿಸಿ ಕರಿದ ಗಾರಿಗೆಗಳನ್ನು ಪೋಣಿಸಿ ತರಗ ತಯಾರಿಸುತ್ತೇವೆ. ತರಗ ಎಂದರೆ ಮಕ್ಕಳ ತೊಟ್ಟಿಲ ಮೇಲೆ ಕಟ್ಟುವ ಗುಬ್ಬಿಚಟ್ಟದಂತೆ ಇರುವ ಇದು ಗಾರಿಗೆಗಳಿಂದ ಅಲಂಕೃತಗೊಂಡು ಗಟ್ಟದ ಮೇಲೆ ತೂಗಿಬಿಡುವಂಥದ್ದು. ಗಾರಿಗೆಗಳ ಜೊತೆಗೆ ಈ ಹಿಟ್ಟಿನಿಂದ ಕಾಲುಂಗುರ, ತಾಳಿ, ಬಳೆ, ಎಲೆ, ಅಡಿಕೆ, ಜಡೆ, ಬಾಚಣಿಕೆ ಇತ್ಯಾದಿ ಮಾಡಿ ಎಣ್ಣೆಯಲ್ಲಿ ಕರಿದು ಪೂಜಾ ಸ್ಥಳದ ಮೇಲೆ ಕಟ್ಟಲಾಗುತ್ತದೆ. ಬೆಳೆದ ಪೈರಿನ ಸುತ್ತಾ, ನೂಲು ಸುತ್ತಿ, ಪೂಜೆ ಮಾಡಲಾಗುತ್ತದೆ.

ಒಂಬತ್ತನೆಯ ದಿನ, ಪೂಜೆ, ನೈವೇದ್ಯ ನಂತರ ಗಟ್ಟವನ್ನು ತುಸು ಜರುಗಿಸಿದ ಮೇಲೆ ಪೂಜೆ ಸಂಪನ್ನ. ಬೆಳೆದ ಸಸಿಗಳು ಮನೆ ಸಮೃದ್ಧವಾಗುತ್ತದೆ ಎಂಬುದನ್ನು ಸಂಕೇತಿಸುತ್ತದೆ. ಇವನ್ನು ನವಮಿಯ ದಿನ ಒಂದು ಪರಾತದಲ್ಲಿಟ್ಟುಕೊಂಡು ಹತ್ತಿರದ ಹಳ್ಳ ಅಥವಾ ಬಾವಿ ಬಳಿ ಇರಿಸಲಾಗುತ್ತದೆ. ಅದರೆದುರು ತೊಳೆದ ಐದು ಕಲ್ಲುಗಳನ್ನಿಟ್ಟು ಪೂಜಿಸಿ, ನಂತರ ಸಸಿಗಳನ್ನು ನೀರಿನಲ್ಲಿ ಬಿಡುತ್ತೇವೆ. ಕುಡಿಕೆಯಲ್ಲಿನ ನೀರನ್ನೂ ಹಾಕಿ, ಅದನ್ನು ತೊಳೆದು, ನೀರು ತುಂಬಿಕೊಂಡು, ಪೂಜಿಸಿದ ಕಲ್ಲ ಹರಳುಗಳನ್ನೂ ಜೊತೆಗೆ ತೆಗೆದುಕೊಂಡು ಬರುತ್ತೇವೆ. ಬಂದು, ತಲೆಬಾಗಿಲ ಅಕ್ಕಪಕ್ಕದಲ್ಲಿ ಅವನ್ನಿಟ್ಟು ಒಳ ಬಂದರೆ ಅಲ್ಲಿಗೆ ಈ ವ್ರತ ಸಂಪೂರ್ಣ. ಇದು ದೀಪ ಇರುವ ಮನೆಯ ವಿಶೇಷ ಆಚರಣೆ.

ದಸರಾ ಅಥವಾ ವಿಜಯದಶಮಿಯಂದು ಊರಿನ ಎಲ್ಲ ಮನೆಗಳಲ್ಲೂ ಸಾಮಾನ್ಯವಾದ ಆಚರಣೆ. ಗಂಡು ಮಕ್ಕಳಿಗೆ ಎಣ್ಣೆ ಮಜ್ಜನ, ಸುಡು ನೀರಿನಲ್ಲಿ ಮೀಯುವ ಸಡಗರ. ಹೆಣ್ಣುಮಕ್ಕಳಿಗೆ ಅಡುಗೆಯ ಗಡಿಬಿಡಿ. ಮಕ್ಕಳಿಗೋ ಉಣ್ಣುವ, ಹೊಸಬಟ್ಟೆ ಉಡುವ ಸಂಭ್ರಮ. ಗಂಡಸರು ಮಕ್ಕಳು ಸಂಜೆ ಬಾಜಾ ಬಜಂತ್ರಿಯೊಂದಿಗೆ ಊರಾಚೆಗಿನ ಬನ್ನಿಮರದ ಹತ್ತಿರ ಹೋಗಿ, ಬನ್ನಿ ಮರ ಪೂಜಿಸಿ, ಮರದ ಗೆಲ್ಲುಗಳನ್ನು ಕತ್ತರಿಸಿ ಊರೊಳಗೆ ತರುತ್ತಾರೆ. ತಂದುದರಲ್ಲಿ ಎಲ್ಲರೂ ತಮಗೆ ಬೇಕಾದಷ್ಟನ್ನು ತಮ್ಮ ತಮ್ಮ ಮನೆಗೆ ಬನ್ನಿ ಒಯ್ಯುತ್ತಾರೆ, ಪರಸ್ಪರ ಹಂಚಿ 'ನಾವು ನೀವು ಬಂಗಾರದಂಗ ಇರೋಣು' ಎಂದು ಹೇಳುತ್ತ ಶುಭ ಕೋರುತ್ತಾರೆ. ನಮ್ಮೂರಿನ ಮಾನವಮಿ ಕತಿ ಇದು.

ಮೊಗದ ಅಂದಕೆ ನತ್ತಿನ ಬಂಧ

ತಪಶ್ಚರಣ

ಫ್ಯಾಷನ್

ರೂಪದರ್ಶಿ: ಅಪೂರ್ವ ಹೆಗಡೆ,
ಚಿತ್ರಕೃಪೆ: ಕುಸುರಿ ಆರ್ಟ್ ವರ್ಕ್

ಮೂಗುತಿ, ಮೂಗುಬಟ್ಟು, ಮೂಗುನತ್ತು ಹೀಗೆ ನಾನಾ ಹೆಸರಿನಿಂದ ಕರೆಸಿಕೊಳ್ಳುವ ಈ ಆಭರಣವೀಗ ಬಗೆ ಬಗೆಯ ಸ್ವರೂಪ ಪಡೆದುಕೊಂಡಿದೆ. ಸಾಂಪ್ರದಾಯಿಕವಾಗಿ ಮೂಗುತಿಗೆ ವಿಶಿಷ್ಟ ಸ್ಥಾನ ಸಿಕ್ಕಿದೆ. ಈಗ ಎಲ್ಲೆಡೆ ನವರಾತ್ರಿಯ ಸಂಭ್ರಮ. ಶಕ್ತಿಪೀಠಗಳಲ್ಲಿರುವ ದೇವಿಯ ಮೂರ್ತಿಗೆ ಹಾಕಿರುವ ಮೂಗುತಿ ಭಕ್ತರನ್ನಷ್ಟೇ ಅಲ್ಲ ಫ್ಯಾಷನ್‌ಪ್ರಿಯರ ಕಣ್ಮನ ಸೆಳೆಯುತ್ತದೆ. ಹೊರನಾಡಿನ ಅನ್ನಪೂರ್ಣೇಶ್ವರಿ ದೇವಿಗೆ ಹಾಕಲಾದ ಮೂಗುತಿ, ದಕ್ಷಿಣದಲ್ಲಿರುವ ಕನ್ಯಾಕುಮಾರಿಯ ಮೂಗುತಿಯು ತನ್ನ ಹೊಳಪಿನಿಂದಾಗಿ ಪ್ರಸಿದ್ಧಿ ಪಡೆದುಕೊಂಡಿದೆ.

ಮೂಗುತಿ ಧರಿಸುವುದು ಹಳೆಯ ಕಾಲದವರ ಫ್ಯಾಷನ್ ಎಂಬುದೆಲ್ಲ ಬದಲಾಗಿದೆ. ಯಾವ ಬಟ್ಟೆಗೆ ಎಂಥ ಮೂಗುತಿ ಧರಿಸಬೇಕು ಎನ್ನುವುದೇ ಸದ್ಯದ ಟ್ರೆಂಡ್. ಸದ್ಯಕ್ಕೆ ಮಾರುಕಟ್ಟೆಯಲ್ಲಿ ಹಲಬಗೆಯ ವಿನ್ಯಾಸದ ಮೂಗುತಿಗಳು ಲಭ್ಯವಿದ್ದು, ಎಲ್ಲ ವಯೋಮಾನದ ಹೆಂಗಳೆಯರ ಕಣ್ಮನ ಸೆಳೆಯುತ್ತಿದೆ.

ಆಕ್ಸಿಡೈಸ್ಡ್ ನತ್ತು: ಆಕ್ಸಿಡೈಸ್ಡ್‌ನಿಂದ ತಯಾರಿಸಿದ ಎಲ್ಲ ಆಭರಣಗಳು ಯುವ ಮನಸ್ಸುಗಳನ್ನು ಸೆಳೆಯುತ್ತವೆ ಅದರಲ್ಲಿಯೂ ಆಕ್ಸಿಡೈಸ್ಡ್ ಮೂಗುನತ್ತು ಸದ್ಯ ಟ್ರೆಂಡ್‌ನಲ್ಲಿದೆ. ಕಾಲೇಜು ಸಮವಸ್ತ್ರವೇ ಇರಲಿ, ಫಾರ್ಮಲ್ಸ್ ಇರಲಿ ಈ ಆಕ್ಸಿಡೈಸ್ಡ್ ನತ್ತು ಚೆನ್ನಾಗಿ ಒಪ್ಪುತ್ತದೆ. ಇಂಡೊ ವೆಸ್ಟರ್ನ್ ಶೈಲಿಯ ಉಡುಪಿಗೂ ಆಕ್ಸಿಡೈಸ್ಡ್ ನತ್ತು ಹೇಳಿ ಮಾಡಿಸಿದ ಆಭರಣ. ಹಾಗಾಗಿ ಸಂಪ್ರದಾಯದಿಂದ ದೂರ ಉಳಿದವರೂ ಈ ನತ್ತಿನ ಗತ್ತಿಗೆ ಮಾರುಹೋಗುತ್ತಾರೆ.

ಮುತ್ತಿನ ನತ್ತು: ಮುತ್ತಿನ ನತ್ತು ಸದ್ಯಕ್ಕೆ ಚಾಲ್ತಿಯಲ್ಲಿರುವ ಮತ್ತೊಂದು ಟ್ರೆಂಡ್. ಸಾಂಪ್ರದಾಯಿಕ ಉಡುಪು, ಸೀರೆಗಳಿಗೆ ಇದು ಚೆನ್ನಾಗಿ ಒಪ್ಪುತ್ತದೆ.

ರಿಂಗ್ ಮಾದರಿಯ ನೋಸ್‌ಪಿನ್: ಮೂಗಿನಲ್ಲಿ ರಿಂಗ್ ನಮೂನೆಯ ನತ್ತು ಧರಿಸಲಾಗುತ್ತದೆ. ಇದು ನೋಡಲು ತುಸು ದೊಡ್ಡದಾಗಿ ಕಂಡರೂ, ಅಗಲ ಮುಖವಿರುವವರಿಗೆ ಚೆನ್ನಾಗಿ ಹೊಂದುತ್ತದೆ. ಇದರಲ್ಲಿ ವಿವಿಧ ವಿನ್ಯಾಸದ ನೋಸ್‌ಪಿನ್‌ಗಳಿವೆ.. ಇವು ಹೆಚ್ಚಾಗಿ ಸಾಂಪ್ರದಾಯಿಕ ಶೈಲಿಯ ಮೂಗುತಿಯಾಗಿದ್ದು, ಕೆಲವು ಕಡೆ ಮದುವೆಯಾದ ಹೆಣ್ಣುಮಕ್ಕಳು ಮಾತ್ರ ಇದನ್ನು ಧರಿಸಬೇಕು ಎಂಬ ನಿಯಮವಿದೆ.

ಹರಳು ಮೂಗುತಿ: ಒಂದು ಹರಳು, ಎರಡು ಅಥವಾ ಮೂರು ಹರಳುಗಳನ್ನು ಜೋಡಿಸಿರುವ ಮೂಗುತಿಗಳು ಹೆಚ್ಚು ಬಳಕೆಯಲ್ಲಿವೆ. ನೋಡಲು ಸರಳವಾಗಿದ್ದರೂ, ಧರಿಸಿದಾಗ ಆಕರ್ಷಕವಾಗಿ ಕಾಣುತ್ತದೆ. ಇತ್ತೀಚೆಗೆ ಈ ಮೂಗುತಿಗಳೂ ಟ್ರೆಂಡ್‌ನಲ್ಲಿವೆ.

ಬೆಳ್ಳಿ ಮೂಗುತಿ: ಸಣ್ಣ ಸಣ್ಣ ಕುಸುರಿಯಿಂದ ಬೆಳ್ಳಿ ಲೋಹದಲ್ಲಿ ಮಾಡಿರುವ ಮೂಗುತಿ ಇದು. ಇದಕ್ಕೆ ಹೆಚ್ಚಾಗಿ ಬಂಗಾರದ ಅಂಚು ಇರುತ್ತದೆ. ಬೆಳ್ಳಿ ಬಂಗಾರದ ಮಿಶ್ರಣದಂತೆ ಕಾಣುವ ಈ ಮೂಗುತಿಯೂ ಸಿಕ್ಕಾಪಟ್ಟೆ ಟ್ರೆಂಡ್‌ನಲ್ಲಿದೆ.

ಸೆಪ್ಟಂ: ಸೆಪ್ಟಂ ಈಗೀಗ ರೆಬೆಲಿಯನ್‌ಗಳ ಸಿಗ್ನೇಚರ್ ಆ್ಯಕ್ಸೆಸರಿ ಎಂದೇ ಖ್ಯಾತಿ ಪಡೆದಿದೆ. ಇದು ಹೆಚ್ಚಾಗಿ ಯುವಜನರ ಪ್ರೀತಿಯ ನತ್ತು. ಮೂಗಿನ ಮಧ್ಯಭಾಗದಲ್ಲಿ ಸಿಕ್ಕಿಸಿಕೊಳ್ಳುವ ಈ ನತ್ತು ಹೊಸ ಹೊಸ ಲೋಹದಲ್ಲಿ ಲಭ್ಯವಿದೆ. ಇದರ ನಾವೀನ್ಯತೆ ಹೊಸದೆಂದೇ ಅನಿಸಿದರೂ, ಇದರ ಬಳಕೆ ಪ್ರಾಚೀನ ಬುಡಕಟ್ಟು ಜನಾಂಗಗಳಲ್ಲಿ ಹೇರಳವಾಗಿತ್ತು.

ನವರಾತ್ರಿ 'ನೈವೇದ್ಯ'ಕ್ಕೆ ನಾನಾ ರೆಸಿಪಿ

ನವರಾತ್ರಿಯ ಒಂಬತ್ತು ದಿನಗಳಕಾಲ ಆದಿಶಕ್ತಿಯ ಪೂಜೆಯ ಜೊತೆಗೆ, ಪ್ರತಿ ದಿನದ ನೈವೇದ್ಯಕ್ಕಾಗಿ ಒಂದೊಂದು ವಿಶೇಷ ಖಾದ್ಯವನ್ನು ತಯಾರಿಸುತ್ತಾರೆ. ಪ್ರದೇಶವಾರು ಆಹಾರಪದ್ಧತಿಯನ್ನು ಅವಲಂಬಿಸಿ ಒಂದೊಂದು ದಿನವೂ ಒಂದೊಂದು ಭಕ್ಷ್ಯ ಮಾಡಿ ಪೂಜಿಸುವುದು ವಾಡಿಕೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ರಾಜ್ಯದ ಕೆಲವು ಭಾಗಗಳಲ್ಲಿ ದೇವಿಯ ನೈವೇದ್ಯಕ್ಕೆ ಹಯಗ್ರೀವ ಹಾಗೂ ಲಡ್ಡಿಗೆ ಉಂಡೆ ತಯಾರಿಸುತ್ತಾರೆ. ವಿಜಯದಶಮಿಯಂದು ಅಕ್ಕಿ ಬೆಲ್ಲ ತೆಂಗಿನಕಾಯಿಯನ್ನು ಬಳಸಿ ತಯಾರಿಸುವ ಎರೆಯಪ್ಪ ಬಡಿಸುವ ಪದ್ಧತಿ ಇದೆ. ನವರಾತ್ರಿ ನೆಪದಲ್ಲಿ ಎರೆಯಪ್ಪ ಅಥವಾ ಎರೆಯವು, ಲಡ್ಡಿಗೆ, ಹಯಗ್ರೀವ ಅಥವಾ ಕಡಲೆಮಡ್ಡಿ ಹಾಗೂ ಮಿಶ್ರಕಾಳುಗಳ ಉಸಳಿ ಮಾಡುವ ರೆಸಿಪಿಗಳ ಬಗ್ಗೆ ಮಾಹಿತಿ ನೀಡಿದ್ದಾರೆ **ಜಯಲಕ್ಷ್ಮಿ ಹೆಗಡೆ.**

ನಳಪಾಕ

ಎರೆಯಪ್ಪ

ಬೇಕಾಗುವ ಸಾಮಗ್ರಿ: –ಬೆಳ್ತಿಗೆ ಅಕ್ಕಿ - 1ಕಪ್, ತೆಂಗಿನ ತುರಿ- ಕಾಲು ಕಪ್, ಮೆಂತ್ಯ ಕಾಲು ಚಮಚ , ಅವಲಕ್ಕಿ ಅಥವಾ ಅರಳು -ಕಾಲು ಕಪ್, ಬೆಲ್ಲ ,-ಮುಕ್ಕಾಲು ಕಪ್, ಏಲಕ್ಕಿ-ನಾಲ್ಕು, ಕರಿಯಲು ಎಣ್ಣೆ, ಚಿಟಿಕೆ ಉಪ್ಪು .

ತಯಾರಿಸುವ ವಿಧಾನ: ಅಕ್ಕಿ ಹಾಗೂ ಮೆಂತ್ಯವನ್ನು ಚೆನ್ನಾಗಿ ತೊಳೆದು ನಾಲ್ಕು ತಾಸು ನೆನೆಹಾಕಬೇಕು. ಅವಲಕ್ಕಿ ಅರ್ಧಗಂಟೆ ನೆನೆದರೆ ಸಾಕು. ಬೆಲ್ಲ(ಜೋನಿ ಅಥವಾ ಗಟ್ಟಿಬೆಲ್ಲ ಯಾವುದಾದರೂ ಓಕೆ, ಕಸವಿದ್ದರೆ ಕರಗಿಸಿ ಸೋಸಿಕೊಳ್ಳಬೇಕು), ಚೆನ್ನಾಗಿ ನೆನೆದ ಅಕ್ಕಿ, ಅವಲಕ್ಕಿ ಮೆಂತ್ಯ, ಕಾಯಿತುರಿ ಹಾಗೂ ಏಲಕ್ಕಿ ಸೇರಿಸಿ, ಹೆಚ್ಚು ನೀರು ಹಾಕದೇ ನುಣ್ಣಗೆ ರುಬ್ಬಬೇಕು. ಇಡ್ಲಿ ಹಿಟ್ಟಿನ ಹದದಲ್ಲಿದ್ದರೆ ಸಾಕು. ಚಿಟಿಕೆ ಉಪ್ಪು ಸೇರಿಸಿ ಹದಮಾಡಿಕೊಂಡ ಹಿಟ್ಟನ್ನು ಕಾದ ಎಣ್ಣೆಯಲ್ಲಿ ಕರಿಯಬೇಕು. ಸಣ್ಣ ಸೌಟಿನಷ್ಟು ಹಿಟ್ಟನ್ನು ಒಮ್ಮೆಲೆ ಎಣ್ಣೆಗೆ ಬಿಟ್ಟು, ಒಂದು ಸೌಟು ಹಿಟ್ಟಿಂದ ಒಂದು ಎರೆಯಪ್ಪ ಆಗುವಂತೆ ಹಿಟ್ಟು ಸುರಿಯಬೇಕು. ಮಧ್ಯಮ ಉರಿಯಲ್ಲಿ ಎರಡೂ ಕಡೆ ಚೆನ್ನಾಗಿ (ಗೋಲ್ಡನ್ ಬ್ರೌನ್ ಬಣ್ಣ ಬರುವಂತೆ) ಕರಿಯಬೇಕು. ಒಂದು ಬಾರಿಗೆ ಒಂದೇ ಎರೆಯಪ್ಪವನ್ನು ಕರಿಯಲು ಸಾಧ್ಯವಾದ್ದರಿಂದ ಗುಂಡಿತಳವಿರುವ ಸಣ್ಣ ಬಾಣಲೆ ಬಳಸಿದರೆ ಉತ್ತಮ.

ಕಡಲೆಮಡ್ಡಿ(ಹಯಗ್ರೀವ)

ಬೇಕಾಗುವ ಸಾಮಗ್ರಿ: ಕಡಲೆ ಬೇಳೆ 2 ಕಪ್, ತೆಂಗಿನ ತುರಿ ಒಂದು ಕಪ್, ಬೆಲ್ಲ ಒಂದೂವರೆ ಕಪ್, ಒಂದು ಚಮಚ ಏಲಕ್ಕಿ ಪುಡಿ, 2 ಚಮಚ ಗಸಗಸೆ, ಅರ್ಧ ಕಪ್ ತುಪ್ಪ, ಹತ್ತು-ಹದಿನೈದು ಗೋಡಂಬಿ, ಸ್ವಲ್ಪ ಒಣದ್ರಾಕ್ಷಿ.

ತಯಾರಿಸುವ ವಿಧಾನ: ಸುಮಾರು ಎರಡು ತಾಸು ನೆನೆಸಿದ ಕಡಲೆಬೇಳೆಯನ್ನು ಮೆತ್ತಗೆ ಬೇಯಿಸಿ, ನೀರನ್ನು ಬಸಿದಿಟ್ಟುಕೊಳ್ಳಬೇಕು. ದಪ್ಪ ತಳದ ಪಾತ್ರೆಗೆ ಎರಡು ಚಮಚ ತುಪ್ಪದೊಂದಿಗೆ ಬೆಂದಿರುವ ಕಡಲೆ ಬೇಳೆ, ಬೆಲ್ಲ, ಕಾಯಿತುರಿ ಹಾಕಿ ಕಾಯಿಸಬೇಕು. ಬೆಲ್ಲ ಕರಗಿದಾಗ ಕಾಯಿತುರಿಯೊಡನೆ ಸೇರಿ ಈ ಮಿಶ್ರಣ ಸ್ವಲ್ಪ ತೆಳುವಾಗುತ್ತದೆ. ನಂತರ ತಳ ಹಿಡಿಯದಂತೆ ಸಣ್ಣ ಉರಿಯಲ್ಲಿ ಹತ್ತು ನಿಮಿಷದ ಕಾಲ ಮೇಲೆ ಕೆಳಗೆ ಮಗುಚುತ್ತಾ ಕಾಯಿಸಬೇಕು. ಉಳಿದಿರುವ ತುಪ್ಪವನ್ನು ಕಾಯಿಸುವಾಗ ಆಗಾಗ ಸೇರಿಸಿ. ಕೊನೆಯಲ್ಲಿ ಏಲಕ್ಕಿ, ತುಪ್ಪದಲ್ಲಿ ಹುರಿದ ಗಸಗಸೆ, ದ್ರಾಕ್ಷಿ, ಗೋಡಂಬಿಯನ್ನು ಸೇರಿಸಿದರೆ ಘಮಘಮಿಸುವ ಹಯಗ್ರೀವ ದೇವಿಯ ಪೂಜೆಗೆ ಸಿದ್ಧ.ಬೆಲ್ಲದ ಬದಲಾಗಿ ಸಕ್ಕರೆಯನ್ನೂ ಬಳಸಬಹುದು. ಹಾಲಿನಲ್ಲಿ ಕರಡಿದ ಕೇಸರಿ ದಳ ಸೇರಿಸಿದರೆ ಇನ್ನೂ ಪರಿಮಳ ಹಾಗೂ ರುಚಿ ಹೆಚ್ಚು.



ಲಡ್ಡಿಗೆ

ಬೇಕಾಗುವ ಸಾಮಗ್ರಿ: ಕಡಲೆ ಹಿಟ್ಟು- 2 ಕಪ್, ಬೆಲ್ಲ ಒಂದು ಕಪ್, ಕೊಬ್ಬರಿ ತುರಿ- ಅರ್ಧ ಕಪ್ ಕರಿಯಲು ಎಣ್ಣೆ ನಾಲ್ಕು ಏಲಕ್ಕಿ, ಚಿಟಿಕೆ ಉಪ್ಪು

ತಯಾರಿಸುವ ವಿಧಾನ: ಜರಡಿ ಹಿಡಿದ ಕಡಲೆಹಿಟ್ಟನ್ನು ಸ್ವಲ್ಪ ಸ್ವಲ್ಪ ನೀರು ಸೇರಿಸಿ ಗಂಟಿಲ್ಲದಂತೆ ಇಡ್ಲಿ ಹಿಟ್ಟಿನ ಹದಕ್ಕೆ ಕರಡಿಕೊಳ್ಳಿ . ಬಾಣಲೆಯಲ್ಲಿ ಎಣ್ಣೆ ಕಾಯಿಸಿಕೊಂಡು ಬೂಂದಿಕಾಳು ಕರೆಯುವ ಸೌಟಿನಲ್ಲಿ ಹಿಟ್ಟನ್ನು ಬಿಟ್ಟು ಗರಿಗರಿಯಾಗಿ ಕಾಳನ್ನು ಕರಿಯಬೇಕು. ಇನ್ನೊಂದು ಪಾತ್ರೆಯಲ್ಲಿ ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ ಪಾಕಕ್ಕಿಡಬೇಕು. ಒಂದೆಳೆ ಪಾಕ ಬಂದ ಮೇಲೆ ಸಣ್ಣಗೆ ತುರಿದುಕೊಂಡ ಕೊಬ್ಬರಿಯನ್ನು ಸೇರಿಸಬೇಕು. ಈಗ ಈ ಪಾಕಕ್ಕೆ ಮೊದಲೇ ಕರಿದಿಟ್ಟುಕೊಂಡ ಕಾಳು ಹಾಗೂ ಏಲಕ್ಕಿ ಪುಡಿಯನ್ನು ಸೇರಿಸಿ, ಪಾಕ ಹಾಗೂ ಕಾಳು ಚೆನ್ನಾಗಿ ಹೊಂದಿಕೊಳ್ಳುವಂತೆ ಸರಿಯಾಗಿ ಕಲಸಬೇಕು. ತಣ್ಣಗಾಗಲು ಬಿಟ್ಟರೆ ಹುಡಿ ಹುಡಿಯಾದ ಲಡ್ಡಿಗೆ ರೆಡಿಯಾಗುತ್ತದೆ. ಬದಲಾಗಿ ಬಿಸಿಯಾಗಿರುವಾಗಲೇ ಉಂಡೆ ಕಟ್ಟಿದರೆ ಲಡ್ಡಿಗೆ ಉಂಡೆ ರೆಡಿಯಾಗುತ್ತದೆ.



ಕಾಳುಗಳ ಉಸಲಿ

ಬೇಕಾಗುವ ಸಾಮಗ್ರಿ: ಕಡಲೆಕಾಳು ಒಂದು ಕಪ್, ಅಲಸಂದೆಕಾಳು ಒಂದು ಕಪ್ ಬಟಾಣಿ ಕಾಳು 1ಕಪ್, ಕಾಯಿತುರಿ ಒಂದು ಕಪ್, ಒಂದು ಚಮಚ ಜೀರಿಗೆ, ಒಂದು ಇಂಚಿನಷ್ಟು ಶುಂಠಿ, ನಾಲ್ಕು ಹಸಿಮೆಣಸಿನಕಾಯಿ, ಒಂದು ಚಮಚ ಹುಣಸೆ ರಸ ಅಥವಾ ಒಂದು ನಿಂಬೆಹಣ್ಣು, ಒಗ್ಗರಣೆಗೆ ಎಣ್ಣೆ, ಸಾಸಿವೆ, ಉಪ್ಪು ರುಚಿಗೆ ಬೇಕಾದಷ್ಟು, ಕರಿಬೇವು, ಕಾಲು ಚಮಚ ಅರಿಶಿಣ ಪುಡಿ, ಒಂದು ಒಣಮೆಣಸು, ಇಂಗು, ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಒಂದು ಹಿಡಿಯಷ್ಟು.

ಮಾಡುವ ವಿಧಾನ: ಎಲ್ಲ ಕಾಳುಗಳನ್ನು ಐದರಿಂದ ಆರು ತಾಸು ನೆನೆಸಿಟ್ಟುಕೊಳ್ಳಬೇಕು. ರುಚಿಗೆ ಬೇಕಾದಷ್ಟು ಉಪ್ಪು, ಒಂದು ಚಮಚ ಎಣ್ಣೆ ಹಾಗೂ ಬೇಯಲು ಬೇಕಾದಷ್ಟು ನೀರನ್ನು ಹಾಕಿ ಈ ಕಾಳುಗಳನ್ನು ಮೆತ್ತಗೆ ಬೇಯಿಸಿಕೊಳ್ಳಬೇಕು. ಕಾಯಿತುರಿ ಹಸಿಮೆಣಸು ಹಾಗೂ ಶುಂಠಿ ಇವುಗಳನ್ನು ರುಬ್ಬಿ ಪೇಸ್ಟ್ ತಯಾರಿಸಿಕೊಳ್ಳಬೇಕು. ಈಗ ಒಂದು ಬಾಣಲೆಗೆ ಒಗ್ಗರಣೆಗೆ ಬೇಕಾದಷ್ಟು ಎಣ್ಣೆಯನ್ನು ಹಾಕಿ ಅದಕ್ಕೆ ಸಾಸಿವೆ ಕರಿಬೇವು ಒಣಮೆಣಸು, ಕಾಲು ಚಮಚ ಅರಿಶಿನ ಪುಡಿ ಹಾಗೂ ಚಿಟಿಕೆ ಇಂಗನ್ನು ಹಾಕಿ, ಅದಕ್ಕೆ ಬೇಯಿಸಿ ನೀರು ಬಸಿದಿಟ್ಟ ಕಾಳುಗಳನ್ನು ಮತ್ತು ರುಬ್ಬಿಟ್ಟುಕೊಂಡ ಮಸಾಲೆಯನ್ನು ಸೇರಿಸಿ ಸ್ವಲ್ಪ ಹೊತ್ತು ಸಣ್ಣ ಉರಿಯಲ್ಲಿಟ್ಟು ಕಲಕಬೇಕು. ಕೊನೆಯಲ್ಲಿ ನಿಂಬೆರಸ ಹಾಗೂ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಸೇರಿಸಿದರೆ ಪ್ರಸಾದ ಸಿದ್ಧ.

ಅನಿವಾರ್ಯ ಕಾರಣಗಳಿಂದ ಈ ವಾರದ ಸಂಚಿಕೆಯಲ್ಲಿ ನಡಹಳ್ಳಿ ವಸಂತ್ ಅವರ ಏನಾದ್ರೂ ಕೇಳ್ಬೋದು ಅಂಕಣ ಪ್ರಕಟವಾಗಿಲ್ಲ. – ಸಂ

ವಿದ್ಯುತ್ ಕಂಬಕ್ಕೆ ಕಟ್ಟಿ ಪರಿಶಿಷ್ಟ ಬಾಲಕನಿಗೆ ಥಳಿತ

ಚಿಕ್ಕಬಳ್ಳಾಪುರ: ಜಿಲ್ಲೆಯ ಗ್ರಾಮವೊಂದರಲ್ಲಿ ಕಳ್ಳತನ ಆರೋಪದ ಮೇಲೆ ಪರಿಶಿಷ್ಟ ಜಾತಿಯ, 14 ವರ್ಷದ ಬಾಲಕನೊಬ್ಬನನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ಶುಕ್ರವಾರ ಹಲ್ಲೆ ನಡೆಸಲಾಗಿದೆ.

ಹಲ್ಲೆ ತಡೆಯಲು ಮುಂದಾದ ಬಾಲಕನ ತಾಯಿ ಮೇಲೂ ಹಲ್ಲೆ ನಡೆಸಲಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಕುರಿತು ನಾರಾಯಣಸ್ವಾಮಿ, ನವೀನ್, ಹರೀಶ್, ದೊಡ್ಡೇಗೌಡ, ಮೀನದಾಸಪ್ಪ, ಅಂಬಿಕಾ, ಡಿಶ್ ಮಂಜು, ನಾರಾಯಣಸ್ವಾಮಿ ಮತ್ತು ನಾಗರಾಜ ಎಂಬುವರ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ. 'ಗ್ರಾಮದ ನಾಗರಾಜ ಎಂಬುವರ ನಾಲ್ಕು ವರ್ಷದ ಮಗುವನ್ನು ಬಾಲಕ ಅಪಹರಿಸಿಕೊಂಡು ಹೋಗಿ, ಚಿನ್ನದ ಸರ, ಓಲೆಗಳು ಮತ್ತು ಬೆಳ್ಳಿಯ ಕಾಲು ಚೈನ್ ಕಿತ್ತುಕೊಂಡು ಹೋಗಿದ್ದಾನೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಮಗುವಿನ ಕುಟುಂಬಸ್ಥರು ಠಾಣೆಗೆ ದೂರು ನೀಡಿದ್ದು, ಪೊಲೀಸರು ಇನ್ನೂ ಪ್ರಕರಣ ದಾಖಲಿಸಿಕೊಂಡಿಲ್ಲ.

ಮೈಸೂರು ವಿ. ಸುಬ್ರಹ್ಮಣ್ಯ ನಿಧನ

ಬೆಂಗಳೂರು: ಸಂಗೀತ ಕಲಾವಿದ ಹಾಗೂ ಕಲಾ ವಿಮರ್ಶಕ ಮೈಸೂರು ವಿ.ಸುಬ್ರಹ್ಮಣ್ಯ (73) ಶುಕ್ರವಾರ ನಿಧನರಾದರು.

ಮಲ್ಲೇಶ್ವರದಲ್ಲಿ ವಾಸವಿದ್ದ ಅವರಿಗೆ, ಅಂಗಾಂಗ ವೈಫಲ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಬಿದ್ದು ಗಾಯಗೊಂಡಿದ್ದ ಅವರನ್ನು ಸೇವಾಕ್ಷೇತ್ರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಧ್ಯಾಹ್ನ 2.30ಕ್ಕೆ ಮೃತಪಟ್ಟರು. ಅವರಿಗೆ ಸಹೋದರಿ ರಮಾ ಬೆಣ್ಣೂರ್, ಸಹೋದರ ರಮೇಶ್ ಇದ್ದಾರೆ. ಕಳೆದ ಜನವರಿಯಲ್ಲಿ ಅವರ ಪತ್ನಿ ಸಾವಿತ್ರಿ ನಿಧನರಾಗಿದ್ದರು.

ಸಂಜೆಯವರೆಗೂ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಚಾಮರಾಜಪೇಟೆಯ ಟಿ.ಆರ್. ಮಿಲ್‌ನಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಮನೆಮಾತಾಗಿರುವ ಸುಬ್ರಹ್ಮಣ್ಯ ಅವರು, ಮೈಸೂರ್ ಆಸ್ಥಾನ ವಿದ್ವಾನ್ ಹಾಗೂ ಸಂಗೀತ ಮನೆತನಕ್ಕೆ ಸೇರಿದವರಾಗಿದ್ದಾರೆ. ವೀಣೆ ಶೇಷಣ್ಣ ಅವರು ಇವರ ಮುತ್ತಾತ. ತಂದೆ ವೆಂಕಟನಾರಾಯಣ ರಾಯರು ವೈಣಿಕರಾಗಿದ್ದರು. ಅವರಿಂದ ಸಂಗೀತಾಭ್ಯಾಸ ಮಾಡಿದ ಇವರು, ಹಾಡುಗಾರಿಕೆ ಹಾಗೂ ವೀಣಾವಾದನದಲ್ಲಿ ಪ್ರೌಢಿಮೆ ಹೊಂದಿದ್ದರು. ಸಂಗೀತದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿದ ಇವರಿಗೆ ವಿಮರ್ಶಾ ಕ್ಷೇತ್ರದಲ್ಲಿ ಹೆಚ್ಚಿನ ಒಲವಿತ್ತು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳಿಗೆ ನಿಯಮಿತವಾಗಿ ಕಲಾ ವಿಮರ್ಶೆ ಬರೆದಿದ್ದರು. ಬೆಂಗಳೂರು ಗಾಯನ ಸಮಾಜದ 38ನೇ ಸಂಗೀತ ಗೋಷ್ಠಿಯ ಅಧ್ಯಕ್ಷರಾಗಿದ್ದರು. 'ಮುರಳಿವಾಣಿ' ಹಾಗೂ 'ಗಾನ ಕಲಾ ಮಂಜರಿ' ಕೃತಿಗಳನ್ನು ಸಂಪಾದಿಸಿದ್ದಾರೆ. ಸಂಗೀತ ಕಲಾರತ್ನ, ಸಂಗೀತ ಕಲಾ ಭೂಷಣ, ಕರ್ನಾಟಕ ಕಲಾಶ್ರೀ, ಸಾಹಿತ್ಯ ಕಲಾಶ್ರೀ ಪ್ರಶಸ್ತಿಗಳು ಅವರಿಗೆ ಸಂದಿವೆ.

98 ಮನೆಗಳಿಗೆ ಹಾನಿ • ಉತ್ತರ ಕರ್ನಾಟಕದ ವಿವಿಧೆಡೆ ಮಳೆ

ಧಾರಾಕಾರ ಮಳೆ: ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಬಳಗಾನೂರು ಗ್ರಾಮದಲ್ಲಿ ಮಳೆಯಿಂದ ಮನೆ ಕುಸಿದು ಮರಿಯಪ್ಪ (55) ಎಂಬುವರು ಮೃತಪಟ್ಟಿದ್ದಾರೆ.

ಮರಿಯಪ್ಪ ಅವರ ಪತ್ನಿ ಮತ್ತು ಪುತ್ರಿ ಗಾಯಗೊಂಡಿದ್ದಾರೆ. ಮಸ್ಕಿ ಜಲಾಶಯ ಭರ್ತಿಯಾಗಿದ್ದರಿಂದ ಹಳ್ಳಕ್ಕೆ ನೀರು ಹರಿಬಿಡಲಾಗುತ್ತಿದೆ. ಶುಕ್ರವಾರ ಇಡೀ ದಿನ ಜಿಲ್ಲೆಯಲ್ಲಿ ಮಳೆಯಾಯಿತು.

ಕೊಪ್ಪಳ ತಾಲ್ಲೂಕಿನ ಕಾಟ್ರಳ್ಳಿ ಬಳಿ ಸಿಡಿಲು ಬಡಿದು ಚಿಕ್ಕಸಿಂದೋಗಿ ಗ್ರಾಮದ ರೈತ ಕೊಟ್ರೇಶ (23) ಎಂಬುವರು ಮೃತಪಟ್ಟಿದ್ದಾರೆ. ಮಹಿಳೆಯೊಬ್ಬರು ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಕೊಪ್ಪಳ ಜಿಲ್ಲೆಯಲ್ಲಿ ಗುರುವಾರ ರಾತ್ರಿ ಮತ್ತು ಶುಕ್ರವಾರ ಉತ್ತಮ ಮಳೆಯಾಗಿದ್ದು, ಮನೆ, ಬೆಳೆಗಳಿಗೆ ಹಾನಿಯಾಗಿದೆ. ಯಲಬುರ್ಗಾ ತಾಲ್ಲೂಕಿನಲ್ಲಿ ಎರಡು ದಿನಗಳಲ್ಲಿ ಒಟ್ಟು 53 ಮನೆಗಳಿಗೆ ಹಾನಿಯಾಗಿದೆ.

ರಾಜ್ಯದಲ್ಲಿ ಒಂದೇ ದಿನ ಹೆಚ್ಚು ಮಳೆ ಸುರಿದ ಮೊದಲ ಮೂರು ಊರುಗಳ ಪಟ್ಟಿಯಲ್ಲಿ ಕೊಪ್ಪಳ ತಾಲ್ಲೂಕಿನ ಹಿಟ್ನಾಳ (10.06 ಸೆಂ.ಮೀ), ಬೇವಿನಹಳ್ಳಿ (10.04 ಸೆಂ.ಮೀ) ಇವೆ. ಮೊದಲ ಸ್ಥಾನದಲ್ಲಿ ರೋಣ ತಾಲ್ಲೂಕಿನ ಕುಂಟೋಜಿ (10.08 ಸೆಂ.ಮೀ.) ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ (ಹುಬ್ಬಳ್ಳಿ ವರದಿ): ಹುಬ್ಬಳ್ಳಿ, ಧಾರವಾಡ, ಗದಗ, ಹೊಸಪೇಟೆ, ವಿಜಯಪುರ, ಕಾರವಾರ ಸೇರಿದಂತೆ ವಿವಿಧೆಡೆ ಮಳೆಯಾಗಿದೆ.

ಕೆಲ ದಿನಗಳಿಂದ ಬಿಡುವು ನೀಡಿದ್ದ ಮಳೆ ಗುರುವಾರ ರಾತ್ರಿ ಹಾಗೂ ಶುಕ್ರವಾರ ಸಾಯಂಕಾಲ ಧಾರಾಕಾರವಾಗಿ ಸುರಿದಿದೆ. ಗುಡುಗು, ಮಿಂಚಿನ ಸಹಿತ ರಭಸದ ಮಳೆಯಾಗಿದೆ. ಶುಕ್ರವಾರ ದಿನವಿಡೀ ಬಿಡುವಿಲ್ಲದ ವರ್ಷಧಾರೆಗೆ ವಿಜಯನಗರ ಜಿಲ್ಲೆಯಲ್ಲಿ 30 ಮನೆಗಳಿಗೆ ಹಾನಿಯಾಗಿದ್ದು, ಬಳ್ಳಾರಿ ಜಿಲ್ಲೆಯಲ್ಲಿ 7 ಮನೆಗಳು ಭಾಗಶಃ ಕುಸಿದು ಬಿದ್ದಿವೆ. ಗುರುವಾರ ರಾತ್ರಿಯಿಡಿ ಗುಡುಗು ಸಹಿತ ಮಳೆಯಾಗಿತ್ತು. ಸತತ ಮೂರನೇ ದಿನ ಸುರಿದ ಮಳೆಗೆ ಜೋಳ, ಮೆಕ್ಕೆಜೋಳ, ಭತ್ತದ ಗದ್ದೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿದೆ.

ಹುಬ್ಬಳ್ಳಿ ನಗರದಲ್ಲಿ ಧಾರಾಕಾರ ಮಳೆ ಸುರಿಯಿತು. ಹುಬ್ಬಳ್ಳಿ ನಗರ ಹಾಗೂ ಗ್ರಾಮೀಣ ತಾಲ್ಲೂಕು ವ್ಯಾಪ್ತಿಯಲ್ಲಿ 8 ಮನೆಗಳು ಭಾಗಶಃ ಕುಸಿದಿವೆ. ಕಾರವಾರವೂ ಸೇರಿದಂತೆ ಉತ್ತರ ಕನ್ನಡದ ಕರಾವಳಿಯಾದ್ಯಂತ ಉತ್ತಮ ಮಳೆಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಮಳೆ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧೆಡೆ ಮಳೆ ಸುರಿಯುತ್ತಿದೆ. ಗುರುವಾರ ರಾತ್ರಿ 11ರಿಂದಲೇ ಆರಂಭವಾದ ಮಳೆ ಶುಕ್ರವಾರ ಬೆಳಿಗ್ಗೆಯೂ ಜಿಟಿಜಿಟಿಯಾಗಿ ಸುರಿಯಿತು. ಸಂಜೆ ವೇಳೆ ಮಳೆ ತುಸು ಜೋರಾಗಿಯೇ ಸುರಿಯಿತು. ಜಿಲ್ಲೆಯಲ್ಲಿ ಸರಾಸರಿ 14.2 ಮಿ.ಮೀ ಮಳೆಯಾಗಿದೆ.

ಪದವಿ ಕಾಲೇಜುಗಳಿಗೆ ಇಂದಿನಿಂದ ರಜೆ

ಪ್ರಜಾವಾಣಿ ವಾರ್ತೆ

ಮಂಗಳೂರು: ರಾಜ್ಯದ ಎಲ್ಲ ಸರ್ಕಾರಿ, ಖಾಸಗಿ ಮತ್ತು ಅನುದಾನಿತ ಪದವಿ ಕಾಲೇಜುಗಳ ಅಧ್ಯಾಪಕರಿಗೆ ಅ. 1ರಿಂದ 9ರ ವರೆಗೆ ದಸರಾ ರಜೆ ಘೋಷಿಸಿ ಉನ್ನತ ಶಿಕ್ಷಣ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಈ ಮೊದಲು ಸರ್ಕಾರಿ ಪದವಿ ಕಾಲೇಜು ಅಧ್ಯಾಪಕರಿಗೆ ಮಾತ್ರ ರಜೆ ಘೋಷಿಸಲಾಗಿತ್ತು. ಖಾಸಗಿ ಮತ್ತು ಅನುದಾನಿತ ಕಾಲೇಜುಗಳವರು ಸರ್ಕಾರಕ್ಕೆ ಪತ್ರ ಬರೆದು ತಮಗೂ ರಜೆ ನೀಡುವಂತೆ ಕೋರಿದ್ದರು.

ಭ್ರಷ್ಟಾಚಾರ: ತಹಶೀಲ್ದಾರ್ ಪುರಂದರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಾಗ ಮಾರಾಟಕ್ಕೆ ಸಂಬಂಧಿಸಿ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಲು ಲಂಚ ಪಡೆದ ಆರೋಪದ ಮೇರೆಗೆ ಮಂಗಳೂರು ತಹಶೀಲ್ದಾರ್ ಪುರಂದರ ಹಾಗೂ ಕಚೇರಿಯ ಪ್ರಥಮ ದರ್ಜೆ ಸಹಾಯಕ ಶಿವಾನಂದ ನಾಟೇಕರ್ ಅವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ನಗರದ ಕಾವೂರು ನಿವಾಸಿಯೊಬ್ಬರು ಜಾಗ ಮಾರಾಟಕ್ಕೆ ಎನ್‌ಒಸಿ ನೀಡುವಂತೆ ತಹಶೀಲ್ದಾರ್‌ಗೆ ಮೂರು ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. 'ಕೆಲಸ ಮಾಡಿಕೊಡಬೇಕಾದರೆ ತನಗೆ ಹಾಗೂ ತಹಶೀಲ್ದಾರ್‌ಗೆ ಲಂಚ ಕೊಡಬೇಕು ಎಂದು ಶಿವಾನಂದ ಬೇಡಿಕೆ ಇಟ್ಟಿದ್ದರು' ಎಂದು ಅರ್ಜಿದಾರರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಪುರಂದರ

'ಅರ್ಜಿದಾರರಿಂದ ₹ 4,700 ಲಂಚದ ಹಣ ಪಡೆದ ಶಿವಾನಂದ ಅವರನ್ನು ಬಂಧಿಸಿದ್ದೇವೆ. ಲಂಚದ ಹಣದಲ್ಲಿ ತಹಶೀಲ್ದಾರ್ ಅವರಿಗೂ ಪಾಲು ಇತ್ತು. ಹಾಗಾಗಿ ತಹಶೀಲ್ದಾರ್ ಪುರಂದರ ಅವರನ್ನೂ ಬಂಧಿಸಿದ್ದೇವೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಬಂಧಿತರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದೇವೆ. ಇಬ್ಬರಿಗೂ ನ್ಯಾಯಾಂಗ ಬಂಧನ ವಿಧಿಸಲಾಗಿದೆ' ಎಂದು ದಕ್ಷಿಣ ಕನ್ನಡ ಜಿಲ್ಲೆಯ ಲೋಕಾಯುಕ್ತ ಎಸ್‌ಪಿ ಲಕ್ಷ್ಮಿ ಗಣೇಶ್ ತಿಳಿಸಿದ್ದಾರೆ.

ಪುರಂದರ, ವಿಜಯಪುರ ಜಿಲ್ಲೆ ಗುಣಕಿ ಗ್ರಾಮದವರು. ಶಿವಾನಂದ ಬಂಟ್ವಾಳ ತಾಲ್ಲೂಕಿನ ಬಿ.ಮೂಡ ಗ್ರಾಮದವರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	123.64	5,341	7,034
ಹಾರಂಗಿ	2,859	2,856.12	475	1,650
ಕಬಿನಿ	2284	2,282.66	1,654	1,000
ಹೇಮಾವತಿ	2,922	2,921.68	2,172	3,225
ಲಿಂಗನಮಕ್ಕಿ	1,819	1,815	1,839	7,908
ಸೂಪಾ (ಮೀ)	564	553.79	1,301	3,838
ಮಾಣಿ	595	590	137	724
ತುಂಗಭದ್ರಾ	1,633	1,632	48,670	24,484
ಮಲಪ್ರಭಾ	2079.5	2,079.50	694	694
ಘಟಪ್ರಭಾ	2175	2,174.767	1,168	2,609
ಭದ್ರಾ	186	184	2,922	3,200
ಆಲಮಟ್ಟಿ (ಮೀ)	519.6	519.60	14,043	14,043
ನಾರಾಯಣಪುರ (ಮೀ)	492.25	492.08	18,000	12,200

*ನೆಲಮಟ್ಟದಿಂದ

ಪೌಷ್ಟಿಕ ಆಹಾರ ಸೇವಿಸಿ

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255
ಸಂಖ್ಯೆ: BMC-13013/5/2022 ದಿನಾಂಕ: 30.09.2022
ಇ–ಟೆಂಡರ್ ಅಧಿಸೂಚನೆ
ರಾಜ್ಯದ 31 ಜಿಲ್ಲಾಧಿಕಾರಿಗಳ ಕಚೇರಿ, 53 ಉಪವಿಭಾಗಾಧಿಕಾರಿಗಳ ಕಚೇರಿ ಮತ್ತು 234 ತಾಲ್ಲೂಕು ಕಚೇರಿಗಳಿಗೆ ಒಟ್ಟು 636 Desktop Computer ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 31.10.2022 ರ ಸಂಜೆ 5.00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಆಯುಕ್ತರು,
ವಾತಾಸಂ/ಪಾವ್ರ/ಇತ್ಯಾ/2465/2022–23 ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
ಮೊದಲನೆ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ ಸಂಖ್ಯೆ: 080–22113255
ಸಂಖ್ಯೆ: BMC-13013/6/2022 ದಿನಾಂಕ: 30.09.2022
ಇ–ಟೆಂಡರ್ ಅಧಿಸೂಚನೆ
ರಾಜ್ಯದ 31 ಜಿಲ್ಲಾಧಿಕಾರಿಗಳ ಕಚೇರಿ, 53 ಉಪವಿಭಾಗಾಧಿಕಾರಿಗಳ ಕಚೇರಿ ಮತ್ತು 234 ತಾಲ್ಲೂಕು ಕಚೇರಿಗಳಿಗೆ ಒಟ್ಟು 318 Printers ಗಳನ್ನು ಸರಬರಾಜು ಮಾಡಲು ಇ–ಟೆಂಡರ್ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ದಿನಾಂಕ: 19.10.2022 ರ ಸಂಜೆ 5.00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್ ಷರತ್ತು ಮತ್ತಿತರ ವಿವರಗಳನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/– ಸಹಾಯಕ ಆಯುಕ್ತರು,
ವಾತಾಸಂ/ಪಾವ್ರ/ಇತ್ಯಾ/2466/2022–23 ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

ಪ್ರಧಾನ ಇಂಜಿನಿಯರ್ ರವರ ಕಚೇರಿ, ಪಿ.ಆರ್.ಎಂ.ಜಿ.ಎಸ್.,
4ನೇ ಮಹಡಿ, ಎಂಎಸ್‌ಬಿ–2, ಇ–ವಿಂಗ್, ಆರ್ಸಿ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂಖ್ಯೆ: ಲೋಇ/40/ಟೆಂಡರ್/2022–23 ದಿನಾಂಕ: 30–09–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ತುಮಕೂರು ಜಿಲ್ಲೆ ಒಂದು ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಒಂದು ಬುಡಕಟ್ಟು ಉಪಯೋಜನೆ 2 ಕಟ್ಟಡ ಕಾಮಗಾರಿಗಳಿಗೆ (ಕರೆ–2), ಬಾಗಲಕೋಟೆ ಜಿಲ್ಲೆ–2 ರಸ್ತೆ ಸುರಕ್ಷತಾ ಕಾಮಗಾರಿಗಳು, ಧಾರವಾಡ ಜಿಲ್ಲೆ–2 ರಸ್ತೆ ಸುರಕ್ಷತಾ ಕಾಮಗಾರಿಗಳು ಮತ್ತು ಚಿತ್ರದುರ್ಗ ಜಿಲ್ಲೆಯ ಒಂದು ರಸ್ತೆ ಸುರಕ್ಷತಾ ಕಾಮಗಾರಿ, ಒಟ್ಟು 7 ಕಾಮಗಾರಿಗಳಿಗೆ ಕಾರ್ಯನಿರ್ವಾಹಕ ಇಂಜಿನಿಯರ್, ಪಿ.ಆರ್.ಎಂ.ಜಿ.ಎಸ್., ರವರು ಪಟ್ಟಿಯಲ್ಲಿ ಪರವಾನಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪೋರ್ಟಲ್ (www.eproc.karnataka.gov.in) ದಿನಾಂಕ: 30–09–2022 ರ ಸಂಜೆ 05:30 ರಿಂದ ಪಡೆಯಬಹುದಾಗಿದೆ.
ವಾತಾಸಂ/ಪಾವ್ರ/2441/ಪ್ರಪ್ರ/2022–23 ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಿಆರ್‌ಎಂಜಿಎಸ್

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರವರು, ಲೋಕೋಪಯೋಗಿ ಇಲಾಖೆ, ವಿಭಾಗ ಕಾರವಾರ
ಕ್ರ. ಸಂ: ಕಾ.ನಿ.ಇಂ/ಲೋ.ಇ.ಪಿ.ಪಿ/ಕಾ/ಟಿ–2/ಟೆಂಡರ್–15/ 2022–23/2218 ದಿನಾಂಕ: 26–09–2022
ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ತಿಳಿಸಿರುವ ಹಾಗೆ ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬೇಕು. ಗುತ್ತಿಗೆಯನ್ನು ಪಡೆಯಲು ಅರ್ಹರಾಗಬೇಕಾದರೆ ಗುತ್ತಿಗೆದಾರರು (ಕೆಟಗರಿ–4) ರಲ್ಲಿ ನಿಗದಿಪಡಿಸಿದ ಷರತ್ತುಗಳನ್ನು ಪಾಲಿಸಬೇಕು.
(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿನಾಂಕ: 26.10.2022 16.30 ಗಂಟೆ ವರೆಗೆ (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ: 27.10.2022 16.30 ಗಂಟೆ ವರೆಗೆ (3) ಟೆಂಡರಿನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 28.10.2022 17.00 ಗಂಟೆ ವರೆಗೆ (4) ಟೆಂಡರಿನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.10.2022 17.00 ಗಂಟೆ ವರೆಗೆ
ಕಾಮಗಾರಿಯ ಹೆಸರು: ಲೆಕ್ಕ ಶೀರ್ಷಿಕೆ NABARD RIDF-XXVII. ಟೆಂಡರ್ ಇಂಡೆಂಟ್: (1) 155421
(ಕೆಟಗರಿ–4) ರಲ್ಲಿ ನಿಗದಿಪಡಿಸಿರುವ ಮುಂದಿನ ವಿವರಗಳಿಗಾಗಿ ಇ–proc ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು,
DIPR/ADK/MCA/469/22-23 dt.29.09.2022 ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ

ಕರ್ನಾಟಕ ಸರ್ಕಾರ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ಸಂ: ಡಿಎಂಜಿ–17012/5/2021/2022–23 ದಿನಾಂಕ: 30.09.2022
ಟೆಂಡರ್ ಅಧಿಸೂಚನೆ 558708
ದಿನಾಂಕ 29.09.2022ರ ರಂದು ಪ್ರಕಟಿಸಿದ ಟೆಂಡರ್ ಅಧಿಸೂಚನೆಯ ಮುಂದುವರಿದ ಭಾಗ

ಕ್ರ. ಸಂ.	ಬ್ಲಾಕ್ ಹೆಸರು	ಜಿಲ್ಲೆ	ಖನಿಜ	ವಿಸ್ತೀರ್ಣ (ಹೆಕ್ಟೇರ್)	ಅಂದಾಜು ಸಂಪನ್ಮೂಲ (ದಶಲಕ್ಷ ಟನ್)	ಟೆಂಡರ್ ಶುಲ್ಕ
1	ವಿಠಲ ಯೋಗೇಶ್ವರಾ ಬ್ಲಾಕ್ ಐಎಂಎಲ್ ನಂ. 2186	ಬಳ್ಳಾರಿ	ಕಬ್ಬಿಣ ಅದಿರು	15.89	2.84	ರೂ. 2,00,000+18% ಜಿಎಸ್‌ಟಿ
2	ಶ್ರೀ ಅಲ್ಲಾ ವೀರಭದ್ರಪ್ಪ ಐಎಂಎಲ್ ನಂ. 2436	ಚಿತ್ರದುರ್ಗ	ಕಬ್ಬಿಣ & ಮ್ಯಾಂಗನೀಸ್	24.53	ಎಫ್‌ಇ–3.645 ಎಂಎನ್–0.93	ರೂ. 2,00,000+18% ಜಿಎಸ್‌ಟಿ

DIPR/CP/2461/Zenkar/2022-23 ಸಹಿ/– ನಿರ್ದೇಶಕರು

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ
ದೂರವಾಣಿ: 08539–220054
ಸಂ: ಕಾನಿಇಂ/ಸನೀ ಮತ್ತು ಅ.ಜ.ಅ.ವಿ/ಕೊಪ್ಪಳ/ಶಾಖಾ/2022–23/2595 ದಿ:27–09–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ರಾಯಚೂರು ಜಿಲ್ಲೆಯ 02 ಟೆಂಡರ ಕಾಮಗಾರಿಗಳಿಗಾಗಿ 4702 PLAN PICK UP ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ಟೆಂಡರ್‌ಗಳ ಮೊತ್ತ ರೂ.168.56 ಮತ್ತು ರೂ.168.57 ಲಕ್ಷಗಳಾಗಿರುತ್ತದೆ. ಟೆಂಡರನ್ನು ದಿನಾಂಕ: 27–09–2022 ರಿಂದ ದಿನಾಂಕ: 11–10–2022 ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಪೂರ್ವಭಾವಿ ಸಭೆ ದಿನಾಂಕ :06–10–2022ರಂದು ಬೆಳ್ಳಿಗೆ 11.00 ಗಂಟೆಗೆ ತೆರೆಯಲ್ಪಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: 13–10–2022 ರಂದು ಬೆಳ್ಳಿಗೆ 11.00 ಗಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್ಡನ್ನು ದಿನಾಂಕ: 15–10–2022 ರಂದು ಬೆಳ್ಳಿಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ "ಇ–ಪ್ರೊಕ್ಯೂರ್‌ಮೆಂಟ್" ವೆಬ್‌ಸೈಟ್ http://eproc.karnataka.gov.in/e-portal/index.seam ನಲ್ಲಿ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಂ/ಕೊಪ್ಪಳ/352/2022–23/ವಿಶಾಲಾಕ್ಷಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.

ರೈಲ್ವೆ ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು–560064
ವೆಬ್‌ಸೈಟ್: www.rwf.indianrailways.gov.in
ಇ–ಟೆಂಡರ್ ಸೂಚನೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಂ/ಟಿಐ/ಹೆಚ್‌ಟಿ/2022–23/20 ದಿನಾಂಕ: 30/09/2022
ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಅವರು ಈ ಕೆಳಗಿನ ಕಾಮಗಾರಿಗೆ ಆನ್‌ಲೈನ್ ಟೆಂಡರ್ ಆಹ್ವಾನಿಸುತ್ತಿದ್ದಾರೆ. ಟೆಂಡರ್‌ಗಳನ್ನು ಇ–ಪೋರ್ಟಲ್ http://www.ireps.gov.in ದಲ್ಲಿ ಮಾತ್ರ ಸಲ್ಲಿಸಬೇಕು.

ಕ್ರ. ಸಂ.	ಟೆಂಡರ್ ನಂಬರ್	ವಿವರ	ಅಂದಾಜು ಮೌಲ್ಯ ರೂ.	ಇಎಂಡಿ ರೂ.
1	ಇ–ಟೆಂಡರ್ ನಂಬರ್: ಆರ್‌ಡಬ್ಲ್ಯೂಎಫ್/ಎಂ/ಟಿಐ/ಹೆಚ್‌ಟಿ/2022–23/29 ದಿನಾಂಕ 30/09/2022	ರೈಲು ಗಾಲಿ ಕಾರ್ಖಾನೆಯಲ್ಲಿ ಪ್ರಧಾನ ಮತ್ತು ಎಲ್ಲ ಹೆಚ್‌ಟಿ ಕೇಬಲ್ ನವೀಕರಣ	17,69,410.00	35,400.00

ಸಂಪೂರ್ಣಗೊಳಿಸುವ ಅವಧಿ: 03 ತಿಂಗಳು
ಕೊನೆಯ ದಿನಾಂಕ & ಸಮಯ: 03/10/2022 15:30 ಗಂಟೆ
ಟೆಂಡರ್ ವಿವರಗಳನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ನೋಡಬಹುದು.

ಲೋಕೋಪಯೋಗಿ ಇಲಾಖೆ, ತುಮಕೂರು
ಕಾರ್ಯಪಾಲಕ ಇಂಜಿನಿಯರರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು
ಕ್ರ.ಸಂ:ಕಾಇಂ:ಲೋಇಎ:ತುವಿ:ಕ್ರಿಂ–2–1/ಟೆಂಡರ್–24/2022–23 ದಿನಾಂಕ: 28.09.2022
ಟೆಂಡರ್ ಪ್ರಕಟಣೆ ಸಂಖ್ಯೆ:24/2022–23 ದಿನಾಂಕ: 28.09.2022
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2022–23 ದಿನಾಂಕ: 28–09–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 04 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.54.12 ಲಕ್ಷಗಳು, ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.166.98 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ.1,08,300/–, ಇ.ಎಂ.ಡಿ ಗರಿಷ್ಠ ಮೊತ್ತ ರೂ.2,50,500/–, ಅರ್ಹ ಗುತ್ತಿಗೆದಾರರು : 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 03 ರಿಂದ 06 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 12.10.2022 ರ 16.00 ಗಂಟೆಗೆ, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 30.09.2022 ರಿಂದ 14.10.2022 ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 14.10.2022 ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 15.10.2022 ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 17.10.2022 ರ ಸಂಜೆ 11.00ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.
ಸಹಿ/–ಕಾರ್ಯಪಾಲಕ ಇಂಜಿನಿಯರ್,
DIPR/TUM/566/MCA/2022-23 ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆನ/ಎಇಇ–1/ಟೆಂಡರ್/24/2022–23 ದಿನಾಂಕ: 28–09–2022
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ)
ಕಾರ್ಯಪಾಲಕ ಅಭಿಯಂತರರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಚೇರಿಯಿಂದ Muzrai Grants ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 07–10–2022ರಂದು ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ ವೆಬ್‌ಸೈಟ್: http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ವಾತಾಸಂ/ಪಾವ್ರ/2445/ಪ್ರಪ್ರ/2022–23 ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಎ.ಪಿ.ಎಂ.ಸಿ, ಬಳವರಗ ಬಿಲ್ಡಿಂಗ್, ಟಿ.ಬಿ. ಸರ್ಕಲ್ ಹತ್ತಿರ, ತಮಕೂರು ಮೈನ್‌ರೋಡ್, ದೊಡ್ಡಬಳ್ಳಾಪುರ–561203
ಸಂಖ್ಯೆ:ತಾ.ಪಂ/ಅಭಿಯೋ/ಶಿ.ಅ/ಟೆಂಡರ್/ಎ–ಟೆಂಡರ್/2022–23 ದಿನಾಂಕ: 28/09/2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ವಿಷಯ: ಶಿಶು ಅಭಿವೃದ್ಧಿ ಯೋಜನೆ, ದೊಡ್ಡಬಳ್ಳಾಪುರ ತಾಲ್ಲೂಕು ಇಲ್ಲಿಯ ಅಂಗನವಾಡಿ ಕೇಂದ್ರಗಳಿಗೆ 2022–23ನೇ ಸಾಲಿನ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.
ಉಲ್ಲೇಖ: ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ದೊಡ್ಡಬಳ್ಳಾಪುರ ರವರ ಅನುಮೋದನೆ ದಿನಾಂಕ : 09/06/2022
ಶಿಶು ಅಭಿವೃದ್ಧಿ ಯೋಜನೆ, ದೊಡ್ಡಬಳ್ಳಾಪುರ ತಾಲ್ಲೂಕು ಇಲ್ಲಿಯ 369 ಅಂಗನವಾಡಿ ಕೇಂದ್ರಗಳಿಗೆ 2022–23ನೇ ಸಾಲಿನ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ದೊಡ್ಡಬಳ್ಳಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮಹಿಳಾ ಮಂಡಳಿ / ಸ್ತ್ರೀ–ಶಕ್ತಿ ಸಂಘಗಳಿಂದ ಅರ್ಹ ಸ್ತ್ರೀ–ಶಕ್ತಿ ಸಂಘಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ.ಎಂ.ಡಿ.ಮೊತ್ತ ರೂ.1,00,000/– (ಒಂದು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಟೆಂಡರ್ ಶುಲ್ಕ ರೂ.1,000/–ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೀಡಿರುವ ನಾಲ್ಕು ವಿಧಾನಗಳಲ್ಲಿ ಸಲ್ಲಿಸತಕ್ಕದ್ದು. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ www.eproc.karnataka.gov.in
(1) ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: 28–09–2022. (2) ತಾಂತ್ರಿಕ ಮತ್ತು ಆರ್ಥಿಕ ಬಿಡ್ ಸಲ್ಲಿಸಲು ಅಂತಿಮ ದಿನಾಂಕ: 12–10–2022. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 13–10–2022 ಸಮಯ ಬೆಳಿಗ್ಗೆ 11:30ಕ್ಕೆ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 14–10–2022 ಸಮಯ ಮಧ್ಯಾಹ್ನ 3:00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ದೊಡ್ಡಬಳ್ಳಾಪುರ ಇಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ: 080–2762 5228 / 86180 13681 ರಲ್ಲಿ ಮಾಹಿತಿ ಪಡೆಯಬಹುದು.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
DIPR/CP/RO2414/AAPL/2022-23 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದೊಡ್ಡಬಳ್ಳಾಪುರ

ಸಾರ್ವಜನಿಕ ಗ್ರಂಥಾಲಯ ಇಲಾಖೆ
ನಿರ್ದೇಶಕರ ಕಚೇರಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560 001. ಫೋನ್: 080–22864990/22867358
ಇ–ಮೇಲ್: director-dpl@ka.gov.in, ವೆಬ್‌ಸೈಟ್: www.dpl.karnataka.gov.in
ಸಂಖ್ಯೆ: ಸಾಗ್ರಂಇ/ನಿ/ಯೋವಿ/ಟೆಂಡರ್/60/2022–23 ದಿನಾಂಕ: 23.09.2022
ಟೆಂಡರ್ ಪ್ರಕಟಣೆ (ಇ–ಸಂಗ್ರಹಣ ವೇದಿಕೆ ಮುಖಾಂತರ)
2022–23 ಮತ್ತು 2023–24ನೇ ಸಾಲಿಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರ ನಿಧಿ ಅಡಿಯಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿಗೆ ದಿನಪತ್ರಿಕೆ ಬೇಸಿಸ್ ಆಧಾರದ ಮೇಲೆ ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳನ್ನು ಸರಬರಾಜು ಮಾಡಲು ಇ–ಸಂಗ್ರಹಣಾ ವೇದಿಕೆ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆಗಳು ಇ–ಸಂಗ್ರಹಣಾ ವೇದಿಕೆ ಮುಖಾಂತರ ಭಾಗವಹಿಸಬಹುದಾಗಿದೆ. ಟೆಂಡರ್‌ನಲ್ಲಿ ಅಂದಾಜು ಮೊತ್ತ: ರೂ. 20.00 ಲಕ್ಷಗಳು ಮತ್ತು ಇಎಂಡಿ ಮೊತ್ತ: ರೂ. 40,000/– ದಸ್ತಾವೇಜು / ಸೂಚನೆ / ಷರತ್ತು ನಿಬಂಧನೆಗಳನ್ನು https://eproc.karnataka.gov.in ಜಾಲತಾಣದ ಮೂಲಕ ಪಡೆಯಬಹುದಾಗಿದೆ.
ಟೆಂಡರ್ ಕಾರ್ಯಸೂಚಿ: 1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 21.10.2022ರ ಸಂಜೆ 5:30 ಗಂಟೆಯವರೆಗೆ. 2) ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ: 25.10.2022 ಮಧ್ಯಾಹ್ನ 12:30 ಗಂಟೆಗೆ. 3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ಸಮಯ: 27.10.2022 ಮಧ್ಯಾಹ್ನ 12:30 ಗಂಟೆಗೆ.
ಸಹಿ/– ನಿರ್ದೇಶಕರು,
ವಾತಾಸಂ/ಪಾವ್ರ/ಜಿಪ/2457/2022–23 ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು.

ಕರ್ನಾಟಕ ಸರ್ಕಾರ
ನಿರ್ಮಿತಿ ಕೇಂದ್ರ, ಮಂಡ್ಯ
ಪ್ರಾಯೋಜಕರು: ಭಾರತ ಸರ್ಕಾರ, ಹುಡ್ಕೋ ಮತ್ತು ಕರ್ನಾಟಕ ಸರ್ಕಾರ,
ಸರ್ವೆ ನಂ.507, ನಾಗಮಂಗಲ ರಸ್ತೆ, ಮಂಡ್ಯ,
ಮಂಡ್ಯ –571402 ದೂರವಾಣಿ ಸಂಖ್ಯೆ: 08232–297555
ಇ ಮೇಲ್: mandyank@yahoo.co.in
ಸಂಖ್ಯೆ:ನಿಕೇಮಂ.ಸಿಆರ್ ಸಂಖ್ಯೆ.127/2022–23 ದಿನಾಂಕ: 23.09.2022
ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ
ಮಂಡ್ಯ ಜಿಲ್ಲೆ ನಿರ್ಮಿತಿ ಕೇಂದ್ರವು ಕೆ.ಎಸ್.ಆರ್ ಕಾಯ್ದೆ–1960ರ ಪ್ರಕಾರ ನೋಂದಾಯಿತ ಸಂಸ್ಥೆಯಾಗಿರುತ್ತದೆ. ಕೆಳ ಕಾಣಿಸಿದ ಹುದ್ದೆಯನ್ನು ಐದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಕರೆಯಲಾಗಿದೆ. ಈ ಕೆಳಕಂಡ ಖಾಲಿ ಇರುವ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಸ್ವ ವಿವರದೊಂದಿಗೆ, ಪದವಿ ಹಾಗೂ ಅನುಭವ ಪ್ರಮಾಣ ಪತ್ರಗಳನ್ನು ಮುದ್ದಾಂ ಅಥವಾ ನೋಂದಣಿ ಅಂಚೆ ಮುಖಾಂತರ ದಿ: 26.09.2022 ರಿಂದ 25.10.2022ರ ಸಂಜೆ 5.00 ಗಂಟೆಯ ಒಳಗೆ ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ ಜಿಲ್ಲೆ, ಮಂಡ್ಯ ಅಥವಾ ನಿರ್ಮಿತಿ ಕೇಂದ್ರ, ಮಂಡ್ಯ ಜಿಲ್ಲೆ ಇಲ್ಲಿಗೆ ಸಲ್ಲಿಸುವುದು.
ಕ್ರ.ಸಂ. 01 ಹುದ್ದೆಯ ಹೆಸರು: ಯೋಜನಾ ವ್ಯವಸ್ಥಾಪಕರು. ಹುದ್ದೆಯ ಸಂಖ್ಯೆ: 01 ವಿದ್ಯಾರ್ಹತೆ/ಅನುಭವ: M.Tech in Structural Engineering. ಅನುಭವ: ಸರ್ಕಾರಿ ಸ್ವಾಮ್ಯದ ಅಥವಾ ಇತರೆ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಅನುಭವ (ವಿನ್ಯಾಸ, ಡ್ರಾಯಿಂಗ್, ಅಂದಾಜು ಪಟ್ಟಿಗಳನ್ನು ತಯಾರಿಸುವುದು. ಕನಿಷ್ಠ ರೂ.50.00 ಲಕ್ಷ ಮೊತ್ತದ ಏಕ ಕಾಮಗಾರಿಯನ್ನು ಉಸ್ತುವಾರಿಯಾಗಿ ನಿರ್ವಹಿಸಿರಬೇಕು (Low Cost Building Technology) ಅನುಭವವನ್ನು ಹೊಂದಿರಬೇಕು) ಆದ್ಯತೆ ನೀಡಲಾಗುವುದು. ಗುತ್ತಿಗೆ ಅವಧಿ (ವರ್ಷಗಳಲ್ಲಿ): 05 ವರ್ಷ ವೇತನ: ರೂ.35,000/–
ಷರತ್ತುಗಳು: 1) ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಉತ್ತಮ ಜ್ಞಾನವುಳ್ಳವರಾಗಿರಬೇಕು, Auto CAD Plan and Elevation, 3D Max Elevation ಪರಿಣತಿ ಹೊಂದಿರಬೇಕು ಹಾಗೂ ಅಂದಾಜು ಪಟ್ಟಿ ತಯಾರಿಸುವ ಜ್ಞಾನವುಳ್ಳವರಾಗಿರಬೇಕು. 2) ವಯೋಮಿತಿ ಕನಿಷ್ಠ 28 ವರ್ಷ ಹಾಗೂ ಗರಿಷ್ಠ 40 ವರ್ಷ. 3) ನಿಗದಿತ ವಿದ್ಯಾರ್ಹತೆಯಲ್ಲಿ ಶೇ.60 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು ಮತ್ತು ಹೆಚ್ಚಿನ ವಿದ್ಯಾರ್ಹತೆ ಅನುಭವ ಹೊಂದಿದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆಯನ್ನು ನೀಡಲಾಗುವುದು. 4) ಅಭ್ಯರ್ಥಿಯ ಬಯೋಡಾಟಾ, 10ನೇ ತರಗತಿ ಅಂಕ ಪಟ್ಟಿ, ವಿದ್ಯಾರ್ಹತೆಗೆ ಸಂಬಂಧಪಟ್ಟ ಪ್ರಮಾಣ ಪತ್ರ, ಅನುಭವ ಪ್ರಮಾಣ ಪತ್ರಗಳು ಹಾಗೂ ಒಂದು ಭಾವಚಿತ್ರ ಮತ್ತು ಆಧಾರ್ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ದೃಢೀಕರಿಸಿ ಲಗತ್ತಿಸಿ ಸಲ್ಲಿಸುವುದು. 5) ಸೂಕ್ತ ಅರ್ಹತೆಗಳಿಲ್ಲದ ಅರ್ಜಿಗಳನ್ನು ಮತ್ತು ನಿಗಧಿಪಡಿಸಿದ ಸಮಯದ ಮೀರಿ ಬಂದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೆ ತಿರಸ್ಕರಿಸಲಾಗುವುದು. 6) ಐದು ವರ್ಷಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ಐದು ವರ್ಷದ ಗುತ್ತಿಗೆ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದಲ್ಲಿ ಅದ್ವತೆಯ ಮೇರೆಗೆ ಅಗತ್ಯವಿದ್ದಲ್ಲಿ ಮಾತ್ರ ಮುಂದಿನ 2 ವರ್ಷಗಳಿಗೆ ವಿಸ್ತರಿಸಲಾಗುವುದು. 7) ಅಂತಿಮ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನ ಯಾವುದೇ ಕಾರಣ ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ಆಯ್ಕೆ ಸಮಿತಿ ಉಳಿಸಿಕೊಂಡಿರುತ್ತದೆ. 8) ಅರ್ಜಿ ಸ್ವೀಕಾರ ಮತ್ತು ತಿರಸ್ಕಾರ ಮಾಡುವ ಅಧಿಕಾರವನ್ನು ಅಧ್ಯಕ್ಷರು/ ಜಿಲ್ಲಾಧಿಕಾರಿ, ನಿರ್ಮಿತಿ ಕೇಂದ್ರ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿರುತ್ತದೆ. 9) ಅಯ್ಕೆಯಾದ ನಂತರ ಸುಳ್ಳು ಅಥವಾ ನಕಲಿ ದಾಖಲೆಗಳು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ತೆಗೆದು ಹಾಕಲಾಗುವುದು ಹಾಗೂ ಕಾನೂನಿನ ರೀತಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗುವುದು. 10) ಅಭ್ಯರ್ಥಿಗಳನ್ನು ಆಯ್ಕೆ ಸಮಿತಿಯು ನಡೆಸುವ ಪರೀಕ್ಷೆ/ಲಿಖಿತ ಪರೀಕ್ಷೆ/ಅನುಭವದ ಆಧಾರದ ಮೇಲೆ ಸಂದರ್ಶನ ನಡೆಸಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು, ಅಯ್ಕೆಯಾದ ನಂತರ ಷರತ್ತುಬದ್ಧ ಒಪ್ಪಂದಕ್ಕೆ ಒಳಪಡಬೇಕಾಗುತ್ತದೆ. 11) ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಜಿಲ್ಲಾಧಿಕಾರಿಗಳ ಕಚೇರಿ, ಮಂಡ್ಯ ಜಿಲ್ಲೆ, ಮಂಡ್ಯ ಅಥವಾ ಜಿಲ್ಲಾ ನಿರ್ಮಿತಿ ಕೇಂದ್ರ, ಸ.ನಂ.507, ನಾಗಮಂಗಲ ರಸ್ತೆ, ಮಂಡ್ಯ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಯೋಜನಾ ವ್ಯವಸ್ಥಾಪಕರು ಹಾಗೂ ಸದಸ್ಯ ಕಾರ್ಯದರ್ಶಿ, ನಿರ್ಮಿತಿ ಕೇಂದ್ರ, ಮಂಡ್ಯ ಜಿಲ್ಲೆ, ಮಂಡ್ಯ.
ವಾತಾಸಂ/ಸಿಎ–ಮಂಡ್ಯ/ಎಂಸಿಎ/365/2022–23

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–200187 Email ID:ubpeedtv07@gmail.com
ಸಂ:ಕಾ.ಇಂ/ವಿ.ಜ.ನಿ.ನಿ/ಭ.ಮೇ.ಯೋ/ವಿ.ನಂ.07/ಹಿ/ಇ–ಟೆ/2022–23/708 ದಿನಾಂಕ:23.09.2022
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರುಕ್ಯಾಂಪ್, ಚಿತ್ರದುರ್ಗ ಇವರು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯ ಲಕ್ಕಿಹಳ್ಳಿ ಟಿ.ಎಸ್.ಹೊಂದಿದ ಅಡಿಯಲ್ಲಿ ಬರುವ ಕಾಮಗಾರಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅರ್ಹಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ವೆಬ್‌ಸೈಟ್‌ನಿಂದ ದಿನಾಂಕ:14.10.2022 ರ ಸಂಜೆ 17.30 ಗಂಟೆಯ ವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ದಾಖಲೆಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ:17.10.2022ರ ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್, ಚಿತ್ರದುರ್ಗ ಇವರ ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರನ್ನು ಕಚೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರವು ಕಾರಣ ನೀಡದೆ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಲಾಗಿದೆ.
ಕಾಮಗಾರಿ ಇಂಡೆಂಟ್ ಸಂಖ್ಯೆ: (1) VJNL/2022-23/OW/WORK_INDENT2194 ಇ.ಎಂ.ಡಿ. ಮೊತ್ತ ರೂ.ಗಳಲ್ಲಿ:– 91,500.00 ಟೆಂಡರ್‌ನಲ್ಲಿ ಮೊತ್ತ ರೂ.ಗಳಲ್ಲಿ:– 91,33,270.75. (2) VJNL/2022-23/OW/WORK_INDENT2195 ಇ.ಎಂ.ಡಿ. ಮೊತ್ತ ರೂ.ಗಳಲ್ಲಿ:– 70,000.00 ಟೆಂಡರ್‌ನಲ್ಲಿ ಮೊತ್ತ ರೂ.ಗಳಲ್ಲಿ:– 69,93,945.11
DIPR/CTA/MCA/581/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ, ಭ.ಮೇ.ಯೋ. ವಿಭಾಗ ನಂ.07, ಹಿರಿಯೂರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570 001
Ph; +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ. ಸರಬ/ಕ್ಲ/06/2022–23 ಸೆಪ್ಟೆಂಬರ್ 27, 2022
ಟೆಂಡರ್ ಅಧಿಸೂಚನೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ವಿವಿಧ ವಿಭಾಗಗಳಿಗೆ ಮತ್ತು ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಹಾಗೂ ಪಿ.ಕೆ.ಟಿ.ಬಿ ಮತ್ತು ಸಿ.ಡಿ ಆಸ್ಪತ್ರೆಗಳಿಗೆ ಪ್ರಯೋಗಾಲಯಕ್ಕೆ ಅವಶ್ಯಕತೆಯಿರುವ ರಾಸಾಯನಿಕಗಳನ್ನು ಮತ್ತು ಗ್ಲಾಸ್‌ವೇರ್‌ಗಳನ್ನು 01 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ಒದಗಿಸುವ ಸಂಬಂಧ ನೋಂದಾಯಿತ ಅರ್ಹ ಮಾನ್ಯತೆ ಪಡೆದ ಸಂಸ್ಥೆಗಳಿಂದ ವಿದ್ಯುನ್ಮಾನ ವೇದಿಕೆ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ಮೂಲಕ ದಿ: 01.10.2022 ರಿಂದ ಪಡೆಯಬಹುದಾಗಿದ್ದು, ದಿ: 30.10.2022 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸರ್ಕಾರಿ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
ಸಹಿ/– ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
DIPR/DDMYS/MCA/530/2022-23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
ವಿಶೇಷ ಭೂಸ್ವಾಧೀನಾಧಿಕಾರಿಗಳು–2ರವರ ಕಚೇರಿ, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ, ನಂ. 14/3, 1ನೇ ಮಹಡಿ, ಆರ್.ಪಿ ಭವನ, ನೃಪತುಂಗ ರಸ್ತೆ, ಬೆಂಗಳೂರು.
ಸಂಖ್ಯೆ: ಬೆಮೈಇಕಾಯೋ/ವಿಭೂಅ–2/ಬೆ.ದ/485/2017–18 ದಿನಾಂಕ: 27/09/2022
ತಿಳುವಳಿಕೆ ಪತ್ರ
ವಿಷಯ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಪರಿಹಾರ ಪಡೆಯುವ ಬಗ್ಗೆ.
[Remaining small-print text of this notice and its schedule (ಬೆಂಗಳೂರು ದಕ್ಷಿಣ ತಾಲ್ಲೂಕು ಗ್ರಾಮಗಳು ಮತ್ತು ಸರ್ವೆ ನಂಬರ್‌ಗಳು) is too small to read reliably.]
ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ (ಬಿಎಂಐಸಿ) ನೃಪತುಂಗ ರಸ್ತೆ, ಬೆಂಗಳೂರು.

ಬುಡಕಟ್ಟು ಸಮುದಾಯದವರು, ಆಮ್ಲಜನಕ ದುರಂತ ಸಂತ್ರಸ್ತರೊಂದಿಗೆ ರಾಹುಲ್ ಸಂವಾದ

ಸಂಸ್ಕೃತಿ ಮೆಚ್ಚಿದರು, ಸಂತ್ರಸ್ತರ ಕಷ್ಟಕ್ಕೆ ಮರುಗಿದರು...

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳ ಜೀವನ ಪದ್ಧತಿ, ಸಂಸ್ಕೃತಿಯನ್ನು ಮೆಚ್ಚಿದ ರಾಹುಲ್ ಗಾಂಧಿ, ಚಾಮರಾಜನಗರದ ಕೋವಿಡ್ ಆಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ ಮೃತಪಟ್ಟ ಕುಟುಂಬದವರ ಕಷ್ಟವನ್ನು ಕೇಳಿ ಮರುಗಿದರು.

ರಾಜ್ಯದಲ್ಲಿ 'ಭಾರತ್ ಜೋಡೊ' ಯಾತ್ರೆಯ ಮೊದಲ ದಿನದ ಭೋಜನ ವಿರಾಮದಲ್ಲಿ ಅವರು ಸೋಲಿಗರು, ಜೇನ ಕುರುಬರು ಹಾಗೂ ಬೆಟ್ಟಕುರುಬ ಸಮುದಾಯಗಳ ಮುಖಂಡರು ಹಾಗೂ ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬದೊಂದಿಗೆ ಪ್ರತ್ಯೇಕವಾಗಿ ಸಂವಾದ ನಡೆಸಿದರು.

'ಮೂರೂ ಸಮುದಾಯಗಳ 20 ಮಂದಿ ಸಂವಾದದಲ್ಲಿದ್ದರು. ಸೋಲಿಗ, ಜೇನು ಕುರುಬ ಹಾಗೂ ಬೆಟ್ಟ ಕುರುಬರು, ಅವರ ಜೀವನ ಕ್ರಮ, ಕುಲಕಸುಬುಗಳ ಬಗ್ಗೆ ಮಾಹಿತಿ ಪಡೆದ ರಾಹುಲ್ ಗಾಂಧಿ, ಹಾಲುಮತ ಕುರುಬರು, ಜೇನು ಕುರುಬರು ಹಾಗೂ ಬೆಟ್ಟಕುರುಬರ ನಡುವಣ ವ್ಯತ್ಯಾಸದ ಬಗ್ಗೆ ಮಾಹಿತಿ ಕೇಳಿದರು. ಜೊತೆಗೆ ಇದ್ದ ಸಿದ್ದರಾಮಯ್ಯ ಅವರನ್ನೂ ಈ ಬಗ್ಗೆ ಪ್ರಶ್ನಿಸಿದರು' ಎಂದು ಸೋಲಿಗ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಅರಣ್ಯ ಹಕ್ಕು ಕಾಯ್ದೆಯಿಂದ ಗಿರಿಜನರಿಗೆ ಆಗಿರುವ ಅನುಕೂಲ, ಆದಿವಾಸಿಗಳ ಸಮಸ್ಯೆಗಳು, ವಂಶವಾಹಿ ಕಾಯಿಲೆ ಸಿಕಲ್‌ಸೆಲ್ ಅನೀಮಿಯಾದ ಬಗ್ಗೆಯೂ ಮುಖಂಡರು ರಾಹುಲ್ ಗಾಂಧಿ ಅವರಿಗೆ ವಿವರಿಸಿದರು.

'ಸಾಮಾನ್ಯ ಜೇನು, ತುಡುವೆ ಜೇನು ಹಾಗೂ ಕಡ್ಡಿ ಜೇನನ್ನು ರಾಹುಲ್ ಅವರಿಗೆ ಕೊಟ್ಟಾಗ, ಅವುಗಳ ವ್ಯತ್ಯಾಸ ಬಗ್ಗೆ ಕೇಳಿದರು. ಸಾಂಪ್ರದಾಯಿಕ ಗೊರುಕನ ನೃತ್ಯ ಪ್ರದರ್ಶಿಸಿದೆವು. ನೃತ್ಯ ಹಾಗೂ ಹಾಡನ್ನು ಮೆಚ್ಚಿದರು' ಎಂದರು.

''ಕಾಡು ನಿಮ್ಮಿಂದಾಗಿ ಉಳಿದಿದೆ. ನಿಜವಾದ ನಾಗರಿಕರೆಂದರೆ ನೀವು. ನಿಮ್ಮಲ್ಲಿ ಸಾಕಷ್ಟು ಮೌಲ್ಯಗಳಿವೆ. ಹಾಗಾಗಿ, ಆದಿವಾಸಿಗಳು, ಹಿಂದುಳಿದಿರುವ ಬುಡಕಟ್ಟು ಜನಾಂಗದವರು ಎಂಬ ಪದಗಳನ್ನು ನೀವು ಬಳಸಬಾರದು. ಅದ್ಭುತವಾದ ನಿಮ್ಮ ಜೀವನದ ಜ್ಞಾನವನ್ನು ಕಾಪಾಡಿಕೊಳ್ಳಬೇಕು' ಎಂದು ರಾಹುಲ್ ಗಾಂಧಿ ಸಲಹೆ ನೀಡಿದರು' ಎಂದರು.

ಕಷ್ಟ ತೋಡಿಕೊಂಡ ಸಂತ್ರಸ್ತರು: ಇನ್ನೊಂದು ಸಂವಾದದಲ್ಲಿ ಆಮ್ಲಜನಕ ದುರಂತದಲ್ಲಿ ಮೃತಪಟ್ಟ 24 ಮಂದಿಯ ಕುಟುಂಬದವರಿದ್ದರು.

'ಸರ್ಕಾರ, ಜಿಲ್ಲಾಡಳಿತ ಹಾಗೂ ವೈದ್ಯರ ನಿರ್ಲಕ್ಷದಿಂದಾಗಿ ದುರ್ಘಟನೆ ಸಂಭವಿಸಿದೆ. ನಮ್ಮದಲ್ಲದ ತಪ್ಪಿಗೆ ಕುಟುಂಬಕ್ಕೆ ಆಧಾರವಾಗಿದ್ದವರನ್ನು ಕಳೆದುಕೊಂಡು, ಇಡೀ ಕುಟುಂಬವೇ ಸಂಕಷ್ಟ ಅನುಭವಿಸುವಂತಾಗಿದೆ ಎಂದು ಸಂತ್ರಸ್ತರು ಅಳಲು ತೋಡಿಕೊಂಡರು' ಎಂದು ಸಂಯೋಜಕರೊಬ್ಬರು ತಿಳಿಸಿದರು.

'ಘಟನೆಯಲ್ಲಿ ತಂದೆಯನ್ನು ಕಳೆದುಕೊಂಡಿದ್ದ ಕೊಳ್ಳೇಗಾಲ ಮುಡಿಗುಂಡ ಏಳು ವರ್ಷದ ಬಾಲಕಿಯೊಬ್ಬಳು ಮಾತನಾಡಿ, ಶಿಕ್ಷಣ ಪಡೆಯಲು ತೀವ್ರ ತೊಂದರೆಯಾಗಿದೆ. ಮುಂದೆ ವೈದ್ಯಳಾಗಬೇಕೆಂಬ ಆಸೆ ಇದೆ. ತಾವು ಸಹಾಯ ಮಾಡಬೇಕು ಎಂದು ಮನವಿ ಮಾಡಿದಳು. ಅವರು ಸಕಾರಾತ್ಮಕವಾಗಿ ಸ್ಪಂದಿಸಿದರು. ಕಾಂಗ್ರೆಸ್ ಸರ್ಕಾರ ಬಂದರೆ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆ, ಸರ್ಕಾರಿ ಉದ್ಯೋಗ ಸೇರಿದಂತೆ ಸಂತ್ರಸ್ತರ ಕುಟುಂಬಗಳಿಗೆ ಅನುಕೂಲ ಕಲ್ಪಿಸುವ ಭರವಸೆಯನ್ನೂ ನೀಡಿದರು' ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಮುಖಂಡರಾದ ಜೈರಾಂ ರಮೇಶ್, ಮುನಿಯಪ್ಪ ಇದ್ದರು.

ಬುಡಕಟ್ಟು ಸಮುದಾಯದ ಮುಖಂಡರೊಂದಿಗೆ ರಾಹುಲ್ ಗಾಂಧಿ ಸಂವಾದ ನಡೆಸಿದರು

ಕಾರ್ಯಕರ್ತರಲ್ಲಿ ರಣೋತ್ಸಾಹ

ರಾಜ್ಯ ಪ್ರವೇಶಿಸಿದ ಭಾರತ್ ಜೊಡೊ ಯಾತ್ರೆಯ ಮೊದಲ ದಿನ ಸಾವಿರಾರು ಕಾರ್ಯಕರ್ತರು ಉತ್ಸಾಹದಿಂದಲೇ ಭಾಗವಹಿಸಿದರು.

9 ಗಂಟೆಗೆ ರಾಹುಲ್ ಗಾಂಧಿ ಗುಂಡ್ಲುಪೇಟೆ ತಲುಪಿ ಯಾತ್ರೆಯನ್ನು ಉದ್ಘಾಟಿಸಬೇಕಾಗಿತ್ತು. ಆ ವೇಳೆಗೆ ಸಮಾವೇಶದಲ್ಲಿದ್ದ ಕುರ್ಚಿಗಳು ಭರ್ತಿಯಾಗಿರಲಿಲ್ಲ. 9.30 ಸುಮಾರಿಗೆ ಸಮಾವೇಶದ ಮೈದಾನ ಭರ್ತಿಯಾಯಿತು. 9.55ಕ್ಕೆ ರಾಹುಲ್ ಗಾಂಧಿ ವೇದಿಕೆಗೆ ಬಂದರು. 3,000ಕ್ಕೂ ಅಧಿಕ ಕುರ್ಚಿಗಳನ್ನು ಹಾಕಲಾಗಿತ್ತು. ಮೈದಾನದ ಸುತ್ತ ಜನಸಂದಣಿ ಇತ್ತು. ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಲಿದ್ದವರು ಮೊದಲೇ ರಸ್ತೆಯಲ್ಲಿ ನಿಂತಿದ್ದರು.

ಪಾದಯಾತ್ರೆಯಲ್ಲಿ 20 ಸಾವಿರಕ್ಕೂ ಹೆಚ್ಚು ಜನರು ಭಾಗಹಿಸಿದ್ದರು. 'ಜಿಲ್ಲೆಯ ಮೂರು ಕ್ಷೇತ್ರಗಳಿಂದ ಕನಿಷ್ಠ 4 ಸಾವಿರ ಮಂದಿ, ಗುಂಡ್ಲುಪೇಟೆ ಕ್ಷೇತ್ರದಿಂದ 10 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗಿದ್ದಾರೆ. ದಕ್ಷಿಣ ಕನ್ನಡ, ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಿಂದ ಬಂದಿದ್ದಾರೆ' ಎಂದು ಮುಖಂಡರೊಬ್ಬರು ತಿಳಿಸಿದರು.

ಭಾರತ ಒಡೆದವರಿಂದ ಜೋಡಿಸುವ ಯಾತ್ರೆ: ಬೊಮ್ಮಾಯಿ ವ್ಯಂಗ್ಯ

ವಿಜಯಪುರ: 'ಭಾರತವನ್ನು ಈ ಹಿಂದೆ ಯಾರು ಒಡೆದಿದ್ದರೋ (ತೋಡೊ) ಅವರಿಂದಲೇ ಈಗ ಭಾರತ ಜೋಡಿಸುವ ಯಾತ್ರೆ ನಡೆದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇತಿಹಾಸವನ್ನು ಯಾರೂ ಮರೆತಿಲ್ಲ. ರಾಜಕೀಯ ಅಸ್ತಿತ್ವಕ್ಕೆ ಹಾಗೂ ಅವರ ಒಳಗಿನ ಹುಳುಕು ಮುಚ್ಚಿಕೊಳ್ಳಲು ಯಾತ್ರೆ ನಡೆಸುತ್ತಿದ್ದಾರೆ' ಎಂದು ಕಾಂಗ್ರೆಸ್‌ನ 'ಭಾರತ ಜೋಡಿಸಿ' ಯಾತ್ರೆ ವಿರುದ್ಧ ಹರಿಹಾಯ್ದರು.

ದಸರಾ ಬಳಿಕ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ರಾಜ್ಯದಾದ್ಯಂತ ಜಂಟಿ ಪ್ರವಾಸ ನಡೆಸಿ ವಿಧಾನಭಾ ಚುನಾವಣೆ ಸಿದ್ಧತೆ ನಡೆಸುವುದಾಗಿ ಅವರು ತಿಳಿಸಿದರು.

ಪಾಕ್ ಆಕ್ರಮಿತ ಕಾಶ್ಮೀರ ಕಾಂಗ್ರೆಸ್‌ನ ಕೊಡುಗೆಯಾಗಿದೆ. ದೇಶದ ಬಹುಭಾಗಗಳನ್ನು ಬೇರೆ ದೇಶಗಳಿಗೆ ಬಿಟ್ಟುಕೊಟ್ಟಿರುವ ಕಾಂಗ್ರೆಸ್ ಪಕ್ಷವು ಭಾರತ್ ಜೋಡೊ ಪಾದಯಾತ್ರೆಯನ್ನು ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಚೀನಾದ ಗಡಿಗಳಲ್ಲಿ ಮಾಡಲಿ. ಪಾಕಿಸ್ತಾನ ಜಿಂದಾಬಾದ್ ಎಂದವರ ಜತೆಯಲ್ಲಿ ಪಾದಯಾತ್ರೆ ಮಾಡುತ್ತಿರುವ ಕಾಂಗ್ರೆಸ್ ಪಕ್ಷ ದೇಶವನ್ನು ಜೋಡಿಸುತ್ತಿಲ್ಲ, ಬೇರ್ಪಡಿಸುತ್ತಿದೆ

ಶೋಭಾ ಕರಂದ್ಲಾಜೆ, ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ

ರಾಜ್ಯದಲ್ಲಿ 'ಯಾತ್ರೆ' ಆರಂಭ

ಒಂದನೇ ಪುಟದಿಂದ

ರಾಹುಲ್ ಸ್ವಾಗತಕ್ಕೆ ಇಲ್ಲಿ ಸೇರಿದ ಜನ, ಸಿಕ್ಕಿದ ಸ್ವಾಗತ– ಸಂಭ್ರಮ 'ಕೈ' ನಾಯಕರಲ್ಲಿ ಹುಮ್ಮಸ್ಸು, ಹುರುಪು ಮೂಡಿಸಿತು.

ಮೈದಾನದಲ್ಲಿ ಸೇರಿದ್ದ ಜನಸಮೂಹವನ್ನು ಉದ್ದೇಶಿಸಿ ಮಾತನಾಡಿದ ರಾಹುಲ್, 'ಬಿಜೆಪಿ ಹಾಗೂ ಆರ್‌ಎಸ್‌ಎಸ್ ವಿಚಾರಧಾರೆಗಳಿಂದ ಹಬ್ಬುತ್ತಿರುವ ದ್ವೇಷ ಹಾಗೂ ಹಿಂಸಾಚಾರದ ವಿರುದ್ಧ ಹೋರಾಟ ಮಾಡುವುದೇ ಈ ಯಾತ್ರೆಯ ಉದ್ದೇಶ. ಯಾವುದೇ ಶಕ್ತಿಯಿಂದ ಈ ಯಾತ್ರೆಯನ್ನು ತಡೆಯಲು ಸಾಧ್ಯವಿಲ್ಲ. ಯಾಕೆಂದರೆ, ಇದು ಭಾರತದ ಧ್ವನಿ' ಎಂದು ಸವಾಲು ಹಾಕಿದರು.

'ಮಾಧ್ಯಮಗಳನ್ನು ಸರ್ಕಾರ ನಿಯಂತ್ರಿಸುತ್ತಿದೆ. ಸಂಸತ್ತಿನಲ್ಲಿ ನಾವು ಏನಾದರೂ ಹೇಳಲು ಹೋದರೆ ಅದಕ್ಕೆ ಅವಕಾಶ ನೀಡುವುದಿಲ್ಲ. ವಿರೋಧ ಪಕ್ಷದವರನ್ನು ಬಂಧಿಸಲಾಗುತ್ತಿದೆ. ಹೀಗಾಗಿ, ಜನರ ಜತೆ ಸಾವಿರಾರು ಕಿ.ಮೀ ಹೆಜ್ಜೆ ಹಾಕುವುದೊಂದೇ ವಿರೋಧ ಪಕ್ಷಗಳ ಮುಂದೆ ಉಳಿದಿರುವ ದಾರಿ. ಪಾದಯಾತ್ರೆಯ ಉದ್ದಕ್ಕೂ ಜನರ ಸಮಸ್ಯೆಗಳನ್ನು ಆಲಿಸುತ್ತೇವೆ. ಜನರ ಧ್ವನಿಯನ್ನು ಅಡಗಿಸುವ ಸಾಮರ್ಥ್ಯ ಯಾವುದೇ ಶಕ್ತಿಗಳಿಗೆ ಇಲ್ಲ' ಎಂದರು.

'ಈ ಯಾತ್ರೆ ರಾಜಕೀಯ, ವೈಯಕ್ತಿಕ ಲಾಭಕ್ಕೆ ಅಲ್ಲ. ದೇಶವನ್ನು ಬೆಲೆ ಏರಿಕೆಯಿಂದ ಮುಕ್ತಗೊಳಿಸಲು, ಯುವಕರಿಗೆ ಉದ್ಯೋಗ ನೀಡಲು, ಧರ್ಮದ ಹೆಸರಲ್ಲಿ ದ್ವೇಷದ ರಾಜಕಾರಣ ಮಾಡುತ್ತಿರುವವರ ವಿರುದ್ಧ ಸಮರ ಸಾರಲು ರಾಹುಲ್ ಗಾಂಧಿ ಈ ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಅವರ ಜೊತೆ ಇರುತ್ತೇವೆ ಎಂಬ ಸಂಕಲ್ಪವನ್ನು ಎಲ್ಲರೂ ಮಾಡಬೇಕು' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಕೈಕುಲುಕಿದ ಚಿಂತಕರು: ವೇದಿಕೆಯಲ್ಲಿ ಲೇಖಕರು, ಚಿಂತಕರು ಕಾಣಿಸಿಕೊಂಡರು. ಸಾಹಿತಿ ದೇವನೂರ ಮಹದೇವ, ವಿಶ್ರಾಂತ ಕುಲಪತಿ ಜಾಫೆಟ್, ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ ಸೇರಿ ಹಲವರು ರಾಹುಲ್ ಗಾಂಧಿಯನ್ನು ಸ್ವಾಗತಿಸಿ, ಕೈಕುಲುಕಿದರು. ದೇವನೂರ ಮಹದೇವ ಸಂವಿಧಾನದ ಪುಸ್ತಕವನ್ನು ರಾಹುಲ್‌ಗೆ ನೀಡಿ, 'ಇದರ ರಕ್ಷಣೆ ನಿಮ್ಮ ಜವಾಬ್ದಾರಿ' ಎಂದರು. ಸ್ವರಾಜ್ ಅಭಿಯಾನದ ಯೋಗೇಂದ್ರ ಯಾದವ್ ಸಂವಿಧಾನದ ಪೀಠಿಕೆಯ ಪ್ರತಿಯನ್ನು ರಾಹುಲ್ ಕೈಗಿತ್ತರು.

ವಿರೋಧ ಪಕ್ಷಗಳ ಪಾಲಿಗೆ ಮಾಧ್ಯಮಗಳು, ಸಂಸತ್ತನ್ನು ಬಂದ್ ಮಾಡಲಾಗಿದೆ. ಹೀಗಾಗಿ, ಜನರ ಬಳಿಗೆ ಹೋಗಲು ಪಾದಯಾತ್ರೆ ಅಲ್ಲದೆ ಬೇರೆ ದಾರಿಯೇ ಇಲ್ಲ

ರಾಹುಲ್ ಗಾಂಧಿ, ಎಐಸಿಸಿ ನಾಯಕ

ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಹಾಗೂ ನಮ್ಮನ್ನು ಹತ್ತಿಕ್ಕಲು ಬಿಜೆಪಿಯವರು ಪ್ರಯತ್ನಿಸುತ್ತಿದ್ದಾರೆ. ನಾವು ಯಾವುದಕ್ಕೂ ಹೆದರುವುದಿಲ್ಲ.

ಡಿ.ಕೆ. ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

ಯಾತ್ರೆಯಲ್ಲಿಯೂ 'ಪೇಸಿಎಂ'

ಯಾತ್ರೆಯಲ್ಲಿಯೂ ರಾಜ್ಯ ಸರ್ಕಾರದ ವಿರುದ್ಧದ 'ಪೇಸಿಎಂ' ಅಭಿಯಾನವನ್ನು ಕಾಂಗ್ರೆಸ್ ಮುಂದುವರಿಸಿದೆ. ಕೆಲವರ ಕೈಯಲ್ಲಿ 'ಪೇಸಿಎಂ' ಧ್ವಜ ಇದ್ದರೆ, ಇನ್ನೂ ಕೆಲವರು 'ಪೇಸಿಎಂ' ಲೋಗೊ ಇರುವ ಟೀ ಶರ್ಟ್ ಧರಿಸಿದ್ದರು. ಯಾತ್ರೆಯಲ್ಲಿ ವಿವಿಧ ಕಲಾ ತಂಡಗಳು ಇದ್ದವು. ತಮಟೆ ಸದ್ದಿಗೆ ಕಾರ್ಯಕರ್ತರು ನೃತ್ಯ ಮಾಡಿದರು. ರಾಹುಲ್ ಗಾಂಧಿಗೆ ಜೈಕಾರ ಕೂಗುತ್ತ, ಸಿಳ್ಳೆ, ಚಪ್ಪಾಳೆ ಹೊಡೆದರು. ಪಕ್ಷದ ಬಾವುಟ ಹಾರಿಸಿ, ಫಲಕವನ್ನು ಪ್ರದರ್ಶನ ಮಾಡಿದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ಕಾಂಗ್ರೆಸ್ ಸದಸ್ಯರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'6 ತಿಂಗಳ ನಂತರ ಸರ್ಕಾರ ಬದಲು'

'ಇನ್ನು ಆರು ತಿಂಗಳ ನಂತರ ರಾಜ್ಯದಲ್ಲಿ ಸರ್ಕಾರ ಬದಲಾಗಲಿದೆ. ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ಸಿದ್ದರಾಮಯ್ಯ ಹೇಳಿದರು.

'ಬಿಜೆಪಿಯವರಿಗೆ ಈ ಯಾತ್ರೆ ಸಹಿಸಲಾಗುತ್ತಿಲ್ಲ. ಹಾಗಾಗಿ ನಮ್ಮ ಭಿತ್ತಿಪತ್ರ, ಫ್ಲೆಕ್ಸ್‌ಗಳನ್ನು ಹರಿಯುತ್ತಿದ್ದಾರೆ. ಇದು ಮುಂದುವರಿದರೆ ಬಿಜೆಪಿಯ ಯಾವುದೇ ನಾಯಕ ರಾಜ್ಯದಲ್ಲಿ ತಿರುಗಾಡದಂತೆ ಮಾಡುವ ಶಕ್ತಿ ನಮ್ಮ ಕಾರ್ಯಕರ್ತರಿಗಿದೆ. ಅಷ್ಟೇ ಅಲ್ಲ, ಅವರ ಜತೆ ಶಾಮೀಲಾದರೆ ನಿಮಗೂ ತಕ್ಕ ಪಾಠ ಕಲಿಸುವ ಕಾಲ ಬರಲಿದೆ' ಎಂದು ಪೊಲೀಸರನ್ನೂ ಎಚ್ಚರಿಸಿದರು.

'ಒಬ್ಬ ನಾಯಕ, ಒಂದು ಸಿದ್ಧಾಂತ, ಒಂದು ಚಿಹ್ನೆ ನಂಬಿರುವ ಬಿಜೆಪಿಯವರಿಗೆ ಪ್ರಜಾಪ್ರಭುತ್ವ, ಜಾತ್ಯತೀತ ತತ್ವದಲ್ಲಿ ನಂಬಿಕೆ ಇಲ್ಲ. ಮೋದಿ ನೇತೃತ್ವದ ಬಿಜೆಪಿ ಸರ್ಕಾರವು, ಧರ್ಮ, ಕೋಮುವಾದ ಹಾಗೂ ದ್ವೇಷದ ರಾಜಕಾರಣ ಮಾಡುತ್ತಿದೆ. ದಲಿತರು, ಹಿಂದುಳಿದವರು ಸೇರಿ ಎಲ್ಲರೂ ಆತಂಕದಲ್ಲಿದ್ದಾರೆ. ರಾಜ್ಯದಲ್ಲಿ ಬಿಜೆಪಿಯದು ಶೇ 40 ಸರ್ಕಾರವೆಂದು ಜನಜನಿತವಾಗಿದೆ' ಎಂದರು.

ಕಾಂಗ್ರೆಸ್‌ಗೆ ರಾಹುಕಾಲ: ಬಿಜೆಪಿ

ಬೆಂಗಳೂರು: 'ರಾಹುಕಾಲದಲ್ಲಿ ಭಾರತ್ ತೋಡೊ' ಯಾತ್ರೆ ಆರಂಭಿಸಿರುವ ರಾಹುಲ್ ಗಾಂಧಿ ಜೋಡಿಸುವ ಕೆಲಸ ಮಾಡುತ್ತಿಲ್ಲ. ಬದಲಿಗೆ ಎಐಸಿಸಿ ಅಧ್ಯಕ್ಷ ಸ್ಥಾನವನ್ನು ನಕಲಿ ಗಾಂಧಿಗಳ ಕುಟುಂಬದಲ್ಲಿ ಇರಿಸಿಕೊಳ್ಳಲು ಮತ್ತು ನಿಯಂತ್ರಿಸಲು ನಡೆಸುತ್ತಿರುವ ಕಸರತ್ತು ಎಂದು ರಾಜ್ಯ ಬಿಜೆಪಿ ವ್ಯಂಗ್ಯವಾಡಿದೆ.

'ಕರ್ನಾಟಕ ಕಾಂಗ್ರೆಸ್‌ಗೆ ಇಂದಿನಿಂದ ರಾಹುಕಾಲ ಆರಂಭವಾಗಿದೆ, ನೀವೂ ಸ್ವಾಗತಿಸಿ' ಎಂದು ಸರಣಿ ಟ್ವೀಟ್ ಮಾಡಿರುವ ಬಿಜೆಪಿ ರಾಹುಲ್‌ಗಾಂಧಿ ಅವರಿಗೆ ಕೆಲವು ಪ್ರಶ್ನೆಗಳನ್ನೂ ಕೇಳಿದೆ.

'ಅಪರಾಧ ಸೂಚ್ಯಂಕದಲ್ಲಿ (ಎನ್‌ಸಿಆರ್‌ಬಿ ವರದಿ) ತಮಿಳುನಾಡು 422.1, ಕೇರಳ 401.4, ರಾಜಸ್ಥಾನ 269.6, ಕರ್ನಾಟಕ 172.8. ಅಪರಾಧ ಪ್ರಮಾಣ ಕಡಿಮೆ ಇರುವ ಕರ್ನಾಟಕಕ್ಕೆ ಸ್ವಾಗತ. ನಿಮ್ಮ ಶಾಂತಿ ಮಂತ್ರ ಕರುನಾಡಿಗೆ ಅಗತ್ಯವಿಲ್ಲ' ಎಂದು ಟ್ವೀಟ್‌ನಲ್ಲಿ ತಿಳಿಸಿದೆ.

'2020ರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರ ಮೇಲೆ ನಡೆದ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳು ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನದಲ್ಲಿ 476 ಇದ್ದರೆ, ಕರ್ನಾಟಕದಲ್ಲಿ 124 ಮಾತ್ರ. ಪರಿಶಿಷ್ಟ ಪಂಗಡಗಳ ಜನರ ಮೇಲೆ ನಡೆದ ದೌರ್ಜನ್ಯ ಮತ್ತು ಅತ್ಯಾಚಾರಗಳ ಪ್ರಕರಣ ರಾಜಸ್ತಾನದಲ್ಲಿ 119 ಇದ್ದರೆ ಕರ್ನಾಟಕದಲ್ಲಿ 29. ರಾಹುಲ್‌ಗಾಂಧಿಯವರೇ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ಸುರಕ್ಷಿತವಾಗಿರುವ ಕರ್ನಾಟಕಕ್ಕೆ ಸ್ವಾಗತ ಎಂದು ಹೇಳಿದೆ.

ರಾಹುಲ್ 'ಸ್ವಾಗತ'ದಲ್ಲೂ ಗುಂಪುಗಾರಿಕೆ?

ರಾಹುಲ್ ಗಾಂಧಿ ಅವರನ್ನು ಸ್ವಾಗತಿಸುವ ವಿಚಾರದಲ್ಲೂ ಕಾಂಗ್ರೆಸ್‌ನ ಬಣ ರಾಜಕೀಯ ಕಾಣಿಸಿದೆ ಎನ್ನಲಾಗಿದೆ. ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ರಾಹುಲ್ ಬರುತ್ತಿದ್ದಂತೆ, ಸಿದ್ದರಾಮಯ್ಯ ಏಕಾಏಕಿ ಹೋಗಿ ಅರಣ್ಯದ ಒಳಗೆ ವಾಹನದಿಂದ ಇಳಿದು ರಾಹುಲ್‌ಗೆ ಸ್ವಾಗತ ಕೋರಿದರು.

ಗುಂಡ್ಲುಪೇಟೆಯ ಅಂಬೇಡ್ಕರ್ ಭವನದ ಬಳಿ ಡಿ.ಕೆ. ಶಿವಕುಮಾರ್ ಸೇರಿ ಕೆಲವು ನಾಯಕರು ಸ್ವಾಗತಕ್ಕೆ ಸಿದ್ಧತೆ ಮಾಡಿಕೊಂಡು ಕಾಯುತ್ತಿದ್ದರು. ದಾರಿ ಮಧ್ಯೆ ರೆಸಾರ್ಟ್ ಒಂದರಲ್ಲಿ ರಾಹುಲ್ ಜತೆ ಸಿದ್ದರಾಮಯ್ಯ ಉಪಾಹಾರ ಸೇವಿಸಿದರು.

ಬಂಡೀಪುರ ಅರಣ್ಯ ಪ್ರದೇಶದ ಒಳಗಿರುವ ರಸ್ತೆಯಲ್ಲಿ ರಾಹುಲ್ ಪ್ರಯಾಣಿಸುತ್ತಿದ್ದ ಕಾರನ್ನು ಸಿದ್ದರಾಮಯ್ಯ ಹತ್ತಿದರು. ಕಾಂಗ್ರೆಸ್‌ನ ನಾಯಕರು ರಸ್ತೆಗಿಳಿದಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಅ.6ರಿಂದ ರೈತರ ಪ್ರತಿಭಟನಾ ಸಭೆ

ಬೆಂಗಳೂರು: 'ಕನಿಷ್ಠ ಬೆಂಬಲ ಬೆಲೆ ಕಾಯ್ದೆ (ಎಂಎಸ್‌ಪಿ) ಜಾರಿಗೆ ಆಗ್ರಹಿಸಿ ಅ.6ರಿಂದ ಅ.8ರವರೆಗೆ ನವದೆಹಲಿಯಲ್ಲಿ ರೈತರ ಪ್ರತಿಭಟನೆ ಸಭೆ ನಡೆಸಲಾಗುವುದು' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೈತರ ಸುದೀರ್ಘ ಹೋರಾಟದ ಪರಿಣಾಮ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದ ಕೇಂದ್ರ ಸರ್ಕಾರ, ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿಗೊಳಿಸುವುದಾಗಿ ಭರವಸೆ ನೀಡಿತ್ತು. ವರ್ಷ ಕಳೆದರೂ ಈ ಕಾಯ್ದೆ ಜಾರಿಗೊಂಡಿಲ್ಲ. ಆದ್ದರಿಂದ ನವದೆಹಲಿಯಲ್ಲಿ ಪ್ರತಿಭಟನಾ ಸಭೆ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

ಸಂಸತ್ ಭವನದಲ್ಲಿ ಭಾಷಣ: ಅಖಿಲಾ ಆಯ್ಕೆ

ಎಚ್‌.ಅಖಿಲಾ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಸಿರುಗುಪ್ಪ ಸದಾಶಿವನಗರದ ನಿವಾಸಿ ಎಚ್.ಶ್ರೀದೇವಿ ಮತ್ತು ಎಚ್. ಮಂಜುನಾಥ ಇವರ ಪುತ್ರಿ ಅಖಿಲಾ ಎಚ್, ಅ.2ರಂದು ದೆಹಲಿಯ ಸಂಸತ್ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಭಾಷಣ ಮಾಡಲಿದ್ದಾರೆ.

ಶಿಕ್ಷಣ ಮಂತ್ರಾಲಯ ಮತ್ತು ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿರುಚ ರಾಷ್ಟ್ರ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಅಖಿಲಾ, ಕೊಪ್ಪಳದ ಜಗದ್ಗುರು ಶ್ರೀಗವಿಸಿದ್ದೇಶ್ವರ ಆಯುರ್ವೇದ ಮಹಾವಿದ್ಯಾಲಯದ ಎನ್.ಎಸ್.ಎಸ್ ಘಟಕ ಪ್ರತಿನಿಧಿಸುತ್ತಿದ್ದು, ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. 'ನನ್ನ ಮೇಲೆ ಪ್ರಭಾವ ಬೀರಿದ ರಾಷ್ಟ್ರೀಯ ಸ್ವಾತಂತ್ರ್ಯ ನಾಯಕರು' ವಿಷಯ ಕುರಿತು ಮಾತನಾಡಲಿದ್ದಾರೆ.

ವೀಣೆ ನಾದ... ಉಡುಪಿ ಜಿಲ್ಲೆ ಪಡುಬಿದ್ರಿ ಸಮೀಪದ ಉಚ್ಚಿಲ ಮಹಾಲಕ್ಷ್ಮೀ ದೇವಳದಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ಶುಕ್ರವಾರ ಏಕಕಾಲದಲ್ಲಿ 101 ವೀಣೆಗಳ ವಾದನ ನಡೆಯಿತು.

ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿ

ನಾಡಗೀತೆ ರಾಗ ಸಂಯೋಜನೆ ಪ್ರಶ್ನಿಸಿ ರಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಗೀತೆ, ಜಯ ಭಾರತ ಜನನಿಯ ತನುಜಾತೆಯನ್ನು ನಿರ್ದಿಷ್ಟ ಧಾಟಿ ಮತ್ತು ಕಾಲಾವಧಿಯಲ್ಲಿ ಹೀಗೇ ಹಾಡಬೇಕು ಎಂಬುದನ್ನು ಪುಷ್ಟೀಕರಿಸುವ ಶಾಸನ ಅಥವಾ ಕಾನೂನಿನ ಅಧಿಕಾರ ಎಲ್ಲಿದೆ' ಎಂದು ಪ್ರಶ್ನಿಸಿರುವ ಹೈಕೋರ್ಟ್, ಈ ಸಂಬಂಧ ಸಮರ್ಪಕ ದಾಖಲೆಗಳನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ನಿರ್ದೇಶಿಸಿ ರಾಜ್ಯ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

'ನಾಡಗೀತೆಗೆ ಮೈಸೂರು ಅನಂತಸ್ವಾಮಿ ಅವರ ಧಾಟಿಯನ್ನು ಅಳವಡಿಸಿಕೊಂಡು ಅದರ ಪೂರ್ಣಪಾಠ ಬಳಸಬೇಕು ಹಾಗೂ ಆಲಾಪವಿಲ್ಲದೇ, ಪುನರಾವರ್ತನೆ ಇಲ್ಲದೆ 2 ನಿಮಿಷ 30 ಸೆಕೆಂಡುಗಳಲ್ಲಿ ಹಾಡಬೇಕು ಎಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಚ್.ಎಂ.ವಿಶ್ವನಾಥ ಅವರು, 'ನಾಡಗೀತೆಗೆ ಮೈಸೂರು ಅನಂತಸ್ವಾಮಿಯೊಬ್ಬರೇ ಸಂಪೂರ್ಣ ರಾಗ ಸಂಯೋಜನೆ ಮಾಡಿಲ್ಲ. ಈ ರೀತಿ ಮಾಡಿದ್ದಾರೆ ಎಂಬುದಕ್ಕೆ ಯಾವ ದಾಖಲೆಗಳೂ ಇಲ್ಲ. ಹಾಗಾಗಿ, ಈ ಸಂಬಂಧ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿದರು.

ಪ್ರಕರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

'ಹತ್ತಾರು ರಾಗಗಳಲ್ಲಿ ಹಾಡಬಹುದಲ್ಲವೇ?'

'ನಾಡಗೀತೆಯ ಕರ್ತೃ ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಎಲ್ಲರಿಗೂ ಅಪಾರ ಗೌರವ ಇದೆ. ನಾವೆಲ್ಲಾ ಚಿಕ್ಕವರಿದ್ದಾಗಿನಿಂದಲೂ ಇದನ್ನು ಹಾಡುತ್ತಲೇ ಬಂದಿದ್ದೇವೆ. ಆದರೆ, ಇಂತಹುದೇ ರಾಗದಲ್ಲಿ ಹಾಡುವಂತೆ ಯಾರೂ ಎಲ್ಲಿಯೂ ಹೇಳಿದ ಉದಾಹರಣೆ ಇಲ್ಲ. ಒಂದು ಹಾಡನ್ನು ಮೇಘ ಮಲ್ಹಾರ, ಮಿಯಾ ಕಿ ಮಲ್ಹಾರ, ನಟ ಮಲ್ಹಾರ, ಮಿಯಾ ಕಿ ತೋಡಿ, ಝಿಂಝೋಟಿ ಹೀಗೆ... ಹತ್ತಾರು ರಾಗಗಳಲ್ಲಿ ಹಾಡಬಹುದಲ್ಲವೇ' ಎಂದು ನ್ಯಾಯಪೀಠ ಪ್ರಶ್ನಿಸಿತು.

'ಹಾಡುವುದು ಕಲಾಕಾರನ ಅಭಿವ್ಯಕ್ತಿ ಸ್ವಾತಂತ್ರ್ಯ. ಒಂದು ಹಾಡಿನ ತಾಳ, ರಾಗ, ಭಾವ, ಅರ್ಥ ಮತ್ತು ಸನ್ನಿವೇಶವನ್ನು ಹಾಡುಗಾರರೇ ನಿರ್ಧರಿಸುತ್ತಾರೆ. ರಾಷ್ಟ್ರಗೀತೆಯನ್ನು ಹೀಗೆಯೇ ಹಾಡಬೇಕು ಎಂಬುದಕ್ಕೆ ಕಾನೂನಿದೆ. ಆದರೆ, ನಾಡಗೀತೆಯನ್ನು ಇಂತಹುದೇ ರಾಗದಲ್ಲಿ ಹಾಡಬೇಕು, ಅದರ ರಾಗ ಸಂಯೋಜನೆ ಹೀಗೇ ಇರಬೇಕು ಎಂಬುದಕ್ಕೆ ಕಾನೂನಿನ ಸಮರ್ಥನೆ ಏನಿದೆ?, ಈ ರೀತಿ ಹಾಡಬೇಕು ಎಂಬುದನ್ನು ಶಾಸನದಿಂದ ಮಾತ್ರವೇ ನಿಯಂತ್ರಿಸಬಹುದು. ಸಾಮಾನ್ಯ ಆದೇಶದಿಂದಲ್ಲ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.

ಆರ್‌ಟಿಒ ಠಾಣೆಗಳ ಮೇಲೆ ದಾಳಿ

ಗಡಿಭಾಗದ 7 ತನಿಖಾ ಠಾಣೆಗಳಲ್ಲಿ ಲೋಕಾಯುಕ್ತ ಶೋಧ ● ನಗದು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಜ್ಯ ಗಡಿ ಭಾಗಗಳಲ್ಲಿರುವ ಸಾರಿಗೆ ಇಲಾಖೆಯ ಏಳು ತನಿಖಾ ಠಾಣೆಗಳ ಮೇಲೆ ಶುಕ್ರವಾರ ಬೆಳಿಗ್ಗೆ ದಾಳಿ ಮಾಡಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಅಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಅಕ್ರಮವಾಗಿ ಸಂಗ್ರಹಿಸಿದ್ದ ₹ 11.03 ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ.

ವಿಜಯಪುರ ಜಿಲ್ಲೆಯ ಧೂಳಖೇಡ (ಝುಳಕಿ), ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕೊಂಗನಹಳ್ಳಿ, ಬೆಂಗಳೂರು ನಗರ ಜಿಲ್ಲೆಯ ಅತ್ತಿಬೆಲೆ, ಬೀದರ್ ಜಿಲ್ಲೆಯ ಬೋಲ್ಕೆರೆ (ಹುಮ್ನಾಬಾದ್), ಬಳ್ಳಾರಿ ಜಿಲ್ಲೆಯ ಗೋದಾಳ್, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ನಂಗಲಿ ತನಿಖಾ ಠಾಣೆಗಳ ಮೇಲೆ ಶುಕ್ರವಾರ ಬೆಳಗಿನ ಜಾವ 4.30 ಗಂಟೆಗೆ ದಾಳಿಮಾಡಿದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು, ಶೋಧ ನಡೆಸಿದರು.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಜೂನ್ 24 ರಂದು ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದರು. ಆಗ ಅವರನ್ನು ಭೇಟಿ ಮಾಡಿದ್ದ ಸ್ಥಳೀಯರು, ಅಂತರರಾಜ್ಯ ಗಡಿಯಲ್ಲಿನ ಸಾರಿಗೆ ತನಿಖಾ ಠಾಣೆಗಳಲ್ಲಿ ಅವ್ಯವಹಾರ, ಅಕ್ರಮ ನಡೆಯುತ್ತಿರುವ ಬಗ್ಗೆ ಮೌಖಿಕವಾಗಿ ದೂರು ಹೇಳಿದ್ದರು. ಬಳಿಕ ಧೂಳಖೇಡ ತನಿಖಾ ಠಾಣೆಯಲ್ಲಿ ದಿಢೀರ್ ತಪಾಸಣೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ವರದಿ ಸಲ್ಲಿಸಿದ್ದರು. ಈ ಸಂಬಂಧ ಜೂನ್ 30ರಂದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಲೋಕಾಯುಕ್ತರು ವಿಚಾರಣೆ ಆರಂಭಿಸಿದ್ದರು.

ಸುಳ್ಳು ಹೇಳಿದ ಅಧಿಕಾರಿಗಳು: ಸಾರಿಗೆ ಇಲಾಖೆ ಕಾರ್ಯದರ್ಶಿ, ಆಯುಕ್ತರು ಸೇರಿದಂತೆ ಹಲವು ಅಧಿಕಾರಿಗಳಿಗೆ ಲೋಕಾಯುಕ್ತರು ನೋಟಿಸ್ ಜಾರಿಗೊಳಿಸಿದ್ದರು. ವರದಿಯೊಂದನ್ನು ಸಲ್ಲಿಸಿದ್ದ ಸಾರಿಗೆ ಇಲಾಖೆ ಅಧಿಕಾರಿಗಳು, ತನಿಖಾ ಠಾಣೆಗಳಲ್ಲಿನ ಅಕ್ರಮ, ಅವ್ಯವಹಾರ ತಡೆಗೆ ಕ್ರಮ ಕೈಗೊಂಡಿರುವುದಾಗಿ ಸಮಜಾಯಿಷಿ ನೀಡಿದ್ದರು.

ಸಾರಿಗೆ ಇಲಾಖೆ ಅಧಿಕಾರಿಗಳ ವರದಿ ಕುರಿತು ಸಂಶಯಗೊಂಡಿದ್ದ ಲೋಕಾಯುಕ್ತರು, ಸಂಸ್ಥೆಯ ಪೊಲೀಸ್ ಅಧಿಕಾರಿಗಳ ಮೂಲಕ ಸಾರಿಗೆ ತನಿಖಾ ಠಾಣೆಗಳಲ್ಲಿನ ಚಟುವಟಿಕೆಗಳ ಬಗ್ಗೆ ಗೋಪ್ಯ ಮಾಹಿತಿ ಸಂಗ್ರಹಿಸಿದ್ದರು. ಅಲ್ಲಿ ಅಕ್ರಮ ನಡೆಯುತ್ತಿರುವುದು ಖಚಿತವಾದ ಬಳಿಕ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 10 ರಡಿ ಶೋಧನಾ ವಾರೆಂಟ್ ಜಾರಿಗೊಳಿಸಿದ್ದರು.

'ಎಲ್ಲ ಏಳು ತನಿಖಾ ಠಾಣೆಗಳಲ್ಲೂ ಅಕ್ರಮವಾಗಿ ಸಂಗ್ರಹಿಸಿದ್ದ ನಗದು ವಶಕ್ಕೆ ಪಡೆಯಲಾಗಿದೆ. ಅಲ್ಲಿ ಅಕ್ರಮ, ಅವ್ಯವಹಾರಗಳು ನಡೆಯುತ್ತಿರುವ ಕುರಿತು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ. ಒಟ್ಟು ₹ 11,03,647 ನಗದು ವಶಪಡಿಸಿಕೊಳ್ಳಲಾಗಿದೆ' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಬಾರದ ಅಧಿಕಾರಿಗಳು: ಒಟ್ಟು ಒಂಬತ್ತು ತನಿಖಾ ಠಾಣೆಗಳ ಮೇಲೆ ದಾಳಿಮಾಡಿ, ಶೋಧ ನಡೆಸುವಂತೆ ಲೋಕಾಯುಕ್ತರು ಆದೇಶ ಹೊರಡಿಸಿದ್ದರು. ಆದರೆ, ವಿಜಯನಗರ ಜಿಲ್ಲೆ ಹೊಸಪೇಟೆ ಮತ್ತು ಕೊಪ್ಪಳ ಜಿಲ್ಲೆಯ ಬೂದಗುಂಬ ಚೆಕ್ ಪೋಸ್ಟ್‌ಗಳಲ್ಲಿ ಯಾವೊಬ್ಬ ಅಧಿಕಾರಿ, ಸಿಬ್ಬಂದಿಯೂ ಕರ್ತವ್ಯದಲ್ಲಿ ಇರಲಿಲ್ಲ. ಹೀಗಾಗಿ ಅಲ್ಲಿ ಶೋಧ ನಡೆಸಿಲ್ಲ.

ಕೋಲಾರ ಜಿಲ್ಲೆಯ ಮುಳಬಾಗಲು ತಾಲ್ಲೂಕಿನ ನಂಗಲಿ ಸಾರಿಗೆ ತನಿಖಾ ಠಾಣೆಯಲ್ಲಿ ಲೋಕಾಯುಕ್ತ ಪೊಲೀಸರಿಂದ ಶೋಧ

ನಗದು ಹೊರಗೆಸೆದ ನಿರೀಕ್ಷಕಿ

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಶ್ರೀನಾಥ್ ಜೋಶಿ ನೇತೃತ್ವದ ತಂಡ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಸಾರಿಗೆ ತನಿಖಾ ಠಾಣೆಯ ಮೇಲೆ ದಾಳಿಮಾಡಿ ಶೋಧ ಆರಂಭಿಸುತ್ತಿದ್ದಂತೆ ಅಲ್ಲಿದ್ದ ಮೋಟಾರು ವಾಹನ ನಿರೀಕ್ಷಕಿ ಲಕ್ಷ್ಮಿ ಎಂಬುವವರು ₹ 14,000 ನಗದನ್ನು ಕಿಟಕಿಯಿಂದ ಹೊರಕ್ಕೆ ಎಸೆದ ಘಟನೆ ನಡೆದಿದೆ.

ಲೋಕಾಯುಕ್ತ ಕಾಯ್ದೆಯಡಿ ಶೋಧ ನಡೆಸಲಾಗಿದೆ. ಅಕ್ರಮ ನಗದು ಪತ್ತೆಯಾಗಿರುವುದರಿಂದ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗುವುದು. ನ್ಯಾ.ಬಿ.ಎಸ್. ಪಾಟೀಲ, ಲೋಕಾಯುಕ್ತ

ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡ ನಗದು ವಿವರ

ತನಿಖಾ ಠಾಣೆ	ನಗದು ಮೊತ್ತ ₹ ಗಳಲ್ಲಿ
ಧೂಳಖೇಡ(ಝುಳಕಿ)	4,53,611
ಕೊಂಗನಹಳ್ಳಿ (ನಿಪ್ಪಾಣಿ)	3,62,010
ಅತ್ತಿಬೆಲೆ (ಆನೇಕಲ್)	62,227
ಬೋಲ್ಕೆರೆ (ಹುಮ್ನಾಬಾದ್)	1,54,536
ಗೋದಾಳ್ (ಬಳ್ಳಾರಿ)	54,900
ಗುಂಡ್ಲುಪೇಟೆ	9,779
ನಂಗಲಿ	6,584

ಮತಾಂತರ ನಿಷೇಧ ಮಸೂದೆಗೆ ಅಂಕಿತ

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಬುಧವಾರ ಅಂಕಿತ ಹಾಕಿದ್ದಾರೆ.

ವಿಧಾನಮಂಡಲದ ಕಳೆದ ಅಧಿವೇಶನದಲ್ಲಿ ಉಭಯ ಸದನಗಳಲ್ಲೂ ಈ ಮಸೂದೆಗೆ ಅಂಗೀಕಾರ ನೀಡಲಾಗಿತ್ತು. ಬಳಿಕ ಅದನ್ನು ರಾಜ್ಯಪಾಲರ ಒಪ್ಪಿಗೆಗಾಗಿ ರಾಜಭವನಕ್ಕೆ ಕಳುಹಿಸಲಾಗಿತ್ತು. ರಾಜ್ಯಪಾಲರ ಅಂಕಿತ ದೊರಕಿರುವುದರಿಂದ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಕಾಯ್ದೆ ಜಾರಿಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಕೆಎಸ್‌ಆರ್‌ಟಿಸಿ ಪ್ಯಾಕೇಜ್ ಪ್ರವಾಸ ಸ್ಪರ್ಧೆ

ಬೆಂಗಳೂರು: ದಸರಾ ಪ್ರಯುಕ್ತ ಕೆಎಸ್‌ಆರ್‌ಟಿಸಿ ಆರಂಭಿಸಿರುವ ಪ್ಯಾಕೇಜ್ ಪ್ರವಾಸದ ಅನುಭವ ಹಂಚಿಕೊಳ್ಳಲು ಸ್ಪರ್ಧೆ ಆಯೋಜಿಸಿದೆ.

ಮೈಸೂರು ದಸರಾದಲ್ಲಿ ಗಿರಿದರ್ಶಿನಿ, ಜಲದರ್ಶಿನಿ, ದೇವದರ್ಶಿನಿ, ಮೈಸೂರು ದೀಪಾಲಂಕಾರ ದರ್ಶನ, ಮಡಿಕೇರಿ ಪ್ಯಾಕೇಜ್ ಹಾಗೂ ಊಟಿ ಪ್ಯಾಕೇಜ್, ಮಂಗಳೂರು ದಸರಾ ದರ್ಶನ ಮತ್ತು ಸುತ್ತಮುತ್ತಲಿನ ಪ್ರಮುಖ ದೇವಸ್ಥಾನಗಳ ದರ್ಶನಕ್ಕೆ ಪ್ಯಾಕೇಜ್ ಪ್ರವಾಸವನ್ನು ಕೆಎಸ್‌ಆರ್‌ಟಿಸಿ ಪರಿಚಯಿಸಿದೆ.

ಪ್ರವಾಸದ ಸಂದರ್ಭದಲ್ಲೇ ಮಾಡಿದ ಒಂದು ನಿಮಿಷದ ವಿಡಿಯೊದಲ್ಲಿ ಪ್ರಯಾಣಿಕರು ತಮ್ಮ ಅನುಭವ ತಿಳಿಸಬೇಕು. ಈ ವಿಡಿಯೊವನ್ನು ಫೇಸ್‌ಬುಕ್ ಮತ್ತು ಟ್ವಿಟರ್ ಎರಡರಲ್ಲೂ #DasarawithKSRTC ಎಂಬ ಹ್ಯಾಷ್‌ಟ್ಯಾಗ್ ಜತೆ ಸಂಸ್ಥೆಯ ಅಧಿಕೃತ ಫೇಸ್‌ಬುಕ್ ಮತ್ತು ಟ್ವಿಟರ್ ಖಾತೆಗೆ ಟ್ಯಾಗ್ ಮಾಡಬೇಕು. ಅತ್ಯಧಿಕ ಲೈಕ್ ಪಡೆದ ಮತ್ತು ಸಕಾರಾತ್ಮಕ ಅಭಿವ್ಯಕ್ತಿ ವಿಡಿಯೊವನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಪ್ಯಾಕೇಜ್ ಪ್ರವಾಸದಲ್ಲಿ ಅ.1 ರಿಂದ 10ರ ಅವಧಿಯಲ್ಲಿ ಪ್ರಯಾಣ ಮಾಡಿದ ವಿಡಿಯೊ ಆಗಿರಬೇಕು. ಅ.15ರೊಳಗೆ ವಿಡಿಯೊ ಕಳುಹಿಸಬೇಕು. ಮೊದಲನೇ ಬಹುಮಾನ ₹5 ಸಾವಿರ, ಎರಡನೇ ಬಹುಮಾನ ₹3 ಸಾವಿರ ಮತ್ತು ಮೂರನೇ ಬಹುಮಾನ ₹2 ಸಾವಿರ ನಿಗದಿ ಮಾಡಲಾಗಿದೆ ಎಂದು ವಿವರಿಸಿದೆ.



ಕಾಂಗ್ರೆಸ್ ಪಾಳಯದಲ್ಲಿ ಚರ್ಚೆ • ಹಿಂದೆ ಸರಿಯುವ ಮಾತೇ ಇಲ್ಲ ಎಂದ ತರೂರ್

ಮಲ್ಲಿಕಾರ್ಜುನ ಖರ್ಗೆ ಗೆಲುವು ಖಚಿತ?

ನವದೆಹಲಿ/ಗುಂಡ್ಲುಪೇಟೆ (ಪಿಟಿಐ): ಕಾಂಗ್ರೆಸ್‌ನ ಮುಂದಿನ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅವರೇ ಚುನಾಯಿತರಾಗುತ್ತಾರೆ ಎಂಬ ವಿಷಯ ಚರ್ಚೆಗೆ ಬಂದಿದೆ. ಪಕ್ಷದ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿರುವ ಜೈರಾಮ್ ರಮೇಶ್ ಅವರು, ಅಧ್ಯಕ್ಷ ಹುದ್ದೆಗೆ ಚುನಾವಣೆ ನಡೆಯುತ್ತದೆಯೇ ಇಲ್ಲವೇ ಎಂಬುದೇ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದು ಚರ್ಚೆಗೆ ಕಾರಣವಾಗಿದೆ. ಆದರೆ, ಕಣದಿಂದ ಹಿಂದೆ ಸರಿಯುವುದಿಲ್ಲ ಎಂದು ಮತ್ತೊಬ್ಬ ಅಭ್ಯರ್ಥಿ ಶಶಿ ತರೂರ್ ಸ್ಪಷ್ಟಪಡಿಸಿದ್ದಾರೆ.

ಅಧ್ಯಕ್ಷ ಚುನಾವಣೆಗೆ ನಾಮಪತ್ರ ಸಲ್ಲಿಸಲು ಶುಕ್ರವಾರ ಕೊನೆಯ ದಿನವಾಗಿತ್ತು. ಖರ್ಗೆ, ಶಶಿ ತರೂರ್ ಮತ್ತು ಕೆ.ಎನ್.ತ್ರಿಪಾಠಿ ನಾಮಪತ್ರ ಸಲ್ಲಿಸಿದ್ದಾರೆ. 'ಖರ್ಗೆ ಅವರಿಗೆ ಗಾಂಧಿ ಕುಟುಂಬದ ಬೆಂಬಲವಿದೆ. ಹೀಗಾಗಿ ಅವರೇ ಚುನಾವಣೆಯಲ್ಲಿ ಗೆಲ್ಲುತ್ತಾರೆ' ಎಂದು ಪಕ್ಷದ ಮೂಲಗಳು ಹೇಳಿವೆ. ಆದರೆ ನಾವು ತಟಸ್ಥರಾಗಿ ಇರುತ್ತೇವೆ ಎಂದು ಪಕ್ಷದ ಅಧ್ಯಕ್ಷರಾದ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಸಂಸದ ರಾಹುಲ್ ಗಾಂಧಿ ಈಗಾಗಲೇ ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. ಆದರೂ, ಖರ್ಗೆ ಅವರೇ ಗೆಲ್ಲುತ್ತಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಕರ್ನಾಟಕದಲ್ಲಿ 'ಭಾರತ್ ಜೋಡೊ ಯಾತ್ರೆ'ಯಲ್ಲಿರುವ ಜೈರಾಮ್ ರಮೇಶ್ ಅವರು ನೀಡಿರುವ ಹೇಳಿಕೆಯು ಇದನ್ನೇ ಪುಷ್ಟೀಕರಿಸುತ್ತದೆ. 'ನಾಮಪತ್ರ ವಾಪಸ್ ಪಡೆಯಲು ಇನ್ನೂ ಸಾಕಷ್ಟು ಸಮಯಾವಕಾಶವಿದೆ. ಅಕ್ಟೋಬರ್ 17ರ ಚುನಾವಣೆ ನಡೆಯುತ್ತದೆಯೇ ಅಥವಾ ಇಲ್ಲವೇ ಎಂಬುದು ಗೊತ್ತಿಲ್ಲ' ಎಂದು ಹೇಳಿದ್ದಾರೆ.

ಶಶಿ ತರೂರ್ ಅವರು ತಮ್ಮ ನಾಮಪತ್ರ ವಾಪಸ್ ಪಡೆಯುತ್ತಾರೆ ಎಂಬ ವಿಚಾರವೂ ಚರ್ಚೆಗೆ ಬಂದಿದೆ.

ಮಲ್ಲಿಕಾರ್ಜುನ ಖರ್ಗೆ ಅವರು ನಾಮಪತ್ರ ಸಲ್ಲಿಸುವ ವೇಳೆ ದಿಗ್ವಿಜಯ ಸಿಂಗ್ (ಎಡತುದಿ) ಮತ್ತು ಅಶೋಕ್ ಗೆಹಲೋತ್ ಇದ್ದರು (ಎಡಚಿತ್ರ). ಶಶಿ ತರೂರ್ ತಮ್ಮ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು —ಪಿಟಿಐ ಚಿತ್ರ

‘ಬದಲಾವಣೆ ಬೇಕಿದ್ದರೆ ನನಗೆ ಮತ ನೀಡಿ’

‘ಕಾಂಗ್ರೆಸ್‌ನಲ್ಲಿ ಯಥಾಸ್ಥಿತಿ ಮುಂದುವರಿಯಬೇಕು ಎಂದಿದ್ದರೆ ಖರ್ಗೆ ಅವರಿಗೆ ಮತ ನೀಡಿ. ಪಕ್ಷದಲ್ಲಿ ಬದಲಾವಣೆಯಾಗಬೇಕು ಎಂದಿದ್ದರೆ ನನಗೆ ಮತ ನೀಡಿ’ ಎಂದು ಶಶಿ ತರೂರ್ ಹೇಳಿದ್ದಾರೆ.

ನಾಮಪತ್ರ ಸಲ್ಲಿಕೆಯ ನಂತರ ಪತ್ರಕರ್ತರ ಜತೆ ಮಾತನಾಡಿದ ಅವರು, ‘ಇದು ಸ್ನೇಹಪೂರ್ವಕ ಸ್ಪರ್ಧೆ. ನಾವು ಎದುರಾಳಿಗಳೂ ಅಲ್ಲ ವೈರಿಗಳೂ ಅಲ್ಲ. ಅವರ ಬಗ್ಗೆ ನನಗೆ ಗೌರವವಿದೆ. ಆದರೆ, ನಾನು ನನ್ನ ಚಿಂತನೆಗಳನ್ನು ಪ್ರತಿನಿಧಿಸುತ್ತೇನೆ’ ಎಂದು ತರೂರ್ ಹೇಳಿದ್ದಾರೆ.

ತರೂರ್ ಎಡವಟ್ಟು: ನಾಮಪತ್ರ ಸಲ್ಲಿಕೆಯ ನಂತರ ತರೂರ್ ಅವರು ತಮ್ಮ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದರು. ಆದರೆ, ಅದರಲ್ಲಿ ಬಳಸಿದ್ದ ಭಾರತದ ಭೂಪಟದಲ್ಲಿ ಜಮ್ಮು-ಕಾಶ್ಮೀರ ಮತ್ತು ಲಡಾಖ್‌ನ ಪೂರ್ಣ ಭಾಗಗಳು ಇರಲಿಲ್ಲ. ಈ ಬಗ್ಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ತರೂರ್ ಅವರು ತಕ್ಷಣವೇ ಆ ಪ್ರಣಾಳಿಕೆಯನ್ನು ಹಿಂಪಡೆದರು ಮತ್ತು ಸರಿಪಡಿಸಲಾದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ರಾಹುಲ್ ಗಾಂಧಿ ಒಂದೆಡೆ ಭಾರತ ಜೋಡೊ ಯಾತ್ರೆ ನಡೆಸುತ್ತಿದ್ದಾರೆ. ಶಶಿ ತರೂರ್ ಅವರು ಜಮ್ಮು-ಕಾಶ್ಮೀರದ ಪ್ರಮುಖ ಭಾಗಗಳನ್ನೇ ಬಿಟ್ಟಿದ್ದಾರೆ. ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದಂತೆ ಗಾಂಧಿಗಳದ್ದು ಇದೇ ನೀತಿ. ಅವರನ್ನು ಓಲೈಸಲು ತರೂರ್ ಹೀಗೆ ಮಾಡಿದ್ದಾರೆ ಎಂದು ಬಿಜೆಪಿ ಐಟಿ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ಟ್ವೀಟ್ ಮಾಡಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ತರೂರ್, ಯಾರೂ ಉದ್ದೇಶಪೂರ್ವಕವಾಗಿ ಹೀಗೆ ಮಾಡುವುದಿಲ್ಲ. ಪ್ರಣಾಳಿಕೆ ಸಿದ್ಧಪಡಿಸುವಾಗ ಇಂತಹ ತಪ್ಪಾಗಿದೆ. ಅದು ಗೊತ್ತಾದ ತಕ್ಷಣವೇ ಸರಿಪಡಿಸಿದ್ದೇವೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ತರೂರ್ ಅವರನ್ನು ಪ್ರಶ್ನಿಸಿದಾಗ, ‘ನಾನು ಸ್ಪರ್ಧೆಯಿಂದ ಹಿಂದೆ ಸರಿಯುವ ಮಾತೇ ಇಲ್ಲ. ನಾನು ನಾಮಪತ್ರ ವಾಪಸ್ ಪಡೆಯುವುದಿಲ್ಲ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸೋನಿಯಾ ಅಧ್ಯಕ್ಷತೆಯ ವಿರುದ್ಧ ಪತ್ರ ಬರೆದಿದ್ದ ಜಿ-23 ಗುಂಪಿನ ಹಲವರು, ಖರ್ಗೆ ಅವರ ಉಮೇದುವಾರಿಕೆಯನ್ನು ಅನುಮೋದಿಸಿ ಸಹಿ ಮಾಡಿದ್ದಾರೆ. ನಾಮಪತ್ರ ಸಲ್ಲಿಸಲು ಖರ್ಗೆ ಅವರು ಪಕ್ಷದ ಕೇಂದ್ರ ಕಚೇರಿಗೆ ತೆರಳಿದಾಗ ಹಿರಿಯ ನಾಯಕರಾದ ಭೂಪಿಂದರ್ ಸಿಂಗ್ ಹೂಡಾ, ದಿಗ್ವಿಜಯ ಸಿಂಗ್, ಪೃಥ್ವಿರಾಜ್ ಚವಾಣ್, ಎ.ಕೆ.ಆ್ಯಂಟನಿ, ಅಭಿಷೇಕ್ ಮನು ಸಿಂಘ್ವಿ, ಅಜಯ ಮಾಕನ್ ಇದ್ದರು. ಜಿ-23 ನಾಯಕರೂ ಖರ್ಗೆ ಅವರನ್ನು ಬೆಂಬಲಿಸಿರುವುದರಿಂದ, ಅವರೇ ಗೆಲ್ಲುತ್ತಾರೆ ಎಂದು ನಿರೀಕ್ಷಿಸಲಾಗಿದೆ. ಸ್ಪರ್ಧೆಯಿಂದ ದಿಗ್ವಿಜಯ ಸಿಂಗ್ ಹಿಂದೆ ಸರಿದಿರುವುದೂ ಇದನ್ನೇ ಸೂಚಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

ಗೆಹಲೋತ್ ಅವರು ಸ್ಪರ್ಧೆಯಿಂದ ಹಿಂದೆ ಸರಿದ ನಂತರ, ದಿಗ್ವಿಜಯ ಸಿಂಗ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದ್ದರು. ಈ ಸಂಬಂಧ ಸೋನಿಯಾ ಗಾಂಧಿ ಅವರ ಜತೆಗೂ ಅವರು ಮಾತುಕತೆ ನಡೆಸಿದ್ದರು. ಗುರುವಾರ ಪಕ್ಷದ ಕಚೇರಿಗೆ ತೆರಳಿ ನಾಮಪತ್ರದ ಅರ್ಜಿಯನ್ನೂ ಪಡೆದುಕೊಂಡಿದ್ದರು. ಆದರೆ ಗುರುವಾರ ತಡರಾತ್ರಿ ಕ್ಷಿಪ್ರ ಬೆಳವಣಿಗೆ ನಡೆಯಿತು. ಖರ್ಗೆ ಅವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಚುನಾವಣಾ ಕಣಕ್ಕೆ ಇಳಿಯುವಂತೆ ಮನವೊಲಿಸಿದರು. ಆನಂತರ ಖರ್ಗೆ ಅವರು ಶುಕ್ರವಾರ ಬೆಳಿಗ್ಗೆ ನಾಮಪತ್ರ ಸಲ್ಲಿಸಿದ್ದಾರೆ.

ಈ ಬೆಳವಣಿಗೆಯ ಬೆನ್ನಲ್ಲೇ ದಿಗ್ವಿಜಯ ಸಿಂಗ್ ಅವರು ಖರ್ಗೆ ಅವರ ಜತೆಗೆ ಮಾತುಕತೆ ನಡೆಸಿದರು. ಆನಂತರ ಕಣದಿಂದ ಹಿಂದೆ ಸರಿಯುವ ತಮ್ಮ ನಿರ್ಧಾರವನ್ನು ಪ್ರಕಟಿಸಿದರು. ‘ನೀವು ಸ್ಪರ್ಧಿಸಿ ಎಂದು ಖರ್ಗೆ ಅವರನ್ನು ಈ ಮೊದಲು ಕೇಳಿಕೊಂಡಿದ್ದೆ. ಅವರು ನಿರಾಕರಿಸಿದ್ದರು. ಈಗ ಅವರು ನಾಮಪತ್ರ ಸಲ್ಲಿಸಿದ್ದಾರೆ. ಅವರು ನನಗಿಂತ ಹಿರಿಯರು. ಅವರ ವಿರುದ್ಧ ಕಣಕ್ಕೆ ಇಳಿಯುವುದನ್ನು ನಾನು ಯೋಚಿಸಲೂ ಸಾಧ್ಯವಿಲ್ಲ. ಅವರಿಗೆ ನನ್ನ ಬೆಂಬಲವಿದೆ. ನಾನು ಕಣದಿಂದ ಹಿಂದೆ ಸರಿದಿದ್ದೇನೆ’ ಎಂದು ದಿಗ್ವಿಜಯ ಸಿಂಗ್ ಹೇಳಿದ್ದಾರೆ.

ರಾಜ್ಯದ ಎರಡನೇ ವ್ಯಕ್ತಿ...

ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಚುನಾಯಿತರಾದರೆ, ಆ ಹುದ್ದೆಗೆ ಏರಿದ ಕರ್ನಾಟಕದ ಎರಡನೇ ವ್ಯಕ್ತಿ ಎನಿಸುತ್ತಾರೆ. ಎಸ್. ನಿಜಲಿಂಗಪ್ಪ ಅವರು ಈ ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು.

ಅಲ್ಲದೆ, ದಲಿತ ನಾಯಕರಾಗಿದ್ದ ಜಗಜೀವನ್ ರಾಮ್ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆನಂತರ ಆ ಹುದ್ದೆಗೆ ಏರಿದ ದಲಿತ ಸಮುದಾಯದ ಎರಡನೇ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಖರ್ಗೆ ಪಾತ್ರರಾಗುವ ಸಾಧ್ಯತೆ ಇದೆ.

ಖರ್ಗೆ ಅತ್ಯುತ್ತಮ ಆಯ್ಕೆ: ಬಿ.ಕೆ.ಸಿ

ಬೆಂಗಳೂರು: ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಅತ್ಯುತ್ತಮ ಅಭ್ಯರ್ಥಿ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

ಖರ್ಗೆ ಅವರ ಸ್ಪರ್ಧೆಯ ಕುರಿತು ಪ್ರತಿಕ್ರಿಯಿಸಿರುವ ಅವರು, 'ಎಐಸಿಸಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯು ಮಲ್ಲಿಕಾರ್ಜುನ ಖರ್ಗೆ ಮತ್ತು ಶಶಿ ತರೂರ್ ಅಷ್ಟಕ್ಕೇ ಸೀಮಿತವಾಗಿರಲಿಲ್ಲ. ವಿಭಿನ್ನ ಬಗೆಯ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ತರದ ಜನರ ನಡುವೆ ಸಂಪರ್ಕ ಸಾಧಿಸುವ ವಿಚಾರದಲ್ಲಿ ಖರ್ಗೆಯವರಿಗೆ ಹೆಚ್ಚು ಅನುಕೂಲಕರ ವಾತಾವರಣ ಇದೆ. ಜಮೀನ್ದಾರಿ ಕುಟುಂಬಗಳ ಪ್ರಾಬಲ್ಯ ಹೊಂದಿದ್ದ ಪ್ರದೇಶದಲ್ಲಿ ಕೂಲಿ ಕಾರ್ಮಿಕರಾಗಿದ್ದ ಪರಿಶಿಷ್ಟ ಜಾತಿಯ ಕುಟುಂಬದಲ್ಲಿ ಹುಟ್ಟಿ ಸ್ವಂತ ಶ್ರಮದಿಂದ ಶಿಕ್ಷಣ ಪಡೆದು, ಜಾತಿಯ ಹೆಸರನ್ನು ಬಳಸದೇ ದುಡಿಮೆಯೊಂದಲೇ ಕಾಂಗ್ರೆಸ್‌ನ ಮುನ್ನೆಲೆಗೆ ಬಂದಿರುವವರು ಅವರು' ಎಂದಿದ್ದಾರೆ.

ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಜೈಶ್ ಎ ಮೊಹಮದ್‌ನ ಇಬ್ಬರು ಉಗ್ರರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೋಪಿಯಾನ್ ಮತ್ತು ಬಾರಾಮುಲ್ಲಾ ಜಿಲ್ಲೆಗಳಲ್ಲಿ ಶುಕ್ರವಾರ ಬೆಳಗಿನ ಜಾವ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವೆ ಎರಡು ಎನ್‌ಕೌಂಟರ್ ನಡೆದಿವೆ. ಶೋಪಿಯಾನ್‌ನ ಚಿತ್ರಗಾಮ್ ಪ್ರದೇಶ ಮತ್ತು ಬಾರಾಮುಲ್ಲಾದ ಪಟ್ಟನ್‌ನ ಯಡಿಪೋರಾ ಪ್ರದೇಶದಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯ ನಡೆಸುವಾಗ ಎನ್‌ಕೌಂಟರ್ ಶುರುವಾಗಿದೆ ಎಂದು ಅವರು ಹೇಳಿದರು.

ದೆಹಲಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ 68ನೇ ರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹಿರಿಯ ನಟಿ ಆಶಾ ಪಾರೇಖ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ನೀಡಿ ಗೌರವಿಸಿದರು —ಪಿಟಿಐ ಚಿತ್ರ

ರಾಜ್ಯ ಹೈಕೋರ್ಟ್ ಸಿಜೆಯಾಗಿ ನ್ಯಾಯಮೂರ್ತಿ ವರಾಳೆಗೆ ಬಡ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರಿಗೆ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ ನೀಡಲು ಸುಪ್ರೀಂಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ. ವರಾಳೆ ಅವರು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮೂಲದವರು.

ಮುಖ್ಯನ್ಯಾಯಮೂರ್ತಿ ಯು.ಯು. ಲಲಿತ್ ನೇತೃತ್ವದ ಕೊಲಿಜಿಯಂ, ಕೆಲ ನ್ಯಾಯಮೂರ್ತಿಗಳಿಗೆ ಬಡ್ತಿ, ವರ್ಗಾವಣೆಗೆ ಸಂಬಂಧಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸಂಜಯ ಕಿಶನ್ ಕೌಲ್ ಅವರೂ ಸದಸ್ಯರಾಗಿರುವ ಕೊಲಿಜಿಯಂ ಸೆ. 28ರಂದು ನಡೆಸಿದ ಸಭೆಯಲ್ಲಿ ಈ ನೇಮಕಕ್ಕೆ ಅನುಮೋದನೆ ನೀಡಿದೆ. ಒಡಿಶಾ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಜಸ್ವಂತ್ ಸಿಂಗ್, ಜಮ್ಮು-ಕಾಶ್ಮೀರ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಅಲಿ ಮೊಹಮ್ಮದ್ ಮಾಗ್ರೆ ಅವರಿಗೆ ಬಡ್ತಿ ನೀಡಲು ಶಿಫಾರಸು ಮಾಡಲಾಗಿದೆ.

ರಾಷ್ಟ್ರ ಲಾಂಛನ: ಹೊಸ ವಿನ್ಯಾಸಕ್ಕೆ ಆಕ್ಷೇಪ– ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’

ನವದೆಹಲಿ: ಹೊಸದಾಗಿ ನಿರ್ಮಿಸಲಾಗುತ್ತಿರುವ ಸಂಸತ್ ಭವನದ ಕಟ್ಟಡದ ಮೇಲೆ ಸ್ಥಾಪಿಸಿರುವ ರಾಷ್ಟ್ರ ಲಾಂಛನದಲ್ಲಿನ ಸಿಂಹಗಳ ವಿನ್ಯಾಸವನ್ನು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ವಕೀಲರಾದ ಆಲ್ದನಿಶ್ ರೀನ್, ರಮೇಶ್ ಕುಮಾರ್ ಮಿಶ್ರ ಅವರು ಲಾಂಛನದ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಸಿಂಹಗಳ ಬಾಯಿ ತೆರೆದಿವೆ ಮತ್ತು ಕೋರೆಹಲ್ಲುಗಳು ಕಾಣುತ್ತಿವೆ. ಸಿಂಹಗಳನ್ನು ‘ಉಗ್ರ ಮತ್ತು ಆಕ್ರಮಣಕಾರಿ’ಯಂತೆ ತೋರಿಸಲಾಗಿದೆ ಎಂದು ಅವರು ಅರ್ಜಿಯಲ್ಲಿ ಆಕ್ಷೇಪಿಸಿದ್ದರು.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬೀದರ

ಉಪನಿರ್ದೇಶಕರವರ ಕಛೇರಿ ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಜಿಲ್ಲಾ ಪಂಚಾಯತ ನೌಬಾದ, ಬೀದರ

ದೂರವಾಣಿ ಸಂಖ್ಯೆ : 08482–233143, ಫ್ಯಾಕ್ಸ್ : 08482–233143

ಸಂ:ಜಿಪಂಬೀ/ಉನಿಖಾಗ್ರಾಕೈ/ಎ1/ಟೆಂಡರ/2022–23 ದಿನಾಂಕ:30–09–2022

ಇ–ಪ್ರಕ್ಯೂರಮೆಂಟ ಟೆಂಡರ ಪ್ರಕಟಣೆ

2022–23ನೇ ಸಾಲಿನ ಜಿಲ್ಲಾ ಉದ್ಯಮ ಕೇಂದ್ರ ಮತ್ತು ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತ ಸುಧಾರಿತ ಉಪಕರಣಗಳ ಸರಬರಾಜು ಯೋಜನೆಗಳ ಅಡಿಯಲ್ಲಿ ಒಟ್ಟು ರೂ, 66.00 ಲಕ್ಷ ಅನುದಾನದಲ್ಲಿ ವಿದ್ಯುತ ಚಾಲಿತ ಹೋಲಿಗೆ ಯಂತ್ರಗಳು ಮತ್ತು ಧೋಬಿ ಸಲಕರಣೆಗಳ (ವಿದ್ಯುತ) ಖರೀದಿಗಾಗಿ ಇ–ಪ್ರಕ್ಯೂರಮೆಂಟ ಪೋರ್ಟಲ್ ಮುಖಾಂತರ ಟೆಂಡರ ಆಹ್ವಾನಿಸಲಾಗಿದ್ದು, ಆಸಕ್ತ ತಯ್ಯಾರಕರು/ಸರಬರಾಜುದಾರರು ಇ–ಪ್ರಕ್ಯೂರಮೆಂಟ ಪೋರ್ಟಲ್ www.eproc.karnataka.gov.in ಟೆಂಡರನಲ್ಲಿ ಭಾಗವಹಿಸಬಹುದು. ಟೆಂಡರ ಮಾಹಿತಿಯನ್ನು ಸದರಿ ಪೋಟರ್ಲ್‌ನಲ್ಲಿ ಪಡೆಯಬಹುದು. ಆನ್‌ಲೈನ್ ಮೂಲಕ ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 27–10–2022 ಅಪರಾಹ್ನ 5.00 ಗಂಟೆಯ ವರೆಗೆ.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂ: 08482–233143 ಸಂಪರ್ಕಿಸಿ ಕಛೇರಿ ಸಮಯದಲ್ಲಿ ಮಾಹಿತಿ ಪಡೆಯಬಹುದು ಹಾಗೂ ಇ–ಪ್ರಕ್ಯೂರಮೆಂಟ ಪೋರ್ಟಲ್ www.eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಉಪನಿರ್ದೇಶಕರು (ಕೆ.ವಿ.ಐ)
ಜಿಲ್ಲಾ ಪಂಚಾಯತ್, ಬೀದರ.

ವಾ.ಸಾ.ಸಂ.ಇ/ಬೀದರ/263/ಎಂಸಿ&ಎ/2022–23

ಕರ್ನಾಟಕ ಸರ್ಕಾರ

ಗಣಿ ಮತ್ತು ಭೂವಿಜ್ಞಾನ ಇಲಾಖೆ

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.

ಇ–ಮೇಲ್: dir-mines@karnataka.gov.in

ಸಂ: ಡಿಎಂಜಿ–17012/22/2021 ದಿನಾಂಕ: 29.09.2022

ಸಿ.ನಂ: 652857

ಅಧಿಸೂಚನೆ ಮತ್ತು ಟೆಂಡರ್ ಆಹ್ವಾನಿಸುವ ಪ್ರಕಟಣೆ

“ಸುಣ್ಣದ ಕಲ್ಲಿನ ಬ್ಲಾಕ್‌ಗೆ ಗಣಿ ಗುತ್ತಿಗೆ ನೀಡಲು ಬಿಡ್‌ಗಳ ಆಹ್ವಾನ”

Mines and Minerals (Development and Regulation) Act, 1957 ರ ಸೆಕ್ಷನ್ 10(ಬಿ) ಅಡಿಯಲ್ಲಿ ಪ್ರದತ್ತವಾದ ಅಧಿಕಾರದಂತೆ ಮತ್ತು the Minerals (Evidence of Mineral Contents) Rules, 2015 and the Mineral (Auction) Rules, 2015 ಮತ್ತು ಅದರಡಿಯಾದ ತಿದ್ದುಪಡಿಗಳ ಅನುಗುಣವಾಗಿ ಕರ್ನಾಟಕ ಸರ್ಕಾರವು ಗಣಿಗಾರಿಕೆ ಗುತ್ತಿಗೆ ನೀಡಲು 1 ಸುಣ್ಣದ ಕಲ್ಲಿನ ಬ್ಲಾಕ್ ಗೆ ಎಲೆಕ್ಟ್ರಾನಿಕ್ ಹರಾಜಿನ "ಎರಡನೇ ಪ್ರಯತ್ನ"ವನ್ನು ನಡೆಸುತ್ತಿದೆ ಮತ್ತು ಈ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಹರಾಜಿನ ಮೂಲಕ ಗಣಿಗಾರಿಕೆ ಗುತ್ತಿಗೆ ನೀಡಲು ಸುಣ್ಣದ ಕಲ್ಲಿನ ಬ್ಲಾಕ್

ಕ್ರ. ಸಂ.	ಬ್ಲಾಕ್ ಹೆಸರು	ಜಿಲ್ಲೆ	ಖನಿಜ	ರಿಯಾಯಿತಿ ಪ್ರದೇಶ (ಹೆ.ಗಳಲ್ಲಿ)	ಅಂದಾಜಿಸಲಾದ ಖನಿಜ ಸಂಪನ್ಮೂಲ (ಎಂಎಂಟಿ)	ಟೆಂಡರ್ ಫೀ
1	ಉಡಗಿ ಸುಣ್ಣದ ಕಲ್ಲಿನ ಬ್ಲಾಕ್	ಕಲಬುರಗಿ	ಸುಣ್ಣದ ಕಲ್ಲು	646.34	459.41	ರೂ. 5,00,000+ 18% ಜಿಎಸ್‌ಟಿ

"ಎರಡನೇ ಪ್ರಯತ್ನಕ್ಕೆ" ಮೇಲೆ ಗುರುತಿಸಿರುವ ಒಂದು ಸುಣ್ಣದ ಕಲ್ಲಿನ ಬ್ಲಾಕ್‌ನ್ನು ನಿಯಮಗಳು 2015ರ ನಿಯಮ 9ರ ಉಪ–ನಿಯಮ 11ರ ಷರತ್ತು (ಬಿ) ಮತ್ತು ಅದರ ಅಡಿಯಲ್ಲಿ ತಿದ್ದುಪಡಿಗಳ ಪ್ರಕಾರ ಕೈಗೊಳ್ಳಲಾಗುತ್ತಿದೆ.

ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿಯು ಟೆಂಡರ್ ದಾಖಲೆಯಲ್ಲಿ ನಮೂದಿಸಿರುವ ಅರ್ಹತೆಗಳನ್ನು ಹೊಂದಿರುವವರು ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಮೇಲಿನ ಪಟ್ಟಿಯಲ್ಲಿ ತಿಳಿಸಿರುವ ಬ್ಲಾಕ್‌ಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಬೇಕಾದ ತಾಂತ್ರಿಕ ಬಿಡ್‌ಗಳ ಹೊರತಾಗಿ, ಬಿಡ್ಡುದಾರರು ತಮ್ಮ ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಸಲ್ಲಿಸಬೇಕಾಗುತ್ತದೆ.

ಅರ್ಹತಾ ನಿಬಂಧನೆಗಳು, ನಿಯಮ ಹಾಗೂ ನಿಬಂಧನೆಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸಬೇಕಾದ ದಿನಾಂಕ ಮತ್ತು ಸಮಯಗಳ ವಿವರಗಳನ್ನು ಟೆಂಡರ್ ದಸ್ತಾವೇಜಿನಲ್ಲಿ ನೀಡಲಾಗಿರುತ್ತದೆ. ಟೆಂಡರ್ ದಸ್ತಾವೇಜುಗಳು, ಪ್ರಕಟಣೆಗಳು, ನವೀಕರಣಗಳು ಮತ್ತು ಇ–ಹರಾಜು ಪ್ರಕ್ರಿಯೆಗೆ ಸಂಬಂಧಿಸಿದ ಇತರೆ ವಿವರಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp)ನಲ್ಲಿ ಮಾತ್ರ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವುದು.

ಆಸಕ್ತಿಯುಳ್ಳ ಮತ್ತು ಅರ್ಹ ಬಿಡ್ಡುದಾರರು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಇ–ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಟೆಂಡರ್ ದಸ್ತಾವೇಜು ಮಾದರಿ ಮತ್ತು ಬ್ಲಾಕ್‌ನ ಕುರಿತಾದ ಸಾರಾಂಶಗಳು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್ (https://www.mstcecommerce.com/auctionhome/mlcl/index.jsp) ನಲ್ಲಿ ಉಚಿತವಾಗಿ ಲಭ್ಯವಿದೆ. ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ನೊಂದಣಿ ಮಾಡಿಕೊಂಡ ಬಿಡ್ಡುದಾರರು ಪ್ರತಿ ಬ್ಲಾಕ್‌ಗೆ ಕೋಷ್ಟಕದಲ್ಲಿ ನಮೂದಿಸಲಾದ ಶುಲ್ಕಗಳ ಪ್ರಕಾರ ಪಾವತಿಸುವ ಮೂಲಕ ಸಂಬಂಧಪಟ್ಟ ಗಣಿ ಬ್ಲಾಕ್‌ನ ಟೆಂಡರ್ ದಸ್ತಾವೇಜುಗಳನ್ನು ಎಂಎಸ್‌ಟಿಸಿ ನಿಯಮಿತದ ವೆಬ್‌ಸೈಟ್‌ನಿಂದ ಪಡೆಯಬಹುದು.

ಟೆಂಡರ್ ದಾಖಲೆಗಳ ಖರೀದಿಯ ಮೇಲೆ ಶೇ.18ರ ದರದಲ್ಲಿ ಜಿಎಸ್ಟಿ ಅನ್ವಯವಾಗುತ್ತದೆ. ಅನ್ವಯವಾಗುವ ಜಿಎಸ್ಟಿಯನ್ನು ಸಂಭಾವ್ಯ ಬಿಡ್ಡರ್ ಗಳು ಸ್ವತಃ ಪಾವತಿಸಬೇಕು. ಸಂಭಾವ್ಯ ಬಿಡ್ಡರ್ಗಳು ಅನ್ವಯವಾಗುವ ಕಾನೂನಿನ ಪ್ರಕಾರ ಜಿಎಸ್ಟಿಯನ್ನು ಪಾವತಿಸಲು ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಮತ್ತು ಇದರಲ್ಲಿ ಶಾಸನಬದ್ಧ ಹೊಣೆಗಾರಿಕೆಯು ಸಂಭಾವ್ಯ ಬಿಡ್ಡರುಗಳ ಜವಾಬ್ದಾರಿಯಾಗಿರುತ್ತದೆ ಮತ್ತು ಯಾವುದೇ ಹೊಣೆಗಾರಿಕೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ/ ಎಂಎಸ್‌ಟಿಸಿ ಭರಿಸುವುದಿಲ್ಲ.

ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 30.09.2022 ರಿಂದ ಆಸಕ್ತ ಬಿಡ್‌ದಾರರಿಗೆ ಮೇಲ್ಕಂಡ ಎಂ.ಎಸ್.ಟಿ.ಸಿ ವೆಬ್‌ಸೈಟ್ ನಲ್ಲಿ ಲಭ್ಯವಿದ್ದು ದಿನಾಂಕ: 18.11.2022 ಟೆಂಡರ್ ಮಾರಾಟದ ಕೊನೆಯ ದಿನವಾಗಿರುತ್ತದೆ. ತಾಂತ್ರಿಕ ಹಾಗೂ ಬಿಡ್ ಮೊತ್ತ ನಮೂದಿಸಿದ ಪ್ರಸ್ತಾವನೆಯನ್ನು ಎಂ.ಎಸ್.ಟಿ.ಸಿ ವೆಬ್ ಸೈಟ್‌ನಲ್ಲಿ ದಿನಾಂಕ: 30.11.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ಗಳ ಮೂಲ ಭೌತಿಕ ಪ್ರತಿಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅಂದರೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರಿಗೆ ದಿನಾಂಕ: 30.11.2022 ರ 17.00 ಗಂಟೆಗೆ ಅಥವಾ ಅದರೊಳಗೆ ಸಲ್ಲಿಸಬೇಕಾಗುತ್ತದೆ.

ಸಹಿ/–
ನಿರ್ದೇಶಕರು
ಗಣಿ ಮತ್ತು ಭೂವಿಜ್ಞಾನ ಇಲಾಖೆ

DIPR/CP/2444/Zenkar/2022-23

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮಕ್ಯೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ.

ದೂರವಾಣಿ ಸಂಖ್ಯೆ: 9448359013 ಇ.ಮೆಲ್: eeetpgescom@gmail.com

ಸಂಖ್ಯೆ: ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ–1(ತಾ)/ಸಇಂ–1(ತಾ)/2022–23/32878–87
ದಿನಾಂಕ: 29–09–2022

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ) ::

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದಂತೆ “ಕಾ ಮತ್ತು ಪಾ ಗ್ರಾಮೀಣ ವಿಭಾಗ ಬಳ್ಳಾರಿ ನಲ್ಲಿನ ಪ್ರದೇಶಗಳ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ ಪಿಟಿಕೆ ಯೂನಿಟ್ ರೇಟ್ ಕಾಟ್ರಾಂಕ್ಟ್ ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಇ–ಪ್ರೊಕ್ಯುರಮೆಂಟ್ ಮುಖಾಂತರ ಅರ್ಹ ಬಿಡ್‌ದಾರರುಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

1) Bid Enquiry No : TP-041/GK&WS/2022-23/Ballari Rural Division, 2) Approximate amount put to tender Rs. In lakhs : **526.16**, 3) Particulars : “ಕಾ ಮತ್ತು ಪಾ ಗ್ರಾಮೀಣ ವಿಭಾಗ ಬಳ್ಳಾರಿ ನಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿನ ವಿವಿಧ ನಿಗಮಗಳ ಗಂಗಾ ಕಲ್ಯಾಣ ಮತ್ತು ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಅಡಿಯಲ್ಲಿ ಬಾಕಿ ಇರುವ ಅರ್ಜಿಗಳಿಗೆ ವಿದ್ಯುತ್ ಸರಬರಾಜು ವ್ಯವಸ್ಥೆ ಮಾಡಲು ಮೂಲಸೌಕರ್ಯಗಳ ರಚನೆ”

ಆಸಕ್ತ ಬಿಡ್ ದಾರರು ದಿನಾಂಕ:06.10.2022 ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್ ಆನ್ ಮಾಡಲು ಕೋರಲಾಗಿದೆ **www.e-proc.karnataka.gov.in**

ಸಹಿ/– ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/677/ಎಂ.ಸಿ.&ಎ/2022–23

ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಶ್ರೀ ಡಿ. ದೇವರಾಜ ಅರಸು ಬಡಾವಣೆ, ‘ಎ’ ಬ್ಲಾಕ್, ಪಿ.ಬಿ.ರಸ್ತೆ, ದಾವಣಗೆರೆ–06

ನಂ:ದಾಹನಪ್ರಾ:ತಾಶಾ:ಸಇಂ–2:ಇಪ್ರ:ಟೆಂಪ್ರ:05:2022–23/1604 ದಿನಾಂಕ:29–09–2022.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)

ಆಯುಕ್ತರು, ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ಶ್ರೀ ಡಿ.ದೇವರಾಜ ಅರಸು ಬಡಾವಣೆ, ‘ಎ’ ಬ್ಲಾಕ್, ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಿಂದ ನೋಂದಾಯಿತ ಅರ್ಹ ಹಾಗೂ ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಿಲ್ಪಟ್ಟ ಗುತ್ತಿಗೆದಾರರಿಂದ ಪ್ರಾಧಿಕಾರದ ನಿಯಮಾವಳಿ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ	ಮುಂಗಡ ಹಣ ಠೇವಣಿ (ಇ.ಎಂ.ಡಿ.) ರೂ.ಗಳಲ್ಲಿ
1	ಮಹಾಯೋಜನೆಯಲ್ಲಿರುವ ದಾವಣಗೆರೆ ನಗರದ ತರಳಬಾಳು ಬಡಾವಣೆಯ 11ನೇ ಕ್ರಾಸ್‌ನಲ್ಲಿ ಸಿ.ಸಿ. ರಸ್ತೆ ನಿರ್ಮಾಣ. (ಎರಡನೇ ಕರೆ)	60.00	47.47	95,000/–
2	ಮಹಾಯೋಜನೆಯಲ್ಲಿರುವ ದಾವಣಗೆರೆ ನಗರದ ಶ್ರೀ ಜೆ.ಹೆಚ್.ಪಟೇಲ್ ಬಡಾವಣೆಯಲ್ಲಿರುವ ಉದ್ಯಾನವನಗಳಿಗೆ ಬಣ್ಣ ಬಳಿಯುವುದು ಮತ್ತು ಇತರೇ ಕಾಮಗಾರಿಗಳು.	79.00	64.69	1,30,000/–
3	ದಾವಣಗೆರೆ ಮಹಾಯೋಜನೆಯಲ್ಲಿರುವ ವಾರ್ಡ್ ನಂ: 33 ಸರಸ್ವತಿ ನಗರ ಬಿ ಬ್ಲಾಕ್ 9ನೇ ಕ್ರಾಸ್ ನಲ್ಲಿರುವ ಕೆ.ಎಸ್.ಎಸ್. ಕಾಲೇಜು ಹತ್ತಿರ ಇರುವ ಪಾರ್ಕ್ ಅಭಿವೃದ್ಧಿ. (ಎರಡನೇ ಕರೆ)	50.00	39.64	80,000/–

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : **06–10–2022ರ ಸಂಜೆ 4.00 ಗಂಟೆವರೆಗೆ.** (3) ಟೆಂಡರ್ ದಾಖಲೆ ತೆರೆಯುವ **ದಿನಾಂಕ:10–10–2022 ರ ಬೆಳಿಗ್ಗೆ 11.00 ಗಂಟೆಗೆ** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ವಾಸಾಇ/ದಾವಣಗೆರೆ/499/ಎಂಸಿಎ/2022–23 ಸಹಿ/– ಆಯುಕ್ತರು, ದಾ–ಹ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

KARNATAKA POWER CORPORATION LTD.

CIN: U85110KA1970SGC001919

ಸಂಖ್ಯೆ: ಎ1ಪಿ1ಸಿ(ಬಿಎಲ್) ದಿನಾಂಕ: 30.09.2022

ನೇಮಕಾತಿ ಅಧಿಸೂಚನೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ತನ್ನ ವಿದ್ಯುತ್ ಉತ್ಪಾದನೆಯ ಯೋಜನಾ ಪ್ರದೇಶಗಳಿಗೆ ಈ ಕೆಳಕಂಡ ಬ್ಯಾಕ್‌ಲಾಗ್ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಕ್ರಮ ಸಂಖ್ಯೆ	ಹುದ್ದೆ	ವೇತನ ಶ್ರೇಣಿ	ಒಟ್ಟು ಹುದ್ದೆಗಳ ಸಂಖ್ಯೆ		
			HK	NHK	ಒಟ್ಟು
1	ಫ್ಯಾಕ್ಟರಿ ಮೆಡಿಕಲ್ ಆಫೀಸರ್	ರೂ. 46750-1450-50920-1670-59270-1920-70790-2160-83750-2380-98030-2630-113810	–	SC-1 ST-1	02
2	ಮೆಡಿಕಲ್ ಆಫೀಸರ್		–	ST-1	01
3	ಅಕೌಂಟ್ಸ್ ಆಫೀಸರ್		–	ST-1	01
4	ಬಾಯ್ಲರ್ ಅಟೆಂಡೆಂಟ್ ಗ್ರೇಡ್ - 2	ರೂ. 21310-600-23710-720-27310-960-32110-1090-36470-1200-43670-1450-50920-1670-59270-1920-63110	SC (PwD)-1	–	01

(1) ಹುದ್ದೆಗಳ ಮೀಸಲಾತಿ, ವೇತನ ಶ್ರೇಣಿ ಮತ್ತು ಭತ್ಯೆಗಳು ಇತ್ಯಾದಿ ವಿವರಗಳು ನಿಗಮದ ವೆಬ್‌ಸೈಟ್: **www.kpcl.karnataka.gov.in** ನಲ್ಲಿ ಲಭ್ಯವಿರುತ್ತದೆ. (2) ಆನ್‌ಲೈನ್ (Online) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭಿಕ ದಿನಾಂಕ: **11.10.2022.** (3) ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: **10.11.2022 ಸಂಜೆ 5.00 ಗಂಟೆ ವರೆಗೆ.** (4) ಅಂಚೆ ಕಛೇರಿ ಮೂಲಕ ಹಣಪಾವತಿಸಲು ಕೊನೆಯ ದಿನಾಂಕ: **14.11.2022 ರ (ಮಧ್ಯಾಹ್ನ 3.00 ಗಂಟೆ ವರೆಗೆ).** (5) ಅಂಚೆಯ ಮೂಲಕ/ ಕೊರಿಯರ್ ಮೂಲಕ/ ಖುದ್ದಾಗಿ ಅಥವಾ ಇನ್ಯಾವುದೇ ವಿಧಾನದಲ್ಲಿ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ನಿರ್ದೇಶಕರು (ಮಾನವ ಸಂಪನ್ಮೂಲ)
ಕವಿನಿನಿ, ಬೆಂಗಳೂರು.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಕ್ರ.ಸಂ.ಲೋ.ಇ/ಬೆ.ವಿ/ಸ.ಇಂ.–3/ಟೆಂಡರ್/2022–23/4473 ದಿನಾಂಕ:29/09/2022

ಅಲ್ಪಾವದಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗದಡಿ 2022–23 ನೇ ಸಾಲಿನ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ (ಅಮೃತ ಶಾಲಾ ಯೋಜನೆ) ಅಡಿ ಬೆಳಗಾವಿ ಶೈಕ್ಷಣಿಕ ಶಾಲೆಗಳಿಗೆ ಅಮೃತ ಶಾಲಾ ಸೌಲಭ್ಯ ಯೋಜನಯಡಿ 22 ಶಾಲೆಗಳಿಗೆ Providing Lab-equipments, Library, Smart Class, Furniture and other Materials for 22 Schools of Belagavi Education District under Amrut Shala Soulabhya Yojana. (KPWD/2022-23/OW/WORK_INDENT156197) ಕಾಮಗಾರಿಯ ಗುತ್ತಿಗೆಗೆ ಇಟ್ಟ ಮೊತ್ತ ರೂ.123.88 ಲಕ್ಷ ಗಳಿಗೆ ಗುತ್ತಿಗೆ ಅಹ್ವಾನಿಸಲಾಗಿದೆ. ಇ.ಎಂ.ಡಿ. ಮೊತ್ತ ರೂ.2.00 ಲಕ್ಷಗಳು.

ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೇ ನಿಗಧಿತ ದಿನಾಂಕಗಳು ಈ ಕೆಳಗಿನಂತೆ ಇರುವುದು. 1) ಗುತ್ತಿಗೆ ಪೂರ್ವಾನುಭಾವಿ ಸಭೆ ವಿಭಾಗ ಕಚೇರಿಯಲ್ಲಿ ದಿನಾಂಕ: 07–10–2022 ರಂದು 11:00 ಘಂಟೆಗೆ 2) ಆಕ್ಷೇಪಣೆ – ಸಂದೇಹ ಮತ್ತು ವಿಚಾರಣೆ ಗಳಿಗೆ ಕೊನೆಯ ದಿನಾಂಕ: 10–10–2022 (11:00 ಘಂಟೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 11–10–2022 (ಸಾಯಂಕಾಲ 4:30 ಘಂಟೆ ವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two cover system) 12–10–2022 5) ಹಣಕಾಸು ಬಿಡ್‌ನ್ನು ತರೆಯುವ ದಿನಾಂಕ (Two cover system) 13–10–2022) (ತಾಂತ್ರಿಕ ಬಿಡ್ ಅನುಮೋದನೆ ನಂತರ)

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ದಿನಾಂಕ:30–09–2022 ರ ನಂತರ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.

DIPR/BGM/RO-NO-943/MCA/2022-23

ಕರ್ನಾಟಕ ಸರ್ಕಾರದ ಸಚಿವಾಲಯ

ಆರ್ಥಿಕ ಇಲಾಖೆ

ವಿಧಾನ ಸೌಧ, ಬೆಂಗಳೂರು 560 001.

ಸಂಖ್ಯೆ: ಆಇ 03 ಬಿಎಂಬಿ 2022 ದಿನಾಂಕ: 30.09.2022

ಪತ್ರಿಕಾ ಪ್ರಕಟಣೆ

1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: **ಎಫ್.ಡಿ. 01 ಬಿಎಂಬಿ 2018, ದಿನಾಂಕ: 26ನೇ ಅಕ್ಟೋಬರ್, 2018** ನಿಬಂಧನೆಯ ಮೇರೆಗೆ ಹೊರಡಿಸಲಾದ **8.38% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022 (Karnataka SDL 2022), ದಿನಾಂಕ: 30ನೇ ಅಕ್ಟೋಬರ್ 2022** ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, **ದಿನಾಂಕ: 31ನೇ ಅಕ್ಟೋಬರ್ 2022** ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **31ನೇ ಅಕ್ಟೋಬರ್ 2022 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.**

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3) ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **8.38% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2022 (Karnataka SDL 2022)**, ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

“ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ”

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟನ್ನು, ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/–
(ಐ.ಎಸ್.ಎನ್. ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ವಾ.ಸಾ.ಸಂ.ಇ/ವಾಪ್ರ/2438/ಆಕಾರ್/22–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಒಟ್ಟಿಗೇ ಬರುವುದರಿಂದ ಆರಂಭ, ಒಟ್ಟಿಗೇ ಇರುವುದರಿಂದ ಪ್ರಗತಿ, ಒಟ್ಟಿಗೇ ದುಡಿಯುವುದರಿಂದ ಯಶಸ್ಸು.

–ಹೆನ್ರಿ ಫೋರ್ಡ್

ಮೇಲ್ಸೇತುವೆ: ನಿರ್ವಹಣೆ ಲೋಪ ಜನರ ಸುರಕ್ಷೆ ಕುರಿತು ಅಸಡ್ಡೆ

ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ಇರುವ ಸುಮನಹಳ್ಳಿ ಮೇಲ್ಸೇತುವೆಯಲ್ಲಿ ದೊಡ್ಡ ರಂಧ್ರ ಸೃಷ್ಟಿಯಾಗಿದೆ. ಅದರ ಮೂಲಕ ಕೆಳಗಿನ ರಸ್ತೆಯನ್ನು ಕಾಣಬಹುದು! ಈ ಮೇಲ್ಸೇತುವೆ ಕೇವಲ 16 ವರ್ಷ ಹಳೆಯದು. ಈ ರೀತಿ ಆಗಿರುವುದು ವಾಹನ ಸವಾರರ ಸುರಕ್ಷತೆ ಕುರಿತು, ಮೇಲ್ಸೇತುವೆ ಕಾಮಗಾರಿಯ ಗುಣಮಟ್ಟದ ಬಗ್ಗೆ, ಕಾಲಕಾಲಕ್ಕೆ ಅದರ ನಿರ್ವಹಣೆ ಹೇಗಿತ್ತು ಎಂಬುದರ ಬಗ್ಗೆ ಪ್ರಶ್ನೆಗಳನ್ನು ಮೂಡಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಈ ಮೇಲ್ಸೇತುವೆಯನ್ನು ನಿರ್ಮಿಸಿದೆ. ಈ ಮೇಲ್ಸೇತುವೆಯನ್ನು ಬಿಡಿಎ 2015ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹಸ್ತಾಂತರಿಸಿತು. ಈ ಮೇಲ್ಸೇತುವೆಯಲ್ಲಿ ತಳ ಕಾಣಿಸುವಂತಹ ಗುಂಡಿ ಕಾಣಿಸಿಕೊಂಡಿದ್ದು ಇದೇ ಮೊದಲ ಸಲ ಅಲ್ಲ. 2019ರಲ್ಲೂ ಸುಮಾರು 5 ಅಡಿ ಸುತ್ತಳತೆಯ ಗುಂಡಿ ಕಾಣಿಸಿಕೊಂಡಿತ್ತು. ಮೇಲ್ಸೇತುವೆಗಳು ಕನಿಷ್ಠ 80 ವರ್ಷಗಳಾದರೂ ಬಾಳಿಕೆ ಬರಬೇಕು. ಆದರೆ, ಬೆಂಗಳೂರಿನ ಮೇಲ್ಸೇತುವೆಗಳು ಪದೇ ಪದೇ ಶಿಥಿಲಗೊಳ್ಳುತ್ತಿವೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ತುಮಕೂರು ರಸ್ತೆಯಲ್ಲಿ ನಿರ್ಮಿಸಿ, ನಿರ್ವಹಿಸುತ್ತಿರುವ ಮೇಲ್ಸೇತುವೆಯೂ ಶಿಥಿಲಗೊಂಡಿದೆ. ದುರಸ್ತಿ ಸಲುವಾಗಿ ಆ ಮೇಲ್ಸೇತುವೆಯಲ್ಲಿ 2021ರ ಡಿಸೆಂಬರ್ ಬಳಿಕ ಎರಡು ತಿಂಗಳ ಕಾಲ ವಾಹನ ಸಂಚಾರವನ್ನು ನಿರ್ಬಂಧಿಸಲಾಗಿತ್ತು. ಎಂಟು ತಿಂಗಳುಗಳಿಂದ ಈ ಮೇಲ್ಸೇತುವೆಯಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಇದನ್ನು ದುರಸ್ತಿಪಡಿಸಲು ಸಾಧ್ಯವಾಗದ ಕಾರಣ ಮೇಲ್ಸೇತುವೆಯನ್ನು ಶಿಥಿಲಗೊಂಡ ಕಡೆ ಕೆಡವಿ ಮತ್ತೆ ನಿರ್ಮಿಸುವುದೇ ಸೂಕ್ತ ಎಂದು ತಜ್ಞರು ಸಲಹೆ ನೀಡಿದ್ದಾರೆ. ಶಿವಾನಂದ ವೃತ್ತದ ಉಕ್ಕಿನ ಸೇತುವೆಯನ್ನು ಪ್ರಾಯೋಗಿಕ ಸಂಚಾರಕ್ಕೆ ಅನುವಾಗಿಸಿದ ಕೆಲವೇ ದಿನಗಳಲ್ಲಿ ದುರಸ್ತಿಗಾಗಿ ತಾತ್ಕಾಲಿಕವಾಗಿ ಮುಚ್ಚಬೇಕಾಯಿತು.

ನಗರಗಳ ಸಂಚಾರ ದಟ್ಟಣೆ ನಿವಾರಣೆ ಸಂಬಂಧ ಸಮಗ್ರ ಯೋಜನೆಯನ್ನು ಮೊದಲು ರೂಪಿಸಬೇಕು

ಬಿಬಿಎಂಪಿಯು ನಗರದ ಎಲ್ಲ ಮೇಲ್ಸೇತುವೆಗಳು ಹಾಗೂ ಕೆಳಸೇತುವೆಗಳನ್ನು ತಜ್ಞರಿಂದ ತಪಾಸಣೆಗೆ ಒಳಪಡಿಸಲು 2020ರಲ್ಲಿ ತಟಸ್ಥ ಸಂಸ್ಥೆಯೊಂದನ್ನು ನೇಮಿಸಿತ್ತು. ಈ ಸಲುವಾಗಿ ₹ 5 ಕೋಟಿಯನ್ನು ವಿನಿಯೋಗಿಸಿತ್ತು. ತಪಾಸಣೆಗೆ ಒಳಪಡಿಸಲಾದ 29 ಕಾಂಕ್ರೀಟ್ ಸೇತುವೆಗಳ ಸಂರಚನೆ ಸದೃಢವಾಗಿದೆ. ಆದರೆ, ಸೇತುವೆಗಳ ನಿರ್ವಹಣೆಯು ನಿಯಮಿತವಾಗಿ ನಡೆಯುತ್ತಿಲ್ಲ ಎಂಬ ಅಂಶವನ್ನೂ ತಪಾಸಣಾ ವರದಿಯಲ್ಲಿ ಬೊಟ್ಟು ಮಾಡಲಾಗಿತ್ತು. ಸುಮನಹಳ್ಳಿ ಮೇಲ್ಸೇತುವೆ ಕಾಮಗಾರಿಯ ಗುಣಮಟ್ಟ ಕಳಪೆಯಾಗಿರುವ ಸಾಧ್ಯತೆಯೊಂದಿಗೆ ನಿಯಮಿತ ನಿರ್ವಹಣೆ ಇಲ್ಲದಿರುವುದು ಕೂಡ ಈ ಸೇತುವೆ ಶಿಥಿಲಗೊಳ್ಳುವುದಕ್ಕೆ ಕಾರಣ ಎಂಬುದನ್ನು ಅಲ್ಲಗಳೆಯಲಾಗದು. ಬಿಬಿಎಂಪಿ ಅಧೀನದ ಮೇಲ್ಸೇತುವೆ ಹಾಗೂ ಕೆಳಸೇತುವೆಗಳನ್ನು ಕೂಲಂಕಷವಾಗಿ ತಪಾಸಣೆಗೆ ಒಳಪಡಿಸಿದಂತೆ ಎನ್‌ಎಚ್‌ಎಐ ಹಾಗೂ ವಿವಿಧ ಇಲಾಖೆಗಳ ನಿರ್ವಹಣೆಯಲ್ಲಿರುವ ಮೇಲ್ಸೇತುವೆಗಳನ್ನೂ ಸಮಗ್ರವಾಗಿ ತಪಾಸಣೆಗೆ ಒಳಪಡಿಸಬೇಕಾದ ಅಗತ್ಯವಿದೆ.

ನಗರಗಳ ಸಂಚಾರ ದಟ್ಟಣೆ ನಿವಾರಣೆಗೆ ಮೇಲ್ಸೇತುವೆ ಮತ್ತು ಕೆಳಸೇತುವೆಗಳ ನಿರ್ಮಾಣವೊಂದೇ ಪರಿಹಾರ ಆಗಲಾರದು. ಸ್ಥಳೀಯ ಸಂಸ್ಥೆಗಳು ಈ ಸಂಬಂಧ ಸಮಗ್ರ ಯೋಜನೆಯನ್ನು ಮೊದಲು ರೂಪಿಸಬೇಕು. ಸಮರ್ಪಕವಾದ ಅಧ್ಯಯನ ನಡೆಸದೆ ಕೈಗೊಳ್ಳುವ ಅರೆಬರೆ ಪರಿಹಾರೋಪಾಯಗಳು ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡುತ್ತವೆ. ಇದಕ್ಕೆ ಬೆಂಗಳೂರಿನಲ್ಲೇ ನಿದರ್ಶನಗಳು ಸಿಗುತ್ತವೆ. ಕೆ.ಆರ್.ಪುರ, ಹೆಬ್ಬಾಳ, ಸಿಲ್ಕ್‌ಬೋರ್ಡ್, ರಿಚ್ಮಂಡ್ ರಸ್ತೆ, ಬಾಣಸವಾಡಿ ಮೇಲ್ಸೇತುವೆಗಳ ಬಳಿ ಪ್ರಯಾಣಿಕರು ನಿತ್ಯ ಎದುರಿಸುವ ಸಮಸ್ಯೆಗಳು ಇದಕ್ಕೆ ಜ್ವಲಂತ ಉದಾಹರಣೆಗಳು. ಮೇಲ್ಸೇತುವೆಗಳ ಅವೈಜ್ಞಾನಿಕ ವಿನ್ಯಾಸ, ಕಾಮಗಾರಿಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳದಿರುವುದು, ಕಾಮಗಾರಿ ಗುಣಮಟ್ಟ ಕಳಪೆಯಾಗಿರುವುದು, ನಿರ್ವಹಣೆಯ ಲೋಪಗಳು ಸಂಚಾರಕ್ಕೆ ಸಂಬಂಧಿಸಿದ ಅವ್ಯವಸ್ಥೆಯನ್ನು ಇನ್ನಷ್ಟು ಗೋಜಲುಗೊಳಿಸಿವೆ. ಈ ಎಲ್ಲ ನಿದರ್ಶನಗಳು ಕಣ್ಣ ಮುಂದೆ ಇದ್ದರೂ ನಮ್ಮ ನೀತಿ ನಿರೂಪಕರು ಸಮಸ್ಯೆಗಳ ನಿವಾರಣೆಗೆ ದೀರ್ಘಾವಧಿಯ ಪರಿಹಾರ ಕ್ರಮಗಳನ್ನು ಕಂಡುಕೊಳ್ಳುವುದಕ್ಕಿಂತ ಅಲ್ಪಾವಧಿಯ ತ್ವರಿತ ಪರಿಹಾರ ಕ್ರಮಗಳಿಗೆ ಒತ್ತು ನೀಡುತ್ತಿರುವುದು ವಿಪರ್ಯಾಸ. ಸರ್ಕಾರ ಹಾಗೂ ಬಿಬಿಎಂಪಿ ಇನ್ನಾದರೂ ಎಚ್ಚೆತ್ತು ನಗರದ ಸಂಚಾರ ಸಮಸ್ಯೆಗಳ ನಿವಾರಣೆಗೆ ಇಚ್ಛಾಶಕ್ತಿ ತೋರಬೇಕು.

ದಿನದ ಟ್ವೀಟ್

ಹಿಂದೆ ಸರಿದರೆ...

ಇದು ನ್ಯಾಯಯುತ ಸ್ಪರ್ಧೆಯಲ್ಲ (ಅದಂತೂ ಸ್ಪಷ್ಟ) ಎಂಬ ಕಾರಣ ನೀಡಿ, ಶಶಿ ತರೂರ್ ಅವರೇನಾದರೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನ ಚುನಾವಣೆಗೆ ಸಲ್ಲಿಸಿರುವ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡಿದ್ದೇ ಆದಲ್ಲಿ, ಕಾಂಗ್ರೆಸ್ ಪಕ್ಷವು ಉಳಿಸಿಕೊಂಡಿರುವ ಅಲ್ಪಸ್ವಲ್ಪ ವಿಶ್ವಾಸಾರ್ಹತೆಗೂ ಹಾನಿ ಆಗುತ್ತದೆ.

ಸುಮಂತ್ ರಾಮನ್, ವಿಶ್ಲೇಷಕ

ಕಿಡಿನುಡಿ

ನಾನು ಪರಂಪರೆಯನ್ನು ಬೆಂಬಲಿಸುತ್ತೇನೆ ಎಂದು ಯಾರಾದರೂ ಹೇಳಿದರೆ, ಅವರು ಬೆಂಬಲಿಸುತ್ತಿರುವುದು ಪಾರಂಪರಿಕ ಬುದ್ಧಿವಂತಿಕೆಯನ್ನೋ ಅಥವಾ ಪಾರಂಪರಿಕ ಮೂರ್ಖತನವನ್ನೋ ಎಂಬುದನ್ನು ಪರಿಶೀಲಿಸಿ. ಏಕೆಂದರೆ ಇವೆರಡೂ ಒಂದೇ ಅಲ್ಲ.

ದೇವದತ್ತ ಪಟ್ಟನಾಯಕ್, ಲೇಖಕ

25 ವರ್ಷಗಳ ಹಿಂದೆ

ಬುಧವಾರ, 1-10-1997

● ಐಆರ್‌ಎಸ್-1ಡಿ ಸರಿಪಡಿಸಲು ಕ್ರಮ

ಬೆಂಗಳೂರು, ಸೆಪ್ಟೆಂಬರ್ 30– ಶ್ರೀಹರಿಕೋಟದಿಂದ ಯಶಸ್ವಿಯಾಗಿ ನಿನ್ನೆ ಉಡಾವಣೆಯಾಗಿದ್ದ ಐಆರ್‌ಎಸ್-1ಡಿ ಉಪಗ್ರಹವು ನಿಗದಿತ ವೃತ್ತಾಕಾರದ ಕಕ್ಷೆಗೆ ಸೇರುವ ಬದಲು ಅಂಡಾಕಾರದ ಕಕ್ಷೆಗೆ ಸೇರಿರುವುದಕ್ಕೆ ರಾಕೆಟ್‌ನ ನಾಲ್ಕನೇ ಹಂತದಲ್ಲಿ ಉಂಟಾದ ದ್ರವ ಇಂಧನ ಕೊರತೆ ಕಾರಣ ಎಂದು ಇಸ್ರೊ ತಿಳಿಸಿದೆ.

ನಾಲ್ಕನೇ ಹಂತದಲ್ಲಿ ಇಂಧನ ಕೊರತೆ ಉಂಟಾದ ಕಾರಣ ರಾಕೆಟ್‌ನ ವೇಗ ಕಡಿಮೆಯಾಗಿ ಅಂಡಾಕಾರದ ಕಕ್ಷೆಗೆ ಸೇರಿದೆ.

ಈಗ ಉದ್ಭವಿಸಿರುವ ತೊಂದರೆಯನ್ನು ನಿವಾರಿಸಲು ಉಪಗ್ರಹದಲ್ಲಿರುವ ಇಂಧನವನ್ನು ಎಷ್ಟು ಪ್ರಮಾಣದಲ್ಲಿ ಉರಿಸಬೇಕು ಎಂದು ಲೆಕ್ಕಾಚಾರ ಮಾಡಲಾಗಿದ್ದು, ಉಪಗ್ರಹವು ಕಕ್ಷೆಯಲ್ಲಿ 17ನೇ ಸುತ್ತು ತಿರುಗುವಾಗ ಇಂಧನವನ್ನು 5 ನಿಮಿಷಗಳ ಕಾಲ ಉರಿಸಿದರೆ ನಿಗದಿತ ಕಕ್ಷೆಗೆ ಸೇರಿಸಬಹುದು ಎಂದು ಅಂದಾಜಿಸಲಾಗಿದೆ.

● ಕಾವೇರಿ: ಬದಲಾಗದ ಕೇಂದ್ರದ ನಿಲುವು

ನವದೆಹಲಿ, ಸೆಪ್ಟೆಂಬರ್ 30– ಕಾವೇರಿ ಪ್ರಾಧಿಕಾರ ರಚನೆಯನ್ನು ತಮಿಳುನಾಡು ಬೆಂಬಲಿಸಿದರೆ, ಅದನ್ನು ಕರ್ನಾಟಕ ತೀವ್ರವಾಗಿ ವಿರೋಧಿಸಿ ನ್ಯಾಯಮಂಡಲಿಯ ಅಂತಿಮ ತೀರ್ಪು ಬರುವವರೆಗೆ ತಾತ್ಕಾಲಿಕವಾಗಿ ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡರೆ ಸಾಕು ಎಂಬ ತಮ್ಮ ವಾದಗಳಿಗೆ ಈ ಎರಡು ರಾಜ್ಯಗಳು ಇಂದು ಬಲವಾಗಿ ಪಟ್ಟು ಹಿಡಿದವು.

ಕಾವೇರಿ ನ್ಯಾಯಮಂಡಲಿಯ ಮಧ್ಯಂತರ ತೀರ್ಪನ್ನು ಜಾರಿಗೊಳಿಸಲು ಸಂಬಂಧಪಟ್ಟ ರಾಜ್ಯಗಳು ತಮ್ಮ ನಿಲುವಿಗೆ ಅಂಟಿಕೊಂಡರೂ ಕಾವೇರಿ ಪ್ರಾಧಿಕಾರವನ್ನು ರಚಿಸುವುದಾಗಿ ಕೇಂದ್ರವು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿ ರಾಜ್ಯಗಳಿಗೆ ತಿಳಿಸಿತು.

50 ವರ್ಷಗಳ ಹಿಂದೆ

ಭಾನುವಾರ, 1-10-1972

● ಕೆಂಗಲ್ ಧ್ಯಾನ ಸಮಾಪ್ತಿ: ನಾಳೆ ನಗರಕ್ಕೆ ಆಗಮನ

ಬೆಂಗಳೂರು, ಸೆಪ್ಟೆಂಬರ್ 30– ‘ಕಾಂಗ್ರೆಸ್ಸಿನ ಶುದ್ಧೀಕರಣಕ್ಕೆಂದು’ ಕಳೆದ ಮೂರು ವಾರಗಳಿಂದ ಅಜ್ಞಾತರಾಗಿ ಧ್ಯಾನಾವಸ್ಥೆಯಲ್ಲಿ ತೊಡಗಿರುವ ಮಾಜಿ ರೈಲ್ವೆ ಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಧ್ಯಾನ ಮುಗಿಸಿ ಸೋಮವಾರ ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿಗೆ ಆಗಮಿಸಲಿದ್ದಾರೆ.

ನಂದಿ ಬೆಟ್ಟದ ಬಳಿಯ ಪಕ್ಷಿ ಬಾಬಾ ಆಶ್ರಮದಲ್ಲಿ ಬರೇ ಹಣ್ಣು ಹಂಪಲುಗಳನ್ನು ಸೇವಿಸಿ, ದಿನವೂ ಆರೇಳು ಮೈಲಿ ದೂರ ನಡೆದು ವ್ಯಾಯಾಮ ಪಡೆದುಕೊಂಡು, ಗೀತ ಪಠಣ, ಪತ್ರಿಕೆ ವಾಚನಗಳಲ್ಲಿ ದಿನಗಳೆಯುತ್ತಿರುವ ಕೆಂಗಲ್ ಅವರು ಆರೋಗ್ಯದಲ್ಲಿ ಅತ್ಯುತ್ತಮವಾಗಿದ್ದಾರೆ. ಸ್ವಲ್ಪ ಗಡ್ಡವನ್ನೂ ಬಿಟ್ಟಿದ್ದಾರೆ ಎಂದು ಇಂದು ಅವರನ್ನು ಭೇಟಿ ಮಾಡಿಕೊಂಡು ಬಂದ ಮಾಜಿ ಮೇಯರ್ ಜೆ. ಲಿಂಗಯ್ಯ ಮಧ್ಯಾಹ್ನ ‘ಪ್ರಜಾವಾಣಿ’ಗೆ ಟೆಲಿಫೋನ್ ಮಾಡಿ ತಿಳಿಸಿದರು.

● ರಷ್ಯಾದೊಡನೆ ಶಾಂತಿ ಒಪ್ಪಂದಕ್ಕೆ ಜಪಾನ್ ಯತ್ನ

ಟೋಕಿಯೊ, ಸೆಪ್ಟೆಂಬರ್ 30– ಚೀನಾದೊಡನೆ ಬಾಂಧವ್ಯ ಸುಧಾರಣೆಗೊಳಿಸಿಕೊಂಡ ನಂತರ ಈಗ ರಷ್ಯಾದೊಡನೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಮಾತುಕತೆಗಳ ಕಡೆಗೆ ತಮ್ಮ ರಾಷ್ಟ್ರ ಗಮನ ಕೇಂದ್ರೀಕರಿಸುವುದೆಂದು ಜಪಾನ್ ಪ್ರಧಾನಿ ಕಾಕುಯಿ ತನಾಕಾ ಅವರು ಇಂದು ತಿಳಿಸಿದರು.

ಚೀನಾಕ್ಕೆ ಕೊಟ್ಟಿದ್ದ ಆರು ದಿನಗಳ ಐತಿಹಾಸಿಕ ಭೇಟಿ ನಂತರ ತನಾಕಾ ಅವರು ಪತ್ರಿಕಾಗೋಷ್ಠಿಯೊಂದರಲ್ಲಿ ಮಾತನಾಡಿ, ಪೂರ್ವಭಾವಿ ಮಾತುಕತೆಗಳನ್ನು ಪ್ರಾರಂಭಿಸಲು ವಿದೇಶಾಂಗ ಸಚಿವ ಶಾಖೆ ಈಗ ಸೋವಿಯತ್ ಅಧಿಕಾರಿಗಳೊಡನೆ ವ್ಯವಹರಿಸುತ್ತಿದೆ ಎಂದರು.

ವಿಶ್ವಸಂಸ್ಥೆಯ ಅಧ್ಯಯನಾಂಗವೊಂದು ನೀಡಿರುವ ಸಲಹೆ ವನ್ಯಜೀವಿಪ್ರಿಯರ ನಿದ್ದೆಗೆಡಿಸಿದೆ

ಆಹಾರಕ್ಕೆಂದು ವನ್ಯಜೀವಿ ಸಂರಕ್ಷಣೆ?

ವಿಶ್ಲೇಷಣೆ

ಡಾ. ಟಿ.ಆರ್.ಅನಂತರಾಮು

ವನ್ಯಜೀವಿಗಳ ಸಂರಕ್ಷಣೆಯ ವಿಚಾರ ಬಂದಾಗ ಭಾರತದಲ್ಲಿ ಕೆಲವೊಮ್ಮೆ ಉತ್ಸಾಹದ ಗಾಳಿ ಬೀಸುತ್ತದೆ, ಇನ್ನೊಮ್ಮೆ ಆತಂಕದ ಅಲೆಗಳು ಏಳುತ್ತವೆ. ಏಷ್ಯಾದ ಒಂಟಿಕೊಂಬಿನ ಘೇಂಡಾಮೃಗಗಳ ಗಣತಿ ಇತ್ತೀಚೆಗೆ ಮುಗಿದಿದೆ. ಏಷ್ಯಾದ ಘೇಂಡಾಮೃಗ ತಜ್ಞರ ಎಣಿಕೆಯ ಪ್ರಕಾರ ಭಾರತ, ನೇಪಾಳ, ಭೂತಾನ್, ಇಂಡೊನೇಷ್ಯಾದಲ್ಲಿ ಸದ್ಯ 4,014 ಒಂಟಿಕೊಂಬಿನ ಘೇಂಡಾಗಳಿವೆ; ಸಮಾಧಾನಪಟ್ಟುಕೊಳ್ಳಬಹುದಾದ ಸಂಗತಿ.

ಗುಜರಾತಿನ ಗಿರ್ ಅರಣ್ಯಧಾಮದಲ್ಲಿ ಸಿಂಹಗಳ ಸಂಖ್ಯೆ ಈಗ 674ಕ್ಕೆ ಏರಿದೆ. ಸಿಂಹಗಳು ಈಗ ಸೌರಾಷ್ಟ್ರದ ಕಡಲತೀರವನ್ನು ಆವಾಸ ಮಾಡಿಕೊಂಡಿವೆ. ಕಳ್ಳಬೇಟೆಗೆ ಕಡಿವಾಣ ಹಾಕಿರುವುದು ಘೇಂಡಾಮೃಗಗಳ ಸಂತತಿಯ ವರ್ಧನೆಗೆ ಒಂದು ಕಾರಣ. ಹಾಗೆಯೇ ಸಿಂಹಗಳ ವೃದ್ಧಿಗೆ ಬೇಟೆ ಯಥೇಚ್ಛವಾಗಿ ದೊರೆಯುತ್ತಿರುವುದು ಒಂದು ಪ್ರಮುಖ ಕಾರಣ.

ಇದೇ ಮಾತನ್ನು ಭಾರತದಲ್ಲಿ ರಣಹದ್ದುಗಳ ಕುರಿತು ಹೇಳಲಾರೆವು. ಸತ್ತ ಪ್ರಾಣಿಗಳ ಕಳೇಬರವನ್ನು ಆಹಾರಕ್ಕಾಗಿ ಅವಲಂಬಿಸಿರುವ ಈ ಪಕ್ಷಿಯ ಸಂರಕ್ಷಣೆಯೂ ಅರಣ್ಯದ ಆರೋಗ್ಯ ಹಾಗೂ ಪರಿಸರದ ದೃಷ್ಟಿಯಿಂದ ಅತಿಮುಖ್ಯ. ಹರಿಯಾಣದ ಪಿಂಜಾರ್, ರಣಹದ್ದುಗಳ ಸಂರಕ್ಷಣೆಗೆ ಬಹುದೊಡ್ಡ ಕೇಂದ್ರ. ಉತ್ತರ ಪ್ರದೇಶವೂ ಇತ್ತೀಚೆಗೆ ಈ ಬಗ್ಗೆ ಆಸಕ್ತಿ ತಾಳಿದೆ. ಕರ್ನಾಟಕ ಸೇರಿದಂತೆ (ರಾಮದೇವರ ಬೆಟ್ಟ) ಇನ್ನೂ ಏಳು ರಾಜ್ಯಗಳು ರಣಹದ್ದುಗಳ ಸಂರಕ್ಷಣೆಗೆ ಮುಂದಾಗಿವೆ.

ಎಂಟು ಪ್ರಭೇದಗಳಿರುವ ರಣಹದ್ದುಗಳಲ್ಲಿ ಆರು ಪ್ರಭೇದಗಳು ಮಹಾರಾಷ್ಟ್ರದಲ್ಲೇ ಕಂಡುಬರುತ್ತವೆ. ವಿಶೇಷವೆಂದರೆ, ಈ ಪೈಕಿ ಎರಡು ನಾಶಭೀತಿ ಎದುರಿಸುತ್ತಿವೆ. ನಾಲ್ಕು ಅಳಿವಿನಂಚಿಗೆ ತಲುಪುತ್ತಿವೆ ಎಂದು ನಿಸರ್ಗ ಸಂರಕ್ಷಣಾ ಅಂತರರಾಷ್ಟ್ರೀಯ ಒಕ್ಕೂಟ (ಐಯುಸಿಎನ್) ವರದಿ ಮಾಡಿದೆ. ಇಷ್ಟಾಗಿಯೂ ನಮ್ಮಲ್ಲಿ ಒಟ್ಟು ರಣಹದ್ದುಗಳ ಸಂಖ್ಯೆ 19,000 ಮೀರಿಲ್ಲ. ನಮೀಬಿಯದಿಂದ ಎಂಟು ಸಿವಂಗಿಗಳನ್ನು (ಚೀತಾ) ತರಿಸಿಕೊಂಡು ಮಧ್ಯಪ್ರದೇಶದ ಕುನೊ ವನ್ಯಧಾಮಕ್ಕೆ ಇತ್ತೀಚೆಗೆ ಬಿಟ್ಟಿರುವುದು ಅನೇಕ ನಿರೀಕ್ಷೆಗಳನ್ನು ಹುಟ್ಟಿಸಿದೆ. ಅವು ಈ ಆವಾಸಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಳ್ಳುತ್ತವೆ ಎಂಬುದು ಕುತೂಹಲಕಾರಿ ಸಂಗತಿ. 41,000 ಜೀವಿಪ್ರಭೇದಗಳು ಅಳಿವಿನಂಚಿಗೆ ಬಂದಿವೆ ಎಂಬ ಪಟ್ಟಿಯನ್ನೂ ಇದೇ ಐಯುಸಿಎನ್ ಕೊಟ್ಟಿದೆ. ಸಂರಕ್ಷಣೆ ಎಂಬುದು ಎಂದಿಗೂ ಸವಾಲೇ. ಏಕೆಂದರೆ ಮನುಷ್ಯನೇ ಧರಣಿಪತಿ. ಇಡೀ ಜೀವಿಗೋಳವನ್ನೇ ನಿಯಂತ್ರಿಸುತ್ತಿದ್ದಾನೆ.

ವಸ್ತುಸ್ಥಿತಿ ಹೀಗಿರುವಾಗ, ಜೀವಿವೈವಿಧ್ಯ ಮತ್ತು ಪರಿಸರ ವ್ಯವಸ್ಥೆ ಕುರಿತು ನೀತಿಸಂಹಿತೆ ರೂಪಿಸುವ, ವಿಶ್ವಸಂಸ್ಥೆಯ ಪರಿಸರ ಯೋಜನೆಯಡಿ ಕೆಲಸ ಮಾಡುತ್ತಿರುವ ಒಂದು ಅಧ್ಯಯನಾಂಗವು (The Intergovernmental Science-Policy Platform on Biodiversity and Ecosystem Services) ಹೊಸ ಆಲೋಚನೆಗಳನ್ನು ಹರಿಯಬಿಟ್ಟು ಜಗತ್ತನ್ನು ಬೆಚ್ಚಿಬೀಳಿಸಿದೆ. ಯೋಜಿತವಾಗಿ ಸಸ್ಯಗಳೂ ಸೇರಿದಂತೆ ವನ್ಯಜೀವಿಗಳನ್ನು ಸಂರಕ್ಷಿಸಿದರೆ ಅವನ್ನು ಯಥೋಚಿತವಾಗಿ ಆಹಾರವಾಗಿ ಏಕೆ ಬಳಸಿಕೊಳ್ಳಬಾರದು ಎಂಬ ಪ್ರಶ್ನೆಯನ್ನು ಎತ್ತಿದೆ. ವನ್ಯಜೀವಿಗಳನ್ನು ಅವುಗಳ ಆವಾಸದಲ್ಲೇ ಹಾಯಾಗಿ ಬದುಕಲು ಬಿಡುವುದು ಸಂರಕ್ಷಣೆಯ ಮೂಲ ತತ್ವ. ಅವನ್ನು ಆಹಾರಕ್ಕೆಂದು ಬಳಸಿಕೊಂಡರೂ ಅವುಗಳ ಸಂತತಿ ನಾಶವಾಗದಂತೆ ನೋಡಿಕೊಳ್ಳಬೇಕು ಎಂಬ ಷರಾ ಕೂಡ ಈ ಸಂಬಂಧದ ವರದಿಯಲ್ಲಿದೆ. ಇದೆಂಥ ತಿಕ್ಕಲು? ಅಭಿವೃದ್ಧಿಯ ಮಾತೇ ಇದು ಎಂದು ವನ್ಯಜೀವಿ ಸಂರಕ್ಷಕರಷ್ಟೇ ಅಲ್ಲ, ಜಗತ್ತಿನ ಜನಸಾಮಾನ್ಯರೂ ಕೇಳುತ್ತಿದ್ದಾರೆ. ಈ ಯೋಜನೆ ರೂಪಿಸಿದವರ ಮೇಲೆ ಹರಿಹಾಯ್ದಿದ್ದಾರೆ.

ಇಡೀ ಯೋಜನೆಯ ಸಾರಾಂಶವನ್ನು ಈ ವರ್ಷದ ಜುಲೈ 8ರಂದು ಜರ್ಮನಿಯ ಬಾನ್‌ನಲ್ಲಿ ಬಿಡುಗಡೆ ಮಾಡಲಾಯಿತು. ಈ ಯೋಜನೆಯ ಹಿನ್ನೆಲೆಯಲ್ಲಿ 300 ಮಂದಿ ಸಾಮಾಜಿಕ ಕಾರ್ಯಕರ್ತರಿದ್ದಾರೆ, ನೈಸರ್ಗಿಕ ವಿಜ್ಞಾನಿಗಳಿದ್ದಾರೆ. ಜಗತ್ತಿನ ಬೇರೆ ಬೇರೆ ಭಾಗಗಳನ್ನು ಇವರು ಪ್ರತಿನಿಧಿಸುತ್ತಾರೆ. ಇದರ ಸಲುವಾಗಿ ಸ್ಥಳೀಯ ಬುಡಕಟ್ಟುಗಳ ಆಹಾರ ಪದ್ಧತಿ, ಜೀವನ ಕುರಿತಂತೆ 6,200 ವೈಜ್ಞಾನಿಕ ವರದಿಗಳನ್ನು ಪರಿಶೀಲಿಸಿದ್ದಾರೆ. ಇಲ್ಲಿ ವನ್ಯಜೀವಿಗಳನ್ನು ಆಹಾರಕ್ಕಾಗಿ ಸಂರಕ್ಷಿಸುವುದು ಎಂಬ ಪ್ರಶ್ನೆ ಬಂದಾಗ ಧುತ್ತೆಂದು ಕಣ್ಣಮುಂದೆ ಬರುವುದು ಆನೆ, ಹುಲಿ, ಸಿಂಹ, ಕಿರುಬ, ಕರಡಿಯಂತಹ ಪ್ರಾಣಿಗಳು. ಈ ಅಧ್ಯಯನ ತಂಡ ಇವುಗಳ ಬಗ್ಗೆ ಹೆಚ್ಚೇನೂ ಹೇಳಿಲ್ಲ. ಅದು ಬೆರಳು ಮಾಡಿ ತೋರಿಸುತ್ತಿರುವುದು ಬೇರೆಯದೇ ಅಂಶ– ಜಾಗತಿಕ ಮಟ್ಟದಲ್ಲಿ ವಾಣಿಜ್ಯದ ಸರಕಾಗಿರುವ ಮೀನು, ಹಕ್ಕಿಗಳು, ದ್ವಿಚರಿಗಳು, ಕೆಲವು ಸಸ್ಯ ತಳಿಗಳಲ್ಲಿ ಶೇ 50 ಭಾಗ ಫಾರಂಗಳಲ್ಲಿ ಬೆಳೆದಂತಹವು. ಈ ಸತ್ಯ ಜಗತ್ತಿಗೆ ಇನ್ನೂ ತಿಳಿಯಬೇಕಾಗಿದೆ. ಟ್ರೋಫಿಗಳಿಗಾಗಿ ಆನೆಗಳನ್ನು ಕೊಲ್ಲುವ ಚಾಳಿ ಹೆಚ್ಚಾದಾಗ, 2014ರಲ್ಲಿ ಬೊಟ್ಸ್‌ವಾನ ಕಾನೂನಾತ್ಮಕವಾಗಿ ಇದನ್ನು ನಿಷೇಧಿಸಬೇಕಾಯಿತು. ಪರಿಣಾಮವೆಂದರೆ, ಆನೆಗಳ ಸಂತತಿ ಹದ್ದುಮೀರಿತು. ರೈತರ ಬೆಳೆಗಳು ನಾಶವಾಗುತ್ತ ಬಂದವು. ನುರಿತ ಬೇಟೆಗಾರರನ್ನು ಕರೆಸಿ ಹೆಚ್ಚುವರಿ ಆನೆಗಳನ್ನು ಕೊಲ್ಲಲು ಆ ದೇಶವು ಆದೇಶ ನೀಡಿತು. ಸ್ಥಳೀಯರು, ಕೊಂದ ಆನೆಗಳ ರುಚಿ ನೋಡಿದರು.

ತಾಂಜಾನಿಯದಲ್ಲೂ ಸೆರೆಂಗೆಟ್ಟಿ ರಾಷ್ಟ್ರೀಯ ಉದ್ಯಾನದ ಆಚೆಯಲ್ಲಿ ಕಾಡುಕೋಣ, ಜಿರಾಫೆ, ಕಾಡಾನೆಗಳನ್ನು ಬೇಟೆಯಾಡಲು ಅವಕಾಶವಿದೆ. ಆದರೆ ಅಲ್ಲಿ 22 ರಾಷ್ಟ್ರೀಯ ಉದ್ಯಾನಗಳಿವೆ ಎಂಬುದೂ, ಅಲ್ಲಿ ಸಂರಕ್ಷಣೆಗೆ ಬಿಗಿಕ್ರಮ ಕೈಗೊಳ್ಳಲಾಗಿದೆ ಎಂಬುದೂ ಮುಖ್ಯವಾಗುತ್ತವೆ. ಬೇಟೆಗೂ ಅಷ್ಟೇ, ಕೋಟಾ ವ್ಯವಸ್ಥೆ ಇದೆ. ಅದನ್ನು ಮೀರುವಂತಿಲ್ಲ. ಆ ದೇಶದ ನಿವ್ವಳ ಆಂತರಿಕ ಉತ್ಪನ್ನದ ಶೇ 17 ಭಾಗ ಪ್ರವಾಸದಿಂದ, ವಿಶೇಷವಾಗಿ ಶಿಕಾರಿಯ ಆಕರ್ಷಣೆಯಿಂದ ಬರುತ್ತಿದೆ. ಆದರೆ ‘ಬುಷ್‌ಮೀಟ್’ ಎನ್ನುವ ಒಂದು ಐಟಂ ಇದೆ. ವನ್ಯಜೀವಿಗಳನ್ನು ಕೊಂದು ತಿನ್ನಲು ಇದರಡಿಯಲ್ಲಿ ಅವಕಾಶವಿದೆ. ಈ ಪೈಕಿ ಕಪಿಗಳು ಮತ್ತು ಚೀಲವಿರುವ ಸ್ತನಿಗಳೇ ಹೆಚ್ಚು. ಪರಿಣಾಮ, 2016ರ ಹೊತ್ತಿಗೆ ಇಡೀ ಆಫ್ರಿಕಾದ 301 ಪ್ರಭೇದದ ನೆಲವಾಸಿ ಸ್ತನಿಗಳು ಅಳಿವಿನಂಚಿಗೆ ಬಂದವು, ಜೊತೆಗೆ ಜನರಿಗೆ ಎಬೋಲಾ ವೈರಸ್‌ಗಳನ್ನು ಛೂಬಿಟ್ಟವು. ಇದಕ್ಕೆ ತದ್ವಿರುದ್ಧವಾಗಿ ಸಮುದಾಯಕ್ಕೆ ವನ್ಯಜೀವಿಗಳ ಸಂರಕ್ಷಣೆಗೆಂದು ಮುಕ್ತ ಅವಕಾಶ ಕೊಟ್ಟಿದ್ದರಿಂದ ನಮೀಬಿಯದಲ್ಲಿ ಆನೆಗಳ ಸಂಖ್ಯೆ ಹೆಚ್ಚಿದೆ. 1995ರಲ್ಲಿ ಅಲ್ಲಿ 7,600 ಆನೆಗಳಿದ್ದವು. ಈಗ ಅವುಗಳ ಸಂಖ್ಯೆ 23,600ಕ್ಕೆ ತಲುಪಿದೆ ಎಂಬುದು ಸಕಾರಾತ್ಮಕ ಫಲಿತಾಂಶ.

ಆಹಾರಕ್ಕೆಂದೇ ವನ್ಯಜೀವಿಗಳನ್ನು ಸಂರಕ್ಷಿಸಲು ಭಾರತದಲ್ಲಿ ಹೆಜ್ಜೆ ಇಟ್ಟರೆ ಅದು ಯಾವ ಸ್ಥಿತಿಗೆ ತಲುಪುತ್ತದೆ ಎಂಬುದನ್ನು ಊಹಿಸಲಾಗದು. ಲಂಗುಲಗಾಮಿಲ್ಲದೆ ಖಾಸಗಿ ವನ್ಯಜೀವಿ ಸಂರಕ್ಷಣಾ ಕೇಂದ್ರಗಳು ತಲೆ ಎತ್ತುತ್ತವೆ. ಅವುಗಳ ಮೂಲಕ ವೈರಸ್‌ಗಳ ದಾಳಿಯೂ ಹೆಚ್ಚುತ್ತದೆ ಎನ್ನುವುದು ಸಕಾರಣ ಊಹೆ. ಚೀನಾದಲ್ಲಿ ವನ್ಯ ಬಾವಲಿಗಳ ಮೂಲಕ ಕೊರೊನಾ ವೈರಸ್ ದಾಳಿ ಮಾಡಿ ಜಗತ್ತು ಈಗಲೂ ಅದರ ಹಿಡಿತದಿಂದ ಪಾರಾಗಲು ಒದ್ದಾಡುತ್ತಿರುವುದು ಕಣ್ಣಮುಂದೆಯೇ ಇದೆ. ವನ್ಯಜೀವಿ ಸಂರಕ್ಷಣಾ ನೀತಿ ಭಾರತದಲ್ಲಿ ಬಿಗಿಯಾಗೇ ಇದೆ. ಬೇರೂರಿದೆ. ಆದರೆ 2006ರ ಅರಣ್ಯನೀತಿಯು ಬುಡಕಟ್ಟುಗಳ ಆಹಾರ ಪದ್ಧತಿಗೆ ಅಡ್ಡಬರುತ್ತಿದೆ ಎಂಬ ಕಾರಣ ಮುಂದೊಡ್ಡಿ ಕೆಲವು ಪ್ರದೇಶಗಳ ವ್ಯಾಪ್ತಿಗೆ ಅನ್ವಯವಾಗುವಂತೆ ಅರಣ್ಯ ಇಲಾಖೆಯು ನಿಯಮಗಳನ್ನು ಸಡಿಲಿಸಿದೆ. ಹೀಗಿದ್ದರೂ ಕೆಲವೊಮ್ಮೆ ಅತಿರೇಕದ ಪ್ರಸಂಗಗಳಾಗಿರುವುದೂ ಉಂಟು. ರಾಜಸ್ಥಾನದ ಬಿಲ್ ಬುಡಕಟ್ಟಿನಲ್ಲಿ ನವದಂಪತಿಗೆ ನರಿ ಮಾಂಸ ಕೊಡುವ ಪದ್ಧತಿ ಇದೆ. ಕೊನೆಗೆ ನರಿಗಳ ಸಂಖ್ಯೆ ಕ್ಷೀಣಿಸುತ್ತ ಬಂದಾಗ, ಬೇಟೆಯನ್ನು ನಿಷೇಧಿಸಬೇಕಾಯಿತು. ಬುಡಕಟ್ಟು ಜನರ ಪರ ಮಾತನಾಡುವವರು ‘ವನ್ಯಜೀವಿಗಳನ್ನು ಆಹಾರಕ್ಕಾಗಿ ಬಳಸದಿದ್ದರೆ, ಆ ಜನರಿಗೆ ಪ್ರೋಟೀನ್ ಎಲ್ಲಿ ಸಿಕ್ಕಬೇಕು? ಅವರ ಆಹಾರ ಪದ್ಧತಿಯನ್ನೇ ಪ್ರಶ್ನಿಸಿದರೆ ಅವರು ಬದುಕುವ ಬಗೆ ಹೇಗೆ’ ಎಂದು ಪ್ರಶ್ನಿಸುತ್ತಿದ್ದಾರೆ.

ಇದು ಏನೇ ಇರಲಿ, ಸದ್ಯ ಜೀವಿವೈವಿಧ್ಯ ಮತ್ತು ಪರಿಸರ ವ್ಯವಸ್ಥೆಯ ನೀತಿಸಂಹಿತೆ ರೂಪಿಸುವ ಅಂಗ ಈಗ ಸಾರಾಂಶವನ್ನಷ್ಟೇ ಬಿಡುಗಡೆ ಮಾಡಿದೆ. ಸದ್ಯದಲ್ಲಿ ಸಂಪೂರ್ಣ ವರದಿ ಬಿಡುಗಡೆಯಾಗಬಹುದು. ಆಗಲೂ ಅದು ಎಂದಿಗಿಂತ ಹೆಚ್ಚು ಚರ್ಚೆಗೊಳಗಾಗಬಹುದು. ಇಂಥ ಕಠೋರ ಸಲಹೆಯನ್ನು ಭಾರತ ಒಪ್ಪಲಾರದು ಎಂದು ಪ್ರಾಣಿ ದಯಾ ಸಂಘಗಳು ಆಶಾಭಾವ ತಳೆದಿವೆ.



ಚುರುಮುರಿ

ಕಿಚನ್ ರಾಜಕೀಯ!

● ತುರುವೇಕೆರೆ ಪ್ರಸಾದ್

ರಾಜಕೀಯದ ಕಾರ್ಯಾಗಾರದಲ್ಲಿ ಹಿರಿಯ ಮುತ್ಸದ್ದಿ ಒಬ್ಬರು ಕಿಚನ್ ರಾಜಕೀಯದ ಬಗ್ಗೆ ತರಬೇತಿ ಕೊಡ್ತಿದ್ದರು. ಒಲೆ ಮೇಲೆ ನೀರು ಕುದೀತಿತ್ತು. ‘ಸರ್, ಯಾಕೋ ಬೇಳೆನೇ ಬೇಯ್ತಿಲ್ಲ’ ಅಂದ ಪರ್ಮೇಶಿ.

‘ಅಯ್ಯೋ ಈಗ ಬೇಯ್ತಿರೋದೇ ನಮ್ ಬೇಳೆ. ಬೇಳೆ ಬೇಯದಿದ್ರೂ ‘ನಮ್ಮ ಬೇಳೆ ಹಾಕಿದ ತಕ್ಷಣ ನುಣ್ಣಗೆ ಕರಗಿ ಹೋಗುತ್ತೆ’ ಅಂತ ಹೇಳ್ಕೊಬೇಕು. ಡ್ಯಾಮಿಗೆ ಗೇಟ್ ರಿಪೇರಿ ಮಾಡುಸ್ತಿದ್ರೂ ಡ್ಯಾಮ್ ಕಟ್ಟಿದ್ದೇ ನಾವು ಅಂತ ಹೇಳ್ಕೊಬೇಕು. ಅನುದಾನ, ಭಾಗ್ಯಗಳೆಲ್ಲಾ ನಮ್ದೇ ಅಂತ ತುತ್ತೂರಿ ಊದ್ಕೊಬೇಕು’.

‘ಸರ್, ಏನೋ ವಾಸನೆ? ಗ್ಯಾಸ್ ಲೀಕಾಗ್ತಿದೀಯ ಅಂತ?’ ಇನ್ನೊಬ್ಬ ಕೇಳಿದ.

‘ಪಕ್ಷ, ಸಿಲಿಂಡರ್ರು ಎರಡೂ ಸಣ್ಣಗೆ ಲೀಕ್ ಆಗ್ತಾನೇ ಇರುತ್ತೆ ಕಣ್ರಪ್ಪ. ಯಾವಾಗ ಸಿಡಿಯುತ್ತೆ ಹೇಳಕ್ಕಾಗಲ್ಲ. ಎಷ್ಟು ಹುಷಾರಾಗಿದ್ರೂ ಸಾಲದು, ಭಿನ್ನಾಭಿಪ್ರಾಯದ ಹೊಗೆ ಒಳಗೊಳಗೇ ಕುದೀತಿರುತ್ತೆ. ಕೈ ಸುಟ್ಕೊಬಾರದು. ಕುಕ್ಕರ್ ತಳಕ್ಕೆ ಹುಳಿ ಹಿಂಡಬೇಕು. ಅದು ಅನ್ನ ಸಾಂಬಾರಿಗೆ ಸೇರದ ಹಾಗೆ ಇಳಿಸ್ಕೊಬೇಕು’.

‘ಅಕ್ಕಿನ ಕೇರಿ ಹಾಕಬೇಕಾ ಸರ್?’

‘ಯಾವುದನ್ನೂ ಕೇರಬಾರದು, ಯಾರಿಗೂ ಕ್ಯಾರೇ ಅನ್ನಬಾರದು. ಇದೇ ರಾಜಕೀಯ ಮಂತ್ರ’.

‘ಹಾಗಲ್ಲ, ಅಕ್ಕೀಲಿ ಕಲ್ಲು, ಹಾಳು ಮೂಳು ಇರುತ್ತಲ್ಲ’ ಇನ್ನೊಬ್ಬ ಅನುಮಾನ ತೆಗೆದ.

‘ಅದಕ್ಕೇ ನಾವು ಸಾಂಬಾರ್ ತಂಟೆಗೆ ಹೋಗದೆ ಸುಮ್ನೆ ಚಿತ್ರಾನ್ನ ಮಾಡಿಬಿಡಬೇಕು. ಹುಳ, ಹುಳುಕು ಯಾವುದೂ ಕಾಣಲ್ಲ, ರಾಜಕೀಯದೋರಿಗೆ ಚಿತ್ರಾನ್ನನೇ ಆಗಿಬಂದಿರೋದು’.

‘ನಿಜ ಸರ್, ಮುಂದಿನ ಸಾರಿ ಸೆಂಟ್ರಲ್ಲಲ್ಲೂ ಚಿತ್ರಾನ್ನನೇ ಅಂತ ಮಾತಾಡ್ತಿದಾರೆ’.

‘ಮಾತಾಡೋದೇನ್ ಬಂತು? ಅಲ್ಲಿ ಗ್ಯಾರಂಟಿ ಚಿತ್ರಾನ್ನನೇ! ನಿತೀಶು, ರಾಹುಲ್ಲು, ದೀದಿ, ಕಾಮ್ರೇಡ್‌ಗಳು ಪರಸ್ಪರ ಕಾಲು ಎಳೆದಾಡ್ತಾರೆ. ಮತ್ತೆ ಕರ್ನಾಟಕಕ್ಕೇ ಪ್ರಧಾನಿ ಯೋಗ ಕಣ್ರೋ!’ ನಕ್ಕರು ಹಿರಿಯರು.

‘ಇಲ್ಲೂ ತಳ್ಳು, ಕೊಳ್ಳು ಪರಿಸ್ಥಿತಿ ಬಂದ್ರೆ ಡಬಲ್ ಎಂಜಿನ್ ‘ದೇಕು’ ಸರ್ಕಾರದ ಯೋಗನೂ ಇದೆ ಬಿಡಿ ಸರ್’ ಎಂದು ಒಗ್ಗರಣೆ ಹಾಕಿದ ಪರ್ಮೇಶಿ.

ಸಂಗತ

ಬನ್ನಿ, ನೀವೂ ಮಸೀದಿ ದರ್ಶನಕ್ಕೆ

ಮಸೀದಿ ಕುರಿತು ಜನರಲ್ಲಿ ಇರುವ ಪೂರ್ವಗ್ರಹಗಳನ್ನು ದೂರ ಮಾಡುತ್ತಿದೆ ‘ಮಸೀದಿ ದರ್ಶನ’ ಅಭಿಯಾನ

● ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಹಾಗೆ ನೋಡಿದರೆ ಇದು ಹೊಸದೇನೂ ಅಲ್ಲ. ಇಡೀ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿಯೂ ಹತ್ತು-ಹನ್ನೆರಡು ವರ್ಷಗಳಿಂದ ಇದು ನಡೆಯುತ್ತಿದೆ. ಸಾಮಾಜಿಕ, ರಾಜಕೀಯ ಕಾರಣಗಳಿಗಾಗಿ ಇತ್ತೀಚೆಗೆ ಇದರ ಮಹತ್ವ ಒಂದು ರೀತಿ ಹೆಚ್ಚಾಗಿರುವುದರಿಂದ ‘ಮಸೀದಿ ದರ್ಶನ’ ಕಾರ್ಯಕ್ರಮ ಪ್ರಚಾರವನ್ನು ಪಡೆಯುತ್ತಿದೆ.

ಕನ್ನಡದಲ್ಲಿ ಮಸೂತಿ, ಮಸೀದಿ ಎಂದೆಲ್ಲಾ ಕರೆಯಲಾಗುವ ಕಟ್ಟಡದ ಅರೇಬಿಕ್ ಹೆಸರು ‘ಮಸ್-ಜಿದ್’ ಎಂದು. ಮುಸ್ಲಿಮರು ಅಲ್ಲಾಹುವಿಗೆ ಸರ್ವಾಂಗ ಸಹಿತವಾಗಿ ತಮ್ಮ ಅರ್ಪಣೆಯನ್ನು ಸೂಚಿಸುವ ರೀತಿಯಲ್ಲಿ ಮೊಣಕಾಲ ಮೇಲೆ ಬಾಗಿ ನೆಲಕ್ಕೆ ಮುಖ ಮತ್ತು ಹಣೆಯನ್ನು ಹಚ್ಚುವ ಪ್ರಾರ್ಥನಾ ವಿಧಿಗೆ ‘ಸಜ್‌ದಾಹ್’ ಎನ್ನುತ್ತಾರೆ. ಇಂಥ ಸಜ್‌ದಾಹ್ ಮಾಡುವ ಒಂದು ನಿಗದಿತ ತಾಣ ‘ಮಸ್-ಜಿದ್’, ಮಸೀದಿ.

ಮಸೀದಿ, ಮದರಸಾ ಮತ್ತು ದರ್ಗಾ ಮೂರೂ ಬೇರೆ ಬೇರೆ. ಮದರಸಾದಲ್ಲಿ ಧಾರ್ಮಿಕ, ಕೆಲವು ಕಡೆ ಸರ್ಕಾರಿ ಪಠ್ಯದ ಪ್ರಕಾರ ಸಾರ್ವತ್ರಿಕ ಶಿಕ್ಷಣ ನಡೆಯುತ್ತದೆ, ದರ್ಗಾದಲ್ಲಿ ಒಬ್ಬ ಸಂತರ ಸಮಾಧಿ ಇರುತ್ತದೆ. ಎಲ್ಲಾ ಧರ್ಮದ ಜನ ದರ್ಗಾಗಳಿಗೆ ನಡೆದುಕೊಳ್ಳುತ್ತಾರೆ. ಪ್ರತೀ ದರ್ಗಾದ ಜೊತೆಯಲ್ಲಿ ಯಾವುದಾದರೂ ಒಂದು ‘ಪವಾಡ’ದ ಕಥೆ ಹೊಂದಿಕೊಂಡಿರುತ್ತದೆ. ಇಲ್ಲಿ ಜನ ವಿವಿಧ ರೀತಿಯ ಕಾಣಿಕೆಗಳನ್ನು ಒಪ್ಪಿಸಿ ಹರಕೆ ಹೊತ್ತುಕೊಳ್ಳುತ್ತಾರೆ. ಸದ್ದುಗದ್ದಲ. ಆದರೆ, ಮಸೀದಿಗೆ ಯಾವುದೇ ‘ಪವಾಡ’ದ ನಂಟು ಇಲ್ಲ. ಯಾವುದೇ ಸಮಾಧಿ, ಸಂಕೇತಗಳು ಅಲ್ಲಿರುವುದಿಲ್ಲ. ವಿಶಾಲವಾದ, ಸ್ವಚ್ಛವಾದ ಸ್ಥಳ, ಪ್ರಶಾಂತವಾದ ವಾತಾವರಣ, ಧ್ಯಾನಕ್ಕೆ ಪ್ರಶಸ್ತವಾದ ತಾಣ. ಇಲ್ಲಿ ಮುಸ್ಲಿಂ ಸಮುದಾಯದವರು ವೈಯಕ್ತಿಕವಾಗಿ, ಮುಖ್ಯವಾಗಿ ಸಾಮೂಹಿಕವಾಗಿ, ದಿನಕ್ಕೆ ಐದು ಬಾರಿ ನಮಾಜನ್ನು ಸಲ್ಲಿಸುತ್ತಾರೆ.

ನಿರ್ದಿಷ್ಟ ಸಮುದಾಯದವರು ಎಂಬ ಕಾರಣಕ್ಕೆ ಮಸೀದಿಯಲ್ಲಿ ಯಾವುದೇ ನಿಷೇಧ, ತಾರತಮ್ಯ ಇಲ್ಲ. ಇಲ್ಲಿ ಬೇರೆಯವರು ಮುಟ್ಟಿದರೆ ಮೈಲಿಗೆಯಾಗುವ ಯಾವುದೇ ವಸ್ತುಗಳಿಲ್ಲ. ಇಲ್ಲಿ ಎಲ್ಲವೂ ಶೂನ್ಯ, ಬಯಲು.

ಮಸೀದಿಯಲ್ಲಿ ಮುಸ್ಲಿಂ ಮಹಿಳೆಯರಿಗೆ ಪ್ರವೇಶವಿಲ್ಲ ಎಂಬ ಒಂದು ನಂಬಿಕೆ ಪ್ರಚಲಿತವಾಗಿದೆ. ಆದರೆ ವಾಸ್ತವ ಬೇರೆ. ಮುಸ್ಲಿಮರಲ್ಲಿ ಸಾಮೂಹಿಕ ನಮಾಜಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇದರಲ್ಲಿ ನಮಾಜಿಗಳು ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನಗಳನ್ನು ಮಸೀದಿಯ ಹೊರಗೇ, ಚಪ್ಪಲಿ ಬಿಡುವ ಕಡೆ ಕಳಚಿಟ್ಟು ಒಳಗೆ ಪ್ರವೇಶಿಸಬೇಕು. ನಮಾಜಿಗೆ ಸಾಲುಗಳಲ್ಲಿ ನಿಂತಾಗ ಸ್ವಲ್ಪವೂ ಜಾಗ ಬಿಡದೆ ಹೆಗಲಿಗೆ ಹೆಗಲು ತಾಗಿಸಿಕೊಂಡು ನಿಲ್ಲಬೇಕು. ನಮಾಜನ್ನು ಸಲ್ಲಿಸುವ ಕ್ರಮದಲ್ಲಿ ಎಲ್ಲರೂ ಸೊಂಟದಿಂದ ಬಾಗಬೇಕು, ಮೊಣಕಾಲೂರಿ ಹಣೆಯನ್ನು ನೆಲಕ್ಕೆ ತಾಗಿಸಬೇಕು ಎಂಬೆಲ್ಲಾ ಪದ್ಧತಿಗಳಿವೆ. ಇಂಥ ಪ್ರಾರ್ಥನೆಯ ಸ್ಥಳದಲ್ಲಿ ಮಾತ್ರ ಪುರುಷರು ಮತ್ತು ಮಹಿಳೆಯರು ಒಟ್ಟಿಗೇ ನಿಲ್ಲುವ ಪದ್ಧತಿ ಇಲ್ಲ. ಮನೆಗಳಲ್ಲಿ ಮಾಡುವ ಇತರ ಧಾರ್ಮಿಕ ವಿಧಿಗಳಲ್ಲಿ ಸ್ತ್ರೀಯರು ಸಮಾನವಾಗಿ ಭಾಗವಹಿಸುತ್ತಾರೆ. ಅವರೂ, ಮುಖ್ಯವಾಗಿ ರಂಜಾನ್ ಮತ್ತು ಬಕ್ರೀದ್ ಹಬ್ಬದ ವಿಶೇಷ ಸಂದರ್ಭದಲ್ಲಿ ಯಾರಾದರೂ ಒಬ್ಬರ ಮನೆಯಲ್ಲಿ ಸೇರಿ ಸಾಮೂಹಿಕವಾಗಿಯೂ ನಮಾಜು ಮಾಡುತ್ತಾರೆ.

ಬಹಳಷ್ಟು ವಿಸ್ತಾರವಾದ ಸಂಕೀರ್ಣವನ್ನು ಹೊಂದಿರುವ ದೇಶದ ಹಲವು ಮಸೀದಿಗಳಲ್ಲಿ ಮಹಿಳೆಯರಿಗೂ ಸಾಮೂಹಿಕ ನಮಾಜಿಗಾಗಿ ಅವರದೇ ಆದ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿದೆ. ಚಿಕ್ಕ ಮಸೀದಿಗಳಲ್ಲಿ ಇದು ಕಾಣದೇ ಇದ್ದರೆ ಸ್ಥಳದ ಅಭಾವ ಮಾತ್ರ ಕಾರಣ. ಇದಲ್ಲದೆ ಮಸೀದಿ ಸಂಕೀರ್ಣದಲ್ಲಿಯೇ ಇರುವ ಗ್ರಂಥಾಲಯ, ಸಭಾಂಗಣದಂತಹ ಸಾಮಾನ್ಯ ಸ್ಥಳಗಳಲ್ಲಿ ಸ್ತ್ರೀಯರು ಮತ್ತು ಪುರುಷರು ಒಟ್ಟಾಗಿಯೇ ಭಾಗವಹಿಸುತ್ತಾರೆ.



ಎಲ್ಲ ಧರ್ಮಗಳಲ್ಲಿ ಇರುವ ಹಾಗೆ ಮುಸ್ಲಿಮರಲ್ಲಿಯೂ ಸಂಪ್ರದಾಯವಾದಿಗಳು ಇರುತ್ತಾರೆ. ಇವರಿಗೆ ಧರ್ಮದ ಆಳ- ಅಗಲದ ಪರಿಚಯ ಇರುವುದಿಲ್ಲ, ಇವರು ಅವರವರೇ ಹುಟ್ಟಿಸಿಕೊಂಡು ಮೂಢಾಚರಣೆಗಳನ್ನು ಅನುಸರಿಸುತ್ತಾರೆ. ಇಂಥ ಕೆಲವರು ಮಹಿಳೆಯರು, ಇತರ ಧರ್ಮೀಯರು ಮಸೀದಿಯ ಒಳಗೆ ಬರಬಾರದು ಎಂಬ ಭ್ರಮೆಗೆ ಒಳಗಾಗಿದ್ದಿರಬೇಕು. ಆದರೆ, ಜಮಾತೆ ಇಸ್ಲಾಮ್ ಇ ಹಿಂದ್ ಮತ್ತು ಅದರ ಸಹಸಂಸ್ಥೆಗಳು ಈ ಮೌಢ್ಯವನ್ನು ಹೋಗಲಾಡಿಸಿ, ‘ಬನ್ನಿ, ಮಸೀದಿಯನ್ನು ನೀವೂ ನೋಡಿ’ ಎನ್ನುವ ರೀತಿಯ ಸಾರ್ವಜನಿಕ ಅಭಿಯಾನವನ್ನು ಆರಂಭಿಸಿವೆ. ‘ಮಸೀದಿಯ ಕುರಿತು ಅಗದವರು ಕಟ್ಟಿರುವ ಕಥೆಗಳನ್ನು ನಂಬುವ ಬದಲು, ನೀವೇ ಕಣ್ಣಾರೆ ನೋಡಿ’ ಎಂಬುದೇ ಈ ಅಭಿಯಾನದ ಧ್ಯೇಯ.

ಕಳೆದ ಭಾನುವಾರ ಬೆಂಗಳೂರಿನ ಬನ್ನೇರುಘಟ್ಟದ ಮಸೀದಿಯೊಂದರಲ್ಲಿ ಆಯೋಜಿಸಲಾಗಿದ್ದ ‘ಮಸೀದಿ ದರ್ಶನ’ ಕಾರ್ಯಕ್ರಮದಲ್ಲಿ ಮುಸ್ಲಿಂ ಸಮುದಾಯದ ಮಹಿಳೆಯರೂ ಇದ್ದರು, ಇನ್ನೂರಕ್ಕೂ ಹೆಚ್ಚು ಜನ ಇತರ ದೇಶಬಾಂಧವರು ಇದರ ಪ್ರಯೋಜನವನ್ನು ಪಡೆದರು. ತಮ್ಮ ತಮ್ಮ ಜಾತಿ, ಧರ್ಮದೊಂದಿಗೆ ಮಸೀದಿಗೆ ಬಂದರು, ಹೊರಹೋಗುವಾಗಲೂ ಅವರ ಜಾತಿ, ಧರ್ಮ ಅದೇ ಆಗಿತ್ತು, ಬದಲಾಗಿದ್ದು, ಮಸೀದಿಯ ಬಗ್ಗೆ ಅವರಿಗಿದ್ದ ಧೋರಣೆ.

ನಿಗೂಢಗಳು ನಮ್ಮನ್ನು ಒಡೆಯುವ ಪಿತೂರಿ ಮಾಡುತ್ತವೆ. ಪರಸ್ಪರ ಅರಿವು ನಮ್ಮಲ್ಲಿ ಸೌಹಾರ್ದವನ್ನು ತರುತ್ತದೆ. ಸಂವಿಧಾನ ಮತ್ತು ಮಾನವತೆಯ ಆಶಯವೂ ಇದೇ ಆಗಿದೆ.

ವಾಚಕರ ವಾಣಿ

ಮಹತ್ವದ ತೀರ್ಪು: ತಿಳಿವಳಿಕೆ ಮೂಡಿಸಬೇಕು

ಅವಿವಾಹಿತೆಯರೂ ಸೇರಿದಂತೆ ಎಲ್ಲ ಮಹಿಳೆಯರೂ ಭ್ರೂಣಕ್ಕೆ 24 ವಾರ ತುಂಬುವವರೆಗೆ ಸುರಕ್ಷಿತವಾಗಿ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕು ಹೊಂದಿದ್ದಾರೆ ಎಂಬ ಸುಪ್ರೀಂ ಕೋರ್ಟ್ ತೀರ್ಪು (ಪ್ರ.ವಾ., ಸೆ. 30) ಸ್ವಾಗತಾರ್ಹ. ಹಳ್ಳಿಗರು ಹಾಗೂ ಬುಡಕಟ್ಟು ಜನರಲ್ಲಿ ಅನಕ್ಷರತೆ ಇರುವುದರಿಂದ ಇಂತಹ ತೀರ್ಪುಗಳು ಅವರನ್ನು ತಲುಪುವುದು ತೀರಾ ಕಡಿಮೆ. ಅದಕ್ಕಾಗಿ, ಗ್ರಾಮೀಣ ಪ್ರದೇಶಗಳ ಎಲ್ಲ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಇಂತಹ ಪ್ರಮುಖ ತೀರ್ಪುಗಳ ಕುರಿತು ಜಾಹೀರಾತುಗಳನ್ನು ಬಿತ್ತರಿಸಬೇಕು. ಇದರಿಂದ ಅವು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ತಲುಪಲು ಅನುಕೂಲವಾಗುತ್ತದೆ.

ವೀರಪ್ಪ ಈಟಿ, ಯರಗುಪ್ಪಿ, ಧಾರವಾಡ

ತುಟ್ಟಿಭತ್ಯೆ: ಸಲ್ಲದ ಪ್ರಚಾರ

ಕೇಂದ್ರ ಸರ್ಕಾರವು ತನ್ನ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳ ಮಾಡಿರುವುದು ಉಡುಗೊರೆಯಲ್ಲ, ಕರ್ತವ್ಯಪಾಲನೆ ಎಂದು ಎಚ್.ಎಸ್.ಚಂದ್ರಶೇಖರ ಹೇಳಿರುವುದು (ವಾ.ವಾ., ಸೆ. 30) ಸರಿಯಾಗಿದೆ. ಆರು ತಿಂಗಳಿಗೆ ಒಂದು ಸಲ ತುಟ್ಟಿಭತ್ಯೆ ನೀಡಲು ಕೇಂದ್ರ ಸರ್ಕಾರವು ಆದೇಶವನ್ನೇ ಹೊರಡಿಸಿದೆ. ಆದರೂ ತುಟ್ಟಿಭತ್ಯೆಯ ಹೆಚ್ಚಳದ ವಿಚಾರವನ್ನು ಹಬ್ಬದ ಸಂದರ್ಭದಲ್ಲಿಯೇ ಏಕೆ ಪ್ರಕಟಿಸಬೇಕು ಹಾಗೂ ಅದು ಹಬ್ಬದ ಉಡುಗೊರೆ ಎಂದು ಏಕೆ ಹೇಳಿಕೊಳ್ಳಬೇಕು? ಇದು ಸರಿಯಲ್ಲ. ಬದಲಿಗೆ, ಜನವರಿ ಮತ್ತು ಜೂನ್ ತಿಂಗಳಲ್ಲೇ ತುಟ್ಟಿಭತ್ಯೆಯ ಹೆಚ್ಚಳವನ್ನು ಸರ್ಕಾರ ಪ್ರಕಟಿಸಲಿ. ಆಗ ಯಾವುದೇ ವಿವಾದಕ್ಕೆ ಆಸ್ಪದ ಇರದು ಹಾಗೂ ಉಡುಗೊರೆ ಕೊಟ್ಟಿರುವಂತೆ ಮಾತನಾಡುವುದನ್ನು ನಿಲ್ಲಿಸಬಹುದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಗುಜರಾತ್ ಅಭಿವೃದ್ಧಿ: ಅಪೂರ್ಣ ಸತ್ಯ

ಪ್ರಧಾನಮಂತ್ರಿ ಅವರು ಗುಜರಾತ್ ರಾಜ್ಯವು ಪ್ರಚಾರವಿಲ್ಲದೆ ಅಭಿವೃದ್ಧಿಯನ್ನು ಸಾಧಿಸಿದೆ ಎಂದು ಹೇಳಿದ್ದಾರೆ (ಪ್ರ.ವಾ., ಸೆ. 30). ಇದು ಪೂರ್ಣ ನಿಜವಲ್ಲ. ಗುಜರಾತಿನ ತಲಾ ವರಮಾನ 2019- 20ರಲ್ಲಿ ₹ 2,13,936ರಷ್ಟಿದ್ದರೆ ಕರ್ನಾಟಕದ್ದು ₹ 2,23,175. ಎನ್‌ಎಫ್‌ಎಚ್‌ಎಸ್– 5 ವರದಿ ಪ್ರಕಾರ, 2019-20ರಲ್ಲಿ ಗುಜರಾತಿನಲ್ಲಿ ಲಿಂಗ ಅನುಪಾತವು 965ರಷ್ಟಿದ್ದರೆ ಕರ್ನಾಟಕದಲ್ಲಿ 1,034. ಶಾಲಾ ಕಲಿಕೆಯನ್ನು 10 ವರ್ಷ ಮುಗಿಸಿದ ಮಹಿಳೆಯರ ಪ್ರಮಾಣ 2019-20ರಲ್ಲಿ ಗುಜರಾತಿನಲ್ಲಿ ಶೇ 45.6 ರಷ್ಟಿದ್ದರೆ, ಕರ್ನಾಟಕದಲ್ಲಿ ಇದು ಶೇ 56.5.

ಶಿಶುಮರಣ ಪ್ರಮಾಣ ಪ್ರತೀ ಸಾವಿರ ಜನನಗಳಿಗೆ ಗುಜರಾತಿನಲ್ಲಿ 31.2ರಷ್ಟಿದ್ದರೆ, ಕರ್ನಾಟಕದಲ್ಲಿ ಇದು 25.4. ಗುಜರಾತಿನಲ್ಲಿ 2019-20ರಲ್ಲಿ 6ರಿಂದ 59 ತಿಂಗಳ ಒಟ್ಟು ಮಕ್ಕಳಲ್ಲಿ ಅನೀಮಿಯ (ರಕ್ತಹೀನತೆ) ಎದುರಿಸುತ್ತಿರುವವರ ಪ್ರಮಾಣ ಶೇ 79.7ರಷ್ಟಿದ್ದರೆ, ಕರ್ನಾಟಕದಲ್ಲಿ ಇದು ಶೇ 65.6ರಷ್ಟಿದೆ. ಹೀಗೆ ಯಾವುದೇ ಅಭಿವೃದ್ಧಿ ಸೂಚಿ ತೆಗೆದುಕೊಂಡರೂ ಗುಜರಾತ್ ರಾಜ್ಯದ ಅಭಿವೃದ್ಧಿಯು ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಿಗಿಂತ ಕೆಳಮಟ್ಟದಲ್ಲಿರುವುದು ಒಕ್ಕೂಟ ಸರ್ಕಾರದ ವರದಿಗಳಿಂದಲೇ ಸ್ಪಷ್ಟವಾಗುತ್ತದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

ಮಾಲಿನ್ಯ ತಪ್ಪಿಸಿ, ಹೃದ್ರೋಗ ನಿಯಂತ್ರಿಸಿ

ಹೃದ್ರೋಗಿಗಳ ಸಂಖ್ಯೆ ಹೆಚ್ಚುತ್ತಿರುವುದರ ಬಗ್ಗೆ ವಿಶ್ವ ಹೃದಯ ದಿನದ (ಸೆ. 29) ಸಂದರ್ಭದಲ್ಲಿ ವೈದ್ಯರು ತಿಳಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಹೃದಯ ತಜ್ಞರು ಹೃದಯಾಘಾತಕ್ಕೆ ನೀಡುವ ಕಾರಣಗಳಲ್ಲಿ ಅನಾರೋಗ್ಯಕರ ಆಹಾರ ಪದ್ಧತಿ, ಜೀವನಶೈಲಿ, ಮದ್ಯಪಾನ, ಧೂಮಪಾನ, ಮಾನಸಿಕ ಒತ್ತಡ ಮತ್ತು ಪರಿಸರ ಮಾಲಿನ್ಯ ಮುಖ್ಯವಾದವು. ಇವುಗಳಲ್ಲಿ ಪರಿಸರ ಮಾಲಿನ್ಯ ಹೊರತುಪಡಿಸಿದರೆ, ಉಳಿದ ಎಲ್ಲ ಕಾರಣಗಳಿಗೆ ಒಬ್ಬ ವ್ಯಕ್ತಿಯ ವೈಯಕ್ತಿಕ ಜೀವನಶೈಲಿ ಕಾರಣವಾಗಬಹುದು. ಆದರೆ ಪರಿಸರ ಮಾಲಿನ್ಯಕ್ಕೆ ನಮ್ಮ ಆಡಳಿತ ಕಾರಣವಾಗುತ್ತದೆ. ಸ್ವಚ್ಛ, ಸುಂದರ, ಪ್ರಶಾಂತ ವಾತಾವರಣಕ್ಕೆ ಪೂರಕವಾದ ಕ್ರಮಗಳನ್ನು ಕೈಗೊಳ್ಳಬೇಕಾದುದು ಆಡಳಿತ ನಡೆಸುವವರ ಹೊಣೆ. ಯಾರೋ ಮಾಡುವ ತಪ್ಪಿಗೆ ಬೇರೆಯವರ ಜೀವ ಬಲಿಯಾಗುವುದನ್ನು ತಪ್ಪಿಸಬೇಕು.

ಸುರೇಶ ಅರಳಿಮರ, ಬಾದಾಮಿ

ಭಾರತ್ ಜೋಡೊ- ಎಲ್ಲೆಡೆ ನಡೆಯಲಿ ಸಂವಾದ

‘ಭಾರತ್ ಜೋಡೊ’ ಯಾತ್ರೆ ನಮ್ಮ ಈ ದುರಿತ ಕಾಲದಲ್ಲಿ ಸ್ವಾಗತಾರ್ಹ. ಕಾಂಗ್ರೆಸ್ ಪಕ್ಷ ತನ್ನ ಬಲವರ್ಧನೆಗೆ ಇದನ್ನು ಬಳಸುವುದೂ ತಪ್ಪೇನಿಲ್ಲ. ಯಾಕೆಂದರೆ ಜನಸಾಮಾನ್ಯರ ಸಂಪರ್ಕ, ಸಂವಾದದ ಮೂಲಕ ಒಂದು ರಾಜಕೀಯ ಪಕ್ಷ ಗಟ್ಟಿಗೊಳ್ಳುವುದು ಮುಖ್ಯ. ಈ ಯಾತ್ರೆಯು ಕರ್ನಾಟಕದ ಎಂಟು ಜಿಲ್ಲೆಗಳಲ್ಲಿ ಮಾತ್ರ ಹಾದು ಹೋಗುತ್ತಿದೆ. ಅಂದರೆ ಮುಕ್ಕಾಲುಪಾಲು ರಾಜ್ಯ ಈ ಯಾತ್ರೆಯ ಪಥದಲ್ಲಿ ಇಲ್ಲ. ಕಾಂಗ್ರೆಸ್ಸಿನ ಎಲ್ಲ ನಾಯಕರಿಗೂ ರಾಹುಲ್ ಅವರ ಜೊತೆ ನಡೆಯುವ ಹೆಬ್ಬಯಕೆ ಇರುವ ಕಾರಣ, ಬಹುತೇಕ ಜಿಲ್ಲೆಗಳಿಂದ ಯಾತ್ರೆಯ ಪಥಕ್ಕೆ ಇವರು ಬಂದು ಸೇರಬಹುದು. ಆದರೆ ಯಾತ್ರೆಯ ಆಶಯಗಳ ಬಗ್ಗೆ ಈ ಜಿಲ್ಲೆಗಳ ಕಾಂಗ್ರೆಸ್ ನಾಯಕರ ನಿಲುವೇನು? ಇವುಗಳ ಬಗ್ಗೆ ಅವರಿಗಿರುವ ಸೈದ್ಧಾಂತಿಕ ಗ್ರಹಿಕೆ ಏನು ಎಂಬುದು ಗೊತ್ತಾಗುವುದು ಮುಖ್ಯ. ರಾಹುಲ್ ಮತ್ತು ಇತರ ನಾಯಕರಷ್ಟೇ ನಾಗರಿಕ ಸಂಘಟನೆಗಳ ಜೊತೆ ಸಂವಾದ ಮಾಡಿದರೆ ಸಾಲದು. ಉಳಿದ ಜಿಲ್ಲೆಗಳಲ್ಲೂ ಯಾತ್ರೆಯ ಬಗ್ಗೆ ಸ್ಪಂದನೆಯ ಕಾರ್ಯಕ್ರಮವನ್ನು ಆಯಾ ಜಿಲ್ಲೆಯ ಕಾಂಗ್ರೆಸ್ಸಿಗರು ಹಮ್ಮಿಕೊಳ್ಳಬೇಕು.

ಯಾತ್ರೆ ಸಾಗದ ಜಿಲ್ಲೆಗಳಲ್ಲಿ ಎರಡು ವಾರಗಳ ಅಂತರದಲ್ಲಿ ಕನಿಷ್ಠ ಐದು ದಿನಗಳ ಕಾಲ ಜಿಲ್ಲಾ ಕಾಂಗ್ರೆಸ್ಸಿಗರು ‘ಭಾರತ್ ಜೋಡೊ’ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಬೇಕು. ಆಯಾ ಜಿಲ್ಲೆಯ ವಿವಿಧ ಪ್ರಜಾಸತ್ತಾತ್ಮಕ ಸಂಘಟನೆಗಳು ಇದರಲ್ಲಿ ಒಳಗೊಳ್ಳುವಂತೆ ಮಾಡಬೇಕು. ಈ ಸಂಘಟನೆಗಳ ನಿರೀಕ್ಷೆಗಳೇನು, ಕಾರ್ಯಸೂಚಿಯೇನು ಎಂಬುದನ್ನು ಅರಿಯಬೇಕಾಗಿದೆ. ಈ ಮೂಲಕ ಆಯಾ ಜಿಲ್ಲೆಯ ಜ್ವಲಂತ ಸಮಸ್ಯೆಗಳ ಬಗ್ಗೆಯೂ ಒಟ್ಟಾರೆ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆಯೂ ಒಂದು ಮಹಾವೇದಿಕೆಯನ್ನು ಸೃಷ್ಟಿಸಬಹುದು. ಸೃಷ್ಟಿಸಬೇಕಿದೆ. ಇದರಲ್ಲಿ ಉದಾಸೀನ ತೋರಿ, ಚುನಾವಣಾ ಹಪಹಪಿಗಷ್ಟೇ ಜಿಲ್ಲಾ ಕಾಂಗ್ರೆಸ್ಸಿಗರು ಸೀಮಿತವಾದರೆ, ರಾಹುಲ್ ಅವರು ಎದುರಿಸ ಬಯಸುತ್ತಿರುವ ವಿಭಜಕ ಶಕ್ತಿಗಳನ್ನು ಸ್ಥಳೀಯವಾಗಿ ಎದುರಿಸಿ ಸೋಲಿಸುವುದು ಸಾಧ್ಯವೇ ಇಲ್ಲ. ಸಂಘಟನೆಗಳೂ ತಮ್ಮ ತಮ್ಮ ಜಿಲ್ಲೆಗಳ ಕಾರ್ಯಕರ್ತರನ್ನು ಈ ಸಂವಾದಕ್ಕೆ ಅಣಿಗೊಳಿಸಬೇಕಿದೆ.

ಕೆ.ಪಿ.ಸುರೇಶ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್‌ನ 'ಪೇಸಿಎಂ' ಅಭಿಯಾನ, ಅದಕ್ಕೆ ಎದುರಾಗಿ ಬಿಜೆಪಿ ನಡೆಸಿದ ಅಭಿಯಾನವು ರಾಜಕೀಯ ಸಂವಾದದ ಮಟ್ಟವು ಪಾತಾಳಕ್ಕೆ ಕುಸಿದಿರುವುದರ ಸಂಕೇತವೇ?

ಮಾಡಿದ್ದುಣ್ಣೋ ಮಹರಾಯ, ಕ್ರಿಯೆಗೆ ಪ್ರತಿಕ್ರಿಯೆ

• ದಿನೇಶ್ ಅಮೀನ್ ಮಟ್ಟು

ಯಾವುದೇ ರಾಜಕೀಯ ಪ್ರಚಾರ ಯಶಸ್ವಿಯಾಗಬೇಕಾದರೆ ಪ್ರಚಾರದ ವಸ್ತುವಿನ ಜೊತೆ ಜನ ತಮ್ಮನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾಲದಲ್ಲಿ ಜನ ಹೀಗೆ ಗುರುತಿಸಿಕೊಂಡಿದ್ದರು. ಕರ್ನಾಟಕದಲ್ಲಿ ಈಗ ಅಂತಹದ್ದೇ ವಾತಾವರಣ ಸೃಷ್ಟಿಯಾಗಿದೆ. ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯದ ಬಲಿಪಶುಗಳು ಎಂಬ ಅಭಿಪ್ರಾಯ ಜನರ ಮನಸ್ಸಲ್ಲಿದೆ. ಇದು 'ಪೇಸಿಎಂ' ಅಭಿಯಾನದ ಯಶಸ್ಸಿಗೆ ಒಂದು ಕಾರಣವಾದರೆ ಈ ಪ್ರಚಾರದಲ್ಲಿನ ವಿನೂತನ ಸೃಜನಶೀಲತೆ ಜನರ ಗಮನ ಸೆಳೆದಂತಿದೆ

ಕಾಂಗ್ರೆಸ್ ಪಕ್ಷದ 'ಪೇಸಿಎಂ' ಅಭಿಯಾನ ಒಂದು ಡರ್ಟಿ ಪಾಲಿಟಿಕ್ಸ್ ಹೌದೋ, ಅಲ್ಲೋ ಎನ್ನುವುದನ್ನು ತೀರ್ಮಾನಿಸುವ ಮೊದಲು, ಹೀಗೆಂದು ಪ್ರತಿಕ್ರಿಯಿಸುವ ನೈತಿಕತೆಯನ್ನು ಪ್ರಧಾನಿ ನರೇಂದ್ರ ಮೋದಿಯವರಿಂದ ಹಿಡಿದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ವರೆಗೆ ತಮ್ಮ ಯಾವನಾದರೂ ನಾಯಕ ಉಳಿಸಿಕೊಂಡಿದ್ದಾರೆಯೇ ಎನ್ನುವ ಪ್ರಶ್ನೆಗೆ ಭಾರತೀಯ ಜನತಾ ಪಕ್ಷ ಉತ್ತರಿಸಬೇಕಾಗುತ್ತದೆ.

ಈ ಚರ್ಚೆಗೆ ಕಾಂಗ್ರೆಸ್ಸಿನವರು ಸರಳವಾದ ಕನ್ನಡದ ಗಾದೆಯ ಮೂಲಕ ಪ್ರತಿಕ್ರಿಯಿಸಲು ಪ್ರಯತ್ನಿಸಿದರೆ 'ಮಾಡಿದ್ದುಣ್ಣೋ ಮಹರಾಯ' ಎನ್ನಬಹುದು, ಸ್ವಲ್ಪ ಫಿಲ್ಮಿ ಸಂಭಾಷಣೆಯ ಶೈಲಿಯಲ್ಲಿ ಹೇಳಿದರೆ 'ಆಟ ನೀವು ಶುರು ಮಾಡಿದ್ದೀರಿ, ಅಂತ್ಯ ನಾವು ಮಾಡುತ್ತೇವೆ' ಎನ್ನಬಹುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಧಾಟಿಯಲ್ಲಿಯೇ ಹೇಳಲು ಹೊರಟರೆ 'ಕ್ರಿಯೆಗೆ ಪ್ರತಿಕ್ರಿಯೆ' ಎನ್ನಬಹುದು ಅಷ್ಟೇ.

ಕಾಲ ಬದಲಾಗಿದೆ. ಸೈದ್ಧಾಂತಿಕ ವಿರೋಧಿಯಾದ ಶ್ಯಾಮಪ್ರಸಾದ್ ಮುಖರ್ಜಿಯವರನ್ನು ಸಂಪುಟಕ್ಕೆ ಸೇರಿಸಿಕೊಂಡ, ಇಲ್ಲವೇ ಇನ್ನೊಬ್ಬ ರಾಜಕೀಯ ವಿರೋಧಿಯಾದ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ, ಇಲ್ಲವೇ ನೀವು ಒಂದು ದಿನ ದೇಶದ ಪ್ರಧಾನಿಯಾಗಬಹುದು ಎಂದು ಬಹಿರಂಗವಾಗಿಯೇ ಅಟಲ್ ಬಿಹಾರಿ ವಾಜಪೇಯಿ ಅವರ ಬೆನ್ನುತಟ್ಟಿದ ಪಂಡಿತ ಜವಾಹರ ಲಾಲ್ ನೆಹರೂ ಅಂತಹವರ ಕಾಲ ಇದು ಅಲ್ಲ.

ಪಾಕಿಸ್ತಾನದ ವಿರುದ್ದದ ಯುದ್ಧವನ್ನು ಗೆದ್ದ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರನ್ನು ದುರ್ಗಿ ಎಂದು ಕರೆದ ಮತ್ತು ಸಂಸತ್ ಭವನದಲ್ಲಿದ್ದ ನೆಹರೂ ಪೋಟೊವನ್ನು ಕಿತ್ತು ಹಾಕಿದ್ದನ್ನು ನೋಡಿ ಕೆರಳಿ ಸಿಟ್ಟಾದ ಅಟಲ್ ಬಿಹಾರಿ ವಾಜಪೇಯಿ, ಇಲ್ಲವೇ ಸಂಸತ್ ಭವನದ ಮೇಲೆ ಭಯೋತ್ಪಾದಕರ ದಾಳಿ ನಡೆದಾಗ ವಾಜಪೇಯಿ-ಅಡ್ವಾಣಿಯವರ ಸುರಕ್ಷತೆಯ ಬಗ್ಗೆ ಆತಂಕಗೊಂಡು ದೂರವಾಣಿ ಕರೆ ಮಾಡಿ ವಿಚಾರಿಸಿದ ಸೋನಿಯಾ ಗಾಂಧಿಯವರ ಕಾಲವೂ ಅಲ್ಲ

ಮತ್ತೆ ಇದು ಯಾವ ಕಾಲ ಎನ್ನುವುದನ್ನು ತಿಳಿದುಕೊಳ್ಳಬೇಕಾದರೆ ಗೂಗಲ್ ಸರ್ಚ್ ಎಂಜಿನ್‌ಗೆ ಚಾಲನೆ ನೀಡಿ ಇತಿಹಾಸದ ದಾರಿಯಲ್ಲಿ ಸ್ವಲ್ಪ ಹಿಂದಕ್ಕೆ ಹೋಗಬೇಕಾಗುತ್ತದೆ. #ಬಾರ್ ಡಾನ್ಸರ್, #ಜರ್ಸಿ ದನ, #ಪಪ್ಪು, #50 ಕೋಟಿ ಪ್ರೇಮಿ, #ನಿದ್ದೆರಾಮಯ್ಯ, #ಬುರುಡೆರಾಮಯ್ಯ ಮೊದಲಾದ ಹ್ಯಾಷ್ ಟ್ಯಾಗ್ ಮೇಲೆ ಬೆರಳು ಒತ್ತಿಬಿಡಿ. ಕಳೆದ 8-10 ವರ್ಷಗಳ 'ಡರ್ಟಿ ಪಾಲಿಟಿಕ್ಸ್'ನ ರೋಚಕ ಇತಿಹಾಸ ನಿಮ್ಮ ಕಣ್ಣೆದುರು ಅನಾವರಣಗೊಳ್ಳುತ್ತದೆ. ಅಹಾ, ಏನು ಭಾಷೆ!, ಏನು ವೇಷ! ನೋಡಲು ಕಣ್ಣೆರಡು ಸಾಲದು ಈ ರೀತಿಯ ರಾಜಕೀಯ ಅಭಿಯಾನಕ್ಕೆ. ಸದ್ಯ ಭಾರತವೇ ವಿಶ್ವಗುರು.

ರಾಜಕೀಯ ಪಕ್ಷಗಳ ಪ್ರಚಾರ ಎಂದರೆ ಸಾರ್ವಜನಿಕ ಸಭೆ, ಸಮಾವೇಶ, ಪೋಸ್ಟರ್, ಗೋಡೆಬರಹ, ಹ್ಯಾಂಡ್ ಬಿಲ್, ಬಾವುಟಗಳಷ್ಟೇ ಎನ್ನುವ ಕಾಲ ಒಂದಿತ್ತು. ನಿಧಾನವಾಗಿ ಅದು ಬದಲಾಗುತ್ತಾ ಬಂತು. ಮೊದಲ ಬಾರಿಗೆ ಭಾರತದ ಚುನಾವಣಾ ಪ್ರಚಾರ ವಿಶಿಷ್ಟ ಪತ್ರಿಕಾ ಜಾಹೀರಾತುಗಳು ಕಾಣಿಸಿಕೊಂಡಿದ್ದು 1989ರ ಕಾಂಗ್ರೆಸ್ ಪಕ್ಷದ ಪ್ರಚಾರದ ಕಾಲದಲ್ಲಿ. ಯಾವಾಗಲೂ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸುತ್ತಿದ್ದ ರಾಜೀವ್ ಗಾಂಧಿ ಪಕ್ಷದ ಚುನಾವಣಾ ಪ್ರಚಾರಕ್ಕಾಗಿ ರಿಡಿಫ್ಯೂಷನ್ ಎಂಬ ಜಾಹೀರಾತು ಕಂಪೆನಿಯನ್ನು ಕರೆತಂದಿದ್ದರು. ಆಗಲೇ 'ಇಂತಹ ಮೈತ್ರಿ ಸರ್ಕಾರ ಬೇಕಿತ್ತಾ' ಎಂಬ ಪ್ರಶ್ನೆಯೊಂದಿಗೆ ಕಾದಾಡುವ ಕೋಳಿಗಳು, ಹೊಗೆಯಾಡುವ ಬಂದೂಕು, ಕಚ್ಚಾಡುವ ಮೊಸಳೆ, ಏಡಿಗಳ ಚಿತ್ರಗಳೊಂದಿಗೆ ಜಾಹೀರಾತುಗಳು ಪ್ರಕಟವಾಗಿದ್ದು. ಆ ಕಾಲದಲ್ಲಿ ಇದರ ವಿರುದ್ಧ ಟೀಕೆಗಳು ಕೇಳಿಬಂದಿದ್ದವು.

1991ರ ಚುನಾವಣೆಯಲ್ಲಿ ರಾಜೀವ್ ಗಾಂಧಿ ಅಂತಹ ಜಾಹೀರಾತುಗಳ ಗೋಜಿಗೆ ಹೋಗಿರಲಿಲ್ಲ. ಒಮ್ಮಿಂದೊಮ್ಮೆಲೇ ರಾಜಕೀಯ ಪ್ರಚಾರದ ರೂಪ, ಬಣ್ಣ, ವಿನ್ಯಾಸಗಳು ಆಘಾತಗೊಳ್ಳುವಷ್ಟು ಬದಲಾಗಿದ್ದು 2013ರ ನಂತರದ ದಿನಗಳಲ್ಲಿ. ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ನರೇಂದ್ರ ಮೋದಿಯವರನ್ನು ಭಾರತೀಯ ಜನತಾ ಪಕ್ಷ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದ ನಂತರ. ಮುಖ್ಯವಾಹಿನಿ ಮಾಧ್ಯಮಗಳ ಬಗ್ಗೆ ಅದರಲ್ಲೂ ಮುಖ್ಯವಾಗಿ ದೆಹಲಿ ಕೇಂದ್ರಿತ 'ಲ್ಯೂಟೆನ್' ಮಾಧ್ಯಮಗಳು ತಮ್ಮ ವಿರುದ್ಧ ಇವೆ ಎಂಬ ಸಿಟ್ಟು ನರೇಂದ್ರ ಮೋದಿಯವರಿಗೆ ಇತ್ತು, ಇದು ನಿಜ ಕೂಡಾ ಆಗಿತ್ತು. ಈ ವಿರೋಧ-ಅಸಹಕಾರವನ್ನು ಪರ್ಯಾಯ ಮಾಧ್ಯಮಗಳ ಮೂಲಕ ಅವರು ಎದುರಿಸಲು ಹೊರಟದ್ದು ಅಪರಾಧ ಅಲ್ಲ. ಆದರೆ, ಮೋದಿಯವರ ಕ್ಯಾಂಪೇನ್ ಮ್ಯಾನೇಜರ್‌ಗಳು ಪರ್ಯಾಯ ಮಾಧ್ಯಮದ ನೆಗೆಟಿವ್ ಶಕ್ತಿಯನ್ನೇ ಬಳಸಿಕೊಳ್ಳಲು ನಿರ್ಧರಿಸಿದ್ದು ಈಗ ಪರಾಕಾಷ್ಠೆಗೆ ಮುಟ್ಟಿರುವ ಕೊಳಕು ರಾಜಕೀಯ ಪ್ರಚಾರ ಶೈಲಿಗೆ ಕಾರಣ.



ಫೇಸ್‌ಬುಕ್, ಟ್ವಿಟರ್, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಮ್ ಮೊದಲಾದ ಸಾಮಾಜಿಕ ಮಾಧ್ಯಮಗಳಲ್ಲಿನ ನೆಗೆಟಿವ್ ಅಂಶಗಳೆಂದರೆ ಮಾಧ್ಯಮಗಳಿಗೆ ಮೂಲಭೂತವಾಗಿ ಇರಬೇಕಾದ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಜವಾಬ್ದಾರಿ ಇಲ್ಲದೆ ಇರುವುದು. ಇದೊಂದು ರೀತಿ ಕತ್ತಲಲ್ಲಿ ಬರೆದು ಓಡಿಹೋಗುವ ಗೋಡೆ ಬರಹಗಳು. ಇದರ ಭಾಗವಾಗಿಯೇ ಫೇಕ್ ನ್ಯೂಸ್, ಫೇಕ್ ಐಡಿ-ಖಾತೆಗಳು, ಟ್ರೋಲ್ ಪೇಜ್‌ಗಳು ಜೊತೆಗೆ ಪೆಯ್ಡ್ ನ್ಯೂಸ್ ಕೂಡಾ ಹುಟ್ಟಿಕೊಂಡದ್ದು. ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಪ್ರಚಾರ ತಂಡ 2014ರಲ್ಲಿ ಮಾಡಿದ್ದ ತಂತ್ರಗಳೆಲ್ಲವೂ ಇಂದು ದಾಖಲಾಗಿವೆ. 2016ರಲ್ಲಿ ಪ್ರಕಟವಾದ ಪತ್ರಕರ್ತೆ ಸ್ವಾತಿ ಚತುರ್ವೇದಿಯವರ 'ಐ ಆ್ಯಮ್ ಟ್ರೋಲ್', ಶ್ಯಾಮ ಶಂಕರ್‌ಸಿಂಗ್ ಅವರು 2019ರಲ್ಲಿ ಬರೆದಿರುವ 'ಹೌ ಟು ವಿನ್ ಆ್ಯನ್ ಇಂಡಿಯನ್ ಎಲೆಕ್ಷನ್', ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ ಅವರ '2014- ಎಲೆಕ್ಷನ್ ದ್ಯಾಟ್ ಚೇಂಜ್ಡ್ ಇಂಡಿಯಾ' ಎಂಬ ಪುಸ್ತಕಗಳಲ್ಲಿ ಬಿಜೆಪಿ ಪ್ರಚಾರದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದವರು ತಮ್ಮ ಬಾಯಿಯಿಂದಲೇ ಒಪ್ಪಿಕೊಂಡಿರುವ ಅನೇಕ ಸತ್ಯಗಳಿವೆ.

ಕಾಲ ಉಲ್ಟಾ ಹೊಡೆದಿದೆ. ಯಾವುದೇ ಉತ್ಪನ್ನಕ್ಕೆ ಎಕ್ಸ್‌ಪೈರಿ ಡೇಟ್ ಎನ್ನುವುದು ಇದ್ದೇ ಇರುತ್ತದೆ. ಬಹುಶಃ ಬಿಜೆಪಿಯ ಪ್ರಚಾರದ ಮೆಷಿನ್‌ಗೂ ಆ ದಿನ ಬಂದಿರುವಂತೆ ಕಾಣುತ್ತಿದೆ. ಇವೆಲ್ಲ ಒಂದು ರೀತಿಯಲ್ಲಿ ಹುಲಿ ಸವಾರಿ, ಕೆಳಗಿಳಿದರೆ ಹುಲಿಗೆ ಆಹಾರವಾಗಬೇಕಾಗುತ್ತದೆ. ಫೇಕ್ ಖಾತೆದಾರರು, ಟ್ರೋಲರ್‌ಗಳು, ಭಕ್ತರು, ಬ್ರಿಗೇಡಿಗಳೆಲ್ಲ ಮನೆಯಲ್ಲಿ ಸಾಕಿದ ಹಸುಗಳಲ್ಲ. ಅವುಗಳು ಕಾಡು ಪ್ರಾಣಿಗಳಿದ್ದ ಹಾಗೆ, ಅವುಗಳನ್ನು ಕಟ್ಟಿಕೊಂಡವರಿಗೂ ನಿಯಂತ್ರಿಸುವುದು ಕಷ್ಟ, ನರೇಂದ್ರ ಮೋದಿ ನೇತೃತ್ವದ ಸರ್ಕಾರ ಫೇಸ್‌ಬುಕ್, ಟ್ವಿಟರ್‌ಗಳನ್ನು ನಿಯಂತ್ರಿಸಲು ಒದ್ದಾಡುತ್ತಿರುವುದು ಇದಕ್ಕೆ ಸಾಕ್ಷಿ.

ಯಾವುದೇ ರಾಜಕೀಯ ಪ್ರಚಾರ ಯಶಸ್ವಿಯಾಗಬೇಕಾದರೆ ಪ್ರಚಾರದ ವಸ್ತುವಿನ ಜೊತೆ ಜನ ತಮ್ಮನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಅಣ್ಣಾ ಹಜಾರೆ ನೇತೃತ್ವದ ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾಲದಲ್ಲಿ ಜನ ಹೀಗೆ ಗುರುತಿಸಿಕೊಂಡಿದ್ದರು. ಕರ್ನಾಟಕದಲ್ಲಿ ಈಗ ಅಂತಹದ್ದೇ ವಾತಾವರಣ ಸೃಷ್ಟಿಯಾಗಿದೆ. ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೈಫಲ್ಯದ ಬಲಿಪಶುಗಳು ಎಂಬ ಅಭಿಪ್ರಾಯ ಜನರ ಮನಸ್ಸಲ್ಲಿದೆ. ಇದು 'ಪೇಸಿಎಂ' ಅಭಿಯಾನದ ಯಶಸ್ಸಿಗೆ ಒಂದು ಕಾರಣವಾದರೆ ಈ ಪ್ರಚಾರದಲ್ಲಿನ ವಿನೂತನ ಸೃಜನಶೀಲತೆ ಜನರ ಗಮನ ಸೆಳೆದಂತಿದೆ.

ಇಂದು ಗಾಯ ನೆಕ್ಕುತ್ತಾ ಕೂತಿರುವ ಭಾರತೀಯ ಜನತಾ ಪಕ್ಷದ ನಾಯಕರಿಗೆ ತಮ್ಮಿಂದಾಗಿ ಇತರರ ಎದೆಯ ಮೇಲೆ ಆಗಿರುವ ಹಸಿ ಗಾಯದ ಅರಿವಿಲ್ಲ. ರಾಜಕೀಯವಾದ 'ತೂ ತೂ ಮೈ ಮೈ' ಬಿಟ್ಟು ಬಿಡಿ. ಸೋನಿಯಾ ಗಾಂಧಿ ಪ್ರಧಾನಿಯಾದರೆ ತಲೆಬೋಳಿಸಿಕೊಳ್ಳುತ್ತೇನೆ ಎಂದು ವೈಯಕ್ತಿಕ ಮಟ್ಟಕ್ಕೆ ಇಳಿದು ಸುಷ್ಮಾ ಸ್ವರಾಜ್ ಲೇವಡಿ ಮಾಡಿದಾಗ, ಸಿದ್ದರಾಮಯ್ಯನವರ ಮಗನ ಸಾವನ್ನೂ ಟ್ರೋಲ್ ಮಾಡಿದಾಗ ಬಿಜೆಪಿಯಲ್ಲಿರುವ ಯಾವನಾದರೂ ಸಜ್ಜನ ನಾಯಕ ಎದ್ದು ನಿಂತು ಇದು ತಪ್ಪು ಎಂದು ಹೇಳಿದ ಒಂದೇ ಒಂದು ಉದಾಹರಣೆಯನ್ನು ಯಾರಾದರೂ ಕೊಡಲು ಸಾಧ್ಯವೇ?

ಹಾಗೆ ಮಾಡಿದ್ದರೆ ತಮ್ಮ ವಿರುದ್ಧದ 'ಪೇಸಿಎಂ' ಅಂತಹ ಪ್ರಚಾರವನ್ನು 'ಡರ್ಟಿ ಪಾಲಿಟಿಕ್ಸ್' ಎಂದು ಟೀಕಿಸುವ ನೈತಿಕತೆ ಬಿಜೆಪಿಯವರಿಗೆ ಇರುತ್ತಿತ್ತು. ಎದುರಾಳಿಯ ಮೈ ಮೇಲೆ ಬಟ್ಟೆ ಇಲ್ಲ ಎಂದು ದೂರುವವರ ಮೈಯಲ್ಲಿ ಲಂಗೋಟಿಯೂ ಇಲ್ಲ ಎನ್ನುವಂತಾಗಿದೆ ಇಂದಿನ ಸ್ಥಿತಿ.

ಲೇಖಕ: ಪತ್ರಕರ್ತ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 239

ಶಿವನ ಮನ ಗೆದ್ದ ಪಾರ್ವತಿ

ಶಿವನನ್ನು ಸಮರ್ಥಿಸಿ ಮಾತಾಡಿದ ಪಾರ್ವತಿಯು ವೃದ್ಧವೇಷಧಾರಿಯಾದ ರುದ್ರನಿಗೆ ಮತ್ತಷ್ಟು ಚುರುಕು ಮುಟ್ಟಿಸುತ್ತಾಳೆ. 'ದುರಾಚಾರಿಗಳಾದವರು ಶಿವನ ಸ್ವರೂಪವನ್ನು ತಿಳಿಯಲಾರರು. ಶಿವನಿಂದನೆ ಮಾಡಿದರೆ ಜನ್ಮಜನ್ಮಾಂತರಗಳ ಪುಣ್ಯವೆಲ್ಲವೂ ನಾಶವಾಗುವುದು. ನಿನ್ನಂತಹ ಶಿವದ್ವೇಷಿಯನ್ನು ನೋಡಿದರೆ ಪಾಪ ಬರುತ್ತದೆ. ಎಲೈ ದುಷ್ಟ ಸನ್ಯಾಸಿಯೇ, ಶಂಕರನನ್ನು ನಾನು ಚೆನ್ನಾಗಿ ಬಲ್ಲೆ. ಆದಿಪುರುಷನಾದ ಶಿವನನ್ನು ನೀನು ಸರಿಯಾಗಿ ತಿಳಿದಿಲ್ಲ. ಅವನು ಹೇಗೇ ಇರಲಿ, ಎಂತಹ ರೂಪವುಳ್ಳವನಾಗಲಿ, ಅವನೇ ನನಗೆ ಬೇಕಾದವನು. ಅವನಿಗೆ ಯಾವ ವಿಕಾರಗಳು ಇಲ್ಲ. ವಿಷ್ಣುಬ್ರಹ್ಮರೂ ಶಿವನಿಗೆ ಸರಿಸಮರಲ್ಲ' ಎಂದ ಗಿರಿಜೆ ಮತ್ತೆ ಶಿವನನ್ನು ಧ್ಯಾನಿಸುತ್ತಾ ಕುಳಿತಳು.

ಗಿರಿಜೆಯ ಮಾತುಗಳನ್ನು ಕೇಳಿದ ವೃದ್ಧಬ್ರಹ್ಮಚಾರಿ ಮತ್ತೆ ಏನೋ ಹೇಳಲು ಉದ್ಯುಕ್ತನಾದ. ಶಿವನಿಂದೆಯನ್ನು ಮತ್ತೆ ಕೇಳಲು ಇಷ್ಟವಿಲ್ಲದ ಪಾರ್ವತಿ, ಅವನು ಮಾತಾಡದಂತೆ ತನ್ನ ಸಖಿ ವಿಜಯೆಯ ಮೂಲಕ ತಡೆದಳು. ನಂತರ ತನ್ನ ಸಖಿಯನ್ನುದ್ದೇಶಿಸಿ, 'ಶಿವನಿಂದನೆಯನ್ನು ಮಾಡುವವನಿಗೆ ಮಾತ್ರ ಪಾಪಬರುವುದಿಲ್ಲ. ಆ ಶಿವನಿಂದನೆಯನ್ನು ಕೇಳುವವನಿಗೂ ಪಾಪ ಬರುತ್ತದೆ. ಆದ್ದರಿಂದ ಈ ದುಷ್ಟ ಮತ್ತೆ ಶಿವನಿಂದನೆ ಮಾಡುವ ಮೊದಲು, ನಾವು ಈ ಸ್ಥಳದಿಂದ ಬೇರೆ ಕಡೆಗೆ ತೆರಳೋಣ. ಈ ಮೂರ್ಖ ಮುದುಕನೊಡನೆ ನಾನು ಮತ್ತೆ ಮಾತನಾಡಲಿಚ್ಛಿಸುವುದಿಲ್ಲ' ಎಂದಳು.

ಹೀಗೆ ಹೇಳಿದ ಗಿರಿಜೆ ಅಲ್ಲಿಂದ ಹೊರಡಲು ಒಂದು ಹೆಜ್ಜೆ ಮುಂದಿಟ್ಟಳು. ಆ ಕೂಡಲೇ ಶಿವ ಅವಳ ಕೈಯನ್ನು ಹಿಡಿದ. ಆಗ ಗಿರಿಜೆಗೆ ಮತ್ತಷ್ಟು ಕೋಪ ಉಕ್ಕಿತು. ಪಾರ್ವತಿಯನ್ನು ಮತ್ತಷ್ಟು ಪರೀಕ್ಷಿಸಲು ಇಷ್ಟಪಡದ ಶಿವ ತನ್ನ ವೇಷವನ್ನು ಕಳಚಿ, ಸಹಜ ಸುಂದರರೂಪವನ್ನು ಧರಿಸಿದ. ಪಾರ್ವತಿ ತನ್ನ ಮನಸ್ಸಿನಲ್ಲಿ ಸದಾ ಕಲ್ಪಿಸಿಕೊಂಡು ಧ್ಯಾನಿಸುತ್ತಿದ್ದ ಶಿವ ಪ್ರತ್ಯಕ್ಷನಾಗಿದ್ದು ಕಂಡು ರೋಮಾಂಚಿತಳಾದಳು. ಶಿವನನ್ನು ನೋಡಿ ಗಿರಿಜೆಯು ನಾಚಿಕೆಯಿಂದ ತಲೆಯನ್ನು ಬಗ್ಗಿಸಿ ನಿಂತಳು.

ಆಗ ಶಿವ ಹೇಳಿದ 'ಗಿರಿಜೆ, ನನ್ನನ್ನು ಬಿಟ್ಟು ಎಲ್ಲಿಗೆ ಹೋಗುವೆ? ಇನ್ನೆಂದೂ ನಿನ್ನನ್ನು ಬಿಡಲಾರೆ. ನೀನು ತಪಸ್ಸಿನಿಂದಲೂ, ಸೌಂದರ್ಯದಿಂದಲೂ ನನ್ನನ್ನು ಗೆದ್ದುಬಿಟ್ಟಿರುವೆ. ನೀನು ನನ್ನ ಅನಾದಿಪತ್ನಿ. ಹೀಗಿರುವಾಗ ಲಜ್ಜೆ ಏಕೆ ಪಡುವೆ?. ಸೂಕ್ಷ್ಮಬುದ್ಧಿಯಿಂದ ವಿಚಾರಮಾಡು. ಆಗ ನಾನು ಹೇಳಿದುದರ ನಿಜಾಂಶವು ತಿಳಿಯುವುದು. ಲೋಕಲೀಲೆಯನ್ನ ಅನುಸರಿಸಿ ನಿನ್ನನ್ನು ಬಹುವಿಧವಾಗಿ ಪರೀಕ್ಷಿಸಿದೆ. ಆದರೂ ಸ್ಥಿರಮನಸ್ಸಿನವಳಾದ ನೀನು ನಿನ್ನ ಪ್ರತಿಜ್ಞೆಯನ್ನು ಬಿಡಲಿಲ್ಲ. ನನಗೆ ನಿನ್ನಷ್ಟು ಪ್ರೀತಪಾತ್ರಳಾದವಳು ಮೂರು ಲೋಕಗಳಲ್ಲಿ ಯಾರೂ ಇಲ್ಲ. ಸರ್ವವಿಧದಿಂದಲೂ ನಾನು ನಿನ್ನ ಅಧೀನನು. ಎಲೈ ಪ್ರಿಯೆ, ನನ್ನ ಬಳಿಗೆ ಬಾ. ನೀನು ನನ್ನ ಪತ್ನಿಯು. ನಾನು ನಿನ್ನ ವರನು. ನಿನ್ನೊಡನೆ ಈ ಕೂಡಲೇ ನನ್ನ ಸ್ಥಾನವಾದ ಕೈಲಾಸಕ್ಕೆ ತೆರಳುವೆನು' ಎಂದು ಮಹಾದೇವನು ಹೇಳಿದಾಗ ಪಾರ್ವತಿಯು ತುಂಬಾ ಹರ್ಷೋಲ್ಲಾಸದಿಂದ ಬೀಗಿದಳು. ಆ ಕೂಡಲೇ ಅವಳಿಗೆ ತಪಸ್ಸಿನಿಂದುಂಟಾದ ಕ್ಲೇಶವು ಮಾಯವಾಯಿತು. ಗಿರಿಜೆ ಪಟ್ಟ ಪರಿಶ್ರಮವೆಲ್ಲವೂ ಸಾರ್ಥಕವಾಯಿತು ಎಂಬಲ್ಲಿಗೆ ಶ್ರೀಶಿವಮಹಾಪುರಾಣದ ರುದ್ರಸಂಹಿತೆಯ ಮೂರನೇ ಖಂಡವಾದ ಪಾರ್ವತೀಖಂಡದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

ಕಾಂಗ್ರೆಸ್ ಮಾತು ಭೂತದ ಬಾಯಲ್ಲಿ ಭಗವದ್ಗೀತೆ

• ಡಾ.ಕೆ.ಸುಧಾಕರ್

ಒಂದು ವೇಳೆ, ಕಾಂಗ್ರೆಸ್‌ಗೆ ಇದು ನಿಜವಾದ ಜನರ ಸಮಸ್ಯೆ ಎಂದೇ ಅನಿಸುತ್ತಿದ್ದರೆ, ಈ ಬಗ್ಗೆ ದೂರು ನೀಡುವ ಅಥವಾ ನೀಡಲಾಗುತ್ತಿದೆ ಎನ್ನಲಾಗುವ ಕಮಿಶನ್ ತಡೆಯುವಂತಹ ಕ್ರಮಗಳನ್ನು ಕೈಗೊಳ್ಳಬಹುದಿತ್ತು. ಆದರೆ ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ, ಇದು ಭ್ರಷ್ಟ ಸರ್ಕಾರ ಎಂದು ಜನತೆಯ ಮುಂದೆ ಬಿಂಬಿಸಲು ಕಾಂಗ್ರೆಸ್ ಪಕ್ಷ ಸಿದ್ಧತೆ ಮಾಡಿಕೊಂಡಿದೆ

ಬಡವರ ಕಲ್ಯಾಣ ಮತ್ತು ಬಡತನ ನಿರ್ಮೂಲನೆಗೆ ನಾವು ಒಂದು ರೂಪಾಯಿ ಖರ್ಚು ಮಾಡಿದರೆ ನಿಜವಾದ ಫಲಾನುಭವಿಗಳಿಗೆ 10 ಪೈಸೆ ಮಾತ್ರ ಸೇರುತ್ತದೆ ಎಂದು 1980ರ ದಶಕದಲ್ಲಿ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿ ಹೇಳಿದ್ದರು. ಇತ್ತೀಚೆಗೆ, ನ್ಯಾಷನಲ್ ಹೆರಾಲ್ಡ್ ಭ್ರಷ್ಟಾಚಾರ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು ಕಾಂಗ್ರೆಸ್ ಮುಖ್ಯಸ್ಥೆ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ವಿಚಾರಣೆ ನಡೆಸುತ್ತಿದ್ದಾಗ ಅದನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಬೀದಿಗಿಳಿದಿದ್ದರು. ಆಗ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರು 'ನೆಹರೂ-ಗಾಂಧಿ ಕುಟುಂಬದ ಹೆಸರಿನಲ್ಲಿ ನಾವೆಲ್ಲರೂ ಮೂರು ತಲೆಮಾರುಗಳಿಗಾಗುವಷ್ಟು ಮಾಡಿಕೊಂಡಿದ್ದೇವೆ, ಈಗ ಅವರ ಪರ ನಿಲ್ಲದಿದ್ದರೆ ನಾವು ತಿನ್ನುವ ಅನ್ನದಲ್ಲಿ ಹುಳು ಬೀಳುತ್ತೆ' ಎಂದು ಹೇಳಿದ್ದರು.

ರಾಜೀವ್ ಗಾಂಧಿ ಅವರ ಪ್ರಾಮಾಣಿಕ ತಪ್ಪೊಪ್ಪಿಗೆ, ಉಪ್ಪಿನ ಋಣ ತೀರಿಸಲು ರಮೇಶ್ ಕುಮಾರ್ ಅವರ ಭಾವನಾತ್ಮಕ ಕರೆ ಈ ಎರಡನ್ನೂ ತಾಳೆ ಹಾಕಿ ನೋಡಿದರೆ ರಾಜೀವ್ ಗಾಂಧಿ ಅವರು ಹೇಳಿದಂತೆ ಕಾಂಗ್ರೆಸ್ ಪಕ್ಷ 60 ವರ್ಷ 90 ಪರ್ಸೆಂಟ್ ಸರ್ಕಾರ ನಡೆಸಿದ್ದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಸ್ಪಷ್ಟವಾಗುತ್ತದೆ.

ಕಾಂಗ್ರೆಸ್‌ನ ಭ್ರಷ್ಟ ಭಾಗ್ಯಕ್ಕೆ ಬ್ರೇಕ್: ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಂದ ಮೇಲೆ ಜನ್ ಧನ್ ಖಾತೆ, ಆಧಾರ್, ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡುವ ಮೂಲಕ (JAM) ಬಡವರಿಗೆ ಸೇರಬೇಕಾದ ಪ್ರತಿಯೊಂದು ಪೈಸೆಯೂ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಬಂದು ಬೀಳುವಂತೆ ಮಾಡಲಾಗಿದೆ. ಕಾಂಗ್ರೆಸ್ ಪಕ್ಷದ 60 ವರ್ಷಗಳ 90 ಪರ್ಸೆಂಟ್ ಭ್ರಷ್ಟ ಭಾಗ್ಯಕ್ಕೆ ಬ್ರೇಕ್ ಹಾಕಿದ್ದೇ ಇದರ ಹಿಂದಿರುವ ಯುಪಿಐ ವ್ಯವಸ್ಥೆ.

ರಾಜ್ಯದ ರಾಜಕೀಯ ಇತಿಹಾಸ ನೋಡಿದರೆ, ಮೌಲ್ಯಾದರ್ಶಗಳ ಸಾಕಾರದಂತಿದ್ದ ರಾಜಕಾರಣಿಗಳು, ಅವರ ಜನ ಕಾಳಜಿಯ ಬದ್ಧತೆಯ ನೋಟಗಳೇ ದೊರೆಯುತ್ತವೆ. ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ್ದ ಭವ್ಯ ವಿಧಾನಸೌಧ ಹಾಗೂ ಅದರಲ್ಲಿನ 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಘೋಷವಾಕ್ಯ ನಾಡಿನ ರಾಜಕೀಯದ ಮೌಲ್ಯಾದರ್ಶಗಳನ್ನು ಜಗತ್ತಿಗೆ ಸಾರುತ್ತದೆ. ಇಂತಹ ಆದರ್ಶಗಳನ್ನೇ ಬುನಾದಿಯಾಗಿ ಇಟ್ಟುಕೊಂಡು ಬೆಳೆದಿರುವ ರಾಜಕೀಯ ಪಕ್ಷವು ಈಗ 'ಪೇಸಿಎಂ' ಎಂಬ ಕೆಳಮಟ್ಟದ ರಾಜಕೀಯ ಅಭಿಯಾನದೊಂದಿಗೆ ಅಧೋಗತಿಗೆ ಸಾಗಿದೆ.

60 ವರ್ಷ ದೇಶದ ಆಡಳಿತ ನಡೆಸಿದ ಕಾಂಗ್ರೆಸ್‌ಗೆ ಈಗ ಎಲ್ಲೆಡೆ ಅಧಿಕಾರ 'ಕೈ' ತಪ್ಪುತ್ತಿದೆ. ಈ ಹೊತ್ತಿನಲ್ಲಿ ಈ ಅನೈತಿಕ ಮಾರ್ಗವನ್ನು ಹತಾಶ ಕಾಂಗ್ರೆಸ್ ನಾಯಕರು ತುಳಿದಿದ್ದಾರೆ. ಜನರು ಅತಿ ಹೆಚ್ಚಾಗಿ ಬಳಸುವ ಹಣ ಪಾವತಿಯ ಆ್ಯಪ್ ಬಳಸಿಕೊಂಡೇ ನೀಚ ಮಟ್ಟದ ಸೃಜನ ಶೀಲತೆ ತೋರಿಸುವ ಹಪಾಹಪಿಗೆ ಅವರು ಬಿದ್ದಿದ್ದಾರೆ.

ಇಷ್ಟೇ ಅಲ್ಲದೆ, 'ಪೇಸಿಎಂ' ಪೋಸ್ಟರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸುವ ಮೂಲಕ ರಾಜ್ಯ ರಾಜಕೀಯದ ಘನತೆಯನ್ನು ಇನ್ನಷ್ಟು ಕೆಳಮಟ್ಟಕ್ಕೆ ತರಲಾಗಿದೆ. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಂತಹ ಹಿರಿಯ ನಾಯಕರು ಬೀದಿಯಲ್ಲಿ ನಿಂತು ಪೋಸ್ಟರ್ ಅಂಟಿಸುವ ಮಟ್ಟಕ್ಕೆ ಇಳಿದಿದ್ದು, ರಾಜಕೀಯದ ಅಧಃಪತನಕ್ಕೆ ಸಾಕ್ಷಿ.

ಶೇ 40 ಕಮಿಶನ್- ಗಾಳಿಯಲ್ಲಿ ಗುಂಡು: ಇವೆಲ್ಲ ವಿವಾದಗಳು ಆರಂಭವಾಗಿದ್ದು, ಕಾಂಗ್ರೆಸ್ ಕೃಪಾಪೋಷಿತರಾಗಿದ್ದ ಕೆಲ ಗುತ್ತಿಗೆದಾರರಿಂದ. ಗುತ್ತಿಗೆದಾರರು ಆರಂಭದಲ್ಲಿ ಶೇ 40ರಷ್ಟು ಕಮಿಶನ್ ಅನ್ನು ಸಚಿವರು ಪಡೆಯುತ್ತಿದ್ದಾರೆ ಎಂದು ಆರೋಪ ಮಾಡಿದಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಖುದ್ದಾಗಿ ಇದರ ಬಗ್ಗೆ ಗಮನ ಹರಿಸಿದರು. ಗುತ್ತಿಗೆದಾರರನ್ನು ಕರೆಯಿಸಿ ಅವರೊಂದಿಗೆ ಸಭೆ ನಡೆಸಿ ಅಹವಾಲುಗಳನ್ನು ಆಲಿಸಿದರು. ಜೊತೆಗೆ ಟೆಂಡರ್ ಪರಿಶೀಲನೆಗೆ ಎರಡು ಸಮಿತಿಗಳನ್ನು ರಚಿಸಿದರು. ಸ್ವಯಂಚಾಲಿತವಾಗಿಯೇ ಬಿಲ್ ಬರುವ ವ್ಯವಸ್ಥೆ ಮಾಡಿದರು. ಜೊತೆಗೆ, ಟೆಂಡರ್‌ನಲ್ಲಿ ಅಕ್ರಮ ಕಂಡರೆ ಕೂಡಲೇ ಕ್ರಮ ಕೈಗೊಳ್ಳುವುದಾಗಿಯೂ ತಿಳಿಸಿದ್ದಾರೆ.

ಇಷ್ಟೆಲ್ಲ ಕ್ರಮ ವಹಿಸಿದ ನಂತರವೂ 'ಪೇಸಿಎಂ' ಅಭಿಯಾನದ ಮೂಲಕ ಕಾಂಗ್ರೆಸ್ ತನ್ನ ಮಾನವನ್ನೇ ಹರಾಜು ಹಾಕಿಕೊಳ್ಳುತ್ತಿದೆ.

ಇಷ್ಟೆಲ್ಲ ಆರೋಪಗಳನ್ನು ಮಾಡಿದರೂ ಶೇ 40ರಷ್ಟು ಕಮಿಶನ್ ಪಡೆಯುತ್ತಿರುವ ಕುರಿತು ಯಾವುದೇ ದಾಖಲೆ ಲಭ್ಯವಿಲ್ಲ. ಈ ಕುರಿತು ಲೋಕಾಯುಕ್ತದಲ್ಲೂ ದೂರು ದಾಖಲಿಸಬಹುದು. ಆದರೆ ಈವರೆಗೆ ದೂರುಗಳು ದಾಖಲಾಗಿಲ್ಲ. ಇದನ್ನು ಯಾವುದೇ ತಾರ್ಕಿಕ ಅಂತ್ಯಕ್ಕೆ ಒಯ್ಯದೆ, ರಾಜಕೀಯವಾಗಿ ಬಳಸಿಕೊಂಡು ಜನರ ಮುಂದೆ ಬಿಜೆಪಿ ಸರ್ಕಾರಕ್ಕೆ ಮಸಿ ಹಾಗೂ ಸಿಎಂ ಬಸವರಾಜ ಬೊಮ್ಮಾಯಿ ಅವರ ಘನತೆಗೆ ಕುಂದು ತರುವ ಷಡ್ಯಂತ್ರ ಮಾಡಲಾಗಿದೆ.

ಒಂದು ವೇಳೆ, ಕಾಂಗ್ರೆಸ್‌ಗೆ ಇದು ನಿಜವಾದ ಜನರ ಸಮಸ್ಯೆ ಎಂದೇ ಅನಿಸುತ್ತಿದ್ದರೆ, ಈ ಬಗ್ಗೆ ದೂರು ನೀಡುವ ಅಥವಾ ನೀಡಲಾಗುತ್ತಿದೆ ಎನ್ನಲಾಗುವ ಕಮಿಶನ್ ತಡೆಯುವಂತಹ ಕ್ರಮಗಳನ್ನು ಕೈಗೊಳ್ಳಬಹುದಿತ್ತು. ಆದರೆ ಚುನಾವಣೆ ಹತ್ತಿರ ಬರುತ್ತಿದ್ದಂತೆಯೇ, ಇದು ಭ್ರಷ್ಟ ಸರ್ಕಾರ ಎಂದು ಜನತೆಯ ಮುಂದೆ ಬಿಂಬಿಸಲು ಕಾಂಗ್ರೆಸ್ ಪಕ್ಷ ಸಿದ್ಧತೆ ಮಾಡಿಕೊಂಡಿದೆ.

ಒಂದು ವೇಳೆ ಕಮಿಶನ್ ದಂಧೆ ನಿಜವಾಗಿಯೂ ಇದ್ದಲ್ಲಿ, ಅದನ್ನು ತಡೆಗಟ್ಟುವ ಮನಸ್ಸು ಕಾಂಗ್ರೆಸ್‌ಗೆ ಇಲ್ಲ ಎಂಬುದು ಇಲ್ಲೇ ಸಾಬೀತಾಗಿದೆ. ಹಾಗಾದರೆ ಈ ಅಭಿಯಾನದ ನೈಜ ಉದ್ದೇಶ ಏನು ಎಂದು ನೋಡಲು ಹೊರಟರೆ, ಕಾಣುವುದು ಒಂದು ಸಮುದಾಯವನ್ನು ಟಾರ್ಗೆಟ್ ಮಾಡುತ್ತಿರುವ ಪ್ರಯತ್ನ ಮಾತ್ರ.

ಸಮುದಾಯಗಳ ವಿರುದ್ಧ ಕುತಂತ್ರ: ಲಿಂಗಾಯತ, ಒಕ್ಕಲಿಗ ಅಥವಾ ದಲಿತ ಸಮುದಾಯವನ್ನು ಯಾವುದೇ ಕಾರಣಕ್ಕೂ ಅಧಿಕಾರದಲ್ಲಿ ಇರಲು ಬಿಡಬಾರದು ಎಂಬುದೇ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳು. ರಾಜಕೀಯದ ಇತಿಹಾಸವನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ನಾಡಿನ ಹೆಮ್ಮೆಯ ಮಣ್ಣಿನ ಮಗ, ಎಚ್.ಡಿ.ದೇವೇಗೌಡರು ಪ್ರಧಾನಿಯಾದಾಗ ಅವರ ಸಮುದಾಯದ ಹಿನ್ನೆಲೆಯನ್ನು ಗಮನಿಸಿ ಸಹಿಸಲಾರದೆ ಆ ಸ್ಥಾನದಿಂದ ಅವರನ್ನು ಕೆಳಕ್ಕಿಳಿಸಲಾಯಿತು. ಇದಕ್ಕೆ ರಾಜಕೀಯದ ಬಿರುಗಾಳಿ ಕಾರಣ ಎಂದು ತೇಪೆ ಹಚ್ಚಲಾಯಿತು. ಆದರೆ ಈವರೆಗೂ ಕಾಂಗ್ರೆಸ್ ಈ ಬಗ್ಗೆ ಉತ್ತರ ನೀಡಿಲ್ಲ. ಇಷ್ಟೇ ಅಲ್ಲದೆ, ಪಿ.ವಿ.ನರಸಿಂಹರಾವ್, ರಾಜಶೇಖರಮೂರ್ತಿ, ಎಸ್.ನಿಜಲಿಂಗಪ್ಪ, ಎಸ್.ಎಂ.ಕೃಷ್ಣ ಮೊದಲಾದ ನಾಯಕರಿಗೆ ಕಾಂಗ್ರೆಸ್ ಯಾವ ರೀತಿಯ ಅನ್ಯಾಯ ಮಾಡಿದೆ ಎಂಬುದು ಕೂಡ ಇತಿಹಾಸದಲ್ಲಿ ದಾಖಲಾಗಿದೆ.

ಅರಸು ಅವರು ಮುಖ್ಯಮಂತ್ರಿಯಾಗಿದ್ದಾಗಲೇ, ಹಿರಿಯರಾದ ಗುಂಡೂರಾವ್ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದ ಇಂದಿರಾ ಗಾಂಧಿ, 'ನೀವೇ ಸಿಎಂ' ಎಂದಿದ್ದರು. ಇದೇ ಮಾದರಿಯಲ್ಲಿ ವೀರೇಂದ್ರ ಪಾಟೀಲ ಅವರನ್ನೂ ಮುಖ್ಯಮಂತ್ರಿ ಸ್ಥಾನದಿಂದ ಏಕಾಏಕಿ ಕಿತ್ತು ಹಾಕಲಾಗಿತ್ತು. ಲಿಂಗಾಯತ, ಒಕ್ಕಲಿಗ, ದಲಿತ ಎಂಬ ಯಾವುದೇ ಮುಲಾಜಿಲ್ಲದೆ, ಸಮುದಾಯಗಳನ್ನು ಗುರಿ ಪಡಿಸಿ ಒಂದು ಕುಟುಂಬದಲ್ಲಿ ಮಾತ್ರ ಅಧಿಕಾರ ಕೇಂದ್ರೀಕೃತವಾಗಿರಿಸುವ ಪ್ರಯತ್ನಗಳನ್ನು ಕಾಂಗ್ರೆಸ್ ನಿರಂತರವಾಗಿ ಮಾಡುತ್ತದೆ.

ಹೋರಾಟಗಾರರು ಬೇಲ್‌ನಲ್ಲಿದ್ದಾರೆ!: ವಿಪರ್ಯಾಸ ಏನೆಂದರೆ, ಕಮಿಶನ್ ವಿರುದ್ಧ ಹೋರಾಡುತ್ತಿರುವ ಅನೇಕ ಕಾಂಗ್ರೆಸ್ ನಾಯಕರು ಹಲವು ಪ್ರಕರಣಗಳಲ್ಲಿ ಜಾಮೀನು ಪಡೆದು ಹೊರಗೆ ಬಂದಿದ್ದಾರೆ. ಇನ್ನೂ ಕೆಲ ಯುವ ನಾಯಕರು, ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಗಳಾಗಿ ಈಗ ಸಜ್ಜನರಂತೆ ಹೋರಾಟಗಾರರಾಗಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯನವರು ಅಧಿಕಾರದಲ್ಲಿದ್ದಾಗ, ಲೋಕಾಯುಕ್ತ ಸಂಸ್ಥೆಯಿಂದ ಪೊಲೀಸ್ ಬಲವನ್ನು ರಾತ್ರೋರಾತ್ರಿ ಕಿತ್ತುಕೊಂಡು, ಎಸಿಬಿ ರಚಿಸಿ ಭ್ರಷ್ಟಾಚಾರಕ್ಕೆ ನೀರೆರೆದ ಇತಿಹಾಸವನ್ನು ಜನರು ಮರೆತಿಲ್ಲ. ಇಂತಹ ನಾಯಕರು ಈಗ ಭ್ರಷ್ಟಾಚಾರದ ವಿರುದ್ಧ ರಣಕಹಳೆ ಮೊಳಗಿಸಿ ಹೋರಾಟ ಮಾಡುತ್ತಿರುವುದು ರಾಜಕೀಯದ ಅಣಕವಲ್ಲದೆ ಮತ್ತೇನು!

ಇಷ್ಟಾದರೂ 'ಪೇಸಿಎಂ' ಅಭಿಯಾನಕ್ಕೆ ಸಾಮಾನ್ಯ ಜನರಿಂದ ಸೂಕ್ತ ಸ್ಪಂದನೆ ದೊರೆತಿಲ್ಲ. ಕಾಂಗ್ರೆಸ್ ಕಾರ್ಯಕರ್ತರನ್ನು ಕ್ರಿಯಾಶೀಲವಾಗಿಸಲು ಹಾಗೂ ಒಡೆದು ಚೂರಾಗುತ್ತಿರುವ ಪಕ್ಷವನ್ನು ಕಟ್ಟಲು ಐಷಾರಾಮಿ ವಾಹನದಲ್ಲಿ ಐಕ್ಯತೆಯ ಯಾತ್ರೆ ಮಾಡುತ್ತಿರುವ ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು ಕೂಡ ಈ ಅಭಿಯಾನ ವಿಫಲವಾಗಿದೆ.

ಲೇಖಕ: ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ, ಕರ್ನಾಟಕ ಸರ್ಕಾರ

ಪದಬಂಧ 5096

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಇದು ಪುಷ್ಪದ ಪಲ್ಲಂಗ (3)
3. ಲೋಪದೋಷಗಳನ್ನು ಸರಿಪಡಿಸುವವನು (4)
5. ಘಟಾನುಘಟಿ ಹಿಡಿದಿರುವ ಮಡಕೆ (2)
6. ಮೊದಲು ಬೆಲೆಯಿಟ್ಟರೂ ಈತ ಯಾರೂ ದಿಕ್ಕಿಲ್ಲದವನು (4)
7. ನಿಷೇಧಿಸಿರುವ ಪ್ರದೇಶಕ್ಕೆ ಪ್ರವೇಶ ಮಾಡುವುದು (7)
10. ಇದು ಹೂವಿನ ಶರ (4)
11. ಶುನಕದ ಹತ್ತಿರವಿರುವ ಗಿಳಿ (2)
13. ಲಕ್ಷಿಸಲು ಯೋಗ್ಯವಾದುದು (4)
14. ತಿರುಗಿದಾಗ ಕಾಣಿಸಿದ ಜಾತ್ರೆ (3)

ಮೇಲಿಂದ ಕೆಳಕ್ಕೆ

1. ಹೂದೋಟದಲ್ಲಿ ಹೂಡಿದ ಯುಕ್ತಿ! (2)
2. ಇದು ನಿಸ್ಸಾರವಾದುದು (3)
4. ಉಪಾಧ್ಯಾಯ ಇಲ್ಲಿ ತಿರುಗಿದ್ದಾನಲ್ಲಾ? (3)
5. ಪಾಪರಹಿತ ವ್ಯಕ್ತಿ ತಿರುಗಿ ನಿಂತಿದ್ದಾನೆ (3)
6. ತಪ್ಪು ಇಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)
8. ಹಂತ ಹಂತವಾಗಿ ಎಂದು ಹೀಗೆನ್ನಿ (3)
9. ನೂರು ಎಂದು ಈ ರೀತಿ ಹೇಳಿ (3)
10. ಒಳ್ಳೆಯ ಅದೃಷ್ಟ (3)
11. ಸೇವೆ ಇಲ್ಲಿ ಕಾಣುತ್ತಿದೆ (3)
12. ಸಿಟ್ಟು ಈ ರೀತಿ ವ್ಯಕ್ತವಾಗಿದೆಯಲ್ಲಾ? (2)



5095ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಜಾಮತಿ
3.ಸಮಾರೋಪ
5.ಲಕೋಟೆ 7.ಕುರು
9.ರವಿ 11.ನಾಕ
12.ವನ 14.ಆನನ
16.ತಳಹದಿ 17.ದಿಗಂಬರ

ಮೇಲಿಂದ ಕೆಳಕ್ಕೆ:
1.ಹಲಾಕು 2.ತಿಲ
3.ಸಟೆ 4.ಪದವಿ
6.ಕೋವಿದ 8.ರುದ್ರನಾಟಕ
9.ರಜತೋತ್ಸವ
10.ಕದನ 11.ನಾಪಿತ
13.ನಶ್ವರ 14.ಆದಿ
15.ನದಿ

ಸುಡೊಕು 5482

7				1			8	2
	3	6	8		9	5		7
4			7				9	
	7							8
		4	9	3	8		7	1
8		1						
	8						4	
1		2		8		7		3
	4		1		7		2	

5481ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಅಕ್ಟೋಬರ್ 1, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಷಷ್ಠಿ ಗಂ. 20-47 ನಕ್ಷತ್ರ: ಜ್ಯೇಷ್ಠ ಗಂ. 27-11 ಯೋಗ: ಆಯುಷ್ಮಾನ್ ಗಂ. 19-58, ಕರಣ: ಕೌಲವ ಗಂ. 09-43, ಕನ್ಯಾ ಮಾಸದ 14 ನೇ ದಿನ.ರಾಹುಕಾಲ : ಬೆಳಿಗ್ಗೆ 09:00 – 10:30
ಸೂರ್ಯೋದಯ : 06-23 ಸೂರ್ಯಾಸ್ತ : 06-18
ಮುಸ್ಲಿಂ ದಿನಾಂಕ : 04 ರಬಿಉಲ್ಲಾವಲ್ಲಿ
ನ ವಿಶೇಷ : ಓಳಿ ಪ್ರಾರಂಭ (ಜೈನ್)
ಅದೃಷ್ಟ ಸಂಖ್ಯೆ : 7, 9

ಮೇಷ: ವೃತ್ತಿಯಲ್ಲಿ ಸ್ವಲ್ಪ ಕಷ್ಟಗಳು ಎದುರಾಗುವುದು, ಮಾಡದಿರುವ ತಪ್ಪಿನ ಹೊಣೆಗಾರಿಕೆಯನ್ನು ನೀವು ಹೊರಬೇಕಾಗಬಹುದು. ಪರರ ಟೀಕೆ ಟಿಪ್ಪಣಿಗೆ ಕಿವಿಗೊಡುವ ಮನಸ್ಥಿತಿಯನ್ನು ಬದಲಿಸಿಕೊಳ್ಳಿರಿ. ಸತ್ಯ ಮಾರ್ಗದಲ್ಲಿ ನಡೆಯಿರಿ.

ವೃಷಭ: ಜವಾಬ್ದಾರಿಯುತ ನಡವಳಿಕೆಯನ್ನು ಹೊಂದಿರುವ ನಿಮಗೆ ಮೇಲಧಿಕಾರಿಗಳಿಂದ ಉತ್ತಮ ಪ್ರಶಂಸೆಯ ಜೊತೆಯಲ್ಲಿ ಗೌಪ್ಯವಾದ ವಿಚಾರದ ಸುಳಿವು ದೊರಕುವುದು. ಒತ್ತಡದಿಂದಾಗಿ ಕರ್ತವ್ಯ ನಿರ್ವಹಣೆಯಲ್ಲಿ ವಿಳಂಬ.

ಮಿಥುನ: ರಾಸಾಯನಿಕ ವಸ್ತುಗಳ ಬಳಕೆಯಲ್ಲಿ ಹೆಚ್ಚಿನ ಜಾಗ್ರತೆ ಇರಲಿ. ಕುಟುಂಬದಲ್ಲಿನ ಕಲಹ, ಮಾನಸಿಕ ಕ್ಷೋಭೆ, ಸಮಸ್ಯೆಗಳು ದೂರಾಗುವುದು. ದೈವಾನುಗ್ರಹ ಉತ್ತಮವಿದ್ದು ದೇವತಾ ದರ್ಶನ ಒದಗಿ ಬರಲಿದೆ.

ಕರ್ಕಾಟಕ: ಹಣಕಾಸು ಸಂಸ್ಥೆಯ ಜವಾಬ್ದಾರಿ ನೋಡುವವರಿಗೆ ಆತಂಕ, ಸಮಸ್ಯೆ ಎದುರಾಗಲಿದೆ. ಚಿನ್ನಾಭರಣದ ಮೇಲಿನ ಅಥವಾ ಭೂ ಮೇಲಿನ ಹೂಡಿಕೆಯು ಲಾಭವನ್ನು ಉಂಟುಮಾಡುತ್ತದೆ.

ಸಿಂಹ: ಮಕ್ಕಳ ಸಂತಸ ಸಡಗರ ಕಂಡು ಮನಸ್ಸಿಗೆ ಸಂತೋಷವಾಗುವುದು. ನಾನಾ ರೀತಿಯಲ್ಲಿ ಅಭಿವೃದ್ಧಿ, ಉನ್ನತಿ ಗೋಚರಕ್ಕೆ ಬಂದರೂ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ಗೃಹಿಣಿಯರಿಗೆ ಇಷ್ಟಾರ್ಥಗಳು ಸಿದ್ಧಿಯಾಗುವುದು.

ಕನ್ಯಾ: ಉದ್ಯೋಗಾಕಾಂಕ್ಷಿಗಳಿಗೆ ಉತ್ತಮ ವೇತನದ ನೌಕರಿ ಸಿಗಲಿದೆ. ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಃಸ್ಥಿತಿಯಿಂದಾಗಿ ವಿಳಂಬಗೊಂಡು ಹಿನ್ನಡೆಯಾಗಿ ಕಾಣಲಿದೆ. ಹೆಣ್ಣುಮಕ್ಕಳ ಮದುವೆ ವಿಚಾರ ಪ್ರಸ್ತಾಪಕ್ಕೆ ಬರಲಿದೆ.

ತುಲಾ: ವೃತ್ತಿರಂಗದಲ್ಲಿ ಹಿರಿಯ ಅಧಿಕಾರಿಗಳ ಒತ್ತಡದ ಮೇರೆಗೆ ಗ್ರಾಹಕರಿಗೆ ಮೋಸ ಮಾಡಬೇಕಾದ ಸಂದರ್ಭಗಳು ಎದುರಾಗುವುದು. ಕೃಷಿ ಮತ್ತು ಹೈನು ಉತ್ಪನ್ನಗಳಲ್ಲಿನ ವ್ಯಾಪಾರಗಳಿಂದ ಹೇರಳ ಲಾಭ ಪಡೆಯುವಿರಿ.

ವೃಶ್ಚಿಕ: ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸುವಂತಾಗುವುದು. ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ.

ಧನು: ಕೌಟುಂಬಿಕ ವಿಷಯಗಳಲ್ಲಿ ಸಹೋದರ ಸಹೋದರಿಯರ ಪ್ರೀತಿ ವಿಶ್ವಾಸದಿಂದ ಬಹಳ ಖುಷಿ ಸಿಗುವುದು. ನಿಮ್ಮ ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ.

ಮಕರ: ನಂಬಿಕಸ್ಥರಿಂದ ಮೋಸ ಕೃತ್ಯಗಳು ನಡೆಯುವ ಸಂದರ್ಭಗಳು ಕಾಣವುದು. ಆದ್ದರಿಂದ ನಿಮ್ಮ ವ್ಯವಹಾರಗಳ ಬಗ್ಗೆ ನೀವೇ ಹೆಚ್ಚಿನ ಗಮನಹರಿಸುವುದು ಮುಖ್ಯವಾಗುವುದು. ನಿಮ್ಮ ವ್ಯವಹಾರಗಳಲ್ಲಿ ಹಿಡಿತವನ್ನು ಸಾಧಿಸಿರಿ.

ಕುಂಭ: ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು. ದೈವಬಲ ಒದಗುವುದರಿಂದ ನಿಮ್ಮ ಪ್ರಯತ್ನ ಕಾರ್ಯಗಳೆಲ್ಲ ಹೆಚ್ಚಿನ ಶುಭ ಫಲಗಳನ್ನೇ ನೀಡಲಿದೆ. ವನಸ್ಪತಿ ವ್ಯಾಪಾರಿಗಳಿಗೆ ಲಾಭ ಸಿಗಲಿದೆ.

ಮೀನ: ಶತ್ರುಗಳ ವಿಚಾರದಲ್ಲಿ ಜಾಗರೂಕರಾಗಿರಿ. ಅನಿರೀಕ್ಷಿತವಾಗಿ ಉಡುಗೊರೆ ದೊರಕುವ ಲಕ್ಷಣಗಳಿರುವುದು. ತೈಲಲೇಪನದಂತಹ ಆಯ್ಕೆಯಿಂದಾಗಿ ಕಾಲು ನೋವು ಸಂಪೂರ್ಣವಾಗಿ ಉಪಶಮನವಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,818
ಇಂದಿನ ಅಂತ್ಯ	17,094
▲	276
ದಿನದ ಗರಿಷ್ಠ	17,187

ವಿನಿಮಯ ದರ

$ ಡಾಲರ್	81.40
£ ಪೌಂಡ್	90.71
€ ಯುರೊ	79.71
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1132 (1130)
ಸೂರ್ಯಕಾಂತಿ (ರಿಫೈನ್ಡ್)	₹1280 (1300)
ಪಾಮೋಲಿನ್	₹865 (860)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹131.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹1200-1600
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಕುಸಿದ ಮೂಲಸೌಕರ್ಯ ವಲಯದ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆಯು ಆಗಸ್ಟ್‌ನಲ್ಲಿ ಶೇಕಡ 3.3ರಷ್ಟು ಆಗಿದೆ. ಕಳೆದ ವರ್ಷದ ಆಗಸ್ಟ್‌ಗೆ ಹೋಲಿಸಿದರೆ 9 ತಿಂಗಳಲ್ಲಿ ಆಗಿರುವ ಕನಿಷ್ಠ ಮಟ್ಟದ ಬೆಳವಣಿಗೆ ಇದು.

2021ರ ಆಗಸ್ಟ್‌ನಲ್ಲಿ ಈ ವಲಯಗಳು ಶೇ 12.2ರಷ್ಟು ಬೆಳವಣಿಗೆ ಕಂಡಿದ್ದವು. ಈ ಹಿಂದೆ 2021ರ ನವೆಂಬರ್‌ನಲ್ಲಿ ವಲಯಗಳ ಬೆಳವಣಿಗೆಯು ಶೇ 3.2ರ ಮಟ್ಟದಲ್ಲಿ ಇತ್ತು.

ಕಚ್ಚಾತೈಲ ಉತ್ಪಾದನೆ ಶೇ 3.3ರಷ್ಟು ಮತ್ತು ನೈಸರ್ಗಿಕ ಅನಿಲ ಉತ್ಪಾದನೆ ಶೇ 0.9ರಷ್ಟು ಇಳಿಕೆ ಕಂಡಿದೆ. ಅಂತೆಯೇ, ಕಲ್ಲಿದ್ದಲು, ಸಂಸ್ಕರಿಸಿದ ಉತ್ಪನ್ನಗಳು, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ಪಾದನೆಯೂ ಇಳಿಕೆ ಕಂಡಿದೆ.

ಆದರೆ, ರಸಗೊಬ್ಬರ ಉತ್ಪಾದನೆ ಶೇ 3.1ರಿಂದ ಶೇ 11.9ಕ್ಕೆ ಏರಿಕೆ ಆಗಿದೆ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಆಗಸ್ಟ್ ಅವಧಿಯಲ್ಲಿ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿಸಿದ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳು ಶೇ 9.8ರಷ್ಟು ಬೆಳವಣಿಗೆ ಕಂಡಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 19.4ರಷ್ಟು ಬೆಳವಣಿಗೆ ಆಗಿತ್ತು.

ಅತಿಯಾದ ಮಳೆಯಿಂದಾಗಿ ವಿದ್ಯುತ್ ಮತ್ತು ನಿರ್ಮಾಣ ಕೆಲಸಗಳಿಗೆ ಬೇಡಿಕೆಯು ಕಡಿಮೆ ಆಗಿದೆ. ಹೀಗಾಗಿ ವಲಯದ ಒಟ್ಟಾರೆ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿರುವಂತೆ ತೋರುತ್ತಿದೆ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಪ್ರತಿಕ್ರಿಯೆ ನೀಡಿದ್ದಾರೆ.

ಜಿಎಸ್‌ಟಿ ಇ–ವೇ ಬಿಲ್ ದಾಖಲೆ ಮಟ್ಟದಲ್ಲಿ ಇರುವುದು ಉತ್ತೇಜನಕಾರಿ. ಮೂಲಸೌಕರ್ಯ ವಲಯದ ಬೆಳವಣಿಗೆ ಕಡಿಮೆ ಆಗಿರುವುದರಿಂದ ಕೈಗಾರಿಕಾ ಉತ್ಪಾದನಾ ಸೂಚ್ಯಂಕದ (ಐಐಪಿ) ಬೆಳವಣಿಗೆಯು ಆಗಸ್ಟ್‌ನಲ್ಲಿ ಒಂದಂಕಿ ಮಟ್ಟದಲ್ಲಿ ಇರುವ ಸಾಧ್ಯತೆ ಇದೆ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಐದನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಬಿ. ಸಿ. ಮೀನಾಕ್ಷಮ್ಮನವರು
ನಿನ್ನ ನಡೆ, ನುಡಿ ಮತ್ತು ತತ್ವಗಳು ನನಗೆ ದಾರಿದೀಪ ಹಾಗೂ ನಿನ್ನ ನೆನಪುಗಳು ಸದಾ ನನ್ನಲ್ಲಿ ಜೀವಂತವಾಗಿವೆ.
ಸದಾ ನಿನ್ನ ಸ್ಮರಣೆಯೊಂದಿಗೆ
ಪತಿ: ಡಿ. ಬಿ. ಕುಮಾರಾಚಾರ್

4ನೇ ವರ್ಷದ ಸ್ಮರಣೆ

ಡಾ. ಎಸ್. ಅದೀಪ್
05-06-1989 - 01-10-2018
ಹೂವು ಬಿರಿಯುವ ಮುನ್ನವೇ
ಬಾಡಿ ಮರೆಯಾಗಿ ಹೋದ
ನಿನ್ನ ನೆನಪಿನಲ್ಲಿ ನಾವು
ಕುಟುಂಬವರ್ಗದವರು

ಜಿಡಿಪಿ ಬೆಳವಣಿಗೆ ಅಂದಾಜು ಇಳಿಕೆ ● ಹಣದುಬ್ಬರ ಶೇ 6.7ರಷ್ಟು ನಿರೀಕ್ಷೆ

ಹೆಚ್ಚಿದ ರೆಪೊ: ಏರಲಿದೆ ಇಎಂಐ

ಮುಂಬೈ (ಪಿಟಿಐ): ರೆಪೊ ದರವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಶೇಕಡ 0.50ರಷ್ಟು ಹೆಚ್ಚಿಸಿದೆ. ಇದರಿಂದಾಗಿ ಗೃಹ, ವಾಹನ ಮತ್ತು ಇತರ ಸಾಲಗಳ ಮರುಪಾವತಿ ಕಂತಿನ ಮೊತ್ತ ಇನ್ನಷ್ಟು ಹೆಚ್ಚಲಿದೆ. ಮೇ ತಿಂಗಳಿಂದ ಈಚೆಗೆ ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುತ್ತಿರುವುದು ಇದು ನಾಲ್ಕನೆಯ ಬಾರಿ.

ಹಣದುಬ್ಬರ ನಿಯಂತ್ರಿಸಲು ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ರೆಪೊ ದರ ಹೆಚ್ಚಿಸುವ ತೀರ್ಮಾನಕ್ಕೆ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಆರು ಸದಸ್ಯರ ಪೈಕಿ ಐವರು ಸಹಮತ ವ್ಯಕ್ತಪಡಿಸಿದ್ದಾರೆ.

ಈಗ ರೆಪೊ ದರವು 2019ರ ಏಪ್ರಿಲ್ ನಂತರದ ಗರಿಷ್ಠ ಮಟ್ಟ ತಲುಪಿದೆ. ಈ ವರ್ಷದ ಮೇ ತಿಂಗಳ ನಂತರದಲ್ಲಿ ರೆಪೊ ದರವು ಶೇ 1.90ರಷ್ಟು ಹೆಚ್ಚಾಗಿದೆ. 'ಮುಂದಿನ ದಿನಗಳಲ್ಲಿ ಹಣದುಬ್ಬರ ಪ್ರಮಾಣವನ್ನು ಮಿತಿಯಲ್ಲಿ ಇರಿಸುವ ಉದ್ದೇಶದಿಂದ ಹೊಂದಾಣಿಕೆಯ ಹಣಕಾಸು ನೀತಿಯನ್ನು ಹಿಂಪಡೆಯುವತ್ತ ಗಮನ ಹರಿಸಲು ಸಮಿತಿಯು ಬಹುಮತದ ತೀರ್ಮಾನ ಕೈಗೊಂಡಿದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

> **ಕೋವಿಡ್ ಹಾಗೂ ರಷ್ಯಾ–ಉಕ್ರೇನ್ ಯುದ್ಧವು ಅರ್ಥವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರಿವೆ. ಈಗ ಬಿಗಿ ಹಣಕಾಸು ನೀತಿಗಳಿಂದಾಗಿ ಇನ್ನೊಂದು ಆಘಾತ ಎದುರಾಗಿದೆ**
> **ಶಕ್ತಿಕಾಂತ ದಾಸ್,** ಆರ್‌ಬಿಐ ಗವರ್ನರ್

ಜಿಡಿಪಿ ಅಂದಾಜು ಇಳಿಕೆ: ದೇಶದ ಅರ್ಥ ವ್ಯವಸ್ಥೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 7.2ರಷ್ಟು ಬೆಳವಣಿಗೆ ಕಾಣಲಿದೆ ಎಂದು ಆರ್‌ಬಿಐ ಈ ಮೊದಲು ಅಂದಾಜಿಸಿತ್ತು. ಆದರೆ ಈಗ ಅಂದಾಜನ್ನು ಶೇ 7ಕ್ಕೆ ತಗ್ಗಿಸಿದೆ. ಪ್ರಸಕ್ತ ಹಣಕಾಸು ವರ್ಷದ ಹಣದುಬ್ಬರದ ಅಂದಾಜನ್ನು ತಗ್ಗಿಸಿಲ್ಲ. ಅದು ಶೇ 6.7ರಷ್ಟು ಇರಲಿದೆ ಎಂದು ಹೇಳಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಸತತ 8 ತಿಂಗಳಿಂದ ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಿತಿಗಿಂತ (ಶೇ 2ರಿಂದ ಶೇ 6) ಹೆಚ್ಚಿನ ಮಟ್ಟದಲ್ಲಿ ಇದೆ.

'ಸಾಲ ವಸೂಲಿ ಹೊರಗುತ್ತಿಗೆ ನಿಷೇಧಿಸಿಲ್ಲ'

ಮುಂಬೈ (ಪಿಟಿಐ): ಸಾಲ ನೀಡುವ ಸಂಸ್ಥೆಗಳು ಸಾಲ ವಸೂಲಿ ಕೆಲಸವನ್ನು ಮೂರನೆಯ ವ್ಯಕ್ತಿಗಳಿಗೆ ವಹಿಸುವುದಕ್ಕೆ ತನ್ನ ವಿರೋಧ ಇಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಸ್ಪಷ್ಟಪಡಿಸಿದೆ. ಆದರೆ, ಸಾಲ ವಸೂಲಿಯು ಕಾನೂನಿಗೆ ಅನುಗುಣವಾಗಿ ಆಗಬೇಕು ಎಂಬುದು ತನ್ನ ನಿರೀಕ್ಷೆ ಎಂದು ಹೇಳಿದೆ.

ಸಾಲ ವಸೂಲಿ ಏಜೆಂಟ್ ಒಬ್ಬ ಜಾರ್ಖಂಡ್‌ನಲ್ಲಿ ಈಚೆಗೆ ಗರ್ಭಿಣಿ ಮಹಿಳೆಯೊಬ್ಬರ ಮೇಲೆ ಟ್ರ್ಯಾಕ್ಟರ್ ಹರಿಸಿ, ಮಹಿಳೆಯ ಸಾವಿಗೆ ಕಾರಣನಾಗಿದ್ದಾನೆ ಎನ್ನಲಾಗಿದ್ದು, ಆ ಘಟನೆಯ ನಂತರದಲ್ಲಿ ಆರ್‌ಬಿಐ, ಮಹೀಂದ್ರ ಆ್ಯಂಡ್ ಮಹೀಂದ್ರ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಗೆ ಸಾಲ ವಸೂಲಿಗೆ ಹೊರಗಿನ ಏಜೆಂಟರ ನೆರವು ಪಡೆಯುವಂತಿಲ್ಲ ಎಂದು ಸೂಚಿಸಿದೆ.

ಮಹೀಂದ್ರ ಫೈನಾನ್ಸ್‌ಗೆ ನೀಡಿರುವ ಸೂಚನೆಯನ್ನು ಉಲ್ಲೇಖಿಸಿ ಆರ್‌ಬಿಐ ಡೆಪ್ಯುಟಿ ಗವರ್ನರ್ ಎಂ.ಕೆ. ಜೈನ್ ಅವರು, 'ನಿಯಂತ್ರಣಕ್ಕೆ ಒಳಪಟ್ಟಿರುವ ಸಂಸ್ಥೆಗಳ ಹಕ್ಕನ್ನು ಹಿಂಪಡೆಯುವ ಉದ್ದೇಶ ಇದರ ಹಿಂದಿಲ್ಲ. ಆದರೆ ಕಾನೂನಿಗೆ ಅನುಗುಣವಾಗಿ ಕೆಲಸ ಆಗಬೇಕು ಎಂಬುದು ನಮ್ಮ ಬಯಕೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಹಣದುಬ್ಬರವು ಹೆಚ್ಚಿನ ಮಟ್ಟದಲ್ಲಿಯೇ ಉಳಿಯುವ ಸಾಧ್ಯತೆ ಇರುವ ಕಾರಣ ರೆಪೊ ದರ ಇನ್ನಷ್ಟು ಹೆಚ್ಚಾಗುವುದನ್ನು ಅಲ್ಲಗಳೆಯಲಾಗದು ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆಯ ಪ್ರಧಾನ ಅರ್ಥಶಾಸ್ತ್ರಜ್ಞ ಸುನಿಲ್ ಕುಮಾರ್ ಸಿನ್ಹಾ ಹೇಳಿದ್ದಾರೆ. ಆದರೆ ಮುಂದೆ ಅಲ್ಪ ಪ್ರಮಾಣದಲ್ಲಿ ಮಾತ್ರ ದರ ಏರಿಕೆ ಮಾಡಬಹುದು ಎಂದು ಅಂದಾಜಿಸಿದ್ದಾರೆ.

'ಕಾರ್ಪೊರೇಟ್ ಕಂಪನಿಗಳ ಬಂಡವಾಳ ವೆಚ್ಚದ ಪ್ರಮಾಣವು ಈಗಷ್ಟೇ ವೇಗ ಪಡೆದುಕೊಳ್ಳುತ್ತಿತ್ತು. ರೆಪೊ ಹೆಚ್ಚಳದ ಪರಿಣಾಮದಿಂದಾಗಿ ಅದು ತಗ್ಗಲಿದೆ' ಎಂದು ಕೋಟಕ್ ಮಹೀಂದ್ರ ಬ್ಯಾಂಕ್‌ನ ಕಾರ್ಪೊರೇಟ್ ಬ್ಯಾಂಕಿಂಗ್ ಮುಖ್ಯಸ್ಥ ಅನು ಅಗರ್ವಾಲ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

5ಜಿ ಸೇವೆಗೆ ಪ್ರಧಾನಿ ಇಂದು ಚಾಲನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು 5ಜಿ ದೂರಸಂಪರ್ಕ ಸೇವೆಗಳಿಗೆ ಶನಿವಾರ ಚಾಲನೆ ನೀಡಲಿದ್ದಾರೆ. ಅವರು ಆಯ್ದ ನಗರಗಳಲ್ಲಿ ಈ ಸೇವೆಗೆ ಚಾಲನೆ ನೀಡಲಿದ್ದು, ಎರಡು ವರ್ಷಗಳಲ್ಲಿ ಇದು ಇಡೀ ದೇಶದಲ್ಲಿ ಹಂತ ಹಂತವಾಗಿ ಲಭ್ಯವಾಗಲಿದೆ.

5ಜಿ ಸೇವೆಗಳು ಆರಂಭವಾದ ನಂತರದಲ್ಲಿ ಹೊಸ ಆರ್ಥಿಕ ಅವಕಾಶಗಳು ತೆರೆದುಕೊಳ್ಳುವ ನಿರೀಕ್ಷೆ ಇದೆ. 5ಜಿ ತಂತ್ರಜ್ಞಾನವು 4ಜಿ ತಂತ್ರಜ್ಞಾನಕ್ಕಿಂತ ಹಲವು ಪಟ್ಟು ಹೆಚ್ಚು ವೇಗದ ಇಂಟರ್ನೆಟ್ ಸಂಪರ್ಕವನ್ನು ಒದಗಿಸುತ್ತದೆ.

ಮುಕೇಶ್ ಅಂಬಾನಿ ಮಾಲೀಕತ್ವದ ಜಿಯೊ, ಸುನಿಲ್ ಭಾರ್ತಿ ಮಿತ್ತಲ್ ಮಾಲೀಕತ್ವದ ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳು 5ಜಿ ಸೇವೆಗಳನ್ನು ಆರಂಭಿಸಲು ಅಗತ್ಯವಿರುವ ತರಂಗಾಂತರಗಳನ್ನು ಹರಾಜಿನ ಮೂಲಕ ಖರೀದಿಸಿವೆ. ಖಾಸಗಿ ನೆಟ್‌ವರ್ಕ್ ಸ್ಥಾಪಿಸಲು ಅಗತ್ಯವಿರುವ 5ಜಿ ತರಂಗಾಂತರಗಳನ್ನು ಅದಾನಿ ಸಮೂಹ ಖರೀದಿ ಮಾಡಿದೆ.

'ಟೋಕನೈಸೇಷನ್ ವ್ಯವಸ್ಥೆ ಸಿದ್ಧ'

ಮುಂಬೈ (ಪಿಟಿಐ): ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್ ವಿವರಗಳನ್ನು ಟೋಕನ್ ರೂಪದಲ್ಲಿ ಮಾತ್ರವೇ ಸಂಗ್ರಹಿಸಿ ಇಟ್ಟುಕೊಳ್ಳಬೇಕು ಎಂಬ ನಿಯಮವು ಶನಿವಾರದಿಂದ ಜಾರಿಗೆ ಬರಲಿದ್ದು, ಅಂದಾಜು 35 ಕೋಟಿ ಕಾರ್ಡ್‌ಗಳ ವಿವರವು ಈ ರೂಪದಲ್ಲಿ ಸಂಗ್ರಹವಾಗಿದೆ ಎಂದು ಆರ್‌ಬಿಐ ಹೇಳಿದೆ.

ಗ್ರಾಹಕರ ಸುರಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ನಿಯಮವನ್ನು ಆರ್‌ಬಿಐ ಜಾರಿಗೆ ತರುತ್ತಿದೆ. ಈ ನಿಯಮದ ಜಾರಿಗೆ ಆರ್‌ಬಿಐ ಗಡುವನ್ನು ಮತ್ತೆ ಮತ್ತೆ ವಿಸ್ತರಿಸಿತ್ತು. 'ಈಗ ವ್ಯವಸ್ಥೆ ಸಿದ್ಧವಾಗಿದೆ' ಎಂದು ಆರ್‌ಬಿಐ ಡೆಪ್ಯುಟಿ ಗವರ್ನರ್ ಟಿ. ರವಿ ಶಂಕರ್ ತಿಳಿಸಿದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆದ ಒಟ್ಟು ವಹಿವಾಟಿನ ಶೇಕಡ 40ರಷ್ಟು ಟೋಕನ್ ರೂಪದಲ್ಲಿನ ಮಾಹಿತಿ ಆಧರಿಸಿ ನಡೆದಿವೆ ಎಂದು ಅವರು ಹೇಳಿದ್ದಾರೆ. ಆಗಸ್ಟ್ ಅಂತ್ಯದ ವೇಳೆಗೆ ದೇಶದಲ್ಲಿ ಒಟ್ಟು 101 ಕೋಟಿ ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡ್‌ಗಳು ಇದ್ದವು.

ನಿರೀಕ್ಷಿತ ಮಟ್ಟದಲ್ಲಿ ರೆಪೊ ಏರಿಕೆ: 7 ದಿನಗಳ ಕರಡಿ ಕುಣಿತಕ್ಕೆ ತಡೆ

1,016 ಅಂಶ ಜಿಗಿತ ಕಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಆರ್ಥಿಕ ಬೆಳವಣಿಗೆಯ ಕುರಿತು ಆರ್‌ಬಿಐ ನೀಡಿರುವ ಮುನ್ನೋಟದ ಕಾರಣದಿಂದಾಗಿ ದೇಶದ ಷೇರುಪೇಟೆಗಳಲ್ಲಿ ಏಳು ದಿನಗಳ ಕರಡಿ ಕುಣಿತಕ್ಕೆ ಶುಕ್ರವಾರ ತಡೆ ಬಿದ್ದಿತು. ರೆಪೊ ದರ ಏರಿಕೆ ನಿರೀಕ್ಷಿತ ಮಟ್ಟದಲ್ಲಿ ಇದ್ದುದರಿಂದ ಸಕಾರಾತ್ಮಕ ವಹಿವಾಟು ನಡೆಯಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಕಂಡಿರುವುದು ಸಹ ಸೂಚ್ಯಂಕಗಳ ಏರಿಕೆಗೆ ನೆರವಾಯಿತು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆಯ ವಹಿವಾಟು ಮಂದಗತಿಯಲ್ಲಿ ಆರಂಭ ಆಯಿತು. ಬಡ್ಡಿದರ ಹೆಚ್ಚಳ ಮತ್ತು ಹಣದುಬ್ಬರದ ಮುನ್ನೋಟ ಕುರಿತು ಆರ್‌ಬಿಐ ನಿರ್ಧಾರ ಹೊರಬಿದ್ದ ಬಳಿಕ ಗೂಳಿ ಓಟ ಜೋರಾಯಿತು. ವಹಿವಾಟಿನ ಅಂತ್ಯದ ವೇಳೆಗೆ ಸೆನ್ಸೆಕ್ಸ್ 1,016 ಅಂಶ ಜಿಗಿತ ಕಂಡು 57,426 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 276 ಅಂಶ ಹೆಚ್ಚಾಗಿ 17,094 ಅಂಶಗಳಿಗೆ ಏರಿಕೆ ಕಂಡಿತು.

'ದೇಶದ ಆರ್ಥಿಕ ಬೆಳವಣಿಗೆಯ ಬಗ್ಗೆ ಆರ್‌ಬಿಐ ವಿಶ್ವಾಸ ವ್ಯಕ್ತಪಡಿಸಿರುವುದರ ಜೊತೆಗೆ ನಿರೀಕ್ಷೆಗೆ ಅನುಗುಣವಾಗಿ ಬಡ್ಡಿದರ ಹೆಚ್ಚಳ ಮಾಡಿರುವುದರಿಂದ ದೇಶದ ಷೇರುಪೇಟೆಗಳ ಏಳು ದಿನಗಳ ನಕಾರಾತ್ಮಕ ಓಟಕ್ಕೆ ತಡೆ ಬಿದ್ದಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಹಣದುಬ್ಬರದ ಅಂದಾಜನ್ನು ಶೇ6.70ರ ಮಟ್ಟದಲ್ಲಿಯೇ ಉಳಿಸಿಕೊಳ್ಳಲಾಗಿದೆ. ಆದರೆ, ಜಿಡಿಪಿ ಬೆಳವಣಿಗೆಯು ಶೇ 7ರಷ್ಟು ಆಗಲಿದೆ ಎಂದು ಆರ್‌ಬಿಐ ಅಂದಾಜು ಮಾಡಿರುವುದು ಭಾರತದ ಆರ್ಥಿಕತೆ ಚೇತರಿಕೆ ಕಂಡುಕೊಳ್ಳುತ್ತಿದೆ ಎನ್ನುವುದನ್ನು ಸೂಚಿಸುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಏಷ್ಯಾದಲ್ಲಿ, ಸೋಲ್, ಟೋಕಿಯೊ ಮತ್ತು ಶಾಂಘೈ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿದೆ. ಹಾಂಗ್‌ಕಾಂಗ್ ಷೇರುಪೇಟೆ ಗಳಿಕೆ ಕಂಡಿತು.

ರೂಪಾಯಿ ಚೇತರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 33 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹81.40ರಂತೆ ವಿನಿಮಯಗೊಂಡಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಕುಮಟ	
ಚಿಪ್ಪು	28019-33019
ಕೋಕ	18569-30099
ಫ್ಯಾಕ್ಟರಿ	12019-22169
ಹಳೆಚಾಲಿ	41089-46090
ಹೊಸಚಾಲಿ	38099-42509
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿವಮೊಗ್ಗ	
ಬೆಟ್ಟೆ	51100-54200
ಗೊಬರಲು	17100-37899
ರಾಶಿ	44839-50559
ಸರಕು	58859-80596
ಸಿದ್ದಾಪುರ	
ಬಿಳಿಗೋಟು	28800-35509
ಚಾಲಿ	38189-41899
ಕೋಕ	26669-31899
ಕೆಂಪುಗೋಟು	32089-35369
ರಾಶಿ	47099-49399
ತಟ್ಟಿಬೆಟ್ಟೆ	40009-47269
ಶಿರಸಿ	
ಬೆಟ್ಟೆ	24099-47499
ಬಿಳಿಗೋಟು	25011-36599
ಚಾಲಿ	36929-42899
ಕೆಂಪುಗೋಟು	29399-39699
ರಾಶಿ	49700-49700
ಸಿದ್ದಾಪುರ	
ಬಿಳಿಗೋಟು	26012-37489
ಚಾಲಿ	37499-42099
ಕೋಕ	19312-32766
ಕೆಂಪುಗೋಟು	27019-37199
ರಾಶಿ	45999-52839
ತಟ್ಟಿಬೆಟ್ಟೆ	38406-44050

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15900	16250	228.70 ಸೆಂಟ್ಸ್
ಎಸಿ	9100	8400	9000	
ಆರ್‌ಪಿ	9800	9800	9825	ಲಂಡನ್
ಆರ್‌ಸಿ	4800	4500	4775	2208 ಡಾಲರ್ಸ್

'ಮಾರ್ಗದರ್ಶಿ'ಗೆ 60ರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ರಾಮೋಜಿ ರಾವ್ ಅವರು ಆರಂಭಿಸಿದ ಮಾರ್ಗದರ್ಶಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಕಂಪನಿ 60 ವರ್ಷಗಳನ್ನು ಪೂರೈಸಿದೆ.

'1962ರಲ್ಲಿ ಆರಂಭ ಆದಾಗಿನಿಂದಲೂ ಕಂಪನಿಯು ಸಾರ್ವಜನಿಕರಲ್ಲಿ ಉಳಿತಾಯ ಮನೋಭಾವವನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತ ಬಂದಿದೆ. ಈ ಮೂಲಕ ಜನರನ್ನು ಹಣಕಾಸಿನ ವಿಚಾರದಲ್ಲಿ ಸಶಕ್ತಗೊಳಿಸುತ್ತಿದೆ' ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಕಂಪನಿಯು ಈಗ ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಒಟ್ಟು 108 ಶಾಖೆಗಳನ್ನು ಹೊಂದಿದೆ. ಇಬ್ಬರು ನೌಕರರೊಂದಿಗೆ ಆರಂಭವಾದ ಕಂಪನಿಯು ಈಗ 4,300 ನೌಕರರನ್ನು ಹಾಗೂ 60 ಲಕ್ಷಕ್ಕೂ ಹೆಚ್ಚು ಚಂದಾದಾರರನ್ನು ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಸರ್ಗಿಕ ಅನಿಲ ಬೆಲೆ ಏರಿಕೆ: ಸಿಎನ್‌ಜಿ ದುಬಾರಿ?

ನವದೆಹಲಿ (ಪಿಟಿಐ): ವಿದ್ಯುತ್ ಉತ್ಪಾದನೆ, ರಸಗೊಬ್ಬರ ತಯಾರಿಕೆಯಲ್ಲಿ ಬಳಸುವ ನೈಸರ್ಗಿಕ ಅನಿಲದ ಬೆಲೆಯನ್ನು ಕೇಂದ್ರ ಸರ್ಕಾರವು ಶೇಕಡ 40ರಷ್ಟು ಹೆಚ್ಚಿಸಿದೆ. ಈ ನೈಸರ್ಗಿಕ ಅನಿಲವನ್ನು ಸಿಎನ್‌ಜಿ ಆಗಿ ಪರಿವರ್ತಿಸಲಾಗುತ್ತದೆ.

2019ರ ಏಪ್ರಿಲ್ ನಂತರ ನೈಸರ್ಗಿಕ ಅನಿಲದ ಬೆಲೆ ಏರಿಕೆ ಆಗುತ್ತಿರುವುದು ಇದು ಮೂರನೆಯ ಬಾರಿ. ಈ ಏರಿಕೆಯ ಪರಿಣಾಮವಾಗಿ ಸಿಎನ್‌ಜಿ ಬೆಲೆ ಹಾಗೂ ಕೊಳವೆ ಮೂಲಕ ಪೂರೈಸುವ ಅಡುಗೆ ಅನಿಲದ ಬೆಲೆಯಲ್ಲಿ ಹೆಚ್ಚಳ ಆಗಬಹುದು ಎನ್ನಲಾಗಿದೆ.

ನೈಸರ್ಗಿಕ ಅನಿಲದ ಬೆಲೆ ಹೆಚ್ಚಳವು ಹಣದುಬ್ಬರ ಇನ್ನಷ್ಟು ಏರುವುದಕ್ಕೆ ಇಂಬು ಕೊಡಬಹುದು. ವಿದ್ಯುತ್ ಉತ್ಪಾದನೆಯ ವೆಚ್ಚ ಜಾಸ್ತಿ ಆಗುತ್ತದೆಯಾದರೂ, ದೇಶದಲ್ಲಿ ನೈಸರ್ಗಿಕ ಅನಿಲದಿಂದ ಉತ್ಪಾದನೆ ಆಗುವ ವಿದ್ಯುತ್ತಿನ ಪ್ರಮಾಣವೇ ಕಡಿಮೆ ಇರುವ ಕಾರಣ ಗ್ರಾಹಕರಿಗೆ ಹೆಚ್ಚಿನ ಹೊರೆ ಆಗಲಿಕ್ಕಿಲ್ಲ.

ರಸಗೊಬ್ಬರ ತಯಾರಿಕಾ ವೆಚ್ಚವು ಜಾಸ್ತಿ ಆಗುತ್ತದೆ. ಆದರೆ, ಕೇಂದ್ರ ಸರ್ಕಾರವು ರಸಗೊಬ್ಬರಕ್ಕೆ ಸಬ್ಸಿಡಿ ನೀಡುವ ಕಾರಣ ರೈತರು ಕೊಡಬೇಕಿರುವ ಬೆಲೆ ಹೆಚ್ಚಾಗುವ ಸಾಧ್ಯತೆ ಇಲ್ಲ.

ಎಂಎಂಟಿಸಿ–ಪಿಎಎಂಪಿ ಸಹಯೋಗದಲ್ಲಿ ಜೋಸ್ ಆಲುಕ್ಕಾಸ್ ಕಂಪನಿಯು ಡಿಜಿಟಲ್ ಗೋಲ್ಡ್ ಖರೀದಿ ಸೌಲಭ್ಯ ಆರಂಭಿಸಿದೆ. ಜೋಸ್ ಆಲುಕ್ಕಾಸ್ ಕಂಪನಿಯ ಬೆಂಗಳೂರಿನ ಡಿಕನ್‌ಸನ್ ರಸ್ತೆ ಮಳಿಗೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಆಲುಕ್ಕಾ, ಪಾಲ್ ಜೆ. ಆಲುಕ್ಕಾ, ಜಾನ್ ಆಲುಕ್ಕಾ, ಎಂಎಂಟಿಸಿ–ಪಿಎಎಂಪಿ ಸಿಇಒ ವಿಕಾಸ್ ಸಿಂಗ್ ಪಾಲ್ಗೊಂಡಿದ್ದರು. josalukkasdigigold.com ವೆಬ್‌ಸೈಟ್‌ಗೆ ಭೇಟಿ ನೀಡಿ ಕನಿಷ್ಠ ₹1ಕ್ಕೂ ಡಿಜಿಟಲ್ ಚಿನ್ನ ಖರೀದಿಸಬಹುದು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8. ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ
ಪ್ರಜಾವಾಣಿ ಅರ್ಪಿಸುವ
ನವರಾತ್ರಿ ಸಾಂಸ್ಕೃತಿಕ ಉತ್ಸವ- 2022 PREMIER
ಸಹಯೋಗ: ಕಾಸ್ಮೋಪಾಲಿಟನ್ ಕ್ಲಬ್, ಜಯನಗರ, ಬೆಂಗಳೂರು
ಅಕ್ಟೋಬರ್ 4, 2022ರ ವರೆಗೆ ಪ್ರತಿ ಸಂಜೆ 4 ರಿಂದ

ಮಹಿಷ ಮರ್ದಿನಿ ಯಕ್ಷಗಾನ ಪ್ರದರ್ಶನ
ಶ್ರೀದೇವಿ ಯಕ್ಷ ಕಲಾ ಸಂಘ ವತಿಯಿಂದ
ನಿರ್ವಹಣೆ: ಡಾ.ಅನುರಾಧಾ ರವಿಶಂಕರ್
ನಾಳೆ
ನಾನೇ ಕರ್ನಾಟಕದ ಶಾಶ್ವತ ಮುಖ್ಯಮಂತ್ರಿ
ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಅವರಿಂದ ಹಾಸ್ಯ ಸಂಜೆ
ನಿರ್ವಹಣೆ: ಶ್ರೀನಿವಾಸ ಜಿ.ಕಪ್ಪಣ್ಣ
ಮೈಸೂರಿನಿಂದ ದಸರಾ ಲೈವ್ LIVE
ಮೈಸೂರು ಅರಮನೆ ವೇದಿಕೆಯಲ್ಲಿ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ನೇರ ಪ್ರಸಾರ ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ಪ್ರತಿದಿನ ಸಂಜೆ 5.30ರಿಂದ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General
ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಭವಿಷ್ಯ
Astrology
ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ವಾಹನ
Four Wheelers Selling
Others
SALE MM540 Jeep, Karnataka Agencies, Kottara, Excellent Condition, Dharmaja 9535253986. s.rodrigues@karagencies.com

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಮತ್ತು ರೆಡಿಮೇಡ್ ಪ್ರಿಕ್ಯಾಸ್ಟಿಂಗ್ ಕಾಂಪೌಂಡ್‌ಗೋಡೆ ಕೆಲಸಕ್ಕಾಗಿ ಸಂಪರ್ಕಿಸಿ: 9880916988

ಪ್ರವಾಸ
Travel
ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂದ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

ಶ್ರೀರಾಜರಾಜೇಶ್ವರಿ ಟೂರ್ಸ್ 9739618243, 9743895346 28.10.2022 12ದಿನ ಈಶಾನ್ಯ ರಾಜ್ಯಗಳು ಅಸ್ಸಾಂ, ಮೇಘಾಲಯ ಅರುಣಾಚಲಪ್ರದೇಶ 18.12.2022 7ದಿನ ಕೇರಳ ಪ್ರವಾಸ

AC ಬಸ್ಸಿನಲ್ಲಿ ಊಟ,ರೂಂ ವಸತಿಯೊಂದಿಗೆ 5.10.2022 5ದಿನಗಳು ಮಂತ್ರಾಲಯ ಶ್ರೀಶೈಲಂ,ಮಹಾನಂದಿ, ಅಹೋಬಲಂ,ನವನಾರಸಿಂಹ, ಯಾಗಂಟಿ,ಬೇಲಂಗುಹೆ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809 9902433500

08.10.2022, 2 ದಿನಗಳು ಈಶಫೌಂಡೇಶನ್, 112 ಅಡಿಆದಿಯೋಗಿ, ಪ್ರತ್ಯಂಗಿರದೇವಿ ಇತ್ಯಾದಿ. 15.10.2022, 2 ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಹೆಬ್ಬೆಫಾಲ್ಸ್, ಬಾಬಾಬುಡನಗಿರಿ ಇತ್ಯಾದಿ. 9481433157.

EDUCATION
To Place your Classified Ads Contact:
9845114560

Book Your Classifieds Ads
Online Log in to
dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

30–9–2022

ಜಾವಾ 70/80(ಹೊಸ)	11700-11750
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1055 (1050)
ಪಾಮ್ ವಾರದ ಡೆಲಿವರಿ	860 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,900 (49,900)
ಬೆಳ್ಳಿ ಕೆ.ಜಿ 56,300 (57,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

18 ವರ್ಷದೊಳಗಿನವರನ್ನು ವಿಶೇಷ ವರ್ಗ ಎಂದು ಪರಿಗಣಿಸಿದ 'ಸುಪ್ರೀಂ'

'ಗರ್ಭಪಾತಕ್ಕೆ ಬಾಲಕಿಯರೂ ಅರ್ಹ'

ನವದೆಹಲಿ (ಪಿಟಿಐ): ಸಮ್ಮತಿಯ ಸಂಬಂಧದಲ್ಲಿ ಗರ್ಭ ಧರಿಸಿದ ಬಾಲಕಿಯರೂ 'ವೈದ್ಯಕೀಯ ಗರ್ಭಪಾತ ಕಾಯ್ದೆ–ಎಂಟಿಪಿ ಕಾಯ್ದೆ' ಅಡಿ ಗರ್ಭಪಾತಕ್ಕೆ ಅರ್ಹರು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸಹಮತದ ಸಂಬಂಧದಿಂದ ಗರ್ಭ ಧರಿಸಿದ ಮಣಿಪುರದ ಅವಿವಾಹಿತ ಮಹಿಳೆಯೊಬ್ಬರಿಗೆ ಗರ್ಭಪಾತದ ಅವಕಾಶ ನಿರಾಕರಣೆ ವಿರುದ್ಧ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದಂತೆ ನೀಡಲಾಗಿರುವ ತೀರ್ಪಿನಲ್ಲಿ, ಈ ವಿಚಾರವನ್ನೂ ಸುಪ್ರೀಂ ಕೋರ್ಟ್ ಸೇರಿಸಿದೆ. ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಎ.ಎಸ್. ಬೋಪಣ್ಣ ಮತ್ತು ಜೆ.ಬಿ.ಪಾರ್ದೀವಾಲಾ ಅವರಿದ್ದ ಪೀಠವು ಈ ಆದೇಶ ನೀಡಿದೆ.

'ಎಂಟಿಪಿ ಕಾಯ್ದೆಯ 3ಬಿ(ಬಿ) ನಿಯಮದ ಅಡಿಯಲ್ಲಿ, 24 ವಾರಗಳ ಒಳಗಿನ ಭ್ರೂಣವನ್ನು ಗರ್ಭಪಾತ ಮಾಡಿಸಿಕೊಳ್ಳಲು ಅರ್ಹರಾದ ಮಹಿಳೆಯರ ವರ್ಗದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯರನ್ನೂ ಸೇರಿಸಲಾಗಿದೆ. ಈ ನಿಯಮದಲ್ಲಿ ಬಾಲಕಿಯರನ್ನು ವಿಶೇಷ ವರ್ಗ

> **ಬಾಲಕಿಯರು ಸಹ ಸುರಕ್ಷಿತ ಗರ್ಭಪಾತದ ಅವಕಾಶದಿಂದ ವಂಚಿತರಾಗಬಾರದು ಎಂಬುದು ಈ ಕಾಯ್ದೆಗಳನ್ನು ರೂಪಿಸಿದವರ ಉದ್ದೇಶವಾಗಿರಬಹುದು**
> **ಸುಪ್ರೀಂ ಕೋರ್ಟ್**

ಎಂದು ಪರಿಗಣಿಸಲಾಗಿದೆ. ಲೈಂಗಿಕ ಕ್ರಿಯೆಯಿಂದ ಗರ್ಭಧರಿಸಬಹುದು ಎಂಬುದರ ಬಗ್ಗೆ ಬಾಲಕಿಯರಿಗೆ ಅರಿವು ಇರುವುದಿಲ್ಲ ಮತ್ತು ಗರ್ಭಧಾರಣೆಯ ಚಿಹ್ನೆಗಳನ್ನು ಗುರುತಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಹೀಗಾಗಿ ಬಾಲಕಿಯರನ್ನೂ ವೈದ್ಯಕೀಯ ಗರ್ಭಪಾತಕ್ಕೆ ಅರ್ಹರಾದ ಮಹಿಳೆಯರ ವರ್ಗದಲ್ಲಿ ಸೇರಿಸಲಾಗಿದೆ' ಎಂದು ಪೀಠವು ವಿವರಿಸಿದೆ.

'ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆಯು (ಪೋಕ್ಸೊ) 18 ವರ್ಷಕ್ಕಿಂತ ಚಿಕ್ಕವರ ಲೈಂಗಿಕ ಚಟುವಟಿಕೆಗಳನ್ನು ಅಪರಾಧ ಎಂದು ಪರಿಗಣಿಸುತ್ತದೆ. ಹೀಗಾಗಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಸಮ್ಮತಿಯ ಮೇರೆಗೆ ಲೈಂಗಿಕ ಚಟುವಟಿಕೆ ನಡೆಸಿದ್ದಾರೆ ಎಂಬುದನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಪೋಕ್ಸೊ ಕಾಯ್ದೆಯು ಅಂತಹ ಕ್ರಿಯೆಯನ್ನು ನಿಷೇಧಿಸಿದೆ. ಆದರೆ ವಾಸ್ತವದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಲೈಂಗಿಕ ಕ್ರಿಯೆ ನಡೆಸುವುದನ್ನು ಈ ಕಾಯ್ದೆಯು ತಡೆಯುವುದಿಲ್ಲ. ಅಂತಹ ಚಟುವಟಿಕೆಗಳು ನಡೆಯುತ್ತವೆ ಮತ್ತು ಅದರಿಂದ ಬಾಲಕಿಯ ಗರ್ಭಧರಿಸುವ ಸ್ಥಿತಿ ಎದುರಾಗುತ್ತದೆ ಎಂಬ ಸತ್ಯವನ್ನು ನಾವು ತಳ್ಳಿಹಾಕುವಂತಿಲ್ಲ. ಅಂತಹ ಸಂದರ್ಭದಲ್ಲಿ ಬಾಲಕಿಯು ವೈದ್ಯಕೀಯ ಗರ್ಭಪಾತ ಮಾಡಿಸಿಕೊಳ್ಳಬಹುದು' ಎಂದು ಪೀಠವು ತನ್ನ ಆದೇಶದಲ್ಲಿ ವಿವರಿಸಿದೆ.

'ಗುರುತು ಬಹಿರಂಗಪಡಿಸುವಂತಿಲ್ಲ'

ಸಹಮತದ ಲೈಂಗಿಕ ಸಂಬಂಧದಿಂದ ಗರ್ಭಧರಿಸಿದ ಬಾಲಕಿಯರು ವೈದ್ಯಕೀಯ ಗರ್ಭಪಾತ ಮಾಡಿಸಿಕೊಂಡಾಗ, ಆ ಬಾಲಕಿಯ ಗುರುತನ್ನು ವೈದ್ಯರು ಬಹಿರಂಗಪಡಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ಸಹಮತದ ಲೈಂಗಿಕ ಸಂಬಂಧದ ಗರ್ಭಧಾರಣೆ ಪ್ರಕರಣಕ್ಕೆ ಮಾತ್ರ ಅನ್ವಯವಾಗುತ್ತದೆ ಎಂದು ಪೀಠವು ಸ್ಪಷ್ಟಪಡಿಸಿದೆ.

'ಬಾಲಕಿಯರ ವೈದ್ಯಕೀಯ ಗರ್ಭಪಾತದ ಸಂದರ್ಭದಲ್ಲಿ ವೈದ್ಯರು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಪೋಕ್ಸೊ ಕಾಯ್ದೆಯ 19(1)ನೇ ಸೆಕ್ಷನ್ ಹೇಳುತ್ತದೆ. ಆದರೆ, ಬಾಲಕಿ ಮತ್ತು ಆಕೆಯ ಪೋಷಕರು ಮನವಿ ಮಾಡಿದರೆ ಮಾತ್ರ ಆ ಬಾಲಕಿಯ ಗುರುತು ಮತ್ತು ವೈಯಕ್ತಿಕ ಮಾಹಿತಿಯನ್ನು ವೈದ್ಯರು ಬಹಿರಂಗಪಡಿಸಬಾರದು' ಎಂದು ಪೀಠವು ಹೇಳಿದೆ.

'ಪೋಕ್ಸೊ ಕಾಯ್ದೆಯ 19(1)ನೇ ಸೆಕ್ಷನ್ ಅಡಿಯಲ್ಲಿ ಬಾಲಕಿಯ ಗರ್ಭಪಾತಕ್ಕೆ ಸಂಬಂಧಿಸಿದಂತೆ ವೈದ್ಯರು ಮಾಹಿತಿ ನೀಡಿರುತ್ತಾರೆ. ಆ ಮಾಹಿತಿಯನ್ನು ಆಧರಿಸಿ ಕಾಯ್ದೆಯ ಅಡಿ ಕಾನೂನು ಪ್ರಕ್ರಿಯೆಗಳು ಆರಂಭವಾಗುತ್ತವೆ. ಅಂತಹ ಸಂದರ್ಭದಲ್ಲೂ ವೈದ್ಯರು, ಆ ಬಾಲಕಿಯ ಗುರುತು, ವೈಯಕ್ತಿಕ ವಿವರ ನೀಡುವುದರಿಂದ ವಿನಾಯಿತಿ ಇದೆ' ಎಂದು ಪೀಠ ಹೇಳಿದೆ.

'ಹೊಸ ನಗರಗಳ ನಿರ್ಮಾಣ'

ಅಹಮದಾಬಾದ್ (ಪಿಟಿಐ): 'ಜಾಗತಿಕ ವಾಣಿಜ್ಯ ಅವಶ್ಯಕತೆಗೆ ತಕ್ಕಂತೆ ದೇಶದಲ್ಲಿ ಹೊಸ ನಗರಗಳನ್ನು ನಿರ್ಮಿಸಲಾಗುತ್ತಿದೆ. ನಗರಗಳು ದೇಶದ ಭವಿಷ್ಯ ರೂಪಿಸಲಿದ್ದು, ಇವು ಮುಂದಿನ 25 ವರ್ಷಗಳಲ್ಲಿ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವೆನ್ನುವುದನ್ನು ಖಾತ್ರಿಪಡಿಸುತ್ತವೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಗಾಂಧಿನಗರ- ಮುಂಬೈ ನಡುವಿನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಿ, ಅಹಮದಾಬಾದ್ ಮೆಟ್ರೊ ರೈಲು ಯೋಜನೆಯ ಮೊದಲನೇ ಹಂತ ಉದ್ಘಾಟಿಸಿದ ನಂತರ ಸಾರ್ವಜನಿಕ ರ್‍ಯಾಲಿ ಉದ್ದೇಶಿಸಿ ಮಾತನಾಡಿದರು.

ಪರಿಸರ ಉಳಿಸಲು ಮತ್ತು ವೇಗ ಹೆಚ್ಚಿಸಲು ಸರ್ಕಾರವು ವಿದ್ಯುತ್ ಚಾಲಿತ ಬಸ್ಸುಗಳಿಗೆ ಆದ್ಯತೆ ನೀಡುತ್ತಿದೆ.

ಗುಜರಾತ್‌ನ ಗಾಂಧಿನಗರದಲ್ಲಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿ, ಪ್ರಯಾಣ ಮಾಡಿದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಮಹಿಳೆಯರ ಜತೆ ಸಂವಾದ ನಡೆಸಿದರು – ಪಿಟಿಐ ಚಿತ್ರ

ಈವರೆಗೆ ದೇಶದಲ್ಲಿ 7,000ಕ್ಕೂ ಹೆಚ್ಚು ವಿದ್ಯುತ್ ಚಾಲಿತ ಬಸ್ಸುಗಳನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಸುಮಾರು ₹3,500 ಕೋಟಿ ವೆಚ್ಚ ಮಾಡಲಾಗಿದೆ. ಗುಜರಾತ್‌ಗೂ 850 ವಿದ್ಯುತ್ ಚಾಲಿತ ಬಸ್ಸುಗಳು ಸಿಕ್ಕಿವೆ ಎಂದರು.

ದೇಶವು 75 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಪರಿಚಯಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಘೋಷಿಸಿದರು.

ಐವರಿಗೆ 7 ವರ್ಷ ಕಠಿಣ ಶಿಕ್ಷೆ

ಭೋಪಾಲ್ (ಪಿಟಿಐ): ವ್ಯಾಪಂ (ಮಧ್ಯಪ್ರದೇಶ ವ್ಯವ್‌ಸಾಯಿಕ್ ಪರೀಕ್ಷಾ ಮಂಡಲ್) ಹಗರಣಕ್ಕೆ ಸಂಬಂಧಿಸಿದಂತೆ ಐವರಿಗೆ ಏಳು ವರ್ಷಗಳ ಕಠಿಣ ಸಜೆಯನ್ನು ಇಲ್ಲಿಯ ವಿಶೇಷ ಸಿಬಿಐ ಕೋರ್ಟ್ ವಿಧಿಸಿದೆ.

2013ರಲ್ಲಿ ವ್ಯಾಪಂ ನಡೆಸಿದ್ದ ಪೊಲೀಸ್ ನೇಮಕಾತಿ ಪರೀಕ್ಷೆಯಲ್ಲಿ ನಡೆದಿದ್ದ ಅವ್ಯವಹಾರಕ್ಕೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಕಮಲ್ ಕಿಶೋರ್, ಅಮರ್ ಸಿಂಗ್, ನಾಗೇಂದ್ರ ಸಿಂಗ್, ಸುರೇಶ್ ಸಿಂಗ್ ಮತ್ತು ರವಿಕುಮಾರ್ ರಜಪೂತ್‌ಗೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ನೀತಿರಾಜ್ ಸಿಂಗ್ ಸಿಸೋಡಿಯಾ ಶಿಕ್ಷೆ ವಿಧಿಸಿದರು.

ದೋಷಿಗಳಿಗೆ ತಲಾ ₹10,000 ದಂಡ ವಿಧಿಸಲಾಗಿದೆ.

'16 ಕೋಟಿ ಮುನ್ನೆಚ್ಚರಿಕೆ ಡೋಸ್ ನೀಡಿಕೆ'

ನವದೆಹಲಿ (ಪಿಟಿಐ): 'ಎಪ್ಪತ್ತೈದು ದಿನಗಳ ಕಾಲ ನಡೆಸಿದ 'ಕೋವಿಡ್ ಲಸಿಕೆ ಅಮೃತ ಮಹೋತ್ಸವ' ಅಭಿಯಾನದಲ್ಲಿ ಸರಿಸುಮಾರು 16 ಕೋಟಿ ಮುನ್ನೆಚರಿಕೆ ಡೋಸ್‌ಗಳನ್ನು ನೀಡಲಾಗಿದೆ. ಈ ಅಭಿಯಾನ ಪ್ರಾರಂಭಿಸುವ ಮೊದಲು ಶೇ 8 ರಷ್ಟಿದ್ದ ಮುನ್ನೆಚರಿಕೆ ಡೋಸ್‌ಅನ್ನು ಪಡೆದುಕೊಂಡವರ ಸಂಖ್ಯೆ, ಈಗ ಶೇ 27ಕ್ಕೆ ಏರಿಕೆಯಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಜುಲೈ 15ರಂದು ಈ ಅಭಿಯಾನವನ್ನು ಆರಂಭಿಸಲಾಗಿತ್ತು. ಚಾರ್ ಧಾಮ್ ಯಾತ್ರೆ, ಅಮರನಾಥ ಯಾತ್ರೆ ಸೇರಿದಂತೆ ಹಲವು ಧಾರ್ಮಿಕ ಯಾತ್ರೆಗಳಲ್ಲಿ ಶಿಬಿರಗಳನ್ನು ಮಾಡಲಾಗಿದೆ. ಜೊತೆಗೆ, ರೈಲು, ಬಸ್, ವಿಮಾನ ನಿಲ್ದಾಣಗಳಲ್ಲಿ, ಶಾಲಾ ಕಾಲೇಜುಗಳಲ್ಲಿ, ಖಾಸಗಿ, ಸರ್ಕಾರಿ ಕಚೇರಿಗಳಲ್ಲಿ ಮುನ್ನೆಚ್ಚರಿಕೆ ಡೋಸ್‌ಗಳನ್ನು ನೀಡುವ ಶಿಬಿರಗಳನ್ನು ಮಾಡಲಾಗಿತ್ತು ಎಂದಿದೆ.

ಅಂಕಿ-ಅಂಶಗಳು

13,01,778 ಶಿಬಿರಗಳು

76.18 ಕೋಟಿ ಮೊದಲ ಡೋಸ್

2.35 ಕೋಟಿ ಎರಡನೇ ಡೋಸ್

15.92 ಕೋಟಿ ಮುನ್ನೆಚ್ಚರಿಕಾ ಡೋಸ್

ಗಲಭೆಗೆ ಪ್ರಚೋದನೆ: ಶಾರ್ಜೀಲ್‌ಗೆ ಜಾಮೀನು

ನವದೆಹಲಿ (ಪಿಟಿಐ): 2019ರ ಜಾಮಿಯ ಗಲಭೆಗೆ ಪ್ರಚೋದನೆ ನೀಡಿದ ದೇಶದ್ರೋಹ ಪ್ರಕರಣದಲ್ಲಿ ಜೆಎನ್‌ಯು ಮಾಜಿ ವಿದ್ಯಾರ್ಥಿ ಶಾರ್ಜೀಲ್ ಇಮಾಮ್‌ಗೆ ದೆಹಲಿ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಅನುಜ್ ಅಗರವಾಲ್ ಜಾಮೀನು ಮಂಜೂರು ಮಾಡಿದ್ದಾರೆ.

ನ್ಯೂ ಫ್ರೆಂಡ್ಸ್ ಕಾಲೋನಿ ಪ್ರಕರಣದಲ್ಲಿ ದೇಶದ್ರೋಹದ ಭಾಷಣ ಮಾಡಿ ಜಾಮಿಯಾ ಗಲಭೆಗೆ ಪ್ರಚೋದನೆ ನೀಡಿದ್ದರೆಂದು ಆರೋಪಿಸಿ ಇಮಾಮ್ ಅವರನ್ನು ಬಂಧಿಸಲಾಗಿತ್ತು.

2020ರಿಂದ ನ್ಯಾಯಾಂಗ ಬಂಧನದಲ್ಲಿರುವ ಇಮಾಮ್, ದೆಹಲಿ ಗಲಭೆ ಸಂಚಿನ ಪ್ರಕರಣದಲ್ಲಿ ಇನ್ನೂ ಜಾಮೀನು ದೊರೆಯದ ಕಾರಣ ಜೈಲಿನಲ್ಲಿಯೇ ಮುಂದುವರಿಯಬೇಕಾಗುತ್ತದೆ.

19 ಜನರ ಸಾವು

ಕಾಬುಲ್ (ಎಪಿ): ಶಿಯಾ ಸಮುದಾಯ ಹೆಚ್ಚಿರುವ ಇಲ್ಲಿನ ದಷ್ಟಿ ಬರ್ಚಿ ಪ್ರದೇಶದ ಶಿಕ್ಷಣ ಕೇಂದ್ರವೊಂದರ ಮೇಲೆ ಶುಕ್ರವಾರ ಆತ್ಮಾಹುತಿ ಬಾಂಬ್ ದಾಳಿ ನಡೆದಿದ್ದು, 19 ಜನರು ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ 27 ಮಂದಿ ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ನೇಮಿಸಿರುವ ಕಾಬುಲ್ ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಕಾಜ್ ಉನ್ನತ ಶಿಕ್ಷಣ ಕೇಂದ್ರದ ಮೇಲೆ ಈ ದಾಳಿ ನಡೆದಿದೆ. ಕಾಲೇಜು, ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಪ್ರವೇಶಕ್ಕೆ ನಡೆಯುವ ಪರೀಕ್ಷೆಗಳಿಗೆ ಈ ಕೇಂದ್ರದಲ್ಲಿ ತರಬೇತಿ ನೀಡಲಾಗುತ್ತದೆ.

ಉಕ್ರೇನ್‌ನ 4 ಪ್ರದೇಶ ರಷ್ಯಾಕ್ಕೆ ಸೇರ್ಪಡೆ

ಕೀವ್/ಮಾಸ್ಕೊ (ರಾಯಿಟರ್ಸ್/ಎಪಿ): ಉಕ್ರೇನ್‌ನಲ್ಲಿ ಸೇನೆ ಭಾಗಶಃ ವಶಪಡಿಸಿಕೊಂಡಿರುವ ನಾಲ್ಕು ಪ್ರದೇಶಗಳನ್ನು ರಷ್ಯಾಕ್ಕೆ ಸೇರ್ಪಡೆ ಮಾಡಿಕೊಳ್ಳುವ ಒಪ್ಪಂದಕ್ಕೆ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರ ಸಹಿ ಹಾಕಿದರು.

ಹೊಸದಾಗಿ ಸೇರಿಸಿಕೊಂಡ ಕೆರ್ಸಾನ್, ಝುಪೋರಿಝಿಯಾ, ಲುಹಾನ್‌ಸ್ಕ್, ಡೊನೆಟ್‌ಸ್ಕ್ ಪ್ರದೇಶಗಳನ್ನು ಎಲ್ಲ ವಿಧಾನಗಳಿಂದ ರಕ್ಷಿಸಲಾಗುವುದು ಎಂದು ಪುಟಿನ್ ಘೋಷಿಸಿದರು.

ಉಕ್ರೇನ್‌ಗೆ ಸೇರಿದ ಆಕ್ರಮಿತ ಪ್ರದೇಶಗಳಲ್ಲಿ ಜನಾಭಿಪ್ರಾಯ ಸಂಗ್ರಹ ನಡೆಸಿದ ಬೆನ್ನಲ್ಲೇ ಈ ಘೋಷಣೆ ಹೊರಬಿದ್ದಿದೆ.

ಶಾಂತಿ ಮಾತುಕತೆಗೆ ಬರುವಂತೆ ಉಕ್ರೇನ್ ಅನ್ನು ಒತ್ತಾಯಿಸಿದ ಪುಟಿನ್, ಆಕ್ರಮಿತ ಪ್ರದೇಶಗಳ ಹಸ್ತಾಂತರ ಷರತ್ತುಗಳು ಮಾತುಕತೆಯ ಮೇಜಿನಲ್ಲಿ ಇರುವುದಿಲ್ಲ ಎಂಬ ಖಡಕ್ ಎಚ್ಚರಿಕೆಯನ್ನು ನೀಡಿದರು.

ಅಮೆರಿಕ ಸೇರಿ ಐರೋಪ್ಯ ಒಕ್ಕೂಟದ 27 ಸದಸ್ಯ ರಾಷ್ಟ್ರಗಳು, ಪುಟಿನ್ ಅವರ ನಡೆಯನ್ನು ಖಂಡಿಸಿದ್ದು, 'ಇದು ಅಕ್ರಮ ಸೇರ್ಪಡೆ' ಉಕ್ರೇನ್‌ನ ನೆಲದಲ್ಲಿ ನಡೆಸಿರುವ ಅಕ್ರಮ ಜನಾಭಿಪ್ರಾಯ ಸಂಗ್ರಹಕ್ಕೆ ಎಂದಿಗೂ ಮನ್ನಣೆ ಇಲ್ಲ ಎಂದಿವೆ. ಉಕ್ರೇನ್ ಕೂಡ ತನ್ನ ನೆಲದ ರಕ್ಷಣೆಗೆ ಪ್ರತಿದಾಳಿ ಮುಂದುವರಿಯಲಿದೆ ಎಂದು ಎಚ್ಚರಿಸಿದೆ.

ಕ್ಷಿಪಣಿ ದಾಳಿ: 25 ನಾಗರಿಕರ ಸಾವು: ಉಕ್ರೇನಿಯನ್ ನಗರಗಳ ಮೇಲೆ ರಷ್ಯಾ ಪಡೆಗಳು ಶುಕ್ರವಾರ ಕ್ಷಿಪಣಿಗಳು, ಆತ್ಮಹುತಿ ಡ್ರೋನ್ ದಾಳಿ ನಡೆಸಿದ್ದು, ಝುಪೋರಿಝಿಯಾ ನಗರದಲ್ಲಿ ಸುಮಾರು 25 ನಾಗರಿಕರು ಮೃತಪಟ್ಟು, ಅಂದಾಜು 50 ಜನರು ಗಾಯಗೊಂಡಿದ್ದಾರೆ.

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕ ನೆಟ್‌ಬಾಲ್ ತಂಡಕ್ಕೆ ಕಂಚಿನ ಪದಕ

ವೇಟ್‌ಲಿಫ್ಟಿಂಗ್: ಮೀರಾಗೆ ಚಿನ್ನ

ಮೀರಾಬಾಯಿ ಚಾನು

ಗಾಂಧಿನಗರ (ಪಿಟಿಐ): ಒಲಿಂಪಿಕ್ ಬೆಳ್ಳಿ ಪದಕ ವಿಜೇತೆ ಮೀರಾಬಾಯಿ ಚಾನು ಅವರು ರಾಷ್ಟ್ರೀಯ ಕ್ರೀಡಾಕೂಟದ ವೇಟ್‌ಲಿಫ್ಟಿಂಗ್‌ನ ಮಹಿಳೆಯರ 49 ಕೆ.ಜಿ ವಿಭಾಗದಲ್ಲಿ ನಿರೀಕ್ಷೆಯಂತೆಯೇ ಚಿನ್ನದ ಪದಕ ಗೆದ್ದುಕೊಂಡರು.

ಮಣಿಪುರ ತಂಡವನ್ನು ಪ್ರತಿನಿಧಿಸಿದ ಚಾನು, ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ಒಟ್ಟು 191 ಕೆ.ಜಿ. ಭಾರ ಎತ್ತುವಲ್ಲಿ ಯಶಸ್ವಿಯಾದರು. ಸ್ನ್ಯಾಚ್‌ನಲ್ಲಿ 84 ಕೆ.ಜಿ ಹಾಗೂ ಕ್ಲೀನ್- ಜರ್ಕ್‌ನಲ್ಲಿ 107 ಕೆ.ಜಿ. ಸಾಧನೆ ಮಾಡಿದರು.

187 ಭಾರ ಎತ್ತಿದ ಮಣಿಪುರದವರೇ ಆದ ಸಂಜಿತಾ ಚಾನು ಬೆಳ್ಳಿ ಗೆದ್ದರು. ಅವರು ಸ್ನ್ಯಾಚ್‌ನಲ್ಲಿ 82 ಕೆ.ಜಿ ಹಾಗೂ ಕ್ಲೀನ್-ಜರ್ಕ್‌ನಲ್ಲಿ 105 ಕೆ.ಜಿ ಭಾರ ಎತ್ತಿದರು. ಒಡಿಶಾದ ಸ್ನೇಹಾ ಸೊರೇನ್ (169 ಕೆ.ಜಿ) ಕಂಚಿನ ಪದಕ ಪಡೆದರು.

ಬರ್ಮಿಂಗ್‌ಹ್ಯಾಂ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಗೆದ್ದಿದ್ದ ಮೀರಾಬಾಯಿ ಅವರಿಗೆ ಇದು ಎರಡನೇ ರಾಷ್ಟ್ರೀಯ ಕೂಟ ಆಗಿದೆ. ಅವರು ಎರಡೂ ವಿಭಾ ಗಗಳಲ್ಲಿ ಮೊದಲ ಎರಡು ಪ್ರಯತ್ನಗಳಲ್ಲಿ ಮಾತ್ರ ಭಾರ ಎತ್ತಿದರು. 3ನೇ ಅವಕಾಶದಲ್ಲಿ ಭಾರ ಎತ್ತಲಿಲ್ಲ. ಎಡಗೈನ ಮಣಿಕಟ್ಟಿನಲ್ಲಿ ಅಲ್ಪ ನೋವು ಇರುವುದರಿಂದ ಮೂರನೇ ಪ್ರಯತ್ನಕ್ಕೆ ಮುಂದಾಗಲಿಲ್ಲ ಎಂದು ಹೇಳಿದರು.

‘ಎನ್‌ಐಎಸ್ ಪಟಿಯಾಲದಲ್ಲಿ ಇತ್ತೀಚೆಗೆ ತರಬೇತಿಯ ವೇಳೆ ಮಣಿಕಟ್ಟಿಗೆ ಗಾಯಮಾಡಿಕೊಂಡಿದ್ದೆ. ಅದು ಉಲ್ಬಣಿಸದಂತೆ ಎಚ್ಚರವಹಿಸ-ಬೇಕಿತ್ತು’ ಎಂದರು.

ನೆಟ್‌ಬಾಲ್ ತಂಡಕ್ಕೆ ಕಂಚು: ಕರ್ನಾಟಕದ ಮಹಿಳಾ ನೆಟ್‌ಬಾಲ್ ತಂಡದವರು ಕಂಚು ಜಯಿಸಿದರು. ಮೂರನೇ ಸ್ಥಾನ ನಿರ್ಣಯಿಸಲು ಶುಕ್ರವಾರ ನಡೆದ ಕರ್ನಾಟಕ- ಬಿಹಾರ ಪಂದ್ಯ 57-57 ರಲ್ಲಿ ಸಮಬಲದಲ್ಲಿ ಕೊನೆಗೊಂಡಿತು. ಸಮಯಾವಕಾಶದ ಕೊರತೆಯಿಂದ ಸಂಘಟಕರು ಹೆಚ್ಚುವರಿ ಅವಧಿಯ ಆಟ ನಡೆಸದೆ, ಎರಡೂ ತಂಡಗಳನ್ನು ವಿಜಯಿ ಎಂದು ಘೋಷಿಸಿದರು.

ಟೆನಿಸ್ ತಂಡಕ್ಕೆ ನಿರಾಸೆ: ಟೆನಿಸ್ ಟೂರ್ನಿಯಲ್ಲಿ ಕರ್ನಾಟಕ ಮಹಿಳೆಯರ ತಂಡ ಸೆಮಿಫೈನಲ್‌ನಲ್ಲಿ ಸೋಲು ಅನುಭವಿಸಿತು. ಶುಕ್ರವಾರ ನಡೆದ ಪಂದ್ಯದಲ್ಲಿ ಆತಿಥೇಯ ಗುಜರಾತ್ 2-0 ರಲ್ಲಿ ಕರ್ನಾಟಕ ತಂಡವನ್ನು ಮಣಿಸಿತು. ಫೈನಲ್‌ನಲ್ಲಿ ಗುಜರಾತ್- ಮಹಾರಾಷ್ಟ್ರ ಪೈಪೋಟಿ ನಡೆಸಲಿವೆ.

ಕರ್ನಾಟಕದ ಅಭಿನಯಗೆ ಬೆಳ್ಳಿ


ಅಭಿನಯ ಎಸ್‌ ಶೆಟ್ಟಿ

ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ ಮೊದಲ ದಿನವೇ ಕರ್ನಾಟಕ ಪದಕದ ಖಾತೆ ತೆರೆಯಿತು. ಶುಕ್ರವಾರ ನಡೆದ ಮಹಿಳೆಯರ ಹೈಜಂಪ್‌ನಲ್ಲಿ ಅಭಿನಯ ಎಸ್.ಶೆಟ್ಟಿ ಬೆಳ್ಳಿ ಪದಕ ಗೆದ್ದರು. ಅವರು 1.81 ಮೀ. ಸಾಧನೆ ಮಾಡಿದರು.

1.83 ಮೀ. ಜಿಗಿದ ಮಧ್ಯ ಪ್ರದೇಶದ ಸ್ವಪ್ನಾ ಬರ್ಮನ್ ಅವರು ನೂತನ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು. ಬಾಬಿ ಅಲೋಶಿಯಸ್ ಅವರು 2001 ರಲ್ಲಿ ಲುಧಿಯಾನದಲ್ಲಿ ನಡೆದಿದ್ದ ಕೂಟದಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (1.82 ಮೀ.) ಮುರಿದರು. ತಮಿಳುನಾಡಿನ ಗ್ರೇಸಿನಾ ಮೆರ್ಲಿ (1.81 ಮೀ.) ಕಂಚು ಪಡೆದರು. ಅಥ್ಲೆಟಿಕ್ಸ್‌ನಲ್ಲಿ ಮೊದಲ ದಿನ ಒಟ್ಟು 9 ಕೂಟ ದಾಖಲೆಗಳು ನಿರ್ಮಾಣವಾದವು.

ಪ್ರಶಸ್ತಿಯೊಂದಿಗೆ ಕರ್ನಾಟಕ ತಂಡದ ಆಟಗಾರರ ಸಂಭ್ರಮ. (ಎಡದಿಂದ) ಮಂಡಿಯೂರಿದವರು– ಪವನ್ ಪರಶು ಮತ್ತು ಮನೋಹರ್. ನಿಂತವರು: ವಿನಾಯಕ್, ಪವನ್‌ಕುಮಾರ್, ಸತೀಶ್ ಅಂಕಲಗಿ, ಅಂಥೋನಿ ಲೂಯಿಸ್, ವಿಷ್ಣು ಕುಮಾರ್ (ಕೋಚ್), ಕಾರ್ತಿಕ್ ಎಸ್.ಎ, ಕಾರ್ತಿಕ್ ಎ.ಸಿ, ಗಣೇಶ್ ಕೆ, ಸೂರಜ್ ಮತ್ತು ರೈಸನ್– ಪ್ರಜಾವಾಣಿ ಚಿತ್ರ

ಅಖಿಲ ಭಾರತ ಪೋಸ್ಟಲ್ ವಾಲಿಬಾಲ್ ಟೂರ್ನಿ

ಕರ್ನಾಟಕ ತಂಡಕ್ಕೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯುತ್ತಮ ಆಟವಾಡಿದ ಆತಿಥೇಯ ಕರ್ನಾಟಕ ವೃತ್ತ ತಂಡವು ಅಖಿಲ ಭಾರತ ಪೋಸ್ಟಲ್ (ಅಂಚೆ ಇಲಾಲೆ) ವಾಲಿವಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಕೊನೆಗೊಂಡ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಕರ್ನಾಟಕ ತಂಡದವರು 25-20, 25-21, 25-15ರಿಂದ ಕಳೆದ ಬಾರಿಯ ಚಾಂಪಿಯನ್ ಹಿಮಾಚಲ ಪ್ರದೇಶ ತಂಡಕ್ಕೆ ಸೋಲುಣಿಸಿದರು. ಆ ಮೂಲಕ 2019ರ ಫೈನಲ್‌ನಲ್ಲಿ ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡರು.

‘ಬೆಸ್ಟ್ ಆಫ್ ಫೈವ್’ ಸೆಟ್‌ಗಳ ಮಾದರಿಯ ಪಂದ್ಯಗಳ ಪ್ರಶಸ್ತಿ ಸುತ್ತಿನಲ್ಲಿ ಆತಿಥೇಯ ಆಟಗಾರರು ಎದುರಾಳಿ ತಂಡದ ವಿರುದ್ಧ ಚಾಕಚಕ್ಯತೆಯ ಆಟದ ಮೂಲಕ ಗಮನಸೆಳೆದರು. 70 ನಿಮಿಷಗಳಲ್ಲಿ ಮೂರು ಸೆಟ್ ಗೆದ್ದು ಟ್ರೋಫಿಗೆ ಮುತ್ತಿಕ್ಕಿದರು.

ಇದಕ್ಕೂ ಮೊದಲು ನಡೆದ ಸೆಮಿಫೈನಲ್ ಸೆಣಸಾಟಗಳಲ್ಲಿ ಕರ್ನಾಟಕ 25-16, 25-17, 25-18ರಿಂದ ಪಶ್ಚಿಮ ಬಂಗಾಳ ತಂಡವನ್ನು ಪರಾಭವಗೊಳಿಸಿದರೆ, ಹಿಮಾಚಲ ಪ್ರದೇಶ 25-21, 18-25,25-23,25-18ರಿಂದ ಕೇರಳ ತಂಡಕ್ಕೆ ಸೋಲುಣಿಸಿತ್ತು. ಪಶ್ಚಿಮ ಬಂಗಾಳ ತಂಡವು ಕೇರಳವನ್ನು ಮಣಿಸಿ ಮೂರನೇ ಸ್ಥಾನ ಗಳಿಸಿತು.

ಟಿ20: ಮಹಿಳಾ ಏಷ್ಯಾ ಕಪ್ ಟೂರ್ನಿ ಇಂದಿನಿಂದ

ಭಾರತಕ್ಕೆ ಶ್ರೀಲಂಕಾ ಸವಾಲು

ಹರ್ಮನ್‌ಪ್ರೀತ್ ಕೌರ್

ಸಿಲ್ಹೆಟ್, ಬಾಂಗ್ಲಾದೇಶ (ಪಿಟಿಐ): ಇಂಗ್ಲೆಂಡ್ ನೆಲದಲ್ಲಿ ಐತಿಹಾಸಿಕ ಸರಣಿ ಗೆಲುವು ಸಾಧಿಸಿದ ಹುಮ್ಮಸ್ಸಿನಲ್ಲಿರುವ ಭಾರತ ಮಹಿಳಾ ತಂಡದವರು ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಪ್ರಶಸ್ತಿಯೆಡೆ-ಗಿನ ಅಭಿಯಾನವನ್ನು ಶನಿವಾರ ಆರಂ-ಭಿಸಲಿದ್ದಾರೆ.

ಸಿಲ್ಹೆಟ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ, ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಮಹಿಳೆಯರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಮೊದಲ ಬಾರಿ 2004 ರಲ್ಲಿ ನಡೆದಿತ್ತು. 2018ರ ಆವೃತ್ತಿ ಹೊರತುಪಡಿಸಿ, ಇತರ ಎಲ್ಲ ಟೂರ್ನಿಗಳಲ್ಲೂ (ಆರು ಸಲ) ಭಾರತ ಚಾಂಪಿಯನ್ ಆಗಿದೆ. ಏಕದಿನ ಮಾದರಿಯಲ್ಲಿ ನಡೆದ ನಾಲ್ಕು ಟೂರ್ನಿಗಳು ಮತ್ತು ಟಿ20 ಮಾದರಿಯಲ್ಲಿ ನಡೆದ ಎರಡು ಟೂರ್ನಿಗಳನ್ನು ಜಯಿಸಿದೆ.

2018ರ ಟೂರ್ನಿಯ ಫೈನಲ್‌ನಲ್ಲಿ ಭಾರತ ತಂಡ, ಆತಿಥೇಯ ಬಾಂಗ್ಲಾ ಎದುರು ಸೋಲು ಅನುಭವಿಸಿತ್ತು. ಮಹಿಳಾ ಏಷ್ಯಾಕಪ್ ಟೂರ್ನಿ 2012 ರಿಂದಲೂ ಟಿ20 ಮಾದರಿಯಲ್ಲಿ ಆಯೋಜನೆಯಾಗುತ್ತಿದೆ.

ನಾಲ್ಕು ವರ್ಷಗಳ ಬಿಡುವಿನ ಬಳಿಕ ಈ ಟೂರ್ನಿ ನಡೆಯುತ್ತಿದೆ. 2020 ರಲ್ಲಿ ಬಾಂಗ್ಲಾದಲ್ಲಿ ನಡೆಯಬೇಕಿದ್ದ ಟೂರ್ನಿಯನ್ನು ಕೋವಿಡ್ ಕಾರಣ 2021ಕ್ಕೆ ಮುಂದೂಡಲಾಗಿತ್ತು. ಆ ಬಳಿಕ ಟೂರ್ನಿಯನ್ನೇ ರದ್ದುಗೊಳಿಸ-ಲಾಗಿತ್ತು.

ಏಕದಿನ ಪಂದ್ಯಗಳಲ್ಲಿ ಉತ್ತಮ ಫಾರ್ಮ್‌ನಲ್ಲಿರುವ ಭಾರತ ತಂಡ, ಇತ್ತೀಚಿನ ದಿನಗಳಲ್ಲಿ ಟಿ20 ಮಾದರಿಯಲ್ಲಿ ಅಷ್ಟೊಂದು ಯಶಸ್ಸು ಗಳಿಸಿಲ್ಲ. ಆದರೂ ಏಷ್ಯಾದ ಇತರ ತಂಡಗಳಿಗೆ ಹೋಲಿಸಿದರೆ ಭಾರತವೇ ಗೆಲ್ಲುವ ನೆಚ್ಚಿನ ತಂಡ ಎನಿಸಿಕೊಂಡಿದೆ.

ನಾಯಕಿ ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ಶಫಾಲಿ ವರ್ಮಾ ಮತ್ತು ಎಸ್.ಮೇಘನಾ ಅವರು ಬ್ಯಾಟಿಂಗ್ ವಿಭಾಗಕ್ಕೆ ಬಲ ನೀಡಲಿದ್ದಾರೆ. ಗಾಯದ ಕಾರಣ ಇಂಗ್ಲೆಂಡ್ ಪ್ರವಾಸಕ್ಕೆ ತೆರಳದೇ ಇದ್ದ ಜೆಮಿಮಾ ರಾಡ್ರಿಗಸ್ ತಂಡಕ್ಕೆ ವಾಪಸಾಗಿದ್ದಾರೆ.

ರೇಣುಕಾ ಸಿಂಗ್, ರಾಧಾ ಯಾದವ್, ರಾಜೇಶ್ವರಿ ಗಾಯಕ್ವಾಡ್ ಮತ್ತು ದೀಪ್ತಿ ಶರ್ಮಾ ಅವರನ್ನೊಳಗೊಂಡ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ.

ಚಾಮರಿ ಅಟಪಟ್ಟು ನೇತೃತ್ವದ ಶ್ರೀಲಂಕಾ ತಂಡ ಯುವ ಹಾಗೂ ಅನುಭವಿ ಆಟಗಾರ್ತಿಯರನ್ನು ಒಳಗೊಂಡಿದ್ದು, ಭಾರತಕ್ಕೆ ಪೈಪೋಟಿ ನೀಡಲು ಸಜ್ಜಾಗಿದೆ.

ಈ ಬಾರಿ ಭಾರತ, ಪಾಕಿಸ್ತಾನ, ಥಾಯ್ಲೆಂಡ್, ಶ್ರೀಲಂಕಾ, ಮಲೇಷ್ಯಾ, ಯುಎಇ ಮತ್ತು ಬಾಂಗ್ಲಾದೇಶ ಒಳಗೊಂಡಂತೆ ಏಳು ತಂಡಗಳು ಪಾಲ್ಗೊಂಡಿವೆ. ಎಲ್ಲ ತಂಡಗಳು ಲೀಗ್ ಹಂತದಲ್ಲಿ ಆರು ಪಂದ್ಯಗಳನ್ನು ಆಡಲಿವೆ. ಅಗ್ರ ನಾಲ್ಕು ಸ್ಥಾನಗಳನ್ನು ಪಡೆಯುವ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಇಂದಿನ ಪಂದ್ಯಗಳು: ಬಾಂಗ್ಲಾದೇಶ–ಥಾಯ್ಲೆಂಡ್ (ಬೆಳಿಗ್ಗೆ 8.30)

ಭಾರತ– ಶ್ರೀಲಂಕಾ (ಮಧ್ಯಾಹ್ನ 1)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಟಿ20 ವಿಶ್ವಕಪ್: ವಿಜೇತರಿಗೆ ₹ 13 ಕೋಟಿ ಬಹುಮಾನ

ದುಬೈ (ಪಿಟಿಐ): ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ತಂಡಕ್ಕೆ ₹ 13 ಕೋಟಿ ನಗದು ಬಹುಮಾನ ನೀಡಲಾಗುವುದು. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶುಕ್ರವಾರ ನೀಡಿರುವ ಪ್ರಕಟಣೆಯಲ್ಲಿ ಈವಿಷಯ ತಿಳಿಸಿದೆ.

ಅಕ್ಟೋಬರ್ 16ರಿಂದ ನಡೆಯಲಿರುವ ಟೂರ್ನಿಯಲ್ಲಿ 16 ತಂಡಗಳು ಸ್ಪರ್ಧಿಸಲಿವೆ. ರನ್ನರ್ಸ್ ಅಪ್ ತಂಡವು ₹6.5 ಕೋಟಿ ಪಡೆಯಲಿದೆ.

ಸೆಮಿಫೈನಲ್‌ನಲ್ಲಿ ಸೋಲುವ ತಂಡಗಳು ತಲಾ ₹ 3.25 ಕೋಟಿ ಪಡೆಯಲಿವೆ. ಸೂಪರ್ 12 ಹಂತ ತಲುಪುವ ಎಂಟು ತಂಡಗಳೂ ತಲಾ ₹ 57 ಲಕ್ಷ ನಗದು ಬಹುಮಾನ ಗಳಿಸಲಿವೆ.

‘ಹೋದ ವರ್ಷದಂತೆಯೇ ಈ ಬಾರಿಯೂ ಪುರುಷರ ಟಿ20 ವಿಶ್ವಕಪ್ ಟೂರ್ನಿಯಲ್ಲಿ 30 ಪಂದ್ಯಗಳ ನಡೆಯಲಿವೆ. ಈಗಾಗಲೇ ಭಾರತ, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಬಾಂಗ್ಲಾದೇಶ ಹಾಗೂ ಅಫ್ಗಾನಿಸ್ತಾನ ತಂಡಗಳು ಸೂಪರ್ 12 ಹಂತ ಪ್ರವೇಶಿಸಿವೆ’ ಎಂದು ಐಸಿಸಿ ತಿಳಿಸಿದೆ. ನಮಿಬಿಯಾ, ಶ್ರೀಲಂಕಾ, ನೆದರ್ಲೆಂಡ್ಸ್, ಯುಎಇ ಎ ಗುಂಪು ಹಾಗೂ ವೆಸ್ಟ್ ಇಂಡೀಸ್, ಸ್ಕಾಟ್ಲೆಂಡ್, ಐರ್ಲೆಂಡ್ ಮತ್ತು ಜಿಂಬಾಬ್ವೆ ತಂಡಗಳು ಬಿ ಗುಂಪಿನಲ್ಲಿ ಆಡಲಿವೆ. ಮೊದಲ ಸುತ್ತು ಗೆಲ್ಲುವ ತಂಡಗಳಿಗೆ ₹32.50 ಲಕ್ಷ ನೀಡಲಾಗುವುದು.

ಎಸಿಎಫ್‌ಗೆ ಭರತ್ ಉಪಾಧ್ಯಕ್ಷ

ಚೆನ್ನೈ (ಪಿಟಿಐ): ಹಿರಿಯ ಕ್ರೀಡಾ ಆಡಳಿತಗಾರ ಭರತ್ ಸಿಂಗ್ ಚೌಹಾನ್ ಅವರು ಏಷ್ಯನ್ ಚೆಸ್ ಫೆಡರೇಷನ್‌ನ (ಎಸಿಎಫ್) ಉಪಾಧ್ಯಕ್ಷರಾಗಿ ಪುನರಾ-ಯ್ಕೆಯಾಗಿದ್ದಾರೆ.

‘ಚೆಸ್ ಒಲಿಂಪಿಯಾಡ್ ಯಶಸ್ವಿಯಾಗಿ ಆಯೋಜಿಸಲು ಮಾಡಿದ ಕಠಿಣ ಪರಿಶ್ರಮಕ್ಕೆ ದೊರೆತ ಪ್ರತಿಫಲವಿದು’ ಎಂದು 3ನೇ ಅವಧಿಗೆ ಈ ಹುದ್ದೆಗೆ ಆಯ್ಕೆಯಾದ ಚೌಹಾನ್ ಪ್ರ-ತಿಕ್ರಿಯಿಸಿದರು. ಚೆನ್ನೈನಲ್ಲಿ ಈಚೆಗೆ ನಡೆದ 44ನೇ ಚೆಸ್ ಒಲಿಂಪಿಯಾಡ್‌ನ-ಲ್ಲಿ ಚೌಹಾನ್ ಅವರು ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಯುಎಇಯ ಹಿಶಾಮ್ ಅಲ್ ತಾಹಿರ್, ಥಾಯ್ಲೆಂಡ್‌ನ ಸಹಪೊಲ್ ನಕ್ವನಿಚ್ ಅವರು ಕ್ರಮವಾಗಿ ಪ್ರಧಾನ ಕಾರ್ಯದರ್ಶಿ, ಖಜಾಂಚಿಯಾಗಿ ಆಯ್ಕೆಯಾದರು.

ರಾಜ್‌ಕೋಟ್‌ನಲ್ಲಿ ಇರಾನಿ ಕಪ್ ಟೂರ್ನಿ ಇಂದಿನಿಂದ

ಪೂಜಾರಗೆ ಮಿಂಚುವ ತವಕ

ಚೇತೇಶ್ವರ್ ಪೂಜಾರ ಹಾಗೂ ಜಯದೇವ್ ಉನದ್ಕತ್

ರಾಜ್‌ಕೋಟ್ (ಪಿಟಿಐ): ಭಾರತ ಟೆಸ್ಟ್ ತಂಡದ ಆಯ್ಕೆದಾರರ ಗಮನ ಸೆಳೆಯುವ ಛಲದಲ್ಲಿರುವ ಚೇತೇಶ್ವರ್ ಪೂಜಾರ, ಹನುಮವಿಹಾರಿ ಹಾಗೂ ಮಯಂಕ್ ಅಗರವಾಲ್ ಅವರು ಶನಿವಾರ ಆರಂಭವಾಗಲಿರುವ ಇರಾನಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಕಣಕ್ಕಿಳಿ-ಯಲಿದ್ದಾರೆ.

ಕಳೆದ ಬಾರಿಯ ರಣಜಿ ಟ್ರೋಫಿ ಚಾಂಪಿಯನ್ ಸೌರಾಷ್ಟ್ರ ಹಾಗೂ ಹನುಮವಿಹಾರಿ ನಾಯಕತ್ವದ ರೆಸ್ಟ್ ಆಫ್ ಇಂಡಿಯಾ ತಂಡಗಳು ಮುಖಾ-ಮುಖಿಯಾಗಲಿವೆ.

ಕೋವಿಡ್ ಕಾರಣದಿಂದಾಗಿ ಕಳೆದ ಎರಡು ವರ್ಷ ಇರಾನಿ ಟ್ರೋಫಿ ಟೂರ್ನಿ ನಡೆದಿರಲಿಲ್ಲ.

ಟೆಸ್ಟ್ ತಂಡದಲ್ಲಿ ಸ್ಥಾನ ಪಡೆಯಲು ಪೂಜಾರ ಅವರಿಗೆ ಇದು ಉತ್ತಮ ಅವಕಾಶವಾಗಿದೆ. ಅವರು ಆತಿಥೇಯ ಸೌರಾಷ್ಟ್ರದ ಪರ ಕಣಕ್ಕಿಳಿಯಲಿದ್ದಾ-ರೆ. ಜಯದೇವ್ ಉನದ್ಕತ್ ತಂಡದ ನಾಯಕರಾಗಿದ್ದಾರೆ. ರೆಸ್ಟ್ ಆಫ್ ಇಂಡಿಯಾ ತಂಡದಲ್ಲಿ ಮಯಂಕ್ ಅಗರವಾಲ್ ಆಡುತ್ತಿದ್ದಾರೆ. ಅಲ್ಲದೇ ಪ್ರಿಯಾಂಕ್ ಪಾಂಚಾಲ್, ಅಭಿಮನ್ಯು ಈಶ್ವರನ್ ಹಾಗೂ ಯುವ ಆಟಗಾರ ಯಶಸ್ವಿ ಜೈಸ್ವಾಲ್ ಅವರೂ ಈ ತಂಡ-ದಲ್ಲಿದ್ದಾರೆ. ಕಾಶ್ಮೀರದ ವೇಗಿ ಉಮ್ರಾನ್ ಮಲೀಕ್ ಅವರೂ ತಮ್ಮ ಯಾರ್ಕರ್ ಪ್ರತಿಭೆಯನ್ನು ತೋರಲು ಸಿದ್ಧರಾಗಿ-ದ್ದಾರೆ.

ತಂಡಗಳು: ಸೌರಾಷ್ಟ್ರ: ಜಯದೇವ್ ಉನದ್ಕತ್ (ನಾಯಕ), ಚೇತೇಶ್ವರ್ ಪೂಜಾರ, ಶೆಲ್ಡನ್ ಜಾಕ್ಸನ್, ಅರ್ಪಿತ್ ವಸವದಾ, ಚಿರಾಗ್ ಜಾನಿ, ಕಮಲೇಶ್ ಮಕ್ವಾನಾ, ಧರ್ಮೇಂದ್ರಸಿಂಹ ಜಡೇಜ, ಪ್ರೇರಕ್ ಮಂಕಡ್, ಚೇತನ್ ಸಕಾರಿಯಾ, ಸ್ನೆಲ್ ಪಟೇಲ್, ವಿಶ್ವ ರಾಜಸಿಂಹ ಜಡೇಜ, ಖುಷಾಂಗ್ ಪಟೇಲ್, ಹರ್ವಿಕ್ ದೇಸಾಯಿ, ಸಮರ್ಥ್ ವ್ಯಾಸ್, ಪಾರ್ಥ್ ಭಟ್, ಕಿಶನ್ ಪರಮಾರ್

ರೆಸ್ಟ್ ಆಫ್ ಇಂಡಿಯಾ: ಹನುಮವಿಹಾರಿ (ನಾಯಕ), ಮಯಂಕ್ ಅಗರವಾಲ್, ಪ್ರಿಯಾಂಕ್ ಪಾಂಚಾಲ್, ಅಭಿಮನ್ಯು ಈಶ್ವರನ್, ಯಶ್ ಧುಳ್, ಸರ್ಫರಾಜ್ ಖಾನ್, ಯಶಸ್ವಿ ಜೈಸ್ವಾಲ್, ಕೆ.ಎಸ್. ಭರತ, ಉಪೇಂದ್ರ ಯಾದವ್, ಜಯಂತ್ ಯಾದವ್, ಸೌರಭ್ ಕುಮಾರ್, ಆರ್. ಸಾಯಿಕಿಶೋರ್, ಮುಕೇಶ್ ಕುಮಾರ್, ಉಮ್ರಾನ್ ಮಲಿಕ್, ಕುಲದೀಪ್ ಸೇನ್, ಅರ್ಜನ್ ನಾಗಸ್ವಲ್ಲಾ

ಪಂದ್ಯ ಆರಂಭ: ಬೆಳಿಗ್ಗೆ 9.30ರಿಂದ

ಸಂಕ್ಷಿಪ್ತ ಸುದ್ದಿ

ಬೂಮ್ರಾ ಬದಲಿಗೆ ಸಿರಾಜ್‌ಗೆ ಸ್ಥಾನ

ನವದೆಹಲಿ (ಪಿಟಿಐ): ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಅವರನ್ನು ದಕ್ಷಿಣ ಆಫ್ರಿಕಾ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡುತ್ತಿರುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಬೆನ್ನುನೋವಿನಿಂದಾಗಿ ಹೊರ ಬಿದ್ದಿರುವ ಜಸ್‌ಪ್ರೀತ್ ಬೂಮ್ರಾ ಅವರ ಸ್ಥಾನಕ್ಕೆ ಸಿರಾಜ್ ಅವರನ್ನು ಆಯ್ಕೆ ಮಾಡಲಾಗಿದೆ.

‘ದಕ್ಷಿಣ ಆಫ್ರಿಕಾ ಎದುರು ಉಳಿದಿರುವ ಇನ್ನೆರಡು ಟಿ20 ಪಂದ್ಯಗಳಿಗೆ ಸಿರಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಆಯ್ಕೆ ಸಮಿತಿಯು ಈ ನಿರ್ಣಯ ಕೈಗೊಂಡಿದೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಬೂಮ್ರಾ ಅವರಿಗೆ ತೀವ್ರ ಬೆನ್ನು-ನೋವಿರುವುದರಿಂದ ಆರು ತಿಂಗಳು ವಿಶ್ರಾಂತಿ ತೆಗೆದುಕೊಳ್ಳುವಂತೆ ವೈದ್ಯರ ತಂಡವು ಸಲಹೆ ನೀಡಿದೆ. ಇದರಿಂದಾಗಿ ಬೂಮ್ರಾ ಮುಂದಿನ ತಿಂಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿಲ್ಲ.

ಯುವರಾಜ್ ಸಿಂಗ್ ಹಾಗೂ ವಿಧಾತ್ರಿ ಅರಸ್ –ಪ್ರಜಾವಾಣಿ ಚಿತ್ರ

ಗಾಲ್ಫ್: ವಿಧಾತ್ರಿ, ಯುವರಾಜ್‌ಗೆ ಪ್ರಶಸ್ತಿ

ಬೆಂಗಳೂರು: ಮೈಸೂರಿನ ವಿಧಾತ್ರಿ ಅರಸ್ ಮತ್ತು ಪಂಜಾಬ್‌ನ ಯುವರಾಜ್ ಸಿಂಗ್ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಐಜಿಯು ಬಯೋಜೆನ್ ರೋಟರಿ ಸದರ್ನ್ ಇಂಡಿಯಾ ಅಮೆಚೂರ್ ಗಾಲ್ಫ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಹಾಗೂ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರು.

16 ವರ್ಷದ ವಿಧಾತ್ರಿ ಒಟ್ಟು 212 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನ ಪಡೆದರು. ಅಮೆಚೂರ್ ಟೂರ್ನಿಯ ಸಮಗ್ರ ವಿಭಾಗದಲ್ಲಿ (ಮಹಿಳೆಯರು ಮತ್ತು ಕೆಟಗರಿ ಎ) ಅವರಿಗೆ ದೊರೆತ ಮೊದಲ ಕಿರೀಟ ಇದು. ಈ ಋತುವಿನಲ್ಲಿ ಅವರು ಎರಡು ಟೂರ್ನಿಗಳಲ್ಲಿ ‘ಶ್ರೇಷ್ಠ ಅಮೆಚೂರ್ ಸ್ಪರ್ಧಿ’ ಪ್ರಶಸ್ತಿ ಪಡೆದಿದ್ದರು.

ಫೆನ್ಸಿಂಗ್: ಬೆಂಗಳೂರಿನ ಲಕ್ಷ್ಮಿ, ಸಯೀದಾಗೆ ಚಿನ್ನದ ಪದಕ

ಶ್ರೀವಿದ್ಯಾ ವಿರುದ್ಧ ಗೆದ್ದ ಲಕ್ಷ್ಮಿ ಅವರನ್ನು ತೀರ್ಪುಗಾರರು ಜಯಶಾಲಿಯೆಂದು ಘೋಷಿಸಿದರು

ಮೈಸೂರು: ಮೈಸೂರು ವಿಶ್ವವಿ-ದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯ-ನ್‌ನಲ್ಲಿ ಶುಕ್ರವಾರ ನಡೆದ ದಸರಾ ಕ್ರೀಡಾಕೂಟದ ಫೆನ್ಸಿಂಗ್ ಸ್ಪರ್ಧೆಯಲ್ಲಿ ಲಕ್ಷ್ಮಿ, ಸಯೀದಾ ಚಿನ್ನ ಗೆದ್ದರು.

ಮಹಿಳೆಯರ ವಿಭಾಗದ ಫೆನ್ಸಿಂಗ್ ಇಪಿ ಸ್ಪರ್ಧೆಯಲ್ಲಿ ಬೆಂಗಳೂರು ನಗರ ವಲಯದ ಲಕ್ಷ್ಮಿ, 15–13ರಲ್ಲಿ ಬೆಂಗಳೂರಿನವರೇ ಆದ ಶ್ರೀವಿದ್ಯಾ ಅವರನ್ನು ಮಣಿಸಿದರು. ಲೇಖನಾ ಹಾಗೂ ಮೈಸೂರಿನ ಲತಾ ಅವರು ಕಂಚು ಗೆದ್ದರು.

ಫಾಯ್ಲ್ ಸ್ಪರ್ಧೆಯಲ್ಲಿ ಬೆಂಗಳೂರು ನಗರ ವಲಯದ ಸಯೀದಾ ಬಾನು ಇಫ್ತಾಖ್ವಾರ್ 13–3 ಅಂತರದಲ್ಲಿ ಅಮೃತಾ ಅವರನ್ನು ಸೋಲಿಸಿದರು. ಇದೇ ವಲಯದ ಧೃತಿಕಾ ಹಾಗೂ ಲೆತಿತಿಯಾ ಮೂರನೇ ಸ್ಥಾನ ಪಡೆದರು.

ನವಮಿ, ಜಾರ್ಜ್ ಮಿಂಚು

ಮೈಸೂರು: ಬೆಂಗಳೂರಿನ ಜೋನಾಥನ್ ಸ್ಯಾಮುವೆಲ್ ಜಾರ್ಜ್ ಮತ್ತು ಮೈಸೂರಿನ ಎಚ್.ಆರ್. ನವಮಿ ಶುಕ್ರವಾರ ಆರಂಭವಾದ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್‌ನಲ್ಲಿ ವೇಗದ ರಾಜ ಹಾಗೂ ರಾಣಿಯಾಗಿ ಹೊರಹೊಮ್ಮಿದರು.

ಚಾಮುಂಡಿ ವಿಹಾರ ಕ್ರೀಡಾಂ-ಗಣದಲ್ಲಿ ನಡೆದ 100 ಮೀ ಓಟದ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಜೋನಾಥನ್ 10.71 ಸೆಕೆಂಡುಗಳಲ್ಲಿ ಗೆದ್ದರೆ, ಮಹಿಳಾ ವಿಭಾಗದಲ್ಲಿ ಮೈಸೂರಿನ ಎಚ್.ಆರ್.ನವಮಿ 11.81 ಸೆಕೆಂಡ್‌ನಲ್ಲಿ ಗುರಿ ದಾಟಿದರು.

ಸೆಮಿಗೆ ಸಿಕ್ಕಿ– ರೋಹನ್

ಹೊ ಚಿ ಮಿನ್ ಸಿಟಿ (ಪಿಟಿಐ): ಭಾರತದ ರೋಹನ್ ಕಪೂರ್ ಮತ್ತು ಎನ್. ಸಿಕ್ಕಿ ರೆಡ್ಡಿ ಅವರು ವಿಯೆಟ್ನಾಂ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿ-ದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಶ್ರೇಯಾಂಕರಹಿತ ಭಾರತದ ಜೋಡಿಯು ಶುಕ್ರವಾರ 21-19 21-17ರಿಂದ ಮೂರನೇ ಶ್ರೇಯಾಂಕದ, ಮಲೇಷ್ಯಾದ ಚಾನ್ ಪೆಂಗ್ ಸೂನ್ ಮತ್ತು ಚಿಯಾ ಯೀ ಸೀ ಅವರನ್ನು ಪರಾಭವಗೊಳಿಸಿದರು.

ಜಾಕಿ ಆಲಂ ನಿಧನ

ಬೆಂಗಳೂರು: ನ್ಯೂಮೊನಿಯಾ ಸಮಸ್ಯೆಯಿಂದ ಬಳಲುತ್ತಿದ್ದ ಜಾಕಿ ಅಂಜರ್ ಆಲಂ (34) ಶುಕ್ರವಾರ ಶೇಷಾದ್ರಿಪುರಂನಲ್ಲಿ ನಿಧನರಾದರು.

ಬಿಹಾರ ಸಂಜಾತ ಆಲಂ, ಎರಡು ದಶಕಗಳ ಹಿಂದೆ ಬೆಂಗಳೂರಿಗೆ ಬಂದು ನೆಲೆಸಿದ್ದರು. ಇರ್ಫಾನ್ ಘಟಾಲಾ ಬಳಿ ತರಬೇತಿ ಪಡೆದಿದ್ದ ಅವರು 39 ರೇಸ್‌ಗಳಲ್ಲಿ ಜಯ ಗಳಿಸಿದ್ದರು.

ರಾಜ್, ನಾಯರ್‌ಗೆ ಚಿನ್ನ

ಈಜು ಸ್ಪರ್ಧೆ: ಬೆಂಗಳೂರು ನಗರ ವಲಯ ಪಾರಮ್ಯ

• ಮೋಹನ್ ಕುಮಾರ್ ಸಿ.

ದಸರಾ ಕ್ರೀಡಾಕೂಟದಲ್ಲಿ ಈಜು ಸ್ಪರ್ಧೆಗಳಲ್ಲಿ ಪದಕಗಳೊಂದಿಗೆ ಟ್ರೋಫಿ ಗೆದ್ದ ಬೆಂಗಳೂರಿನ ಈಜುಪಟುಗಳಾದ ರಾಜ್ ವಿನಾಯಕ್ ರಿಲೇಕರ್, ಶ್ರೀಚರಣಿ ತುಮು ಹಾಗೂ ಕಾರ್ತಿಕೇಯನ್ ನಾಯರ್

ಮೈಸೂರು: ಬೆಂಗಳೂರಿನ ಕಾರ್ತಿಕೇಯನ್ ನಾಯರ್ ಹಾಗೂ ರಾಜ್ ವಿನಾಯಕ್ ರಿಲೇಕರ್ ಅವರು ದಸರಾ ಈಜು ಕೂಟದಲ್ಲಿ ತಲಾ ಎರಡು ಚಿನ್ನ, ಒಂದು ಬೆಳ್ಳಿ ಗೆದ್ದು ವೈಯಕ್ತಿಕ ವಿಭಾಗದಲ್ಲಿ ಜಂಟಿ ಚಾಂಪಿಯನ್ ಆದರು. ಮಹಿಳಾ ವಿಭಾಗದಲ್ಲಿ ಶ್ರೀಚರಣಿ ತುಮು 3 ಚಿನ್ನ ಹಾಗೂ ಒಂದು ಬೆಳ್ಳಿ ಗೆದ್ದು ಚಾಂಪಿಯನ್ ಆದರು.

ಚಾಮುಂಡಿ ವಿಹಾರ ಕ್ರೀಡಾಂಗಣದ ಈಜುಕೊಳದಲ್ಲಿ ಶುಕ್ರವಾರ ನಡೆದ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕಾರ್ತಿಕೇಯನ್ ನಾಯರ್ 57.25 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರೆ, 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 2.01.56 ನಿಮಿಷಗಳಲ್ಲಿ ಗೆಲುವಿನ ಗುರಿ ಮುಟ್ಟಿದರು. 100 ಮೀ ಫ್ರೀಸ್ಟೈಲ್‌ನಲ್ಲಿ ಬೆಳ್ಳಿ ಜಯಿಸಿದರು.

ರಾಜ್ ವಿನಾಯಕ್ ರಿಲೇಕರ್ 100 ಮೀ ಫ್ರೀಸ್ಟೈಲ್‌ನಲ್ಲಿ 54.31 ಸೆಕೆಂಡ್‌ಗಳಲ್ಲಿ ಗೆದ್ದರು., 200 ಮೀ ಐ.ಎಂ ಸ್ಪರ್ಧೆಯಲ್ಲಿ 2.18.69 ನಿಮಿಷದಲ್ಲಿ ಚಿನ್ನದ ಪದಕ ಗಿಟ್ಟಿಸಿದರು. 100 ಮೀ ಬಟರ್‌ಫ್ಲೈನಲ್ಲಿ ಬೆಳ್ಳಿ ಪದಕ ಪಡೆದರು. ಮಹಿಳೆಯರ ವಿಭಾಗದ 100 ಮೀ ಫ್ರೀಸ್ಟೈಲ್, 200 ಮೀ. ಐ.ಎಂ, 400 ಮೀ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಶ್ರೀಚರಣಿ ತುಮು ಅವರು 100 ಮೀ ಬ್ರೆಸ್ಟ್ ಸ್ಟ್ರೋಕ್‌ನಲ್ಲೂ ಬೆಳ್ಳಿ ಗೆದ್ದರು.

ಫಲಿತಾಂಶಗಳು: ಪುರುಷರು: 400 ಮೀ. ಫ್ರೀಸ್ಟೈಲ್: ಎನ್.ಧೋನೀಶ್ (ಮೈಸೂರು, ಸಮಯ: 4.21.28 ನಿಮಿಷ)–1, ಮನೋಜ್ ನಾಯಕ (ಬೆಂಗಳೂರು ನಗರ)–2, ಅನಿಷ್ ಅಚ್ಯುತ (ಬೆಂಗಳೂರು)–3. 100 ಮೀ. ಬಟರ್‌ಫ್ಲೈ: ಕಾರ್ತಿಕೇಯನ್ ನಾಯರ್ (ಬೆಂಗಳೂರು ನಗರ, ಸಮಯ: 57.25 ಸೆಕೆಂಡ್)–1, ರಾಜ್ ವಿನಾಯಕ್ ರಿಲೇಕರ್ (ಬೆಂಗಳೂರು)–2, ಮಣಿಕಂಠ ಲಕ್ಷ್ಮಣ (ಬೆಂಗಳೂರು ಗ್ರಾಮಾಂತರ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಬಿ.ಜಿತಿನ್ (ಬೆಂಗಳೂರು ನಗರ, ಸಮಯ: 2.57.25 ನಿಮಿಷ)–1, ಕೆ.ಕುಶಾಲ್ (ಬೆಂಗಳೂರು)–2, ಸನತ್ ಅವಧೂತ್ ಅನಂತ್‌ಭಟ್ (ಬೆಳಗಾವಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಮಣಿಕಂಠ ಲಕ್ಷ್ಮಣ (ಬೆಂಗಳೂರು ಗ್ರಾಮಾಂತರ, ಸಮಯ: 1.09.87 ನಿಮಿಷ)–1, ಸೂರ್ಯ ಜೋಯಪ್ಪ ಒಡಿಯಂಡ ರಾಜೇಶ್ (ಮೈಸೂರು)–2, ಶ್ರೇಯಸ್ ಮಂಜುನಾಥ್ (ಬೆಂಗಳೂರು)–3. 200 ಮೀ. ವೈಯಕ್ತಿಕ ಮಿಡ್ಲೇ: ರಾಜ್ ವಿನಾಯಕ್ ರಿಲೇಕರ್ (ಬೆಂಗಳೂರು ನಗರ, ಸಮಯ: 2.18.69 ನಿ.)–1, ಬಿ.ಜಿತಿನ್ (ಬೆಂಗಳೂರು)–2, ಸೂರ್ಯ ಜೋಯಪ್ಪ ಒಡಿಯಂಡ ರಾಜೇಶ್ (ಮೈಸೂರು)–3. 100 ಮೀ. ಫ್ರೀಸ್ಟೈಲ್: ರಾಜ್ ವಿನಾಯಕ್ ರಿಲೇಕರ್ (ಬೆಂಗಳೂರು ನಗರ, ಸಮಯ: 54.31 ಸೆಕೆಂಡ್)–1, ಕಾರ್ತಿಕೇಯನ್ ನಾಯರ್ (ಬೆಂಗಳೂರು ನಗರ)–2, ಎನ್. ಧೋನೀಷ್ (ಮೈಸೂರು)–3. 200 ಮೀ. ಬ್ಯಾಕ್‌ಸ್ಟ್ರೋಕ್: ಮಣಿಕಂಠ ಲಕ್ಷ್ಮಣ (ಬೆಂಗಳೂರು ಗ್ರಾಮಾಂತರ, ಸಮಯ: 2.32.66 ನಿ)–1, ಸೂರ್ಯ ಜೋಯಪ್ಪ ಒಡಿಯಂಡ ರಾಜೇಶ್ (ಮೈಸೂರು)–2, ಶ್ರೇಯಸ್ ಮಂಜುನಾಥ್ (ಬೆಂಗಳೂರು)–3. 100 ಮೀ. ಬ್ಯಾಕ್‌ಸ್ಟ್ರೋಕ್: ಆಕಾಶಮಣಿ (ಬೆಂಗಳೂರು, ಸಮಯ: 1.01.31 ನಿ)–1, ಎಂ.ಧ್ಯಾನ್ (ಬೆಂಗಳೂರು)–2, ಸನತ್ ಅವಧೂತ್ ಅನಂತಭಟ್ (ಬೆಳಗಾವಿ)–3. 200 ಮೀ. ಫ್ರೀಸ್ಟೈಲ್: ಕಾರ್ತಿಕೇಯನ್ ನಾಯರ್ (ಬೆಂಗಳೂರು ನಗರ, ಸಮಯ: 20.01.56 ನಿ)–1, ಎನ್.ಧೋನೀಶ್ (ಮೈಸೂರು)–2, ಅನಿಷ್ ಅಚ್ಯುತ (ಬೆಂಗಳೂರು)–3. 4x100 ಫ್ರೀಸ್ಟೈಲ್ ರಿಲೇ: ಆರ್.ವೈಭವ್, ಎಂ.ಧ್ಯಾ, ಕಾರ್ತಿಕೇಯನ್ ನಾಯರ್, ರಾಜ್ ವಿನಾಯಕ್ ರಿಲೇಕರ್ (ಬೆಂಗಳೂರು, ಸಮಯ: 3.53.29 ನಿಮಿಷ)–1, ಪೃಥ್ವಿಗೌಡ, ಸೂರ್ಯ ಜೋಯಪ್ಪ ಒಡಿಯಂಡ, ಚೇತನ್ ಶೆಟ್ಟಿ, ಧೋನೀಶ್ (ಮೈಸೂರು)–2, ಅಜಿಂಕ್ಯ ಅಭಿಜಿತ್ ಸುಣಗಾರ್, ತನಿಷ್ಕ್ ಮೋರೆ, ಆದಿತ್ಯ, ಚಿನ್ಮಯ್ (ಬೆಳಗಾವಿ)–3.

ಮಹಿಳೆಯರು: 400 ಮೀ. ಫ್ರೀಸ್ಟೈಲ್: ಶ್ರೀಚರಣಿ ತುಮು (ಬೆಂಗಳೂರು, ಸಮಯ: 4.50 ನಿ)–1, ಅನುಮತಿ ಚೌಗಲೆ (ಬೆಳಗಾವಿ)–2, ಲಕ್ಷ್ಮಿ ಟಿ.ನಿಕ್ಕಂ (ಬೆಂಗಳೂರು)–3. 100 ಮೀ. ಬಟರ್‌ಫ್ಲೈ: ಎಚ್.ತಿತಿಕ್ಷಾ (ಬೆಂಗಳೂರು ನಗರ, ಸಮಯ: 1.08 ನಿಮಿಷ), ಅನುಮತಿ ಚೌಗುಲೆ (ಬೆಳಗಾವಿ)–2, ಆ್ಯನಾ ಸ್ಫೂರ್ತಿ ತೆರೇಸಾ (ಬೆಂಗಳೂರು)–3. 200 ಮೀ. ಬ್ಯಾಕ್‌ಸ್ಟ್ರೋಕ್: ತನ್ಮಯಿ ಧರ್ಮೇಶ್ (ಬೆಂಗಳೂರು ನಗರ, ಸಮಯ: 2.39 ನಿಮಿಷ)–1, ಸಿದ್ಧಿ ಗೌತಮ್ ಶಾ (ಬೆಂಗಳೂರು)–2, ವೇದಾ (ಬೆಳಗಾವಿ)–3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ರಿಯಾನಾ ಧೃತಿ ಫರ್ನಾಂಡಿಸ್ (ಮೈಸೂರು, ಸಮಯ: 1.20 ನಿಮಿಷ)–1, ಶ್ರೀಚರಣಿ ತುಮು (ಬೆಂಗಳೂರು)–2, ಹಿತೈಷಿ (ಮೈಸೂರು)–3. 200 ಮೀ. ವೈಯಕ್ತಿಕ ಮಿಡ್ಲೇ: ಶ್ರೀಚರಣಿ ತುಮು (ಬೆಂಗಳೂರು ನಗರ, ಸಮಯ: 2.37.19 ನಿಮಿಷ)–1, ರಿಯಾನಾ ಧೃತಿ ಫರ್ನಾಂಡೀಸ್ (ಮೈಸೂರು)–2, ಅನುಮತಿ ಚೌಗಲೆ (ಬೆಳಗಾವಿ)–3. 100 ಮೀ ಫ್ರೀಸ್ಟೈಲ್: ಶ್ರೀಚರಣಿ ತುಮು (ಬೆಂಗಳೂರು, ಸಮಯ: 1.02.91 ನಿ)–1, ಲಕ್ಷ್ಮಿ ನಿಕಂ (ಬೆಂಗಳೂರು)–2, ವಿದ್ಯಾ ಜಿ. ಭಂಡಾರಿ (ಮೈಸೂರು)–3. 200 ಮೀ. ಬ್ರೆಸ್ಟ್‌ಸ್ಟ್ರೋಕ್: ರಿಯಾನಾ ಧೃತಿ ಫರ್ನಾಂಡಿಸ್ (ಮೈಸೂರು, ಸಮಯ: 2.55.60 ನಿ)–1, ಸಾನ್ವಿ (ಬೆಂಗಳೂರು)–2, ಮೇಘನಾಂಜಲಿ (ಕಲಬುರ್ಗಿ)–3. 100 ಮೀ ಬ್ಯಾಕ್‌ಸ್ಟ್ರೋಕ್: ಸಿದ್ಧಿ ಗೌತಂ ಶಾ (ಬೆಂಗಳೂರು ನಗರ, ಸಮಯ: 1.11.88 ನಿ)–1, ಕೆ.ಆರ್. ಶ್ರುತಿ (ಬೆಂಗಳೂರು), ವೇದಾ ವೈಭವ್ ಖಾನೊಲ್ಕರ್ (ಬೆಳಗಾವಿ)–3. 200 ಮೀ ಫ್ರೀಸ್ಟೈಲ್: ಅನುಮತಿ ಚೌಗಲೆ (ಬೆಳಗಾವಿ, ಸಮಯ: 2.18.53 ನಿ)–1, ಎಂ.ಪಿ. ಆರ್ನಾ (ಬೆಂಗಳೂರು)–2, ಲಕ್ಷ್ಮಿ ಟಿ. ನಿಕಂ (ಬೆಂಗಳೂರು)–3. 4x100 ಫ್ರೀಸ್ಟೈಲ್ ರಿಲೇ: ಶ್ರೀಚರಣಿ ತುಮು, ಲಕ್ಷ್ಮಿ ಟಿ. ನಿಕಂ, ಸಾಕ್ಷಿ ಸಂಜೀವ್ ದ್ಯಾಮಣ್ಣನವರ್, ಎಂ.ಪಿ.ಆರ್ನಾ (ಬೆಂಗಳೂರು ನಗರ, ಸಮಯ: 4.21.72 ನಿ), ರಿಯಾನಾ ಧೃತಿ ಫರ್ನಾಂಡಿಸ್, ವಿದ್ಯಾ ಜಿ. ಭಂಡಾರಿ, ಎಸ್.ಎಸ್.ನಂದಿನಿ, ಹಿತೈಶಿ (ಮೈಸೂರು), ಶರ್ಮಿಷ್ಠಾ ಮಾಲ್ಯೆ, ವೇದಾ ವೈಭವ ಖಾಲೊನ್ಕರ್, ಸಾಕ್ಷಿ ಶಿರಳ್ಳಿ, ಭೂಮಿ ಭಾಗವತ್ (ಬೆಳಗಾವಿ)

ಮುಂದಿನ ವರ್ಷ ಸೆ.22ರಿಂದ 24ರವರೆಗೆ ಆಯೋಜನೆ

2023ಕ್ಕೆ ಭಾರತದಲ್ಲಿ ಮೋಟೊಜಿಪಿ

ಜಪಾನ್‌ನ ಮೊಟೆಗಿಯಲ್ಲಿ ಸೆ.25 ರಂದು ನಡೆದ ಮೋಟೊಜಿಪಿ ಜಪಾನ್ ಗ್ರ್ಯಾನ್‌ಪ್ರಿ ರೇಸ್‌ನ ದೃಶ್ಯ –ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ವಿಶ್ವದ ಪ್ರತಿಷ್ಠಿತ ದ್ವಿಚಕ್ರ ವಾಹನ ರೇಸ್ ಎನಿಸಿರುವ ಮೋಟೊಜಿಪಿಯ (ಗ್ರ್ಯಾನ್‌ಪ್ರಿ ಮೋಟರ್‌ಸೈಕಲ್ ರೇಸಿಂಗ್) ಮುಂದಿನ ಋತುವಿನ ಒಂದು ರೇಸ್ ಭಾರತದಲ್ಲಿ ನಡೆಯಲಿದ್ದು, ಈ ರೇಸ್‌ಗೆ ಆತಿಥ್ಯ ವಹಿಸುವ 31ನೇ ರಾಷ್ಟ್ರ ಎನಿಸಿಕೊ-ಳ್ಳಲಿದೆ.

ಉತ್ತರ ಪ್ರದೇಶದ ಗ್ರೇಟರ್ ನೊಯಿಡಾದಲ್ಲಿರುವ ಬುದ್ಧ ಇಂಟ-ರ್‌ನ್ಯಾಷನಲ್ ಸರ್ಕಿಟ್‌ನಲ್ಲಿ 2023ರ ಸೆಪ್ಟೆಂಬರ್ 22ರಿಂದ 24ರ ವರೆಗೆ ರೇಸ್ ನಡೆಯಲಿದೆ ಎಂದು ಮೋಟೊಜಿಪಿಯ ವಾಣಿಜ್ಯ ಹಕ್ಕುಗಳನ್ನು ಹೊಂದಿರುವ ‘ಡೋರ್ನ ಸ್ಪೋರ್ಟ್ಸ್’ ಪ್ರಕಟಣೆಯಲ್ಲಿ ತಿಳಿಸಿದೆ. 2023ರ ಋತುವಿನ 14ನೇ ರೇಸ್ ಇದಾಗಿರಲಿದೆ.

‘ನಮ್ಮ 2023ರ ಕ್ಯಾಲೆಂಡರ್‌ನ ಒಂದು ರೇಸ್ ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ನಡೆಯಲಿದೆ ಎಂಬುದನ್ನು ಪ್ರಕಟಿಸಲು ಹೆಮ್ಮೆಯೆನಿಸುತ್ತದೆ. ಮೋಟೊಜಿಪಿಗೆ ಭಾರತದಲ್ಲಿ ಸಾಕಷ್ಟು ಅಭಿಮಾನಿಗಳು ಇದ್ದಾರೆ. ಈ ರೇಸ್‌ಅನ್ನು ಭಾರತದಲ್ಲಿ ಇದೇ ಮೊದಲ ಬಾರಿ ಆಯೋಜಿಸಲು ಸಾಧ್ಯವಾಗುತ್ತಿರುವುದು ಸಂತಸದ ವಿಷಯ’ ಎಂದು ಡೋರ್ನ ಸಿಇಒ ಕಾರ್ಮೆಲೊ ಎಜ್‌ಪಿಲೇಟಾ ಅವರು ಹೇಳಿದ್ದಾರೆ.

ಡೋರ್ನ ಸ್ಪೋರ್ಟ್ಸ್ ಅಧಿಕಾರಿಗಳು ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದರ-ಲ್ಲದೆ, ದೇಶದ ಮುಂಚೂಣಿಯ ರೇಸ್ ಪ್ರಾಯೋಜಕರಾದ ಫೇರ್‌ಸ್ಟ್ರೀಟ್ ಸ್ಪೋರ್ಟ್ಸ್ (ಎಫ್‌ಎಸ್‌ಎಸ್) ಜತೆ ಏಳು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದ್ದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಜತೆಯೂ ಮಾತುಕತೆ ನಡೆಸಿದ್ದರು.

2011ರಿಂದ 2013ರ ವರೆಗೆ ಬುದ್ಧ ಇಂಟರ್‌ನ್ಯಾಷನಲ್ ಸರ್ಕಿಟ್‌ನಲ್ಲಿ ಫಾರ್ಮುಲಾ ಒನ್ ರೇಸ್ ನಡೆದಿತ್ತು. ಆ ಬಳಿಕ ವಿವಿಧ ಕಾರಣಗಳಿಂದಾಗಿ ಈ ರೇಸ್ ಭಾರತದಲ್ಲಿ ನಡೆದಿಲ್ಲ. ಇದೀಗ ಮೋಟೊಜಿಪಿ ಮೂಲಕ ವಿಶ್ವದ ಮತ್ತೊಂದು ಪ್ರತಿಷ್ಠಿತ ರೇಸ್ ಭಾರತಕ್ಕೆ ಕಾಲಿಡಲಿದೆ.

ಶನಿವಾರ, 1 ಅಕ್ಟೋಬರ್ 2022
ಪ್ರಜಾವಾಣಿ
ಪ್ರಜಾ ಪ್ಲಸ್
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ವೀಕೆಂಡ್ ಟ್ರಿಪ್ ಇಲ್ಲಿದೆ ಟಿಪ್ಸ್

ಅಯ್ಯಣ್ಣ

ಟಿ.ಕೆ ಫಾಲ್ಸ್

ಟಿ.ಕೆ ಫಾಲ್ಸ್ ಅಂದರೆ, ತೊಟ್ಟಿಕಲ್ಲು ಜಲಪಾತ. ಸ್ವರ್ಣಮುಖಿ ನದಿ ನೀರಿನಿಂದ ಉಂಟಾಗಿರುವ ಜಲಪಾತ. ಸುಮಾರು 50ರಿಂದ 60 ಅಡಿ ಎತ್ತರದಿಂದ ಬಂಡೆಯ ಒಂದು ತುದಿಯಿಂದ ನೀರು ಧುಮ್ಮಿಕ್ಕುತ್ತದೆ. ಬೆಂಗಳೂರಿನಿಂದ ಕೇವಲ 35 ಕಿ.ಮೀ. ದೂರ ಇದೆ. ಕನಕಪುರ ರೋಡ್‌ನಲ್ಲಿ ಹೋಗಬೇಕು, ಕಗ್ಗಲಿಪುರ ಹತ್ತಿರ. ಬನ್ನೇರುಘಟ್ಟದ ಕಾಡಿನ ಪ್ರದೇಶದಲ್ಲಿರುವುದರಿಂದ ಇದನ್ನು ಸ್ವರ್ಣಮುಖಿ ಜಲಪಾತ ಎಂದೂ ಕರೆಯುತ್ತಾರೆ.

ಕನಕಪುರ ಮಾರ್ಗದಲ್ಲಿ ಕಗ್ಗಲೀಪುರದಿಂದ ಎಡಕ್ಕೆ ಬನ್ನೇರುಘಟ್ಟಕ್ಕೆ ಹೋಗುವ ಹಾದಿಯಲ್ಲಿ ಹೋದಾಗ ಬ್ಯಾಲದಮರದೊಡ್ಡಿ ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಅಲ್ಲಿಂದ ಕಲ್ಲುಮಣ್ಣಿನ ಹಾದಿಯಲ್ಲಿ 1 ಕಿ.ಮೀ ಸಾಗಿದರೆ ತೊಟ್ಟಿಕಲ್ಲು ಮುನೇಶ್ವರ ಸ್ವಾಮಿ ದೇವಸ್ಥಾನ ಸಿಗುತ್ತದೆ.

ಮಳೆಗಾಲದಲ್ಲಿ ಇಲ್ಲಿ ಜಲಪಾತ ಸೃಷ್ಟಿಯಾಗುತ್ತದೆ. ಮೊನ್ನೆ ಮಳೆಯಾಗಿರುವುದರಿಂದ ಜಲಪಾತ ಸೃಷ್ಟಿಯಾಗಿತ್ತು. ಈಗಲೂ ನೀರು ಹರಿಯುತ್ತಿದೆ. ಈ ಜಾಗಕ್ಕೆ ಹೋದವರು ಜಲಪಾತ ನೋಡಿಕೊಂಡು, ನೀರಿನಲ್ಲಿ ಆಟವಾಡಿಕೊಂಡು, ಚಾರಣವನ್ನೂ ಕೈಗೊಳ್ಳಬಹುದು. ಇಲ್ಲಿಗೆ ಹೋಗುವಾಗ ತಿನಿಸುಗಳನ್ನು ತೆಗೆದುಕೊಂಡು ಹೋಗುವುದು ಸೂಕ್ತ. ಬೆಂಗಳೂರಿನಿಂದ ಕನಕಪುರಕ್ಕೆ ಹೋಗುವ ಬಸ್‌ಗಳು ಕಗ್ಗಲಿ ಪುರದಲ್ಲಿ ಸ್ಟಾಪ್ ಕೊಡುತ್ತಾರೆ. ಅಲ್ಲಿಂದ ಜಲಪಾತ 1 ಕಿ.ಮೀ.

ಟ್ರಿಪ್ ಟಿಪ್ಸ್

ಎರಡು ಮೂರು ತಿಂಗಳಿನಿಂದ ರಾಜ್ಯದಾದ್ಯಂತ ಉತ್ತಮ ಮಳೆಯಾಗಿದೆ. ಪ್ರವಾಸಿ ತಾಣಗಳು ಹಸಿರಿನಿಂದ ಕಂಗೊಳಿಸುತ್ತಿವೆ. ಈ ಸಂಭ್ರಮಕ್ಕೆ ವಾರಾಂತ್ಯ, ದಸರಾ ರಜೆಯೂ ಜೊತೆಯಾಗಿದೆ. ಬೆಂಗಳೂರಿನಿಂದ ಯಾವ ತಾಣಗಳಿಗೆ ಪ್ರಯಾಣ ಮಾಡಬೇಕು ಅಂತ ಪ್ಲಾನ್ ಮಾಡಿದ್ದೀರಾ? ಈ ಬಗ್ಗೆ ಗೊಂದಲದಲ್ಲಿದ್ದರೆ ಇಲ್ಲಿದೆ ನೋಡಿ ಮಾಹಿತಿ.

ಜಾನಪದ ಲೋಕ

ಜಾನಪದ ಲೋಕವು ಬೆಂಗಳೂರು ಸುತ್ತಮುತ್ತ ಇರುವ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ. ಜನಪದ ಸಂಸ್ಕೃತಿಯ ತಾಣ. ಜಾನಪದ ತಜ್ಞ ಎಚ್.ಎಲ್.ನಾಗೇಗೌಡರ ಕನಸಿನ ಕೂಸು ಈ ತಾಣ. ಜಾನಪದ ಲೋಕದಲ್ಲಿ ನೋಡಬಹುದಾದ ವಿಶಿಷ್ಟ ಸ್ಥಳವೆಂದರೆ ಲೋಕಮಾತಾ ಮಂದಿರ. ಇಲ್ಲಿ ಬಗೆ ಬಗೆಯ ಚಿತ್ತಾರ, ಚಿತ್ರಪುಟಗಳು, ಗಿರಿಜನರು ಮತ್ತು ಗ್ರಾಮೀಣರ ಬಳಕೆಯ ವಿಶಿಷ್ಟ ವಸ್ತುಗಳಿವೆ. ಕನಾಟಕದ ಜನಪದ ಕಲೆಗಳ ಭೂಪಟ, ಛಾಯಾ ಚಿತ್ರಗಳಿವೆ. ಇಲ್ಲಿರುವ 'ಚಿತ್ರ ಕುಟೀರ'ದಲ್ಲಿ ಹಲವಾರು ಛಾಯಾಚಿತ್ರಗಳು ಪ್ರದರ್ಶಿತಗೊಂಡಿವೆ.

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿರುವ ಈ ರಮಣೀಯ ಸ್ಥಳವು ಬೆಂಗಳೂರಿನಿಂದ 52 ಕಿ.ಮೀ ಇದ್ದು, ಇಲ್ಲಿಗೆ ಬೈಕ್ ಮತ್ತು ಕಾರಿನಲ್ಲಿ ತೆರಳಲು ಸುಮಾರು 2 ಗಂಟೆ ಬೇಕಾಗಲಿದೆ. ಮಂಗಳವಾರ ರಜೆ ಇರಲಿದ್ದು, ಉಳಿದ ದಿನಗಳಲ್ಲಿ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5.30ರವರೆಗೆ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿರಲಿದೆ.

ಚುಂಚಿ ಫಾಲ್ಸ್

ಕಳೆದ ಕೆಲ ದಿನಗಳ ಹಿಂದೆ ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಉತ್ತಮ ಮಳೆಯಾದ ಕಾರಣ ಚುಂಚಿ ಫಾಲ್ಸ್ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರನ್ನು ಹಿಡಿದಿಡುವುದರಲ್ಲಿ ಅನುಮಾನವೇ ಇಲ್ಲ.

ಮೋಜು-ಮಸ್ತಿ ಮಾಡಲು ನೀರಿನಲ್ಲಿ ಇಳಿದು, ನೀರಿನ ಸೆಳೆತಕ್ಕೆ ಸಿಲುಕಿ ನೀರು ಪಾಲಾದ ಘಟನೆಗಳು ನಡೆದಿರುವ ಕಾರಣ, ನೀರಿನ ಹತ್ತಿರಕ್ಕೆ ಹೋಗಲು ಬಿಡಲ್ಲ ಎನ್ನಲಾಗುತ್ತಿದೆ. ಆದರೆ, ಸ್ಥಳೀಯ ಮಾರ್ಗದರ್ಶಕರಿಗೆ ಶುಲ್ಕ ಪಾವತಿಸಿದರೆ, ಅವರು ನೀರಿನ ತೀರಾ ಹತ್ತಿರಕ್ಕೆ ಕರೆದುಕೊಂಡು ಹೋಗಿ ನೀರಿನ ಸೌಂದರ್ಯವನ್ನು ಸವಿಯಲು ಅವಕಾಶ ಕಲ್ಪಿಸಲಾಗುತ್ತದೆ ಎನ್ನಲಾಗುತ್ತದೆ.

ಬೆಂಗಳೂರಿನಿಂದ ಇದು 90 ಕಿ.ಮೀ ದೂರವಿದ್ದು, ಕನಕಪುರದಿಂದಲೇ 30 ಕಿ.ಮೀ ಆಗುತ್ತದೆ. ವಾಹನದ ಸೌಲಭ್ಯವಿಲ್ಲದವರಿಗೆ, ಚುಂಚಿ ಫಾಲ್ಸ್ ಹತ್ತಿರಕ್ಕೆ ಹೋಗುವ ಬಸ್ಸುಗಳು ಸಹ ಲಭ್ಯವಿವೆ.





ಸಾವನದುರ್ಗ

ಕಳೆದ ತಿಂಗಳು ಸುರಿದ ಭಾರಿ ಮಳೆಗೆ ಮಾಗಡಿ ತಾಲ್ಲೂಕಿನ ಸಾವನದುರ್ಗ ಅರಣ್ಯಪ್ರದೇಶ ಹಚ್ಚ ಹಸಿರಾಗಿದೆ. ಬೆಂಗಳೂರಿನಿಂದ 50 ಕಿ,ಮೀ ದೂರದಲ್ಲಿರುವ ಈ ತಾಣದಲ್ಲಿ ಸುಮಾರು 15 ಕಿ.ಮೀ ಸುತ್ತಳತೆಯ ಏಕಶಿಲಾ ಬೆಟ್ಟವಿದೆ. ಈ ಬೆಟ್ಟದ ಮೇಲೆ ಕೆಂಪೇಗೌಡರ ಕಾಲದ ಕೋಟೆ ಇದೆ. ದೇವಾಲಯಗಳಿವೆ. ಬೆಟ್ಟದ ಮೇಲೆ ಲಕ್ಷ್ಮೀನರಸಿಂಹಸ್ವಾಮಿ, ವೀರಭದ್ರಸ್ವಾಮಿ ದೇವಸ್ಥಾನಗಳಿವೆ. ಕೆಂಪೇಗೌಡರ ಹೆಸರಿನಲ್ಲಿ ವನ್ಯಜೀವಿ ಧಾಮ ಹಾಗೂ ಜಿಂಕೆ ಪಾರ್ಕ್ ಇಲ್ಲಿವೆ. ಸಾವನದುರ್ಗ ಚಲನಚಿತ್ರ ಹೊರಾಂಗಣಕ್ಕೆ ಹೇಳಿ ಮಾಡಿಸಿದ ತಾಣ. ಇಲ್ಲಿ ಹಲವಾರು ಕನ್ನಡ ಸಿನಿಮಾಗಳ ಚಿತ್ರೀಕರಣ ಇಲ್ಲಿ ನಡೆದಿದೆ.

ಮೇಕೆದಾಟು

ಮೇಕೆದಾಟು ರಾಜ್ಯದ ಪ್ರಮುಖ ಪ್ರವಾಸಿ ತಾಣ. ಕನಕಪುರದಿಂದ 16 ಕಿ.ಮೀ ದೂರದಲ್ಲಿದೆ. ಇಲ್ಲಿಗೆ ಸಮೀಪದಲ್ಲಿ (4 ಕಿ.ಮೀ ಹಿಂದೆ) ಕಾವೇರಿ ಮತ್ತು ಅರ್ಕಾವತಿ ನದಿಗಳು ಸಮಾಗಮವಾಗುತ್ತವೆ. ನಂತರ ಮೇಕೆದಾಟು ಬಳಿ ಇಕ್ಕಟ್ಟಾದ ಕಲ್ಲುಗಳ ನಡುವೆ ರಭಸವಾಗಿ ಹರಿದು ಮುಂದೆ ಸಾಗುತ್ತವೆ. ನೀರು ಹರಿಯುವ ರಭಸಕ್ಕೆ ಮೇಕೆದಾಟು ಪ್ರದೇಶದಲ್ಲಿನ ಕಲ್ಲುಗಳು ವಿವಿಧ ಆಕೃತಿಗಳನ್ನು ಪಡೆದುಕೊಂಡಿದೆ. ಬೆಂಗಳೂರಿನಿಂದ ಸಂಗಮ ತಾಣಕ್ಕೆ ಬಸ್ ಸೌಲಭ್ಯವಿದೆ.

ಮುತ್ತತ್ತಿ

ಕಾವೇರಿ ದಟ್ಟ ಅರಣ್ಯವಲಯದಲ್ಲಿರುವ ಈ ಸ್ಥಳವು ಮಂಡ್ಯದ ಮಳವಳ್ಳಿಯ ಬಳಿಯಿದೆ. ಈ ಸ್ಥಳವು ಪೌರಾಣಿಕ ರಾಮಾಯಣದ ಶ್ರೀರಾಮನ ಪತ್ನಿ ಸೀತೆ ಕಳೆದುಕೊಂಡಿದ್ದ ಮೂಗುತಿಯನ್ನು ಆಂಜನೇಯ ಇದೇ ಸ್ಥಳದಲ್ಲಿ ಹುಡುಕಿದ್ದ ಎಂಬ ಪ್ರತೀತಿ ಇದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಆಂಜನೇಯನ ದೇವಸ್ಥಾನವೂ ಇದೆ. ಇದೇ ಕಾರಣಕ್ಕೆ ಹಲವು ಹಿಂದೂಗಳು ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ. ಇದರ ಹೊರತಾಗಿ, ಸ್ವಾಭಾವಿಕ ನದಿಯ ಚಲನೆ, ಮರಗಿಡಗಳು ಸೇರಿದಂತೆ ಪ್ರಕೃತಿಯ ಸೌಂದರ್ಯವನ್ನು ಸವಿಯಲು ಸಹ ಹಲವು ಪ್ರಕೃತಿಪ್ರಿಯರು ಮತ್ತು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿಯ ಬಳಿ ಈ ಸ್ಥಳ ಇದೆಯಾದರೂ, ಕನಕಪುರಕ್ಕೂ ಇದು ಹತ್ತಿರವೇ ಇದ್ದು, ಬೆಂಗಳೂರಿನಿಂದ ಸುಮಾರು 100 ಕಿ.ಮೀ ಇದೆ. ಕಾರಿನಲ್ಲಿ ಹೋದರೆ 3 ಗಂಟೆ ಆಗಲಿದೆ.

ಕಣ್ವ ಜಲಾಶಯ

ಕಣ್ವ ಜಲಾಶಯ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲೂಕಿನ ಕಣ್ವ ಗ್ರಾಮದಲ್ಲಿದೆ. ಬೆಂಗಳೂರು ನಗರದಿಂದ ಇದು ಸುಮಾರು 65 ಕಿ.ಮೀ ಆಸುಪಾಸಿನಲ್ಲಿದೆ. ರಾಮನಗರದಿಂದ ಮುಂದೆ ಸಾಗಿ ಮೈಸೂರು ಹೆದ್ದಾರಿ ಹಿಡಿದು 10 ಕಿ.ಮೀ ಹೋದರೆ ನಿಮಗೆ ಕಣ್ವಾ ಜಲಾಶಯ ಸಿಗುತ್ತದೆ.

ಇಲ್ಲಿಂದ ಸೂರ್ಯಾಸ್ತ ವೀಕ್ಷಣೆ, ಲ್ಯಾಂಡ್ ಸ್ಕೇಪ್ ಫೋಟೊಗ್ರಫಿ ಮಾಡುವುದಕ್ಕೆ ಅದ್ಭುತ ತಾಣ. ಇನ್ನು ಹಕ್ಕಿಗಳ ಚಿಲಿಪಿಲಿ, ಮೀನುಗಾರಿಕೆಗೂ ಹೇಳಿ ಮಾಡಿಸಿದ ತಾಣ ಇದಾಗಿದೆ.

ಡ್ರಾಗನ್ ಫ್ರೂಟ್ ಸಲಾಡ್, ಪಾನಕ

ಆಹಾರ ವೈವಿಧ್ಯ

ಡ್ರಾಗನ್ ಫ್ರೂಟ್ ಮಿಲ್ಕ್ ಶೇಕ್

ಬೇಕಾಗುವ ಸಾಮಗ್ರಿ

ಡ್ರಾಗನ್ ಫ್ರೂಟ್–1(ಸಿಪ್ಪೆಯಿಂದ ಬೇರ್ಪಡಿಸಿದ ತಿರುಳು), ಕಾಯಿಸಿ ಆರಿಸಿದ ಹಾಲು – 1 ಲೋಟ, ಕಂಡೆನ್ಸ್ಡ್ ಮಿಲ್ಕ್ – 2 ಚಮಚ, ಸಕ್ಕರೆ – 2 ಚಮಚ, ಚಿಟಿಕೆ ಏಲಕ್ಕಿ ಪುಡಿ.

ತಯಾರಿಸುವ ವಿಧಾನ:

ಮೇಲೆ ಹೇಳಿರುವ ಎಲ್ಲ ಪದಾರ್ಥಗಳನ್ನೂ ಮಿಕ್ಸಿಯಲ್ಲಿ ಒಂದೆರಡು ನಿಮಿಷ ರುಬ್ಬಿರಿ. ಚುಕ್ಕಿ ಚುಕ್ಕಿಯಾಗಿ ಕಾಣುವ ಟೇಸ್ಟಿ ಮಿಲ್ಕ್ ಶೇಕ್ ರೆಡಿ.

ಫ್ರೂಟ್ ಸಲಾಡ್

ಬೇಕಾಗುವ ಸಾಮಗ್ರಿ:

ಡ್ರಾಗನ್ ಫ್ರೂಟ್ –1, ಕಿವಿ ಫ್ರೂಟ್ – 1, ದಪ್ಪ ಕೆಂಪು ದ್ರಾಕ್ಷಿ (ನ್ಯೂಜಿಲ್ಯಾಂಡ್ ರೆಡ್ ಗ್ರೇಪ್ಸ್) 4 ರಿಂದ 5, ಜೇನುತುಪ್ಪ – 2 ಚಮಚ .

ಮಾಡುವ ವಿಧಾನ

ಡ್ರಾಗನ್ ಫ್ರೂಟ್, ಕಿವಿ ಫ್ರೂಟ್ ಸಿಪ್ಪೆ ತೆಗೆದು, ಹಣ್ಣುಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಕತ್ತರಿಸಿಕೊಳ್ಳಿ. ಬೀಜ ತೆಗೆದು ದ್ರಾಕ್ಷಿಯನ್ನು ನಾಲ್ಕು ಭಾಗಗಳಾಗಿ ಹೆಚ್ಚಿಕೊಳ್ಳಿ. ಮಿಕ್ಸಿಂಗ್ ಬೌಲ್ ನಲ್ಲಿ ಹಣ್ಣುಗಳನ್ನು ಹಾಕಿ, ಜೇನುತುಪ್ಪ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. (ನ್ಯೂಝಿಲ್ಯಾಂಡ್ ರೆಡ್ ಗ್ರೇಪ್ಸ್ ಗಾತ್ರದಲ್ಲಿ ದೊಡ್ಡದು, ಸಿಪ್ಪೆಯಿಂದ ತಿರುಳು ಕಳಚುವುದಿಲ್ಲ,ಸುಲಭವಾಗಿ ಹೆಚ್ಚಲು ಬರುವುದು)

ಫ್ರೂಟ್ ಪಾನಕ

ಬೇಕಾಗುವ ಸಾಮಗ್ರಿ

ಡ್ರಾಗನ್ ಫ್ರೂಟ್ ತಿರುಳು -1 ಹಣ್ಣು, ನಿಂಬೆಹಣ್ಣಿನ ರಸ –1 ಚಮಚ , ರುಚಿಗೆ ತಕ್ಕಷ್ಟು ಸಕ್ಕರೆ, ಚಿಟಿಕೆ ಉಪ್ಪು.

ತಯಾರಿಸುವ ವಿಧಾನ:

ಮೇಲೆ ಹೇಳಿದ ಎಲ್ಲ ಪದಾರ್ಥಗಳನ್ನು ಎರಡು ಲೋಟ ನೀರಿನೊಂದಿಗೆ ಬೆರೆಸಿ ರುಬ್ಬಿ. ಕುಡಿಯಲು ಪಾನಕ ಸಿದ್ಧ (ಚಾಟ್ ಮಸಾಲಾ ಪುಡಿಯನ್ನು ಉದುರಿಸಿ ಕುಡಿದರೆ ಸ್ವಾದ ಹೆಚ್ಚು).

ಡುವೊಪಾಡ್ಸ್ ಬ್ಲೂಟೂತ್ ಇಯರ್‌ಬಡ್ಸ್ ಬಿಡುಗಡೆ

ಗ್ಯಾಜೆಟ್ ಪ್ರಿಯರಿಗಾಗಿ ದೇಶಿ ಕಂಪನಿ ಮಿವಿ, ನೂತನ ಬ್ಲೂಟೂತ್ ಇಯರ್‌ಬಡ್ಸ್ ಪರಿಚಯಿಸಿದೆ. ಮಿವಿ ಡುವೊಪಾಡ್ಸ್ ಎಫ್50 ದೇಶದಲ್ಲಿ ಬಿಡುಗಡೆಯಾಗಿದ್ದು, ಬ್ಲೂಟೂತ್ 5.1 ಬೆಂಬಲ ಸಹಿತ ಲಭ್ಯವಿದೆ.

ಟೈಪ್–ಸಿ ಚಾರ್ಜಿಂಗ್ ಮೂಲಕ ಮಿವಿ ಡುವೊಪಾಡ್ಸ್ ಇಯರ್‌ಬಡ್ಸ್ ಕೇಸ್ ಅನ್ನು ವೇಗವಾಗಿ ಚಾರ್ಜ್ ಮಾಡಬಹುದಾಗಿದೆ ಎಂದು ಕಂಪನಿ ಹೇಳಿದೆ.

ಕಪ್ಪು, ಬೀಜ್, ಕೋರಲ್ ಮತ್ತು ನೀಲಿ ಬಣ್ಣಗಳಲ್ಲಿ ನೂತನ ಮಿವಿ ಡುವೊಪಾಡ್ಸ್ 50 ಇಯರ್‌ಬಡ್ಸ್ ಲಭ್ಯವಾಗಲಿದೆ.

ಮಿವಿ ಕಂಪನಿಯಿಂದ ಮೇಡ್ ಇನ್ ಇಂಡಿಯಾ ಸೌಂಡ್ ಬಾರ್ ಬಿಡುಗಡೆ

ನಾಯ್ಸ್ ಕ್ಯಾನ್ಸಲೇಶನ್, 50 ಗಂಟೆಗಳ ಪ್ಲೇಟೈಮ್ ಹೊಸ ಮಿವಿ ಇಯರ್‌ಬಡ್ಸ್ ವಿಶೇಷತೆಯಾಗಿದ್ದು, ಆರಂಭಿಕ ಕೊಡುಗೆಯಾಗಿ ಫ್ಲಿಪ್‌ಕಾರ್ಟ್ ಮೂಲಕ ₹999 ಕ್ಕೆ

ದೊರೆಯುತ್ತಿದೆ. ಇನ್ನು ಒಂದೇ ಚಾರ್ಜಿಂಗ್ ಕೇಬಲ್

ರಾಮಾಯಣ ಕಥೆ ಹೇಳಲಿವೆ ಗೊಂಬೆಗಳು

ಭಾರತೀಯ ಮಹಾಕಾವ್ಯ ಪರಂಪರೆಯಲ್ಲಿ ಒಂದಾದ ರಾಮಾಯಣ ಕಥೆ ಹೇಳಲಿವೆ ಗೊಂಬೆಗಳು... ಇದಕ್ಕೆ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದ ಕೆ.ಜಿ. ಸಭಾಂಗಣದಲ್ಲಿ ವೇದಿಕೆ ಸಿದ್ಧವಾಗುತ್ತಿದೆ. ನಗರದ ಭಾರತೀಯ ವಿದ್ಯಾಭವನ ಅ.1 ರಿಂದ 3ರವರೆಗೆ ದಸರಾ ಉತ್ಸವ ಅಂಗವಾಗಿ ನಾನಾ ಕಾರ್ಯಕ್ರಮ ಆಯೋಜಿಸಿದೆ. ಈ ಮೂರು ದಿನಗಳ ಕಾಲ ರಾಮಾಯಣಕ್ಕೆ ಸಂಬಂಧಿಸಿದ ಸೂತ್ರದ ಗೊಂಬೆಗಳ ಪ್ರದರ್ಶನ ನಡೆಯಲಿದೆ. ಸೂತ್ರದ ಗೊಂಬೆಗಳ ಮೂಲಕ ನೋಡುಗರ ಕಣ್ಮುಂದೆ ರಾಮಾಯಣದ ಚಿತ್ರಣ ತರುವ ಪ್ರಯತ್ನ ನಡೆಯಲಿದೆ. ರಂಗಪುತ್ಥಳಿ ತಂಡದ ಎಂ.ಆರ್.ಶ್ರೀನಿವಾಸ್ ರಾವ್ ಹಾಗೂ ಸೃಜನಶೀಲ ಕಲಾವಿದೆ ಸೌಮ್ಯಾ ಶ್ರೀಕಾಂತ್ ಅವರು ಗೊಂಬೆಗಳನ್ನು ಪ್ರದರ್ಶಿಸಲಿದ್ದಾರೆ.

ಅ.1 ರಂದು ಬೆಳಿಗ್ಗೆ 11ಕ್ಕೆ ವಕೀಲ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಮೂರು ದಿನಗಳ ದಸರಾ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. 11.30ಕ್ಕೆ ರಾಮಾಯಣದಲ್ಲಿ ಪ್ರಾಣಿ ಪ್ರಪಂಚ ಕುರಿತು ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ.ರಾಘವನ್ ಉಪನ್ಯಾಸ ನೀಡಲಿದ್ದಾರೆ.

ಗಾಂಧೀಜಿ ಕುರಿತ ಪುಸ್ತಕ ಬಿಡುಗಡೆ

ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಅ.2 ರಂದು ಬೆಳಿಗ್ಗೆ 11ಕ್ಕೆ ವಿಶೇಷ ಉಪನ್ಯಾಸ ಹಾಗೂ ಗಾಂಧೀಜಿ ಕುರಿತ ಕನ್ನಡ ಪುಸ್ತಕ ಬಿಡುಗಡೆ ಸಮಾರಂಭ. ಕನ್ಯಾಕುಮಾರಿಯ ವಿವೇಕಾನಂದ ಕೇಂದ್ರದ ಮಂಡಗದ್ದೆ ಶ್ರೀನಿವಾಸಯ್ಯ ಅವರು ಉಪನ್ಯಾಸ ನೀಡಲಿದ್ದಾರೆ. ಯುನೆಸ್ಕೊ ಫೆಲೋ ಡಾ.ಚೂಡಾಮಣಿ ನಂದಗೋಪಾಲ್ ಮತ್ತು ಸಾಹಿತಿ ರಾಮನಾಥ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇದೇ ದಿನ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕಲಾವಿದೆ ಇಂದುಶ್ರೀ ರವೀಂದ್ರ ಅವರು ಮಾತನಾಡುವ ಗೊಂಬೆ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಕಲಾಭಾರತಿಯ ಘಟಿಕೋತ್ಸವ

ಅ.3ರಂದು ಬೆಳಿಗ್ಗೆ 11ಕ್ಕೆ ಡಾ .ಮತ್ತೂರು ಕೃಷ್ಣಮೂರ್ತಿ ಸ್ಮಾರಕ ದತ್ತಿ ಸಂಗೀತ ಮತ್ತು ಸಂಗೀತ ಕಾರ್ಯಕ್ರಮ ನಡೆಯಲಿದೆ. ಬಳಿಕ ಭಾರತೀಯ ವಿದ್ಯಾಭವನದ ಕಲಾಭಾರತಿಯ 20ನೇ ಘಟಿಕೋತ್ಸವ ನಡೆಯಲಿದೆ. ಕಲಾ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುತ್ತದೆ. ಸಂಸ್ಥೆಯ ಕಾರ್ಯದರ್ಶಿ ಡಾ.ಮಾನಂದಿ ಸುರೇಶ್ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ದಶಾವತಾರಿಗೆ ದಶಾಲಂಕಾರ

ಎಲ್ಲಿದೆ ದೇವಾಲಯ: ಇಂದಿರಾನಗರದ ಅಪ್ಪಾರೆಡ್ಡಿ ಪಾಳ್ಯದಲ್ಲಿನ ಮೂರನೇ ಕ್ರಾಸ್‌ನಲ್ಲಿರುವ ಇಎಸ್‌ಐ ಆಸ್ಪತ್ರೆ ಸಮೀಪದಲ್ಲಿದೆ.

ಅಭಿಲಾಷಾ ಬಿ.ಸಿ.

ದೇವರು ಯಾವ ರೂಪದಲ್ಲಿ, ಹೆಸರಿನಲ್ಲಿದ್ದೇನು? ನಮ್ಮ ನಮ್ಮ ಭಾವಕ್ಕೆ ತಕ್ಕಂತೆ ಆರಾಧಿಸುತ್ತೇವಲ್ಲಾ. ಹಾಗೆಯೇ ಇಲ್ಲೊಂದು ಆರಾಧನೆ ಇದೆ. ಇಲ್ಲಿ ದಸರಾ ಹಬ್ಬದಲ್ಲಿ ಹತ್ತು ದಿನ ಲಕ್ಷ್ಮೀ ನರಸಿಂಹ ಸ್ವಾಮಿ ದೇವರಿಗೆ ಹತ್ತು ಬಗೆಯ ಅಲಂಕಾರ ಮಾಡಿ ಭಕ್ತಿ ಅರ್ಪಿಸುತ್ತಾರೆ ಭಕ್ತರು.

ಇಂದಿರಾನಗರದಲ್ಲಿರುವ ಲಕ್ಷ್ಮೀ ನರಸಿಂಹ ದೇಗುಲದಲ್ಲಿ ನವರಾತ್ರಿಯಲ್ಲಿ ಮೂಲ ವಿಗ್ರಹಕ್ಕೆ ನಿತ್ಯವೂ ವಿಷ್ಣುವಿನ ಒಂದೊಂದು ಅವತಾರದ ಅಲಂಕಾರ ಮಾಡಿ ಪೂಜಿಸಲಾಗುತ್ತಿದೆ. ನರಸಿಂಹಸ್ವಾಮಿ ಜೊತೆಗಿರುವ ಲಕ್ಷ್ಮಿ ದೇವಿಗೂ ವಿಶೇಷ ಪೂಜೆ. ಅವಳೂ ಹತ್ತು ದಿನಗಳ ಕಾಲ ಹತ್ತು ಬಗೆಯಲ್ಲಿ ಅಲಂಕರಿಸಿಕೊಂಡು ಅವತರಿಸುತ್ತಾಳೆ.

ದುರ್ಗೆಯ ಬದಲು ನರಸಿಂಹನಿಗೆ ಅಲಂಕಾರವೇ ಎಂದು ಕೇಳಬಹುದು. ಹಾಗೇನಿಲ್ಲ, ಪುರಾಣದಲ್ಲಿ ಹುಡುಕಿದರೆ ಬ್ರಹ್ಮ, ವಿಷ್ಣು, ಈಶ್ವರ ಈ ಮೂವರೂ ಆದಿ ಮಾಯೆಯ ಸೃಷ್ಟಿಗಳೇ ಅಲ್ಲವೇ? ಹಾಗಿರುವಾಗ ತಾಯಿಯ ಆರಾಧನೆ ದೊಡ್ಡ ಮಟ್ಟದಲ್ಲೇ ನಡೆಯುತ್ತದೆ. ಅದೇ ಹೊತ್ತಿನಲ್ಲಿ ಆಕೆಯ ಸೃಷ್ಟಿಯಾದ ವಿಷ್ಣುವಿಗೂ ಒಂದು ಭಕ್ತಿ ಸಮರ್ಪಣೆ ನಡೆಯುತ್ತದೆ' ಎಂಬುದು ಭಕ್ತರ ಸಮಜಾಯಿಷಿ.

'ದುರ್ಗೆ ಅವತರಿಸಿದ್ದೂ ದುಷ್ಟಶಕ್ತಿಗಳ ನಿಗ್ರಹಕ್ಕಾಗಿ. ವಿಷ್ಣುವಿನ ಹತ್ತು ಅವತಾರಗಳು ದುಷ್ಟ ನಿಗ್ರಹ ಮತ್ತು ಸೃಷ್ಟಿಯ ಪಾಲನೆಯೇ ಆಗಿತ್ತು. ಹಾಗಿರುವಾಗ ಅವನ 10 ಅವತಾರಗಳನ್ನು ಅಲಂಕಾರದ ಮೂಲಕ

ಲಕ್ಷ್ಮೀ ನರಸಿಂಹ

ಕಣ್ತುಂಬಿಕೊಳ್ಳಲು ಖುಷಿ ಎನಿಸುತ್ತದೆ' ಎಂದು ನುಡಿಯುತ್ತಾರೆ ಈ ಪರಿಕಲ್ಪನೆಯ ರೂವಾರಿ ಆಯುರ್ವೇದ ವೈದ್ಯೆ ಡಾ.ಸುಮಾ.

ಸುಮಾ ಮತ್ತು ಅವರ ತಂಡ ಪ್ರತಿದಿನ ಈ ಅಲಂಕಾರದಲ್ಲಿ ತೊಡಗುತ್ತದೆ. ಪ್ರತಿ ರಾತ್ರಿ 9 ಗಂಟೆಯಿಂದ ಅಲಂಕಾರ ನಡೆಯುತ್ತದೆ. ಮರುದಿನ ಬೆಳಿಗ್ಗೆ 7ರಿಂದ ಭಕ್ತರು ದರ್ಶನ ಪಡೆಯುತ್ತಾರೆ.

'ಅರಿಶಿನ, ಲೋಹ, ಚಂದನ, ಹೂವು, ಒಣ ಹಣ್ಣು, ವಿಶೇಷ ಮಣಿಗಳು, ಶ್ರೀಗಂಧ, ಕುಂಕುಮ, ತುಳಸಿ ಹಾಗೂ ಅಗತ್ಯವೆನಿಸಿದ ಅಲಂಕಾರಿಕ ಪರಿಕರಗಳನ್ನು ಬಳಸುತ್ತೇವೆ. ಮೂಲ ವಿಗ್ರಹ ಲಕ್ಷ್ಮೀ ನರಸಿಂಹ ಸ್ವಾಮಿಯದ್ದು. ಅದರ ಸೌಂದರ್ಯ ಹಾಗೂ ದೈವೀಕತೆಗೆ ಅಡ್ಡಿಯಾಗದಂತೆ ಅಲಂಕಾರ ಮಾಡಲಾಗುತ್ತದೆ. ಈ ಅವಧಿಯಲ್ಲಿ ಶುದ್ಧತೆ, ಪಾವಿತ್ರ್ಯತೆಗೂ ತುಂಬಾ ಮಹತ್ವ ಇದೆ' ಎಂದರು ಸುಮಾ.

ನವರಾತ್ರಿಯ ಮೊದಲನೇ ದಿನ ಮತ್ಸ್ಯಾವತಾರ, ಎರಡನೇ ದಿನ ಕೂರ್ಮಾವತಾರ, ಮೂರನೇ ದಿನ ವರಾಹ, ನಾಲ್ಕನೇ ದಿನ ನರಸಿಂಹನ ವಿಶೇಷ

ವರಹಾವತಾರದಲ್ಲಿ ನರಸಿಂಹ

ಮತ್ಸ್ಯಾವತಾರದಲ್ಲಿ ನರಸಿಂಹ

ಕೂರ್ಮಾವತಾರದಲ್ಲಿ ನರಸಿಂಹ

ಡಾ.ಸುಮಾ

ಅಲಂಕಾರವನ್ನು ಮಾಡಿದ್ದಾರೆ. ಐದನೇ ದಿನ ವಾಮನ, ನಂತರ ಪರಶುರಾಮ, ರಾಮ, ಬಲರಾಮ, ಕೃಷ್ಣ ಹಾಗೂ ಕಲ್ಕಿಯ ಅವತಾರ ಮಾಡಲು ಅಣಿಯಾಗಿದ್ದಾರೆ.

'ಎರಡು ದಶಕಗಳಿಂದ ಇಸ್ಕಾನ್‌ನೊಂದಿಗೆ ಒಡನಾಟ ಹೊಂದಿರುವ ಸುಮಾ ಅಲ್ಲಿ ಸ್ವಯಂಸೇವಕರಾಗಿದ್ದಾರೆ. ವಿಜಯ ದಶಮಿ ಎಂದರೆ ರಾಮನ ಗೆಲುವನ್ನೂ ಪ್ರತಿನಿಧಿಸುವುದರಿಂದ ಈ ಅಲಂಕಾರ ಮಾಡಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಬಹುತೇಕ ದೇಗುಲಗಳಲ್ಲಿ ವಿಷ್ಣುವಿನ ದಶಾವತಾರವನ್ನು ಪ್ರತಿನಿಧಿಸಿ ಪೂಜೆ ಮಾಡಲಾಗುತ್ತಿದೆ' ಎನ್ನುತ್ತಾರೆ ಅವರು.

ದೇವರ ಮೂರ್ತಿ, ಅಲಂಕಾರಗಳಲ್ಲಿ ವಿಶೇಷ ಆಸಕ್ತಿ ಹೊಂದಿರುವ ಸುಮಾ ಅವರು ಕೃಷ್ಣ ಜನ್ಮಾಷ್ಟಮಿಯಂದು ಕೃಷ್ಣ, ರಾಧೆಯರ ಮಣ್ಣಿನ ಮೂರ್ತಿ ಸಿದ್ಧಪಡಿಸಿ ಪುಣೆ ಹಾಗೂ ವಿಜಯವಾಡದ ದೇಗುಲಗಳಿಗೆ ನೀಡಿದ್ದರು.

ನವರಾತ್ರಿಯ ಎಲ್ಲ ದಿನ ಬೆಳಿಗ್ಗೆ 7ರಿಂದ ರಾತ್ರಿ 9 ಗಂಟೆವರೆಗೆ ಭಕ್ತರಿಗೆ ವಿಷ್ಣುವಿನ ಅವತಾರ ದರ್ಶನಕ್ಕೆ ಅವಕಾಶ ಇರಲಿದೆ. ನರಸಿಂಹನ ಇತರ ಅಲಂಕಾರಗಳನ್ನೂ ನೋಡಬೇಕೇ? ಇಂದಿರಾನಗರದ ಲಕ್ಷ್ಮೀನರಸಿಂಹ ದೇವಸ್ಥಾನಕ್ಕೆ ಹೋಗಿಬನ್ನಿ.

‘ಗಜರಾಮ’ನಿಗೆ ಜೋಡಿ ಕೊಡಗಿನ ಬೆಡಗಿ

ತಪಸ್ವಿನಿ ಪೂಣಚ್ಚ

ನಟ ರಾಜವರ್ಧನ್ ‘ಗಜರಾಮ’ನಾಗಿ ಅಬ್ಬರಿಸಲು ರೆಡಿಯಾಗಿದ್ದಾರೆ. 'ಬಿಚ್ಚುಗತ್ತಿ'ಯ ಮೂಲಕ ಸ್ಯಾಂಡಲ್ ವುಡ್ ಸಿನಿರಸಿಕರ ಮನಗೆದ್ದಿರುವ ನಟ ಇವರು. ಯುವ ನಿರ್ದೇಶಕ ಸುನೀಲ್ ಕುಮಾರ್ ವಿ.ಎ. ಕಥೆ ಕೇಳಿದ ರಾಜವರ್ಧನ್ ಗಜರಾಮನಿಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಗಜರಾಮನಿಗೆ ಕೊಡಗಿನ ಬೆಡಗಿ ತಪಸ್ವಿನಿ ಪೂಣಚ್ಚ ನಾಯಕಿಯಾಗಿದ್ದಾರೆ.

‘‘ಹರಿಕಥೆ ಅಲ್ಲ ಗಿರಿಕಥೆ’ ಚಿತ್ರಕ್ಕೆ ನಾನು ಆಯ್ಕೆಯಾಗಿದ್ದೇ ಆಕಸ್ಮಿಕವಾಗಿ. ಸಿನಿಮಾ ಕ್ಷೇತ್ರಕ್ಕೆ ಬರಬೇಕು ಅನ್ನುವುದು ನನ್ನ ಉದ್ದೇಶ ಆಗಿರಲಿಲ್ಲ. ಆದ್ರೆ ಇನ್‌ಸ್ಟಾಗ್ರಾಂನಲ್ಲಿ ಒಂದು ಫೋಟೋ ನೋಡಿ ಚಿತ್ರತಂಡ ನನ್ನ ಸಂಪರ್ಕ ಮಾಡಿದ್ರು. ಕಥೆ ಕೇಳಿ ಇಷ್ಟ ಆಯ್ತು ಒಪ್ಪಿಕೊಂಡೆ ಇದೀಗ ‘ಗಜರಾಮ’ ಸಿನಿಮಾ ಅವಕಾಶ ಸಿಕ್ಕಿದೆ. ‘ಹರಿಕಥೆ ಅಲ್ಲ ಗಿರಿಕಥೆ’ ಚಿತ್ರದ ನಂತರ ಸಾಕಷ್ಟು ಸಿನಿಮಾ ಅವಕಾಶಗಳು ಬರುತ್ತಿವೆ. ಹಳ್ಳಿ ಹುಡುಗಿಯ ಪಾತ್ರದಲ್ಲಿ ನಾನು ಕಾಣಿಸಿಕೊಳ್ಳುತ್ತಿದ್ದೇನೆ’ ಎಂದರು ತಪಸ್ವಿನಿ.

ಸುನೀಲ್ ಕುಮಾರ್ ‘ಗಜರಾಮ’ ಸಿನಿಮಾ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಬಡ್ತಿ ಪಡೆಯುತ್ತಿದ್ದಾರೆ. ಈ ಚಿತ್ರಕ್ಕೆ ಮನೋಮೂರ್ತಿ ಸಂಗೀತ, ಕೆ.ಎಸ್. ಚಂದ್ರಶೇಖರ್ ಛಾಯಾಗ್ರಹಣ, ಜ್ಞಾನೇಶ್ ಬಿ. ಮಠದ್ ಸಂಕಲನ, ಧನಂಜಯ್ ನೃತ್ಯ ನಿರ್ದೇಶನ, ಚಿನ್ಮಯ್ ಭಾವಿಕೆರೆ, ಜಯಂತ್ ಕಾಯ್ಕಿಣಿ ಸಾಹಿತ್ಯವಿದೆ. ಲೈಫ್ ಲೈನ್ ಫಿಲ್ಮ್ ಪ್ರೊಡಕ್ಷನ್ ಅಡಿ ನರಸಿಂಹ ಮೂರ್ತಿ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಮಲ್ಲಿಕಾರ್ಜುನ್ ಕಾಶಿ ಮತ್ತು ಕ್ಸೇವಿಯರ್ ಫರ್ನಾಂಡಿಸ್ ಕೂಡ ನಿರ್ಮಾಣದ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಇದೇ ತಿಂಗಳಾಂತ್ಯಕ್ಕೆ ಸಿನಿಮಾ ಸೆಟ್ಟೇರಲಿದೆ.

ದಿವ್ಯಾ ಉರುಡುಗ ಅರ್ಧಂಬರ್ಧ ಪ್ರೇಮಕಥೆ

ಬಿಗ್ ಬಾಸ್ ಮೂಲಕ ಹೆಸರಾದ ದಿವ್ಯಾ ಉರುಡುಗ ಅವರು ಮತ್ತೆ ಸುದ್ದಿಯಲ್ಲಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ ಅರ್ದಂಬರ್ಧ ಪ್ರೇಮ ಕಥೆ ಚಿತ್ರ ಸೆಟ್ಟೇರಿದೆ. ಆದರೆ ಈ ವರೆಗೂ ಈ ಚಿತ್ರದ ನಾಯಕ ನಟ ಯಾರು ಎಂದು ಗೊತ್ತಾಗಿಲ್ಲ.

ದಿವ್ಯಾ ಉರುಡಗ

ಬಿಗ್ ಬಾಸ್ ಮೂಲಕ ಹೆಸರಾದ ದಿವ್ಯಾ ಉರುಡುಗ ಅವರು ಮತ್ತೆ ಸುದ್ದಿಯಲ್ಲಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ ಅರ್ದಂಬರ್ಧ ಪ್ರೇಮ ಕಥೆ ಚಿತ್ರ ಸೆಟ್ಟೇರಿದೆ. ಆದರೆ ಈ ವರೆಗೂ ಈ ಚಿತ್ರದ ನಾಯಕ ನಟ ಯಾರು ಎಂದು ಗೊತ್ತಾಗಿಲ್ಲ.

ನಿರ್ದೇಶಕ ಅರವಿಂದ್ ಕೌಶಿಕ್ ಅದಾಗಲೇ ಟೀಸರ್ ಒಂದನ್ನು ಅನಾವರಣ ಮಾಡಿದ್ದಾರೆ. ಅದರಲ್ಲಿ ಕೂಡಾ ಹೀರೋ ಯಾರು ಎನ್ನುವ ಬಗ್ಗೆ ಪ್ರಶ್ನಾರ್ಥಕ ಚಿಹ್ನೆಯನ್ನಷ್ಟೇ ಉಳಿಸಿದ್ದಾರೆ. ವಿಜಯದಶಮಿಯ ದಿನ ಹೀರೋ ಪರಿಚಯದ ಟೀಸರ್ ಬಿಡುಗಡೆ ಮಾಡಲಿದ್ದಾರಂತೆ.

‘ಅರ್ದಂಬರ್ಧ ಪ್ರೇಮ ಕಥೆ’ಗೆ ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿದ್ದಾರೆ. ಬಕ್ಸಸ್ ಮೀಡಿಯಾ ‘ಅರ್ದಂಬರ್ಧ ಪ್ರೇಮ ಕಥೆ’ ಚಿತ್ರವನ್ನು ನಿರ್ಮಿಸಿದೆ. ಲೈಟ್ ಹೌಸ್ ಮೀಡಿಯಾ ಮತ್ತು ಆರ್‌ಎಸಿ ವಿಷುವಲ್ಸ್ ಕೂಡಾ ನಿರ್ಮಾಣದಲ್ಲಿ ಕೈಜೋಡಿಸಿವೆ. ಸೂರ್ಯ ಛಾಯಾಗ್ರಹಣ, ಸಂತೋಷ್ ರಾಧಾಕೃಷ್ಣನ್ ಶೀರ್ಷಿಕೆ ವಿನ್ಯಾಸದ ಜೊತೆಗೆ ಗ್ರಾಫಿಕ್ಸ್ ತಂತ್ರಜ್ಞಾನದ ಕೆಲಸವನ್ನೂ ನಿಭಾಯಿಸಿದ್ದಾರೆ. ರ್‍ಯಾಪರ್ ಆಲ್ ಓಕೆ ಅಲೋಕ್ ಬಾಬು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರೂಪಕಿಯಾಗಿ ಹೆಸರು ಮಾಡಿರುವ ಶ್ರೇಯಾ ಬಾಬು, ವೆಂಕಟ್ ಶಾಸ್ತ್ರಿ, ಪ್ರದೀಪ್ ರೋಷನ್, ಸೂರಜ್ ಹೂಗಾರ್, ಸುಜಿತ್ ಶೆಟ್ಟಿ ಮೊದಲಾದವರ ತಾರಾಗಣ ಈ ಚಿತ್ರಕ್ಕಿದೆ. ಇದಲ್ಲದೇ ಹಲವು ವರ್ಷಗಳಿಂದ ಚಿತ್ರರಂಗದಿಂದ ದೂರವೇ ಉಳಿದಿದ್ದ ನಟರೊಬ್ಬರು ಈ ಚಿತ್ರದಲ್ಲಿದ್ದಾರಂತೆ.


ಅರವಿಂದ್ ಕೌಶಿಕ್

ಬಾಂಡ್ ರವಿ ಟೀಸರ್ ಬಂತು

ನಟ ಪ್ರಮೋದ್ ಅಭಿನಯದ ‘ಬಾಂಡ್ ರವಿ’ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಪ್ರಮೋದ್ ಖಡಕ್ ನಟನೆ ಎಲ್ಲರ ಗಮನ ಸೆಳೆಯುತ್ತಿದೆ. ಟೀಸರನ್ನು ಪತ್ರಕರ್ತರು ಇತ್ತೀಚೆಗೆ ಬಿಡುಗಡೆ ಮಾಡಿದರು.

‘ಗೀತಾ ಬ್ಯಾಂಗಲ್ ಸ್ಟೋರ್’ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ನಾಯಕ ನಟನಾಗಿ ಬಂದ ಪ್ರಮೋದ್ ‘ಮತ್ತೆ ಉದ್ಭವ’, ‘ಪ್ರೀಮಿಯರ್ ಪದ್ಮಿನಿ’ ಹಾಗೂ ‘ರತ್ನನ್ ಪ್ರಪಂಚ’ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ.

ಪ್ರಮೋದ್, ‘ನಾನು ಈ ಸಿನಿಮಾವನ್ನು ತುಂಬಾ ಇಷ್ಟಪಟ್ಟು ಮಾಡಿದ್ದೇನೆ. ಈ ಸಿನಿಮಾ ಗೆದ್ದೇ ಗೆಲ್ಲುತ್ತೆ ಅನ್ನೋ ಬಲವಾದ ನಂಬಿಕೆ ಕೂಡ ನನಗಿದೆ. ಅಷ್ಟು ಒಳ್ಳೆಯ ಕಂಟೆಂಟ್, ಕಥೆ ಸಿನಿಮಾದಲ್ಲಿದೆ. ನಾನು ಕೂಡ ಈ ಸಿನಿಮಾ ಮೂಲಕ ದೊಡ್ಡ ಮಟ್ಟದಲ್ಲಿ ಗೆಲ್ಲುತ್ತೇನೆ’ ಎಂದು ಭರವಸೆಯ ಮಾತುಗಳನ್ನಾಡಿದರು.

ಸಂಗೀತ ನಿರ್ದೇಶಕ ಮನೋಮೂರ್ತಿ , ‘ನನಗೂ ಈ ಸಿನಿಮಾ ಬಗ್ಗೆ ಅಪಾರ ಭರವಸೆ ಇದೆ. ಪ್ರಮೋದ್ ಮತ್ತು ಕಾಜಲ್ ಕುಂದರ್ ಇಬ್ಬರು ಅಮೋಘವಾಗಿ ನಟಿಸಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಿತ್ರದ ನಟಿ ಕಾಜಲ್ ಕುಂದರ್, ‘ನನ್ನ ಮೇಲೆ ನಂಬಿಕೆ ಇಟ್ಟು ಒಳ್ಳೆಯ ಪಾತ್ರವನ್ನು ಕೊಟ್ಟಿದ್ದಾರೆ. ನನ್ನ ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆ ಎಂಬ ನಂಬಿಕೆ ಇದೆ. ಪ್ರಮೋದ್ ಅವರ ಜೊತೆ ನಟಿಸಿದ್ದು ತುಂಬಾ ಖುಷಿ ಕೊಟ್ಟಿದೆ’ ಎಂದರು.

ಚಿತ್ರದ ನಿರ್ದೇಶಕ ಪ್ರಜ್ವಲ್, ‘ಇದು ನನ್ನ ಮೊದಲ ಸಿನಿಮಾ. ಸಿನಿಮಾ ಚೆನ್ನಾಗಿ ಮೂಡಿ ಮುಂದಿದೆ. ಒಂದೊಳ್ಳೆ ಸಿನಿಮಾ ಮಾಡಿದ ತೃಪ್ತಿ ನನಗಿದೆ. ನವೆಂಬರ್‌ನಲ್ಲಿ ಈ ಸಿನಿಮಾ ಬಿಡುಗಡೆಗೆ ಯೋಜನೆ ಹಾಕಿಕೊಂಡಿದ್ದೇವೆ’ ಎಂದರು

ನರಸಿಂಹಮೂರ್ತಿ ಅವರು ಲೈಫ್ ಲೈನ್ ಫಿಲಂ ಬ್ಯಾನರ್ ಅಡಿ ಬಾಂಡ್ ರವಿ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಮಲ್ಲಿಕಾರ್ಜುನ್ ಕಾಶಿ ಹಾಗೂ ಕ್ಸೇವಿಯರ್ ಫೆರ್ನಾಂಡಿಸ್ ಸಹ ನಿರ್ಮಾಪಕರು. ಚಿತ್ರದಲ್ಲಿ ಅಪ್ಪು ಅಭಿಮಾನಿಯಾಗಿ ಪ್ರಮೋದ್ ನಟಿಸಿದ್ದಾರೆ.

ಬೆಂಗಳೂರು, ಶಿವಮೊಗ್ಗ, ಕೊಡಚಾದ್ರಿ, ಕುದುರೆಮುಖ, ಉಡುಪಿ, ಮಂಗಳೂರು ಭಾಗಗಳಲ್ಲಿ ಬಾಂಡ್ ರವಿ ಚಿತ್ರೀಕರಣ ನಡೆಸಲಾಗಿದೆ. ರವಿಕಾಳೆ, ಧರ್ಮ, ವಿಜಯ್ ಚೆಂಡೂರ್, ಶೋಭರಾಜ್ ಚಿತ್ರದ ತಾರಾ ಬಳಗದಲ್ಲಿದ್ದಾರೆ. ಕೆ.ಎಸ್. ಚಂದ್ರಶೇಖರ್ ಛಾಯಾಗ್ರಹಣ, ಅರ್ಜುನ್ ಕಿಟ್ಟು ಸಂಕಲನ, ಸುನೀಲ್ ಮತ್ತು ದೇವ್ ಎನ್, ರಾಜ್ ಸಂಭಾಷಣೆ, ಮನೋಮೂರ್ತಿ ಸಂಗೀತ ಚಿತ್ರಕ್ಕಿದೆ.

ನಟ ಪ್ರಮೋದ್ ಅಭಿನಯದ ‘ಬಾಂಡ್ ರವಿ’ ಚಿತ್ರದ ಟೀಸರ್ ಬಿಡುಗಡೆ ಆಗಿದೆ. ಪ್ರಮೋದ್ ಖಡಕ್ ನಟನೆ ಎಲ್ಲರ ಗಮನ ಸೆಳೆಯುತ್ತಿದೆ. ಟೀಸರನ್ನು ಪತ್ರಕರ್ತರು ಇತ್ತೀಚೆಗೆ ಬಿಡುಗಡೆ ಮಾಡಿದರು.

ಪ್ರಮೋದ್, ಕಾಜಲ್ ಕುಂದರ್

‘ಬ್ರಹ್ಮಕಮಲ’ ತಂದ ಪೂರ್ಣಚಂದ್ರ

ನಿರ್ದೇಶಕ ಸಿದ್ದು ಪೂರ್ಣಚಂದ್ರ ಅವರ ಕಥೆ, ಚಿತ್ರಕಥೆ ನಿರ್ದೇಶನದ ಚಿತ್ರ ಬ್ರಹ್ಮ ಕಮಲದ ಚಿತ್ರೀಕರಣ ಭರ್ಜರಿಯಾಗಿ ನಡೆದಿದೆ. ಪೂರ್ಣ ಚಂದ್ರ ಫಿಲ್ಮ್ಸ್ ಬ್ಯಾನರ್ ಅಡಿ ಈ ಚಿತ್ರ ನಿರ್ಮಾಣಗೊಳ್ಳುತ್ತಿದೆ.

ರಾತ್ರಿ ಹುಟ್ಟಿ ರಾತ್ರಿಯೇ ಮುರುಟಿ ಹೋಗುವ ಒಂದು ಮಗುವಿನ ಸುತ್ತ ಘಟಿಸುವ ಕಥೆಯೇ ‘ಬ್ರಹ್ಮ ಕಮಲ’ ಎಂದಿದ್ದಾರೆ ನಿರ್ದೇಶಕರು.

ತಾರಾಗಣದಲ್ಲಿ ಅದ್ವಿತಿ ಶೆಟ್ಟಿ, ಲೋಕೇಂದ್ರ ಸೂರ್ಯ, ಋತು ಚೈತ್ರ, ಮಮತಾ ರಾಹುತ್, ಪ್ರಮಿಳಾ ಸುಬ್ರಹ್ಮಣ್ಯ, ಬಲ ರಾಜ್ವಾಡಿ, ಸಿದ್ದು ಪೂರ್ಣಚಂದ್ರ, ಆಟೋ ನಾಗರಾಜ್, ಗಂಡಸಿ ಸದಾನಂದಸ್ವಾಮಿ ಅಭಿನಯಿಸುತ್ತಿದ್ದಾರೆ.

ಛಾಯಾಗ್ರಹಣ ಲೋಕೇಂದ್ರ ಸೂರ್ಯ, ಸಂಕಲನ ದೀಪು ಸಿ.ಎಸ್., ಸಂಗೀತ ಅನಂತ್ ಆರ್ಯನ್ ಹೊಣೆ ಹೊತ್ತಿದ್ದಾರೆ. ಎ.ಕೆ. ಪುಟ್ಟರಾಜು ಕಾರ್ಯಕಾರಿ ನಿರ್ಮಾಪಕರು. ಋತು ಚೈತ್ರ ನಿರ್ಮಾಣ ನಿರ್ವಹಣೆ ಮತ್ತು ವಸ್ತ್ರ ವಿನ್ಯಾಸ ಮಾಡಿದ್ದಾರೆ.

ಅದ್ವಿತಿ ಶೆಟ್ಟಿ

ಕಿರೀಟಿ ಈಗ ‘ಜ್ಯೂನಿಯರ್’

ಕಿರೀಟಿ

ಸ್ಯಾಂಡಲ್‌ವುಡ್ ಅಂಗಳಕ್ಕೆ ಗಾಲಿ ಜನಾರ್ದನ ರೆಡ್ಡಿ ಪುತ್ರ ಕಿರೀಟಿ ಪ್ರವೇಶಿಸಿದ್ದು ಹಳೇ ಸುದ್ದಿ. ಈಗ ಅವರ ಚಿತ್ರಕ್ಕೆ ನಾಮಕರಣ ನಡೆದಿದೆ. ‘ಜ್ಯೂನಿಯರ್’ ಅವರ ಮೊದಲ ಚಿತ್ರದ ಹೆಸರು.

ಕಿರೀಟಿ ಮೊದಲ ಚಿತ್ರದ ಮೂಲಕ ಏಕಕಾಲದಲ್ಲಿ ಕನ್ನಡ, ತೆಲುಗು, ತಮಿಳು, ಮಲಯಾಳಂ ಚಿತ್ರರಂಗಕ್ಕೆ ಹೀರೊ ಆಗಿ ಪ್ರವೇಶಿಸುತ್ತಿದ್ದಾರೆ. ರಾಧಾಕೃಷ್ಣ ರೆಡ್ಡಿ ನಿರ್ದೇಶನದಲ್ಲಿ ಅದ್ದೂರಿಯಾಗಿ ಮೂಡಿಬರುತ್ತಿರುವ ಈ ಚಿತ್ರದ ಚಿತ್ರೀಕರಣ ಬಿರುಸಿನಿಂದ ಸಾಗಿದೆ.

ಚಿತ್ರತಂಡ ಕಿರೀಟಿ ಹುಟ್ಟುಹಬ್ಬಕ್ಕೆ ಶೀರ್ಷಿಕೆ ಬಿಡುಗಡೆಗೆ ಮೊದಲೇ ತಯಾರಿ ಮಾಡಿಕೊಂಡಿತ್ತು. ಈಗ (ಸೆ. 29ರಂದು) ಕಿರೀಟಿಗೆ ಶುಭಕೋರಿ ಶೀರ್ಷಿಕೆಯನ್ನು ಉಡುಗೊರೆಯಾಗಿ ನೀಡಿದೆ ಚಿತ್ರತಂಡ.

‘ಮಾಯಾಬಜಾರ್’ ಸಿನಿಮಾ ಖ್ಯಾತಿಯ ರಾಧಾಕೃಷ್ಣ ರೆಡ್ಡಿ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಚಿತ್ರವಿದು. ತೆಲುಗಿನ ಖ್ಯಾತ ನಿರ್ಮಾಣ ಸಂಸ್ಥೆ ವಾರಾಹಿ ಫಿಲ್ಮಂ ಪ್ರೊಡಕ್ಷನ್ ಕಿರೀಟಿ ಮೊದಲ ಚಿತ್ರಕ್ಕೆ ಬಂಡವಾಳ ಹೂಡಿದೆ.

ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ, ರಿತೇಶ್ ದೇಶ್ ಮುಖ್, ಶ್ರೀಲೀಲಾ ಸೇರಿದಂತೆ ಇನ್ನೂ ಹಲವು ತಾರೆಯರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ದೇವಿಶ್ರೀ ಪ್ರಸಾದ್ ಸಂಗೀತ, ಕೆ.ಸೆಂಥಿಲ್ ಕುಮಾರ್ ಕ್ಯಾಮೆರಾ ನಿರ್ದೇಶನ, ಭಾರತೀಯ ಚಿತ್ರರಂಗದ ಖ್ಯಾತ ಸಾಹಸ ನಿರ್ದೇಶಕ ಪೀಟರ್ ಹೆನ್ ಸಾಹಸ ಚಿತ್ರಕ್ಕಿದೆ.

ಶೋಷಿತರ ಕಥೆ ಹೇಳಲಿದೆ ‘ಪಾಲಾರ್’

ಯುವ ನಿರ್ದೇಶಕ ಜೀವಾ ನವೀನ್ ಅವರು ಶೋಷಿತರ ಮೇಲಿನ ಕಥೆ ಆಧರಿಸಿ ಚಿತ್ರವೊಂದನ್ನು ನಿರ್ದೇಶಿಸುತ್ತಿದ್ದಾರೆ. ದಶಕದ ಹಿಂದೆ ದಲಿತರ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ವಿರುದ್ಧ ನಡೆದ ಹೋರಾಟದ ಕಥನವೇ ‘ಪಾಲಾರ್’. ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ.

ಈ ಬಗ್ಗೆ ಮಾಹಿತಿ ಹಂಚಿಕೊಂಡ ಜೀವಾ ನವೀನ್, ‘ಕೋಲಾರ ಜಿಲ್ಲೆ ಮತ್ತು ದೇವನಹಳ್ಳಿ ಭಾಗಗಳಲ್ಲಿ ನಡೆದ ನೈಜ ಘಟನೆಗಳನ್ನು ಇಟ್ಟುಕೊಂಡು ಅದೇ ಭಾಗದಲ್ಲಿ ಚಿತ್ರೀಕರಣ ಮಾಡಿದ್ದೇವೆ. ಇದೊಂದು ಮಹಿಳಾ ಪ್ರಧಾನ, ಸಂಘರ್ಷದ ಕಥೆ. ತಮಗೂ ಬದುಕಲು ಹಕ್ಕಿದೆ ಎಂದು ತೋರಿಸಿದ ದಲಿತರ ಹೋರಾಟದ ಕಥನ’ ಎಂದು ಹೇಳಿದರು.

ತೆಲುಗಿನ ‘ಸಿನಿಮಾ ಬಂಡಿ’ ಖ್ಯಾತಿಯ ನಟಿ, ಗಾಯಕಿ ವೈ.ಜಿ.ಉಮಾ ಕೋಲಾರ ಅವರು ಮುಖ್ಯಪಾತ್ರದಲ್ಲಿ ನಟಿಸಿರುವ ‘ಪಾಲಾರ್’ ತನ್ನ ವಿಶಿಷ್ಟ ಹೆಸರಿನ ಮೂಲಕ ಗಮನ ಸೆಳೆದಿದೆ. ಈ ಚಿತ್ರದಲ್ಲಿ ಉಮಾ ಜೊತೆ ನಾಯಕನಾಗಿ ತಿಲಕ್ ರಾಜ್ ಅಭಿನಯಿಸಿದ್ದಾರೆ. ಸುಮಾರು ನೂರಕ್ಕೂ ಹೆಚ್ಚು ಕಲಾವಿದರು ಅಭಿನಯಿಸಿದ್ದಾರೆ. ಚಿತ್ರಕ್ಕೆ ಆಸಿಫ್ ರೆಹಾನ್, ಅವರ ಛಾಯಾಗ್ರಹಣ, ವಲಿ ಕುಲಾಯಿಸ್ ಸಂಕಲನವಿದೆ. ರಾಜಮೌಳಿ ತಂಡದ ಸಾಹಿತಿ ವರದರಾಜ್ ಚಿಕ್ಕಬಳ್ಳಾಪುರ ನಾಲ್ಕು ಹಾಡುಗಳನ್ನು ರಚಿಸಿದ್ದಾರೆ. ಸುಬ್ರಹ್ಮಣ್ಯ ಆಚಾರ್ಯ ಅವರ ಸಂಗೀತವಿದೆ. ಶ್ವೇತಾ ದೇವನಹಳ್ಳಿ, ಸುಪ್ರೀತ್ ಫಲ್ಗುಣ, ಸುಬ್ರಹ್ಮಣ್ಯ ಆಚಾರ್ಯ ಜೊತೆಗೆ ಉಮಾ ವೈ.ಜಿ. ಕೋಲಾರ ಹಾಡುಗಳಿಗೆ ದನಿಯಾಗಿದ್ದಾರೆ.

ಪಾಲಾರ್ ಟೈಟಲ್‌ನ ವಿಶೇಷತೆಯನ್ನು ವಿವರಿಸಿದ ನಿರ್ದೇಶಕರು, ‘ನಂದಿ ಬೆಟ್ಟದಲ್ಲಿ ಹುಟ್ಟಿದ ಪಾಲಾರ್ ನದಿ ಕೋಲಾರದ ಬೇತಮಂಗಲವರೆಗೂ ಭೂಮಿಯ ಒಳಗಡೆಯೇ ಹರಿಯುತ್ತದೆ. ಆ ನಂತರ ಆಂಧ್ರಪ್ರದೇಶ, ತಮಿಳು ನಾಡಿನಾದ್ಯಂತ ಹರಿದು ಸಮುದ್ರ ಸೇರುತ್ತದೆ. ಈ ನದಿ ಭೂಮಿಯ ಒಳಗಡೆ ಇದ್ದಾಗ ಬಿಸಿಯಾಗಿರುತ್ತದೆ. ಇದೇ ರೀತಿಯ ಕುದಿತ ದಲಿತರ ಅಂತರ್ಯದಲ್ಲಿ ಅಡಗಿದೆ. ಸಂದರ್ಭ ಸಿಕ್ಕಾಗ ಅದು ಹೊರಬಂದು, ಆಕ್ರೋಶ ಸ್ಫೋಟಿಸಿದಾಗ ಏನಾಗುತ್ತದೆ ಎಂಬುದೇ ‘ಪಾಲಾರ್’ ಚಿತ್ರದ ಕಥೆ. ಪಾಲಾರ್ ನದಿಗೂ ನಮ್ಮ ಕಥೆಗೂ ಸಂಬಂಧವಿಲ್ಲ. ಒಂದು ರೂಪಕವಾಗಿ ಅದನ್ನು ಬಳಸಿದ್ದೇವೆ’ ಎಂದು ವಿವರಿಸಿದರು.

ಬಾಗೇಪಲ್ಲಿ, ಕೋಲಾರ, ದೇವನಹಳ್ಳಿ, ಚಿಕ್ಕಬಳ್ಳಾಪುರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆದಿದೆ.

ಸೌನವಿ ಕ್ರಿಯೇಷನ್ ಮತ್ತು ಹಲೋ ಗ್ಲೋಬಲ್ ಬ್ಯಾನರ್ ಅಡಿಯಲ್ಲಿ ಕೆ.ಆರ್. ಸೌಜನ್ಯ, ಸೌಂದರ್ಯ ಕೆ.ಆರ್ ಮತ್ತು ನವೀನ್ ಕುಮಾರ್ ಬಾಬು ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಸದ್ಯದಲ್ಲೇ ಚಿತ್ರದ ಟ್ರೈಲರ್ ಮತ್ತು ಹಾಡುಗಳನ್ನು ಬಿಡುಗಡೆಗೊಳಿಸಿ, ನವೆಂಬರ್‌ನಲ್ಲಿ ಚಿತ್ರ ಬಿಡುಗಡೆ ಮಾಡುವುದಾಗಿ ಚಿತ್ರತಂಡ ತಿಳಿಸಿದೆ.

ವೈ.ಜಿ.ಉಮಾ ಕೋಲಾರ

ನಖ ಈಗೀಗ ಕಲಾತ್ಮಕ

ರೂಪಾ ಕೆ.ಎಂ.

ಉಗುರಿನ ಬೆಳವಣಿಗೆ ಆರೋಗ್ಯ ಸೂಚಕ. ಅಂತಹ ಉಗುರಿಗೆ ತರಹೇವಾರಿ ಬಣ್ಣ ಲೇಪಿಸಿ ಋತುಮಾನಕ್ಕೆ ತಕ್ಕಂತೆ ಸಿಂಗರಿಸಬಹುದು ಎನ್ನುತ್ತದೆ ಫ್ಯಾಷನ್ ಲೋಕ .

ನಖ ಅರ್ಥಾತ್ ಉಗುರು ಬೆಳೆಯುವುದು ಸ್ವಾಸ್ಥ್ಯದ ಸಂಕೇತ. ಹಾಗೆಯೇ, ಫ್ಯಾಷನ್ ಲೋಕದಲ್ಲಿ ಉಗುರಿಗೆ ತನ್ನದೇ ಆದ ಮಹತ್ವವಿದೆ. ಅದರಲ್ಲೂ 'ನೇಲ್ ಆರ್ಟ್' ಈಚೆಗೆ ಯುವ ಮನಸ್ಸುಗಳ ಗಮನ ಸೆಳೆಯುತ್ತಿದೆ. ಒಂದೊಂದು ಉಗುರಿಗೆ ಒಂದೊಂದು ನಮೂನೆಯ ಬಣ್ಣ ಹಚ್ಚಿಕೊಂಡು ಅಂದ ಹೆಚ್ಚಿಸಿಕೊಳ್ಳುವ ಪರಿಪಾಠ ಮುಂದುವರಿದೆ. ಧರಿಸುವ ದಿರಿಸಿಗೆ ಹೊಂದಿಕೆಯಾಗುವಂತೆ ಉಗುರನ್ನು ಕಲಾತ್ಮಕವಾಗಿ ಅಲಂಕರಿಸಿಕೊಳ್ಳಲಾಗುತ್ತಿದೆ. ಅಷ್ಟೆ ಅಲ್ಲದೇ ಆಯಾ ಋತುಮಾನಕ್ಕೆ ತಕ್ಕಂತೆ ಉಗುರಿಗೆ ಬಣ್ಣ ಲೇಪಿಸಲಾಗುತ್ತಿದೆ. ಮಳೆಗಾಲವನ್ನೇ ಸ್ಫೂರ್ತಿಯಾಗಿಟ್ಟುಕೊಂಡು ಮಾಡಿಕೊಳ್ಳುವ ಕೆಲವು ನೇಲ್ ಆರ್ಟ್‌ಗಳು ಇಂತಿವೆ...

ಮಳೆಹನಿ ಬಣ್ಣ: ಮಳೆಗಾಲವೆಂದರೆ ಮಳೆ ಹನಿಗಳ ಚಿಟಪಟ ಸದ್ದು. ಇಂಥ ಮಳೆಹನಿಗಳು ಉಗುರಿನ ಮೇಲೆ ಮೂಡಿದರೆ...!. ಹೌದು ಮಳೆ ಹನಿಯನ್ನೇ ಹೋಲುವ ಬಣ್ಣವನ್ನು ಉಗುರಿಗೆ ನೀಡಬಹುದು. ಉಗುರಿಗೆ ತಿಳಿ ನೀಲಿ ಬಣ್ಣವನ್ನು ಬೇಸ್ ಆಗಿ ಮಾಡಿಕೊಳ್ಳಬೇಕು. ನಂತರ ಗಾಢಬಣ್ಣದ ನೀಲಿಯನ್ನು ಚುಕ್ಕಿಯಾಗಿ ಮೂಡಿಸಲಾಗುತ್ತದೆ. ಒಂದು ಬೆರಳಿನ ಉಗುರಿಗೆ ಕೊಡೆಯ ಚಿತ್ರವನ್ನು ಮೂಡಿಸಿದರೆ ಈ ಪರಿಕಲ್ಪನೆಗೆ ಇನ್ನಷ್ಟು ಅರ್ಥ ಬರುತ್ತದೆ.

ಫ್ಯಾಷನ್ ಪ್ರಪಂಚ

ಕಾಮನಬಿಲ್ಲಿನ ಬಣ್ಣ: ಮಳೆಗಾಲದಲ್ಲಿ ಕಾಮನಬಿಲ್ಲು ಮೂಡುವ ಕ್ಷಣವನ್ನು ಆನಂದಿಸದವರೇ ಇಲ್ಲ. ಕಾಮನಬಿಲ್ಲು ಅಂದರೆ ವರ್ಣಮಯ. ಇಂಥ ಕಾಮನಬಿಲ್ಲನ್ನು ಉಗುರಿನ ಮೇಲೆ ಮೂಡಿಸಿಕೊಳ್ಳುವುದು ಸದ್ಯದ ಟ್ರೆಂಡ್. ಮಳೆಗಾಲದಲ್ಲಿ ಕಾಮನಬಿಲ್ಲು ಮೂಡುತ್ತದೋ ಇಲ್ಲವೋ ಆದರೆ, ಕಾಲೇಜಿಗೆ ಹೋಗುವ ಹೆಣ್ಣುಮಕ್ಕಳ ಕೈ ಉಗುರಿನಲ್ಲಿ ಥೇಟ್ ಕಾಮನಬಿಲ್ಲನ್ನೇ ಹೋಲುವ ಬಣ್ಣ ಕಂಡುಬರುತ್ತದೆ. ಬದುಕೆಂದರೆ ಕಲರ್‌ಫುಲ್ ಎಂದು ಸಂಭ್ರಮಿಸುವವರು ಹೆಚ್ಚಾಗಿ ಈ ಬಣ್ಣವನ್ನು ಇಷ್ಟಪಡುತ್ತಾರೆ.

ಮೇಘವರ್ಣ: ಮಳೆಗಾಲದಲ್ಲಿ ಮೇಘಗಳದ್ದೇ ಕಾರುಬಾರು. ಈ ಮೇಘಗಳೆಲ್ಲವೂ ಇಮೋಜಿಗಳ ರೂಪ ಪಡೆದು ಉಗುರಿನ ಮೇಲೆ ನಿಂತರೆ ಹೇಗಿರುತ್ತದೆ. ಹಾಗಿರುತ್ತದೆ ಈ ನೇಲ್ ಆರ್ಟ್. ತಿಳಿ ನೀಲಿ ಬಣ್ಣದ ಬೇಸ್ ಕೋಟ್ ಮೇಲೆ ಶ್ವೇತ ಹಾಗೂ ಶ್ಯಾಮಲ ವರ್ಣದ ಮೋಡಗಳನ್ನು ಇಮೋಜಿ ರೂಪದಲ್ಲಿ ಮೂಡಿಸಲಾಗುತ್ತದೆ.

ಬೂದುಬಣ್ಣ: ನಮಗಿರುವ ಮೂಡ್‌ಗೆ ಆಧಾರದ ಮೇಲೂ ನೇಲ್ ಆರ್ಟ್ ಮಾಡಿಕೊಳ್ಳಲಾಗುತ್ತದೆ. ಮಳೆಗಾಲದಲ್ಲಿ ಸಾಮಾನ್ಯವಾಗಿ ಉದಾಸೀನ ಪ್ರವೃತ್ತಿ ಹೆಚ್ಚಿರುತ್ತದೆ. ಹಾಗಾಗಿ ಅದನ್ನೆ ಬಿಂಬಿಸುವ ಬಣ್ಣವೆಂದರೆ ಬೂದು ಮಿಶ್ರಿತ ಬಿಳಿ ಬಣ್ಣ. ಇವರೆಡನ್ನು ಸಮಪ್ರಮಾಣದಲ್ಲಿ ಒಂದೊಂದು ಬೆರಳಿಗೆ ಒಂದೊಂದರಂತೆ ಹಾಕಿಕೊಂಡು ಮನಸ್ಸಿನ ಮೂಡ್ ಅನ್ನು ವ್ಯಕ್ತಪಡಿಸಲಾಗುತ್ತದೆ.

ಕಪ್ಪೆಬಣ್ಣ: ಮಳೆಗಾಲವೆಂದರೆ ವಟಗುಟ್ಟುವ ಕಪ್ಪೆಗಳು. ಈ ಕಪ್ಪೆಗಳು ಉಗುರಿನಲ್ಲಿ ಮೈದಾಳಿದರೆ.. ಹೌದು, ಹಲವು ಬಣ್ಣಗಳಲ್ಲಿ ಒಂದೊಂದು ಬೆರಳಿಗೆ ಒಂದರಂತೆ ಕಪ್ಪೆಯ ಚಿತ್ತಾರವನ್ನು ಕಲಾತ್ಮಕವಾಗಿ ಪೇಂಟ್ ಮಾಡಬಹುದು. ಆ ಮೂಲಕ ಆಯಾ ಋತುಮಾನದ ವಿಶೇಷವನ್ನು ಫ್ಯಾಷನ್ ವಸ್ತುವಾಗಿ ನೋಡಬಹುದು.

ಜೆಲ್ಲಿ ಉಗುರು: ಮಳೆಗಾಲದಲ್ಲಿ ಸಾಮಾನ್ಯವಾಗಿ ಈ ಬಗೆಯ ವಿನ್ಯಾಸ ಹೆಚ್ಚು ಪ್ರಚಲಿತದಲ್ಲಿದೆ. ಪಾರದರ್ಶಕ ಎನಿಸುವ ಜೆಲ್ ಮಾದರಿಯ ನೇಲ್ ಪಾಲಿಶ್ ಅನ್ನು ಬೇಸ್ ಕೋಟ್ ಆಗಿ ಬಳಸಲಾಗುತ್ತದೆ. ಅದರ ಮೇಲೆ ಬಣ್ಣ ಬಣ್ಣದ ಗುಳ್ಳೆಯ ಚಿತ್ತಾರವನ್ನು ಮೂಡಿಸಲಾಗುತ್ತದೆ. ಇದು ಕೂಡ ನೋಡಲು ಆಕರ್ಷಕವಾಗಿ ಕಾಣುತ್ತದೆ.

ಕೋವಿಡೋತ್ತರ: ಹಿರಿಯರ ಆರೈಕೆಗೆ ಇಲ್ಲಿದೆ ಸಲಹೆ

ಕೋವಿಡ್... ಈ ಸಾಂಕ್ರಾಮಿಕ ವೈರಸ್ ಭೀತಿ ನಮ್ಮ ನಡುವೆ ಇದ್ದರೂ ಅಷ್ಟಾಗಿ ಪರಿಣಾಮ ಬೀರುತ್ತಿಲ್ಲ. ಆದರೆ ಕಳೆದೆರಡು ವರ್ಷಗಳಿಂದ ತಂದೊಡ್ಡಿದ್ದ ಆತಂಕ ಹಾಗೂ ತೊಂದರೆಗಳನ್ನು ವೃದ್ಧ ಜೀವಗಳು ಈಗಲೂ ಅನುಭವಿಸುತ್ತಿವೆ. ಕೋವಿಡ್‌ನಿಂದ ಹೆಚ್ಚು ಸಂಕಷ್ಟ ಅನುಭವಿಸಿದ್ದು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು.

ಕೆಲವರು ಕೋವಿಡ್‌ನಿಂದ ಸಾವನ್ನಪ್ಪಿದರೆ, ಇನ್ನೂ ಕೆಲವರು ದೈಹಿಕವಾಗಿ ಗುಣವಾದರೂ ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ಕೋವಿಡ್‌ನಿಂದ ಮಾನಸಿಕವಾಗಿ ಕುಗ್ಗಿರುವ ಹಿರಿಯ ನಾಗಕರಿಕರನ್ನು ಹೇಗೆ ಸಲಹೆ ನೀಡಬೇಕು ಹಾಗೂ ಅವರ ಮಾನಸಿಕ ಆರೋಗ್ಯ ಸುಧಾರಿಸುವ ಕುರಿತು ಫೋರ್ಟಿಸ್ ಆಸ್ಪತ್ರೆಯ ಮಾನಸಿಕ ಆರೋಗ್ಯ ತಜ್ಞ ಡಾ. ವೆಂಕಟೇಶ್ ಬಾಬು ವಿವರಿಸಿದ್ದಾರೆ.

ಸಾಂದರ್ಭಿಕ ಚಿತ್ರ

ಹಿರಿಯರಿಗೆ ಅಭಯ ನೀಡಿ

ಕೋವಿಡ್ ಸಂದರ್ಭದಲ್ಲಿ ಹಿರಿಯರಲ್ಲಿ ಕಾಡಿದ ಭಯವೆಂದರೆ, ಈ ಸೋಂಕು ನಮ್ಮ ಪ್ರಾಣ ಕಸಿಯಲಿದೆ ಎನ್ನುವುದು. ಜೊತೆಗೆ ತಮ್ಮನ್ನ ಮತ್ತಷ್ಟು ದೈಹಿಕವಾಗಿ ಕುಗ್ಗಿಸಿಬಿಡುತ್ತದೆ ಎನ್ನುವುದು. ಕೋವಿಡ್ ಸಂಬಂಧ ದಾಖಲಾದ ಬಹುತೇಕ ಹಿರಿಯರಲ್ಲಿದ್ದ ಭಯ ಅವರ ಆರೋಗ್ಯವನ್ನು ಇನ್ನಷ್ಟು ಹಾಳು ಮಾಡುತ್ತಿತ್ತು ಎಂದು ಅಧ್ಯಯನಗಳು ತಿಳಿಸಿವೆ. ಹೀಗಾಗಿ ಹಿರಿಯರಿಗೆ ಕೋವಿಡ್ ಬಂದ ಸಂದರ್ಭದಲ್ಲಿ ಸೋಂಕಿನ ಬಗ್ಗೆ ಭಯ ಉಂಟಾಗದಂತೆ ಅವರಿಗೆ ಅಭಯ ನೀಡುವುದು ದೊಡ್ಡ ಚಿಕಿತ್ಸೆಯಾಗಿದೆ.

ಖಿನ್ನತೆಗೆ ಕೋವಿಡ್ ಕಾರಣ

ಕೋವಿಡ್ ಸೋಂಕಿಗೆ ಒಳಗಾಗದ ಹಿರಿಯ ನಾಗರಿಕರು ಖಿನ್ನತೆಗೆ ಒಳಗಾಗಿದ್ದರು ಎನ್ನುವುದು ಅಧ್ಯಯನಗಳಿಂದ ದೃಢಪಟ್ಟಿದೆ. ಇದರ ಜೊತೆಗೆ ಹೆಚ್ಚಿದ ರಕ್ತದೊತ್ತಡ, ಹೃದ್ರೋಗ, ಸ್ಥೂಲಕಾಯ, ದುರ್ಬಲಗೊಂಡ ಪ್ರತಿರೋಧ ಕಣಗಳು, ಖಿನ್ನತೆ, ಆತಂಕ ಹೆಚ್ಚಳವಾಗಿದೆ. ಇದರಲ್ಲಿ ಪ್ರಮುಖವಾಗಿ ಶೇ 50ರಷ್ಟು ಪ್ರಕರಣಗಳು ಬುದ್ಧಿ ಸ್ಥಿಮಿತ ಕಳೆದುಕೊಳ್ಳುವುದು ಹಾಗೂ ಖಿನ್ನತೆಗೆ ಒಳಗಾಗಿರುವುದು ಕಂಡು ಬಂದಿದೆ. ಶೇ 29ರಷ್ಟು ಪರಿಧಮನಿಯ ಹೃದಯ ಕಾಯಿಲೆ ಹೆಚ್ಚಳವಾಗಿದೆ. ಶೇ 32ರಷ್ಟು ಪ್ರಮಾಣ ಪಾರ್ಶ್ವವಾಯು ಅಪಾಯ ಹೆಚ್ಚಳವಾಗಿದೆ ಎಂದು ಅಧ್ಯಯನಗಳು ತಿಳಿಸಿದ್ದವು.

ಕಾಳಜಿ ಹೀಗಿರಲಿ

ಕೋವಿಡ್‌ನಿಂದ ಗುಣಮುಖವಾದ ಹಿರಿಯರ ದೈಹಿಕ ಶಕ್ತಿ ವೃದ್ಧಿಗೆ ವೈದ್ಯರ ಸಲಹೆ ಮೇರೆಗೆ ಔಷಧೋಪಚಾರ ನಡೆಸುವುದು ಒಳ್ಳೆಯದು. ಆರೋಗ್ಯಕರ ಆಹಾರ ಪದಾರ್ಥ ಸೇವನೆಗೆ ಹೆಚ್ಚಿನ ಆದ್ಯತೆ ನೀಡಬೇಕು.

ಈಗಾಗಲೇ ಅವರಲ್ಲಿ ಇತರೆ ಕಾಯಿಲೆ ಇರುವುದರಿಂದ ಹಿರಿಯರಿಗೆ ಹೆಚ್ಚು ಪೌಷ್ಠಿಕಯುಕ್ತ, ಸಕ್ಕರೆ ಮುಕ್ತ ಆಹಾರ ನೀಡುವುದು ಒಳ್ಳೆಯದು. ಇನ್ನು ಮಾನಸಿಕವಾಗಿ ಅವರನ್ನು ಸ್ಥಿರಗೊಳಿಸಲು ಒಂದಷ್ಟು ಚಟುವಟಿಕೆಯಲ್ಲಿ ತೊಡಗಿಸಬೇಕು. ಹಿರಿಯರಿಗೆ ಯೋಗಾಭ್ಯಾಸ, ವಾಕಿಂಗ್, ಸ್ನೇಹಿತರೊಂದಿಗೆ ಒಂದಷ್ಟು ಕಾಲ ಹರಟೆ ಹಾಗೂ ಹಿರಿಯರು ಇಚ್ಛಿಸುವ ಚಟುವಟಿಕೆಯಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಲು ಮನೆಯವರು ಸಹಕರಿಸಬೇಕು.

ಹಿರಿಯರಿಗೆ ಮನಸ್ಸಿನ ಶಾಂತಿ ಹೆಚ್ಚು ಮುಖ್ಯ. ಹೀಗಾಗಿ ಅವರ ಮನಸ್ಸಿಗೆ ನೆಮ್ಮದಿ ಉಂಟು ಮಾಡುವ ಚಟುವಟಿಕೆ ಇರಲಿ. ಇನ್ನು ಕೋವಿಡ್ ಬಗ್ಗೆ ನಕಾರಾತ್ಮಕ ವಿಷಯಗಳು ಕಿವಿಗೆ ಬೀಳದಂತೆ ಕಾಪಾಡಿಕೊಳ್ಳುವುದು ಒಳ್ಳೆಯದು. ಮನೆಯಲ್ಲಿ ಮಕ್ಕಳಿದ್ದರೆ ಹಿರಿಯರೊಂದಿಗೆ ಹೆಚ್ಚು ಬೆರೆಯಲು ಅನುವು ಮಾಡಿಕೊಡಿ. ಇದರ ಜೊತೆಗೆ ದೇಹಕ್ಕೆ ಹಿತವೆನಿಸುವ ವ್ಯಾಯಾಮ ಮಾಡುತ್ತಾ ಸಾಗಿದರೆ ಮಾನಸಿಕ ಖಿನ್ನತೆ ಕೂಡ ಕ್ರಮೇಣ ಕಡಿಮೆಯಾಗಲಿದೆ.

ಫಟಾ ಫಟ್ ಸಿಹಿ ಖಾದ್ಯ

ಸವಿರುಚಿ

ಕೆಲವೇ ಸಾಮಗ್ರಿ ಬಳಸಿ, ಕಡಿಮೆ ಅವಧಿಯಲ್ಲಿ ಸುಲಭವಾಗಿ ತಯಾರಿಸುವ ವಿಶೇಷ ಸಿಹಿ ತಿನಿಸುಗಳ ರೆಸಿಪಿಗಳನ್ನು **ವನಿತಾ ಜೈನ್** ಇಲ್ಲಿ ಪರಿಚಯಿಸಿದ್ದಾರೆ.

ಗೇವರ್

ಬೇಕಾಗುವ ಸಾಮಗ್ರಿಗಳು: ಮೈದಾ ಹಿಟ್ಟು- 1 ಕಪ್, ತುಪ್ಪ - 2 ಚಮಚ, ಐಸ್ ಕ್ಯೂಬ್- 3, ಹಾಲು- 1 ಸಣ್ಣ ಲೋಟ, ಚಿಟಿಕೆ ಸೋಡ, ಅಡುಗೆ ಎಣ್ಣೆ – ಅರ್ಧ ಲೀಟರ್, ಸಕ್ಕರೆ - 1ಕಪ್.

ಮಾಡುವ ವಿಧಾನ: ಮೊದಲ ಹಂತದಲ್ಲಿ ಒಂದು ಕಪ್ ಮೈದಾ ಹಿಟ್ಟು, 2 ಚಮಚ ತುಪ್ಪ ಮತ್ತು 3 ಐಸ್ ಕ್ಯೂಬ್ ತೆಗೆದುಕೊಳ್ಳಿ. ಈ ಮೂರನ್ನು ಸೇರಿಸಿ ಹಿಟ್ಟು ಗಂಟು ಬಾರದ ರೀತಿಯಲ್ಲಿ ಚೆನ್ನಾಗಿ ನುಣ್ಣಗೆ ಕೈಯಲ್ಲಿ ಕಲೆಸಬೇಕು. ನಂತರ ಒಂದು ಸಣ್ಣ ಲೋಟ ಹಾಲನ್ನು ಸೇರಿಸಿ ಪುನಃ ನುಣ್ಣಗೆ ಮಾಡಿಕೊಳ್ಳಬೇಕು. ಈ ಮಿಶ್ರಣ ದೋಸೆ ಹಿಟ್ಟಿನ ಹದಕ್ಕಿಂತ ತೆಳ್ಳಗೆ ಇರಬೇಕು. ಎರಡನೇ ಹಂತದಲ್ಲಿ ಒಂದು ಲೋಟ ನೀರು, ಒಂದು ಕಪ್ ಸಕ್ಕರೆ ಸೇರಿಸಿ ಒಂದು ಎಳೆ ಬರುವಷ್ಟರ ಮಟ್ಟಿಗೆ ಕುದಿಸಿ ಸಕ್ಕರೆ ಪಾಕ ತಯಾರು ಮಾಡಬೇಕು. ನಂತರ ತಳ ಅಗಲ ಇರುವ ಬಾಣಲೆಯನ್ನು ತೆಗೆದುಕೊಂಡು ಅರ್ಧ ಲೀಟರ್ ಎಣ್ಣೆಯನ್ನು ಹಾಕಿ ಬಿಸಿ ಮಾಡಿ. ಎಣ್ಣೆ ಬಿಸಿಯಾದ ನಂತರ, ಅದಕ್ಕೆ ಕಲಸಿದ ಮೈದಾಹಿಟ್ಟಿನ ಮಿಶ್ರಣವನ್ನು ಒಂದು ಸಣ್ಣ ಲೋಟದಲ್ಲಿ ಹಾಕಿಕೊಂಡು ನಿಧಾನವಾಗಿ ವೃತ್ತಾಕಾರದಲ್ಲಿ ಹಾಕಬೇಕು.

ಅದು ಸ್ವಲ್ಪ ಕಂದು ಬಣ್ಣಕ್ಕೆ ಬಂದ ನಂತರ ತೆಗೆದು ಒಂದು ಪಾತ್ರೆಗೆ ಹಾಕಬೇಕು. ನಂತರ ಅದು ತಣ್ಣಗಾದ ಮೇಲೆ ವೃತ್ತಕಾರದಲ್ಲಿ ಹಲವು ಪದರಗಳಲ್ಲಿರುವ ಸಿಹಿಯ ಮೇಲೆ, ಈ ಮೊದಲೇ ತಯಾರಿಸಿಕೊಂಡಿದ್ದ ಸಕ್ಕರೆ ಪಾಕವನ್ನು ಹಾಕಬೇಕು. ಒಂದು ಗಂಟೆ ನೆನೆಯಲು ಬಿಡಬೇಕು. ಕೊನೆಗೆ ಅಲಂಕಾರಕ್ಕೆ ಬೇಕಾದಲ್ಲಿ ಬಾದಾಮಿ, ಪಿಸ್ತಾ ಚೂರುಗಳನ್ನು ಬಳಸಬಹುದು.

ಮಾಲ್ಪುರಿ

ಬೇಕಾಗುವ ಸಾಮಗ್ರಿಗಳು: ಮೈದಾ- ಒಂದು ಕಪ್,ಬೆಲ್ಲ - 50 ಗ್ರಾಂ , ಚಿಟಿಕೆ ಅಡುಗೆ ಸೋಡಾ, ಏಲಕ್ಕಿ-2 ರಿಂದ3, ಎಣ್ಣೆ- 1 ಲೀಟರ್, ಅಲಂಕಾರಕ್ಕೆ ಬಾದಾಮಿ

ಮಾಡುವ ವಿಧಾನ: ಒಂದು ಕಪ್ ಮೈದಾ ಹಿಟ್ಟು ಮತ್ತು ಬೆಲ್ಲವನ್ನು ಪುಡಿ ಮಾಡಿ ಸೇರಿಸಿ ದೋಸೆ ಹಿಟ್ಟಿನ ಹದಕ್ಕಿಂತ ತೆಳ್ಳಗೆ ಕಲೆಸಿಕೊಳ್ಳಬೇಕು. ಇದೇ ಮಿಶ್ರಣಕ್ಕೆ ಏಲಕ್ಕಿ ಪುಡಿ ಹಾಕಿ. ನಂತರ ಅರ್ಧಗಂಟೆ ಮಿಶ್ರಣವನ್ನು ಮುಚ್ಚಿಡಿ. ಬಳಿಕ ಎಣ್ಣೆಯನ್ನು ಬಾಣಲೆಗೆ ಹಾಕಿ ಕಾಯಲು ಇಡಿ. ಎಣ್ಣೆ ಕಾದ ಮೇಲೆ ಸೌಟು ಅಥವಾ ಸಣ್ಣ ಗ್ಲಾಸಿನಲ್ಲಿ ಹಿಟ್ಟನ್ನು ತೆಗೆದುಕೊಂಡು ಎಣ್ಣೆಯಲ್ಲಿ ಒಂದೇ ಸಲಕ್ಕೆ ಹಾಕಬೇಕು. ಎರಡು ಬದಿಯಲ್ಲಿ ಗೋಲ್ಡನ್ ಕಲರ್ ಬಂದಾಕ್ಷಣ ಅದನ್ನು ತೆಗೆದು ಅದಕ್ಕೆ ಏಲಕ್ಕಿ ಬಾದಾಮಿ ಹಾಕಿ ಅಲಂಕಾರ ಮಾಡಬಹುದು.

ಸಂಪಿಗೆ ಮೊಗ್ಗು

ಬೇಕಾಗುವ ಸಾಮಗ್ರಿಗಳು: ಮೈದಾ ಹಿಟ್ಟು- 1 ಕಪ್, ಅಡುಗೆ ಎಣ್ಣೆ - 3/4 ಲೀಟರ್, ತುಪ್ಪ -3 ಚಮಚ,
ನೀರು- ಒಂದು ಗ್ಲಾಸ್, ಸಕ್ಕರೆ - ಒಂದು ಕಪ್, ಏಲಕ್ಕಿ - 7 ರಿಂದ 8, ಚಿಟಿಕೆ ಉಪ್ಪು

ಮಾಡುವ ವಿಧಾನ: ಒಂದು ಕಪ್ ಮೈದಾಹಿಟ್ಟನ್ನು ತೆಗೆದುಕೊಂಡು ಅದಕ್ಕೆ ನೀರು, ಚಿಟಿಕೆ ಉಪ್ಪು ಸೇರಿಸಿ ಪೂರಿ ಅಥವಾ ಚಪಾತಿ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಬೇಕು.10 ನಿಮಿಷದ ಬಳಿಕ ಹಿಟ್ಟನ್ನು ಪುನಃ ಚೆನ್ನಾಗಿ ನಾದಿಕೊಂಡು ವೃತ್ತಾಕಾರದಲ್ಲಿ ತೆಳ್ಳಗೆ ಲಟಿಸಿಕೊಳ್ಳಬೇಕು.

ನಂತರ ಒಂದು ಸಣ್ಣ ಲೋಟವನ್ನು ತೆಗೆದುಕೊಂಡು ಹಿಟ್ಟಿನ ಮೇಲೆ ಇಟ್ಟು ಸಣ್ಣ ಸಣ್ಣ ವೃತ್ತಕಾರ ಮಾಡಿಕೊಳ್ಳಬೇಕು. ಬಿಲ್ಲೆ ರೂಪದ ಹಾಳೆಯನ್ನು ತೆಗೆದಿಟ್ಟುಕೊಂಡು, ಸುತ್ತಲೂ ಹೆಚ್ಚಾಗಿ ಉಳಿದಿರುವ ಹಿಟ್ಟನ್ನು ತೆಗೆದುಹಾಕಬೇಕು. ಒಂದು ಕತ್ತರಿ ಸಹಾಯದಿಂದ ನಿಮಗೆ ಎಷ್ಟು ಪದರಗಳು ಬೇಕೋ ಆ ರೀತಿಯಲ್ಲಿ ಉದ್ದವಾಗಿ ಕತ್ತರಿಸಿಕೊಳ್ಳಬೇಕು.ಇದನ್ನು ಒಂದು ತುದಿ ಹಿಡಿದುಕೊಂಡು ಸಂಪಿಗೆ ಮೊಗ್ಗಿನ ಆಕಾರದಲ್ಲಿ ಟ್ವಿಸ್ಟ್ ಮಾಡುತ್ತಾ ರೋಲ್ ಮಾಡಿಕೊಳ್ಳಬೇಕು.ಇದನ್ನು ಕಾದಿರುವ ಎಣ್ಣೆಗೆ ಹಾಕಿ ಫ್ರೈ ಮಾಡಬೇಕು.

ನಂತರ ಒಂದು ಮಿಕ್ಸಿಜಾರ್‌ಗೆ ಒಂದು ಕಪ್ ಸಕ್ಕರೆ, 7 ರಿಂದ 8 ಏಲಕ್ಕಿ ಸೇರಿಸಿ ನುಣ್ಣಗೆ ಪುಡಿ ಮಾಡಿಕೊಳ್ಳಬೇಕು. ಎಣ್ಣೆಯಲ್ಲಿ ಫ್ರೈ ಮಾಡಿದ ಸಂಪಿಗೆಯಂತೆ ಕಾಣುವ ಪದಾರ್ಥದ ಮೇಲೆ, ಈ ಪುಡಿಯನ್ನು ಸಿಹಿ ಹಿಡಿಯುವ ರೀತಿಯಲ್ಲಿ ಉದುರಿಸಬೇಕು. 5 ರಿಂದ 10 ನಿಮಿಷದ ಬಳಿಕ ಈ ಸಿಹಿಯನ್ನು ಸೇವಿಸಬಹುದು.

ಹೃದಯದ 'ಮಾತು' ಕೇಳಿಸಿಕೊಳ್ಳಿ!

ಫೇಸ್‌ಬುಕ್ ಲೈವ್

ಸೆ. 29, ವಿಶ್ವ ಹೃದಯ ದಿನ. ಇದರ ಅಂಗವಾಗಿ 'ಪ್ರಜಾವಾಣಿ' ನಡೆಸಿದ ಫೇಸ್‌ಬುಕ್ ಲೈವ್ ಮಾತುಕತೆಯಲ್ಲಿ ಫೋರ್ಟಿಸ್ ಆಸ್ಪತ್ರೆಯ ಹಿರಿಯ ಸಲಹೆಗಾರ, ಇಂಟರ್ವೆನ್ಷನಲ್ ಕಾರ್ಡಿಯಾಲಜಿಸ್ಟ್ **ಡಾ. ಸಿ. ಪ್ರಭಾಕರ ಕೋರೆಗೋಳ್** ಅವರು ಹೃದಯದ ಆರೋಗ್ಯ ಕುರಿತು ಸಾಮಾನ್ಯ ಜನರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ. ಅವರೊಂದಿಗೆ **ಸುಶೀಲಾ ಡೋಣೂರ** ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.



- **ಇತ್ತೀಚೆಗೆ ದೇಹದಲ್ಲಿ ಕಂಡುಬರುವ ಸಾಮಾನ್ಯ ನೋವು–ಸೆಳೆತಗಳೂ ಹೃದಯಾಘಾತದ ಲಕ್ಷಣವಿರಬಹುದೇ ಎಂದು ಅನುಮಾನಿಸುವವರ ಸಂಖ್ಯೆ ಹೆಚ್ಚಾಗಿದೆ. ಈ ಬಗ್ಗೆ ಮಾಹಿತಿ ನೀಡಿ.**

ಬಹಳಷ್ಟು ಜನರಲ್ಲಿ ಈ ಬಗ್ಗೆ ಗೊಂದಲಗಳಿವೆ. ಯಾವ ನೋವು ಹೃದಯಕ್ಕೆ ಸಂಬಂಧಿಸಿದ್ದು, ಯಾವುದಲ್ಲ; ಯಾವಾಗ ವೈದ್ಯರನ್ನು ಭೇಟಿ ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ.

ಹೃದಯಾಘಾತದ ಲಕ್ಷಣಗಳು ಕೇವಲ ಹೃದಯದಲ್ಲಿಯೇ ಕಂಡುಬರುತ್ತದೆ ಅಂತೇನೂ ಇಲ್ಲ. ಹಾಗೆಯೇ ಈ ಎಲ್ಲಾ ನೋವುಗಳೂ ಹೃದಯಕ್ಕೆ ಸಂಬಂಧಿಸಿದ್ದು ಎಂದು ಖಚಿತವಾಗಿ ಹೇಳಲಾಗದು. ಕೆಲವು ತಪಾಸಣೆಗಳ ನಂತರ ಇದನ್ನು ವೈದ್ಯರು ದೃಢಪಡಿಸುತ್ತಾರೆ. ನಡೆದಾಡಿದಾಗ, ಶ್ರಮದಾಯಕ ಕೆಲಸ ಮಾಡಿದಾಗ ಎದೆ ನೋವು ಬರುತ್ತಿದ್ದರೆ, ಬಿಟ್ಟು ಬಿಟ್ಟು ನೋವು ಬರುತ್ತಿದ್ದರೆ, ದೇಹದ ಇತರ ಭಾಗಗಳಿಗೆ ಆ ನೋವು ಸರಿದಾಡುತ್ತಿದ್ದರೆ, ನೋವು ಬಂದಾಗ ಬೆವರು, ವಾಂತಿಯಂತಹ ಲಕ್ಷಣಗಳೂ ಕಂಡುಬಂದರೆ ಆಗ ಅದು ಹೃದಯಕ್ಕೆ ಸಂಬಂಧಿಸಿರಬಹುದು ಎಂದು ಅಂದಾಜಿಸಲಾಗುತ್ತದೆ.

ಹಸಿವಾದಾಗ ಅಥವಾ ಊಟವಾದಾಗ ಈ ನೋವುಗಳು ಕಂಡುಬಂದರೆ ಅದು ಸಾಮಾನ್ಯವಾಗಿ ಗ್ಯಾಸ್ಟ್ರಿಕ್‌ಗೆ ಸಂಬಂಧಿಸಿದ್ದಾಗಿರುತ್ತದೆ. ಆದಾಗ್ಯೂ ನಿಮಗೆ ಅನುಮಾನಗಳಿದ್ದರೆ ಆಗ ವೈದ್ಯರನ್ನು ಸಂಪರ್ಕಿಸಬೇಕು. ಅವರು ಹೃದ್ರೋಗ ತಪಾಸಣೆಗೆ ಸಂಬಂಧಿಸಿದ ವಿವಿಧ ಪರೀಕ್ಷೆಗಳ ಪರೀಕ್ಷೆಗಳ ಮೂಲಕ ಹೃದಯದ ಆರೋಗ್ಯವನ್ನು ಖಚಿತಪಡಿಸುತ್ತಾರೆ.

- **ಹೆಣ್ಣು ಮಕ್ಕಳಲ್ಲಿ ಹೃದಯಾಘಾತ ಸಂಭವ ಹೆಚ್ಚುತ್ತಿದೆ ಎಂಬ ವರದಿಗಳನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಇದು ನಿಜವೇ?**

ಹೌದು, ಹಿಂದೆ ಹೆಣ್ಣುಮಕ್ಕಳಲ್ಲಿ ಹೃದಯಾಘಾತದ ಪ್ರಮಾಣ ಕಡಿಮೆ ಇತ್ತು. ಕಾರಣ ಕೆಲವು ಹಾರ್ಮೋನುಗಳು ಅವರ ಹೃದಯವನ್ನು ರಕ್ಷಿಸುತ್ತವೆ ಎನ್ನುವ ನಂಬಿಕೆಗಳಲ್ಲಿ ಇದ್ದೆವು. ಆದರೆ, ವಾಸ್ತವವಾಗಿ ಜೀವನ ಶೈಲಿ, ಚಟುವಟಿಕೆ, ಆಹಾರ ಪದ್ಧತಿ ಅವರನ್ನು ಹೃದಯಾಘಾತದ ಅಪಾಯದಿಂದ ಪಾರು ಮಾಡುತ್ತಿದ್ದುದು ಸತ್ಯ. ಈಗ ಹೆಣ್ಣುಮಕ್ಕಳ ಜೀವನಶೈಲಿಯಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಔದ್ಯೋಗಿಕ ಕ್ರಾಂತಿಯ ನಂತರ, ಉದ್ಯೋಗದಲ್ಲಿ ತೊಡಗಿಸಿಕೊಳ್ಳುವ ಹೆಣ್ಣು ಮಕ್ಕಳ ಪ್ರಮಾಣ ಹೆಚ್ಚಾಗುತ್ತಿದೆ. ಮನೆ – ಕಚೇರಿ ಒತ್ತಡ ಹೆಚ್ಚಾಗುತ್ತಿದೆ. ಜೊತೆಗೆ, ಫಾಸ್ಟ್ ಫುಡ್ ಅನಿವಾರ್ಯತೆ, ತಂಬಾಕು ಸೇವನೆ–ಮದ್ಯಪಾನದಂತಹ ಚಟಗಳು.. ಇಂಥ ಹಲವು ಕಾರಣದಿಂದ ಹೆಣ್ಣುಮಕ್ಕಳಲ್ಲಿ ಹೃದಯಾಘಾತ ಹೆಚ್ಚುತ್ತಿದೆ.

- **ಕೋವಿಡ್ ಸೋಂಕಿನ ನಂತರ ಹೃದ್ರೋಗದ ಸಮಸ್ಯೆ ಹೆಚ್ಚಾಗಿದೆ. ಕೋವಿಡ್ ಲಸಿಕೆ ಪಡೆದ ಮೇಲೆ ಸಣ್ಣ ವಯಸ್ಸಿನವರಲ್ಲಿ ಹೃದಯಾಘಾತ ಸಂಭವಿಸುತ್ತಿದೆ ಎಂಬ ಮಾತುಗಳು ಕೇಳುತ್ತಿವೆ. ಇದರ ಬಗ್ಗೆ ಏನು ಹೇಳುತ್ತೀರಿ?**

ಗಂಭೀರ ಹಂತದ ಕೋವಿಡ್ ಪ್ರಕರಣಗಳಲ್ಲಿ ರಕ್ತ ಹೆಪ್ಪುಗಟ್ಟುವ ಕಾರಣ ಅದು ಹೃದಯಾಘಾತಕ್ಕೆ ಕಾರಣವಾಗುವ ಸಾಧ್ಯತೆ ಇತ್ತು. ಇದು ಮೊದಲ ಮತ್ತು ಎರಡನೇ ಕೋವಿಡ್ ಅಲೆಯ ಸಂದರ್ಭದಲ್ಲಿ ಹೆಚ್ಚಾಗಿ ಕಂಡು ಬಂತು. ಇನ್ನು, ಕೋವಿಡ್ ಲಸಿಕೆ ಬಗ್ಗೆ ಹೇಳುವುದಾದರೆ, ಯಾವುದೇ ಲಸಿಕೆ ಕೊಟ್ಟ ಮೇಲೆ ಕೆಲವರಿಗೆ, ಕೆಲವು ಅಂಗಗಳ ಮೇಲೆ ಒತ್ತಡ ಏರ್ಪಡುತ್ತದೆ. ಆದರೆ, ಇದು ಪ್ರಾಣಕ್ಕೆ ಅಪಾಯ ತರುವಂಥದ್ದಲ್ಲ, ಭಯಪಡುವ ಅಗತ್ಯವಿಲ್ಲ.

- **ಆಹಾರ ಕ್ರಮಗಳಲ್ಲಿ ಸಾವಯವ ಆಹಾರ ಆರೋಗ್ಯಕ್ಕೆ ಪೂರಕ ಎನ್ನುವ ಮಾತಿದೆ. ಈ ಆಹಾರ ಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಹೆಚ್ಚಾಗಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ನಾವು ಸೇವಿಸುವ ಆಹಾರ ನಮ್ಮ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಇತ್ತೀಚೆಗೆ ಕೃಷಿಯಲ್ಲಿ ಉಂಟಾದ ಬದಲಾವಣೆಗಳಿಂದಾಗಿ ನಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ಹೆಚ್ಚು ರಾಸಾಯನಿಕವಿರುವ ಆಹಾರದಿಂದ ಹೃದಯ, ಯಕೃತ್ತು ಸೇರಿದಂತೆ ನಮ್ಮ ದೇಹದ ಭಾಗಗಳು ತೊಂದರೆಗೆ ಒಳಗಾಗುತ್ತಿವೆ. ಸಾಧ್ಯವಾದಷ್ಟು ಸಾವಯವ ಆಹಾರದತ್ತ ಗಮನ ಹರಿಸುವುದು ಒಳ್ಳೆಯದು.

ಪೂರ್ಣ ಸಂದರ್ಶನ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮೇರಿ ಮುಡಿಗೇರಿದ 'ಮಿಸೆಸ್ ಇಂಡಿಯಾ ಎಲಿಗಾಂಟ್'

ಮೈಲಿಗಲ್ಲು

ಈ ಬಾರಿಯ ಮಿಸೆಸ್ ಇಂಡಿಯಾ ಎಲಿಗಾಂಟ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ ಮೇರಿ ಆ್ಯಂಟೊನಿ ರಾಯನ್. ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವ ಅವರಿಗೆ ಈ ಪ್ರಶಸ್ತಿಯು ಒಲಿದು ಬಂದಿದೆ.

ಇದು ಸೌಂದರ್ಯ ಮತ್ತು ಬುದ್ಧಿಮತ್ತೆ ಮಿಳಿತವಾಗಿರುವ ಸ್ಪರ್ಧೆ. ಮೇರಿ ಅವರಿಗೆ ಈ ಹಾದಿ ಸುಲಭದ್ದಾಗಿರಲಿಲ್ಲ. ಬಾಲ್ಯದಿಂದಲೂ ಮಾಡೆಲಿಂಗ್‌ನತ್ತ ಆಸಕ್ತಿ, ಸೌಂದರ್ಯ ಸ್ಪರ್ಧೆಗಳಲ್ಲಿ ಗೆದ್ದವರ ನಡೆ, ನುಡಿ, ಸಿದ್ಧತೆ ಬಗ್ಗೆ ತೀಕ್ಷ್ಣ ಗಮನಹರಿಸುತ್ತಿದ್ದರು. ಐಶ್ವರ್ಯಾ ರೈ, ಸುಶ್ಮಿತಾ ಸೇನ್ ಮೇರಿ ಅವರಿಗಿಷ್ಟ. ಶಾಲಾ ದಿನಗಳಲ್ಲೇ ಅವರ ಫ್ಯಾಷನ್ ಶೋಗಳನ್ನು ನೋಡುತ್ತಲೇ ಬೆಳೆದರು. ಬೆಂಗಳೂರಿನ ಶ್ರೀಸಾಯಿ ಮಹಿಳಾ ಕಾಲೇಜಿನಲ್ಲಿ ಬಿಬಿಎಂ ಓದುತ್ತಿರುವಾಗ ಪದವಿಯ ಮೂರು ವರ್ಷಗಳಲ್ಲೂ ನಡೆದ ಸೌಂದರ್ಯ ಸ್ಪರ್ಧೆಗಳಲ್ಲಿ ಸತತ ಗೆಲುವು ಇವರದ್ದಾಗಿತ್ತು. ಮುಂದೆ ತೆಲುಗಿನ 'ಶಿವಪುರಂ 9 ಕಿಲೋಮೀಟರ್', ಕನ್ನಡದ 'ಕ್ರೇಜಿ ಬಾಯ್ಸ್' ಚಿತ್ರಗಳಲ್ಲಿ ನಟಿಸಿದರು. ಈ ನಡುವೆ ಅವರ ಎಂಬಿಎ ಪದವಿಯೂ ಮುಗಿಯಿತು. ಇಂಗ್ಲಿಷ್ ಸಾಹಿತ್ಯದಲ್ಲಿ ಎಂಎ ಪದವಿಯೂ ಅವರಿಗಿದೆ. ಮುಂದೆ ಬಂದ ಜಾಹೀರಾತು, ಬ್ರ್ಯಾಂಡ್ ರಾಯಭಾರಿತ್ವ, ಪ್ರಚಾರ ರಾಯಭಾರಿಯಾಗಿದ್ದಕ್ಕೆ ಲೆಕ್ಕವಿಲ್ಲ. ಅಲೆಕ್ಸ್ ಫ್ಯಾಷನ್ ಆಯೋಜಿಸಿದ ಮಿಸ್ ಮತ್ತು ಮಿಸೆಸ್ ಬೆಂಗಳೂರು ಸ್ಪರ್ಧೆಗಳಿಗೆ ತೀರ್ಪುಗಾರರೂ ಆದರು. 'ಸ್ನೇಹ ಶ್ರುತಿ' ಎಂಬ ಕಿರುಚಿತ್ರದಲ್ಲೂ ಅವರು ನಟಿಸಿದ್ದಾರೆ.

ಈ ಹಿಂದೆ 2012ರಲ್ಲಿ ಮಿಸ್ ಬೆಂಗಳೂರು, 2013ರಲ್ಲಿ ಮಿಸ್ ಐಕಾನಿಕ್ ಕ್ವೀನ್, 2018ರಲ್ಲಿ ಕೇರಳ ಫ್ಯಾಷನ್ ಉತ್ಸವದಲ್ಲಿ ಏಷ್ಯನ್ ರೆಕಾರ್ಡ್, ಬೆಸ್ಟ್ ಸ್ಟೈಲ್ ಆ್ಯಂಡ್ ಫೋಟೋಜೆನಿಕ್ ಫ್ರಂ ವಿಲಿಯಂ ಫ್ಯಾಷನ್, ಬ್ಯೂಟಿ ಆ್ಯಂಡ್ ಬ್ರೈನ್ ಅವಾರ್ಡ್, ರೂಪಲಾವಣ್ಯಂ ಪ್ರಶಸ್ತಿ... ಹೀಗೆ ಹಲವು ಪ್ರಶಸ್ತಿಗಳ ಗೊಂಚಲು ಅವರ ಬಳಿ ಇವೆ.

ಮೇರಿ ಅವರು ಹುಟ್ಟಿದ್ದು ತಿಪಟೂರಿನಲ್ಲಿ, ಬೆಳೆದದ್ದು ಬೆಂಗಳೂರು. ತಂದೆ ಸುಸೈರಾಜ್ ಅವರು ಬಾಷ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ಮೇರಿ ವಿಮಲಾ ಗೃಹಿಣಿ. ಇವರ ಸಾಧನೆಗೆ ಬೆಂಬಲವಾಗಿ ನಿಂತ ಪತಿ ಚೇತನ್ ಸಾಫ್ಟ್‌ವೇರ್ ಎಂಜಿನಿಯರ್.

ಸಾಕಷ್ಟು ಸಾಮಾಜಿಕ ಚಟುವಟಿಕೆಗಳಲ್ಲೂ ಸಕ್ರಿಯರಾಗಿರುವ ಅವರು ಇತ್ತೀಚೆಗೆ ಆಮ್ ಆದ್ಮಿ ಪಕ್ಷದ ಹೊಂಗಸಂದ್ರ– ಮೈಕೊ ಲೇಔಟ್ ಪ್ರದೇಶದ ವಾರ್ಡ್ ಅಧ್ಯಕ್ಷರಾಗಿದ್ದಾರೆ. ಅಲ್ಲಿ ರಸ್ತೆ, ಮೂಲಸೌಲಭ್ಯ ಸಂಬಂಧಿಸಿದ ಸಮಸ್ಯೆಗಳ ಕುರಿತು ಧ್ವನಿಯೆತ್ತಿದ್ದಾರೆ.

ಬಹುಮುಖಿ ಸಾಧನೆಗೆ ಮಹಿಳಾ ಸಾಧಕರಿಗೆ ನೀಡಲಾಗುವ ಸ್ಮೃತಿ ಸಾಧನಾ ಪ್ರಶಸ್ತಿಯೂ ಒಲಿದಿದೆ.

ಮೇರಿ ಆ್ಯಂಟೊನಿ ರಾಯನ್